ಕರ್ನಾಟಕಸ್ಥರೇ! ಕಣ್ಣು ತೆರೆಯಿರಿ ಯಾವ ನಮ್ಮ ಧನವು ಪರದೇಶದವರಕಿಸೆಯಲ್ಲ ಬೀಳುವದೋ ಯಾವ ನಮ್ಮ ಧನವನ್ನು ಮಹತ್ವಾಕಾಂಕ್ಷೆಗಳನ್ನು ವೃದ್ಧಿ ಪಡಿಸುವ ಪರದೇಶಕ್ಕೆ ಹೋಗಿ ಬೀಳುವದೋ ಯಾವ ನಮ್ಮ ಧನವು ನಮ್ಮ ಆಕಾಂಕ್ಷೆಗಳಿಗೆ ಮೂಲ ಕಾರಣರಾಗುವವರ ಕೈಸೇರುವದೋ ಅಂಥ ದೇಶಗಳವರ ಪರದೇಶೀ ವಸ್ತುಗಳನ್ನು ಕೊಂಡು ಹಬ್ಬಗಳನ್ನು ಮಾಡಬೇಡಿರಿ ಹಾಗೆ ಮಾಡುವದರಿಂದ ನಿಮ್ಮ ಇಷ್ಟಯು ಕೈಗೂಡಲಾರದು ನಿಮ್ಮ ಆರಾಧ್ಯ ದೇವರು ನಿಮಗೆ ವರಗಳನ್ನು ಕೊಡಲಾರನು ನಿಮ್ಮ ದೇಶದ ವಸ್ತುಗಳಿಂದಲೇ ನಿಮ್ಮ ಆರಾಧ್ಯ ದೇವರನ್ನು ಪೂಜಿಸಿರಿ ಹಾಗೂ ಪೂಜೆಮಾಡುವಾಗ ಕರ್ನಾಟಕದ ಉದ್ಧಾರಕ್ಕಾಗಿ ಈಗ ತುರಂಗ ಕಂಡ ಮಹಾನುಭಾವರನ್ನು ನೆನಯಿರಿ ಅವರ ಆಯುರಾರೋಗ್ಯವನ್ನು ಇಚ್ಛಿಸಿರಿ ಅಂದರೆಯೇ ನೀವು ನಿಮ್ಮ ಕರ್ತವ್ಯಮಾಡಿದಂತಾಗುವದು ಇಲ್ಲದಿದ್ದರ ಕರ್ತವ್ಯ ಚ್ಯುತರೆಂಬದಾಗಿ ನಿಮ್ಮ ಹೆಸರಿಗೆ ಕಳಂಕವು ತಟ್ಟುವದು.

ಇಂಗ್ಲಂಡ ಪ್ರಾನ್ಸಗಳು ಬಂದನ್ನೊಂದು ಅಗಲಿದವು

—o—

ಮಹಾಯುದ್ಧವು ಪ್ರಸಂಗವಶದಿಂದ ತಂಗಾಯಿತು ಆದರೂ ಬಂಡಾಯ ವಾಗ್ಯುದ್ಧವು ನಿಲ್ಲಲಿಲ್ಲ ಈ ವಾಕ್ ಯುದ್ಧವನ್ನು ನಿಲಿಸುವದಕ್ಕಾಗಿ ಜಿನೀವ್ಹಾದಲ್ಲಿ ಸಭಿಕರು ಸೇರಿದರು ಪರಿಣಾಮ ಯಾವದೂ ಆಗಲಿಲ್ಲ ರಾಷ್ಟ್ರ ಸಂಘದಲ್ಲಿ ಕೂಡಿತು ಬೇಗದ ಎಲವು ಕೇಳಿಯೂ ಅದನ್ನು ಬಗೆಹರಿಸುವದಕ್ಕಾಗಿ ಲಂಡನದಲ್ಲಿ ನೀರು ಹಾಕುವ ಪ್ರಯತ್ನವು ಆಯಿತು ಕೂಡಿದ್ದು ಏನಾದರೂ ಬಗೆಹರಿದಿಲ್ಲದ?

ಫ್ರಾನ್ಸದ ಎಮ್, ಫಾಂಕ್ರಾರಯವರು ತಮ್ಮ ಆಗ್ರಹವನ್ನು ಬಿಡಲಿಲ್ಲ ಹಿಂಗಣಯ ಜೇಕುತರದ ಆಕ್ರಮಿಸಿದ ರುರು ಮಿ ಲಾಯಿಡಜಾರ್ಜರೂ ತಮ್ಮ ಮತವನ್ನು ಹಿಂಗಗೆದುಕೊಳ್ಳಲು ಒಪ್ಪಲಿಲ್ಲ ಎಂ, ಪಾಂಕ್ರಾರಯವರು ಲಂಡನವನ್ನು ಬಿಟ್ಟರು ಕಳುಹಲು ಒಬ್ಬ ಅಧಿಕಾರಿಗಳೂ ಮುಂದೊರೆಯಲಿಲ್ಲ

ಎಮ್, ಫಾಂಕ್ರಾರೆಯವರು ಪ್ಯಾರಿಸಕ್ಕೆ ಬಂದರು ಇವರ ಮತವು ಫ್ರಾನ್ಸಕ್ಕೆ ಒಪ್ಪಿಗೆಯಾಗಿದೆ. ಆಗಲೇ ಜರ್ಮನಿಯ ಒ ದರಡು ಪ್ರಾಂತಗಳನ್ನು ಸಹ ಫ್ರಾನ್ಸ ಆಕ್ರಮಿಸಿಯದೆ. ಪ್ರಸಂಗಬಂದರೆ ಕರಭಾರವನ್ನು ತಮ್ಮ ವಶದಲ್ಲಿ ತೆಗೆದುಕೊಳ್ಳುವ ವಿಚಾರವನ್ನು ಸಹ ಮಾಡಿಯದೆ

ಫ್ರಾನ್ಸದ ಈ ಮುಂಗೈಬಲವನ್ನು ಕಂಡು ಜರ್ಮನಿಯು ಎಲಗುಂದಿದೆ ಗಾಬರಿಯಾಗಿದೆ ಜರ್ಮನಿಯ ವ್ಯಾಪಾರವು ಅತಿಯಾಗಿ ಇಳಿದು ೨೫೦೦ ಕ್ಕೆ ಈಗ ೬೫೦೦ ರ ಪನೆಗೆ ಒಂದಿದೆ ಕಾಳು ಕಡಿಯ ದಾರಣಿಯು ಅಳಿಗಷ್ಟು ಏರಿದೆ

ಈ ಸ್ಥಿತಿಯೇ ಹೀಗೆ ಉಳಿದರೆ ಯುರೋಪದಲ್ಲಿ ಪುನಃ ಮಹಾಯುದ್ಧವೇ ಪ್ರಾರಂಭವಾಗ ವದೇ ನೆಂಬ ಚಿಂತೆಯು ಎಲ್ಲಿಯ ಮುತ್ಸದ್ದಿಗಳಿಗೆ ಬಿದ್ದಿದೆ ಫ್ರಾನ್ಸವು ಎದ್ದರೂ, ಜರ್ಮನಿಯು ಎದ್ದರೂ, ಫ್ರಾನ್ಸವು ಬಿದ್ದರೂ, ಜರ್ಮನಿಯು ಬಿದ್ದರೂ ಇಂಗ್ಲಂಡಕ್ಕೆ ಹಾನಿಯೇ ಸರಿ ಆದ್ದರಿಂದ ಫ್ರಾನ್ಸವನ್ನೊಂದಷ್ಟೇ ಹರಿಯಬೊಡಲಾರೆವೆಂದು ಇಂಗ್ಲಂಡದವರ ಮತ ಇದಕ್ಕಾಗಿಯೇ ಹೊಸ ಇಲೆಕ್ಷನ್ನದ ಗಡಬಿಡಿಯು ಎದ್ದಿದೆ

ಈಪ್ರಸಂಗದಲ್ಲಿ ಯುರೋಪವೇ ಸಾಲಗಾರರ ಮಕ್ಕಳಾದ್ದರಿಂದ ಒಬ್ಬರಿಗೊಬ್ಬರು ಮಡ್ಡಿನ ಸಹಾಯಮಾಡುವದು ಆವಶ್ಯವದೆ ಇಲ್ಲದಿದ್ದರೆ ಪುನಃ ಯಾದವಿಯು ಪ್ರಾರಂಭವಾಗಿ, ಮತ್ತಷ್ಟು ಕಾಲ ದ ತಗ್ಗಿನಲ್ಲಿ ಎಲ್ಲರೂ ಬೀಳಬಹುದೆಂದು ಹೇಳಬಹುದು

ಸದ್ಯಕ್ಕೆ ಫ್ರಾನ್ಸ ಇಂಗ್ಲಂಡಗಳು ಒಂದನ್ನೊಂದು ಅಗಲಿದ್ದರೂ ಅಲ್ಪಾವಧಿಯಲ್ಲಿ ಅವು ಒಂದಕ್ಕೊಂದು ಹೊಂದಿಕೊಂಡರಯೇ ಲೇಸಾಗುವದು ಇಬ್ಬರೂ ಮಹಾ ಮುತ್ಸದ್ದಿಗಳು. ಏನು ಮಾಡುವರೋ ನೋಡುವಾ

—

ಸುದ್ದಿಯ ಸಾರ.

ಸಪ್ಟಂಬರ ೧ ನೇ ತಾರೀಖಿನಿಂದ ಪುನಃ ಮುಳಶಿ ಸತ್ಯಾಗ್ರಹವು ಪ್ರಾರಂಭವಾಗುವದು ನಿರ್ವಾಹವಿಲ್ಲ

ರಂಗೂನದ ಸಮೀಪದಲ್ಲಿ ರಶಿಯಾ ಎಂಬಲ್ಲಿ ಬೋಟು ವಾದಳ ಸಮುದ್ರದಲ್ಲಿ ನಾಶವಾಗಿದೆ ಸಮುದ್ರಾಸ್ಸೃಶ್ಯರು ಆಗಿರಬಹುದೇನು?

ಎಬೊಟಾಬಾದ ಕೆ ಯಲ್ಲಿ ಸ್ವಾಮಿ ಶ್ರದ್ಧಾನಂದರನ್ನು ೧೦ಲ ದಿನ ಯ ಪೋ ರು ಬಂದಿಸಿದರು ಜಾಮೀ

ಮಾರ್ಗಶೀರ ಎದುದ್ದ ಎಂದು ಮಾಡಿದ ಅಪರಾಧದಿಂದ ಫಾಶೀ ಶಿಕ್ಷೆಯಾದ ... ಕನ್ನಾಲ್ಲನನ್ನು ಹಾಯಕೋರ್ಟಿನವರು ನಿರ್ದೋಷಿಯೆಂದು ಬಿಟ್ಟುಬಿಟ್ಟರು ಮೋಪಲಾಬಂಡಾಯದ ಸಂಬಂಧದ ಖಟ್ಲೆ ಇದು

ಪ್ರೋ ಸು ಮಿ ಗ್ರೇರವರು ವಂದೇ ಮಾತರಮ್ ಸಂಪಾದಕರ ಮೇಲೆ ಮಾನವಾಸಿಯ ಖಟ್ಲೆಯನ್ನು ಮಾಡಿರುವದು ಪತ್ರಕರ್ತರಿಗ ಅನಿಷ್ಟಕಾಲವಲ್ಲವೆ ಇದು?

ಲಾರಖಾನಾದ ಇಬ್ಬರು ಅಸಹವಾದಿಗಳಿಗೆ ೧೦೮ ಕಲಮಿನ ಒಂದೊಂದು ವರ್ಷ ದ ಸಕ್ರಮ ಶಿಕ್ಷೆಯಾಗಿ ಮತ್ತೆ ೧೧೪ ರ ಮೇಲೆ ಖಟ್ಲೆ ನಡೆದದೆ ಪರಿಣಾಮವೂ ಕಂಡದ್ದೇ ಸರಿ

ಡಾ ಪರವ ಕೆಂದರವರು ಹಿಂದೂ ಪತ್ರದ ಸಂಪಾದಕತ್ವವನ್ನು ವಹಿಸಿದರು ಇವರು ಎಂಟನೆಯವರು ಇವರೆಂದು ತುರಂಗಕಾಣುವರೆಂಬವನ್ನು ಭವಿಷ್ಯವಾದಿಗಳು ಹೇಳಬಹುದೆ?

ಸ್ವರಾಜ್ಯ ದರ್ಶನವೆಂಬ ಪುಸ್ತಕವು ಜಪ್ತಾಗಿದೆ, ಅದರ ಮುದ್ರಕ ಹಾಗೂ ಪ್ರಕಾಶಕರಿಗೆ ೧೦೮ ರನ್ವಯ ಜಾಮೀನುಯಾಕೆ ತೆಗೆದುಕೊಳ್ಳಬಾರದೆಂದು ಕೋಪಡ್ಡರದ ಮ್ಯಾಜಿಸ್ಟ್ರೇಟರವರು ಕೇಳಿದ್ದಾರೆ. ಜಾಮೀನು ಕೇಳುವದಕ್ಕಿಂತ ತುರಂಗಕ್ಕೆ ಕಳಿಸುತೇನೆನ್ನುವದು ಉತ್ತಮ. ಯಾಕಂದರೆ ಅಸಹವಾದಿಗಳು ಜಾಮೀನು ಕೊಡಲಾರರಲ್ಲವೆ?

ನಾರಬೂರದ ೭೦ ವರ್ಷದ ಮುದುಕನಿಗೆ ೧ ವರ್ಷದ ಸಾದಾ ಶಿಕ್ಷೆಯಾಗಿದೆ ಮುದುಕನು ಧನ್ಯನಾದನು

ನಾರವೂರದ ಮತ್ತಿಬ್ಬರಿಗೆ ೧೧೦ ರನ್ವಯ ಒಂದೊಂದು ವರ್ಷ ದ ಸಕ್ರಮ ಶಿಕ್ಷೆಯಾಯಿತು. ತುರಂಗವಾಸವು ಅಸಹವಾದಿಗಳಿಗೆ ಬಿಟ್ಟಿದ್ದಲ್ಲ.

ಅಪ್ ಇವ ಅಮೀರ ಸಾಹೇಬರು ಮೋಪಲಾ ದುಃನಿವಾರಣಾರ್ಥಫಂಡಿಗ ಒಂದು ಸಾವಿರ ರೂ. ಗಳನ್ನು ಕೊಟ್ಟರು ಸ್ತುತ್ಯ ಧನಸಹಾಯ

ಬರೇಲಿ ಡಿ ಕಾ ಕ ಬರೇಲಿ ಶಹರ ಕಾ. ಕ ಬರೇಲಿ ಜಿ ಕ ಗಳ ಒಟ್ಟು ಏಳು ಜನರಿಗೆ ೧೦೮ ರನ್ವಯ ನೋಟೀಸು ಹೊರಟಿದೆ ಭಾವೀ ತುರಂಗವಾಸಿಗಳೇನು?

ಮೋಪಲಾ ಪ್ರಾಂತ ಹೋಲ ವಿಚಾರಣೆಯು ಮದ್ರಾಸ ಕೌನ್ಸಿಲಿನಲ್ಲಿ ಹೊರಡತಕ್ಕದ್ದದೆ, ಪರಿಣಾಮವು ಏಂದು?

ಧಾರವಾಡದಲ್ಲಿ ಸಾರ್ವಜನಿಕ ಗಣಪತಿಯನ್ನು ವಿದ್ಯಾರ್ಥಿಮಂಡಳದೊಂದಿಗೆ ರಾಷ್ಟ್ರೀಯಶಾಲೆಯಲ್ಲಿ ಕೂಡ್ರಿಸುವರು.

ಒಣಗಿದ ಗಿಡವನ್ನು ಕಡಿದ್ದುದ್ದೆಂಬ ಆರೋಪದ ಮೇಲೆ ಅಮೃತಸರ ಜಿಲ್ಹೆಯ ಗುರುದ್ವಾರ ಪ್ರಚಾರಕ ರೈವರು ಶೀಖರಿಗೆ ಆರಾರು ತಿಂಗಳ ಶಿಕ್ಷೆಯಾಯಿತು ಪ್ರಚಾರಕರಿಗೆ ಒಳವಿಲ್ಲದ ಕಾಲವಿದು.

ದೇಶಭಕ್ತ ಚಿತ್ತರಂಜನ ದಾಸರವರಿಗೆ ಬಂಗಾಲದ ವಳಿಯಿಂದ ಮಾನಪತ್ರವನ್ನು ಕೊಡುವದಾಯಿತು ಮಾನಪತ್ರಕ್ಕೆ ತಕ್ಕ ಇಸಮೇ ಸರಿ.

ಅಂಗೋರಾದ ಕಮಾಲ ಪಾಶಾನ ಸೈನ್ಯನಾ ಮಧ್ಯಸ್ಥ ಸಭೆಯಾಗಿರುವದೆಂತಲೂ,ಗ್ರೀಕರಸ್ಯೆನ್ಯವು ಅಸಮಾಧಾನಕಾರಕವಾಗಿಲ್ಲವೆಂ ಲೂಜನರಲ್ ಟಾವ್ನ ನಶಂಡರ ಅಭಿಪ್ರಾಯ. ಟಾವ್ನನ ಕೆಂಪರು ಮಹಾಯುದ್ಧ ಸಮಯದಲ್ಲಿ ಮೆಸಪೊಟೇಮಿಯಾದಲ್ಲಿ ಸೈನ್ಯಾಧಿಪತಿಗಳು...

ಧಾರವಾಡ ಮ್ಯು. ದ ಆಡಳಿತವೂ

ಧಾರವಾಡದವರ ಗೋಳಾಟವೂ.

—c—

ಧಾರವಾಡ ಮ್ಯು. ಯಲ್ಲಿ ಮನೆಪಟ್ಟಿ, ನಳ ಪಟ್ಟಿ, ಭಂಗಿಪಟ್ಟಿಗಳು ಆಕರಿಸಿದ್ದ ಪ್ರಕಾರ ಸಂಗತಿಯನ್ನು ನಾವು ಈ ಮೊದಲು ೧೦-೧೨ ದಿವಸಗಳ ಹಿಂದೆ ಪ್ರಕಟಿಸಿದ್ದೇವೆ. ಈ ಹೊತ್ತು ಪುನಃ ಆ ಸಂಗತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುವ ವಿಚಾರಮಾಡಿದ್ದೇವೆ.

ಮನೆಪಟ್ಟಿಯು ಮನೆಗಳನ್ನು ಮಾರಿಸಲು ಮೂಲವಾಯಿತು.

ಮನೆಪಟ್ಟಿಯ ಆಕರಣಿಯು ಪಾರ್ಶಿಕ ಉತ್ಪನ್ನದ ಮೇಲೆ ಅಂದರೆ ೧೦೦ ಕ್ಕೆ ೯ ರಂತೆ ಪ್ರಾರಂಭವಾಯಿತು. ಅಗ್ಗ ಮನೆಯ ಬಡವರು ಅಷ್ಟು ಕೊಡತಕ್ಕ ಮನೆಪಟ್ಟಿಗಳನ್ನು ಪಡಿಸಿದ್ದು ನ್ಯಾಯವಾದದ್ದು. ಹಾಗೆ ಮಾಡುವದು ಅನ್ಯಾಯವಲ್ಲವೆ? ಬೆಳಗಾಂವಿಯಂಥ ಮ್ಯು. ಯಲ್ಲಿ ನೂರಕ್ಕೆ ೫ ರಂತೆ ಇರುವದು. ಇಲ್ಲಿ ನೂರಕ್ಕೆ ೯ ರಂತೆ ಇದೆ. ಇದ್ದಾಗ್ಯೂ ಇರಲಿ. ಆದರೆ ಮನೆಪಟ್ಟಿ, ಭಂಗಿಪಟ್ಟಿ, ನಳಪಟ್ಟಿಗಳನ್ನು ಕಳೆದರೆ ಮೊದಲೇ ದುಷ್ಕಾಳ, ಮೇಲೆ ಅಧಿಕ ಮನೆಪಟ್ಟಿಯಿಂದ ಜನರಿಗೆ ತಾಪದಾಯಕವಾಗಿದೆ. ಆ ದಿಕ್ಕಿನಲ್ಲಿ ಮಂಡಳಿಯ ಲಕ್ಷ್ಯವೇಕೆ ಹೋಗಲಿಲ್ಲವೋ ತಿಳಿಯದು. ಇದೀಗ ಸಾಲದ್ದಕ್ಕೆ ಸರ್ಕಾರದ ಹೊಸ ನಿಯಮವು ಬಂದಿತು. ಕರ ಪಟ್ಟೀ ನೋಟೀಸುಗಳು ಇವುಗಳಿಂದ ಜನರು ಬೇಸತ್ತಿದ್ದಾರೆ. ಸಿಟಿಜನರಿಗಾಗಿಯೂ ನೂರಕ್ಕೆ ೫ ರಂತೆ ಮನೆಪಟ್ಟಿಯನ್ನು ಕೂಡಿಸುವದು ನ್ಯಾಯವಾದದ್ದು. ೯ ಕೊಡತಕ್ಕ ಪಟ್ಟಿಗಳನ್ನು ಇಳಿಸದ ಮ್ಯು. ಗೆ ಕೊಡತಕ್ಕ ಪಟ್ಟಿಗಳನ್ನು ತೀರಿಸಲು ಪಡಿಸಲೇ ಮನೆಪಟ್ಟಿಯನ್ನು ಮಾಡುವದು ನ್ಯಾಯವಾದ ಮಾರ್ಗವು.

ನಳಪಟ್ಟಿಯು ನಳಗಳನ್ನು ಕೀಳಿಸಲು ಕಾರಣವಾಯಿತು.

ಅರ್ಧ ಇಂಚಿನ ನಳಗಳನ್ನು ತೆಗೆಯಕೊಡುವ ಬಗ್ಗೆ ವರ್ಷಕ್ಕೆ ೧೨ ರೂ. ಮುಂತೆ ಸ್ಪೆಶಲ್ ನಳಪಟ್ಟಿಯು ಮತ್ತು ಮನೆಪಟ್ಟಿಯಿದ್ದು ಸಾರ್ವಜನಿಕ ನಳಪಟ್ಟಿಯ ಇದ್ದೇ ಇತ್ತು. ಸ್ಪೆಶಲ್ ನಳಪಟ್ಟಿಯನ್ನು ಕೊಡುವದರಿಂದ ಸಾರ್ವಜನಿಕ ನಳಪಟ್ಟಿಯನ್ನು ತೆಗೆದುಕೊಳ್ಳುವದು ನ್ಯಾಯಸಮ್ಮತವಾಗಬೇಕಾದದ್ದು. ಹಾಗಾಗದೆ ಇದ್ದೇ ಇತ್ತು. ಈ ಪದ್ಧತಿಯು ಎಲ್ಲಿಯೂ ಇರಲಿಲ್ಲ. ಜನರು ಊರವರನ್ನು ಪಿಲ್ಲಿಸಲಿಕ್ಕೂ, ತಾತ್ಪೂರ್ತಿ ವ್ಯಸ್ಥೆಯನ್ನು ನಿರ್ಮಿಸಲಿಕ್ಕೂ ಸ್ಪೆಶಲ್ ನಳಗಳನ್ನು ತೆಗೆದುಕೊಂಡವರಿಗೆ ಸಾರ್ವಜನಿಕ ನಳಪಟ್ಟಿಯನ್ನು ಮಾಫಮಾಡುವದು ಯೋಗ್ಯವೇ ಆಯಿತು. ಸಾರ್ವಜನಿಕ ನಳಪಟ್ಟಿಯನ್ನು ಸಾಮಾನ್ಯವಾಗಿ ಮಾಡಿ, ಸ್ಪೆಶಲ್ ನಳಪಟ್ಟಿಯನ್ನು ಹೇರಿದ್ದು ತೀರ ಅನ್ಯಾಯವಾದದ್ದೂ ಅಯೋಗ್ಯವಾದದ್ದೂ ಮಾಡಿಕೊಟ್ಟ ಮನುಷ್ಯನಾರೆಂತೆ ಮ್ಯು. ಯವರು ಮಾಡಿದರೆಂದು ತಿಳಿಯಬರುವದು. ೧ ರಿಂದ ೫ ರೂ. ವರೆಗಿನ ಮನೆಪಟ್ಟಿಯಿದ್ದವರಿಗೆ ಕಿಂಚಿತ್ ಲಾಭವಾದಂತೆ ಕಾಣಬರುವದು. ಆದರೂ ಭ್ರಾಂತಿಯೇ ಸರಿ.

೧ ರೂ. ಮನೆಪಟ್ಟಿ ಇದ್ದವರಿಗೆ ವರ್ಷಕ್ಕೆ ೧೨ ರೂ. ಸ್ಪೆಶಲ್ ನಳಪಟ್ಟಿ.

೧ ರಿಂದ ೩ ರೂ. ಗಳವರೆಗೆ ೧೩ ರೂ. ೩ ರಿಂದ ೬ ವರೆಗೆ ೧೪ ರೂ.

ಇನ್ನುಳಿದ ಸ್ಪೆಶಲ್ ನಳಪಟ್ಟಿಯಿದೆ. ೧ ರಿಂದ ೩ ರೂ. ಗಳ ಮನೆಪಟ್ಟಿ ಕೊಡುವವರೆಲ್ಲರೂ ಸಾಧಾರಣತಃ ಬಡವರೇ ಸರಿ. ಅವರು ಸ್ಪೆಶಲ್ ನಳ ತೆಗೆದುಕೊಳ್ಳುವ ಸಂಭವವೆಲ್ಲಿಯದು? ಬಡವರು ಇಂಥ ದುಬ್ಬಗೆ ಯಾಕೆ ಬಿದ್ದಾರು? ನೆರೆಹೊರೆಯ ಸ್ಪೆಶಲ್ ನಳಗಳಿಗೆ ಅಥವಾ ಸಾರ್ವಜನಿಕ ನಳಗಳಿಗೇ ಹೋಗುವರು. ಸ್ಪೆಶಲ್ ನಳ ತೆಗೆದುಕೊಳ್ಳುವವರಿಗೆ ಸಾರ್ವಜನಿಕ ನಳಪಟ್ಟಿಯು ಸ್ಥಿರವಾಗಿಯೇ ಇದೆ. ಹುಬ್ಬಳ್ಳಿ, ಸೊಲ್ಲಾಪೂರ, ವಿಜಾಪೂರ, ಸಾತಾರಿ, ಪುಣೆ, ಅಹಮ್ಮದನಗರ ಮುಂತಾದ ಮ್ಯು. ಗಳಲ್ಲಿ ತಿಂಗಳಿಗೆ ೧॥ ರೂ. ಅಥವಾ ೨ ರೂ. ಗಳಿಂತ ಹೆಚ್ಚಿನ ನಳಪಟ್ಟಿಯಿಲ್ಲ. ಮುಂಬೈಯಲ್ಲಿ ಮಾತ್ರ ನೀರಿನ ಪ್ರಮಾಣದಿಂದ ಸ್ಪೆಶಲ್ ನಳಪಟ್ಟಿಯಿದೆ. ಧಾರವಾಡ ಮ್ಯು. ಗೂ ಮುಂಬಯಿ ಮ್ಯು. ಗೂ ಸಂಬಂಧವಿರದ ಆನೆಯಿಂದ ಆಡು, ಕುದುರೆಯಿಂದ ಕತ್ತೆಯಂತಾಗಿದೆಯೆಂದು ತೋರುವದು. ಮುಂಬಯಿಯ ಸುಧಾರಣೆಯೇನು? ಎಷ್ಟು ಗಳೇನು? ಸಾರ್ವಜನಿಕ ನಳಗಳೇನು? ಎಷ್ಟು ಮಾತ್ರ ನೀರಿನವು ದೊರೆಯುವೇನು? ಧಾರವಾಡದಲ್ಲಿ ಇವುಗಳಲ್ಲೊಂದಾದರೂ ಉಂಟೋ? ಇದೂ ಇರಲಿ. ಮುಂಬೈ ಪಕ್ಷದ ನ್ಯಾಯವನ್ನು ಧಾರವಾಡವು ಅನುಸರಿಸಿದ್ದರೆ ಅದು ಸರಿಯೆಂದು ಯಾರೊಬ್ಬರೂ ಹೇಳಬಹುದು. ಯಾಕೆಂದರೆ ನೀರಿನ ಪ್ರಮಾಣದಿಂದ ನಳಪಟ್ಟಿಯು ಹೆಚ್ಚು ಅಥವಾ ಕಡಿಮೆಯಾಗುವದು. ಹಾಗೆ ಮಾಡದೆ ದೊಡ್ಡ ಮನೆಯವರು ಶ್ರೀಮಂತರು, ಅವರಿಂದ ಸಂಗ್ರಹಿಸುವದರಿಂದ ಹೆಚ್ಚು ಪಟ್ಟಿಯನ್ನು ಕೊಡಿರೆನ್ನುವದು ಹಾಸ್ಯಾಸ್ಪದವೂ ಅನ್ಯಾಯವಾದದ್ದಲ್ಲವೆ? ದೊಡ್ಡ ಮನೆಯಲ್ಲಿ ಒಬ್ಬಿಬ್ಬರಿದ್ದು, ಸಣ್ಣ ಮನೆಯಲ್ಲಿ ದೊಡ್ಡ ಕುಟುಂಬವಿದ್ದರೆ ಈ ನೀರಿನ ಸ್ಪೆಶಲ್ ಪಟ್ಟಿಯು ನ್ಯಾಯವಾಗುವದೇ? ಅವರು ದೊಡ್ಡವರಾಗಿ ಮನೆಯೊಡೆಯರೆಂದು, ಶ್ರೀಮಂತರೆಂದು ಸ್ವಲ್ಪ ನೀರಿಗಾಗಿ ಹೆಚ್ಚು ಕರ ಕೊಡಬೇಕೆನ್ನುವದು ಯೋಗ್ಯವೇ? ನ್ಯಾಯವೇ? ಈ ಪದ್ಧತಿಯು ಯಾವ ಸರ್ಕಾರದ ತತ್ವಕ್ಕೆ ಅನುಸಾರವಾಗಿರುವದು? ಈ ಪದ್ಧತಿಯು ಯಾವ ಸಂಬಂಧ ನ್ಯಾಯಕ್ಕೆ ಒಪ್ಪುವದು? ಹಾಗೆ ಒಪ್ಪುವವರೆಲ್ಲರೂ ಸುಧಾರಣೆಯೇ ಹೇಳಬಹುದು. ಇನ್ನು ಇದರ ಮೇಲೆ ೫೦ ಸಾವಿರ ಖರ್ಚನ್ನು ೫೦ ವರ್ಷದಲ್ಲಿ ಪಡೆಯುವದರಿಂದ ಹೀಗೆ ಸ್ಪೆಶಲ್ ನಳಗಳ ಪಟ್ಟಿಯನ್ನು ಆಕರಿಸುವದು ಹಿಡಿಸಬೇಕಾಯಿತೆಂದು ಅಧಿಕಾರಿಗಳು ಮ್ಯು. ಯಿಂದ ಹೊರಡುವವೆಂದು ನಮ್ಮ ಕೇಳಿಕೆ. ಅವಕ್ಕೆ ಹಾಗೆ ಇನ್ನಷ್ಟು ಕಾಲ ಹಾಕಿರೆಂದು ನಮ್ಮ ಹೇಳಿಕೆ. ಹಾಗೂ ಬಿಲ್ ಕಟಿಸಿ ಮಾಡಿರೆಂದು ನಮ್ಮ ಅಗ್ರಹ. ಹಾಗಾಗದಿದ್ದಲ್ಲಿ ಬೇರೆ ಬಾಬುಗಳಿಂದ ಬಿಚ್ಚುವವಾಇತು.

ಧಾರವಾಡದಲ್ಲಿ ನೀರಿನ ಪುರವಠೆಯೆಷ್ಟು? ಕೆರೆಯಲ್ಲಿ ನೀರೆಷ್ಟು? ಇವು ಎಲ್ಲರಿಗೂ ಗೊತ್ತೇ ಇದೆ. ದಿನಕ್ಕೊಂದು ಸಾರೆ ೨ ತಾಸು ನೀರು ಬಿಡಬೇಕಾದರೆ ಮ್ಯು. ಗೆ ಸಾಕಾಗಬೇಕಾಗಿ ಹೋಗುವದು. ಕೆಲವು ನಳಗಳಿಗೆ ನೀರೇ ಬರುವದಿಲ್ಲ. ಕೆಲವೆಡೆಗೆ ತಾಸಿಗೆ ನಾಲ್ಕಾರು ಕೊಡ ನೀರು ಬಂದರೆ ಅದಾಯವಾದರೂ ಪಡೆಯುವವರಿಗೆ ಹೋಗುತ್ತಿದೆ. ಕೆಲವರಂತೂ ಈ ಮೊದಲೇ ನಳಗಳಿಗೆ ಸ್ಪೆಶಾಲ್ಸಂಗ ಹಾಕಿ ಬಿಂದು ಮಾಡಿಸಿಬಿಟ್ಟಿದ್ದಾರೆ. ಈಗ ಸ್ಪೆಶಲ್ ನಳಪಟ್ಟಿಯು ಜಾಸ್ತಿಯಿರುವದರಿಂದಲೂ ನೂರಾರು ನಳಗಳ ಮಾಲಿಕರು ಅವುಗಳನ್ನು ಬಂದು ಮಾಡಲು ತಯಾರಾಗಿರುವರಂತೆ. ಆಗಲೇ ಹಲವು ನಳಗಳು ಬಂದಾಗಿರುವದನ್ನು ನಾವು ಕಂಡಿದ್ದೇವೆ. ನಂದನವನವನ್ನು ಹಾಳು ಮಾಡಲು ಮಂಗನ ಕಾಯಿಯು ಸಾಕು. ಹಾಗೆಯೇ ಸ್ಪೆಶಲ್ ನಳಗಳನ್ನು ಕೀಳಲು ಸ್ಪೆಶಲ್ ನಳಪಟ್ಟಿಯು ಕಾರಣವಾಯಿತು. ಹಾಗಾದರೆ ನೀರಿನ ಉತ್ಪನ್ನವು ಹೇಗೆ ಏರೆಯುವದೋ ದೇವರೇ ಬಲ್ಲ. ಇದೇ ಸ್ಥಿತಿಯು ಸ್ಥಿರವಾಗಿಯೇ ಉಳಿದರೆ ತಿಂಗಳೂ ಹೆಚ್ಚುವರಿ ಪ್ರೆಸಿಡೆಂಟ ಮಿಂಚಾಗ ಮೊದಲಾದ ಮ್ಯು. ಯ ಅಭಿಮಾನಿಗಳ ಹೊರತು ಬಹುತರ ಉಳಿದೆಲ್ಲರೂ ಸ್ಪೆಶಲ್ ನಳಗಳನ್ನು ಬಂದು ಮಾಡಿಸಿಕೊಳ್ಳಬಹುದು. ಹಾಗೆ ಮಾಡಿದರೇ ನ್ಯಾಯವಾದದ್ದೆಂದು ಯಾರೊಬ್ಬರೂ ಹೇಳಬಹುದು. ಹೀಗೆ ಸ್ಪೆಶಲ್ ನಳಪಟ್ಟಿಯು ಕಡಿಮೆಯಾಗಬಾರದೆಂದು ಮ್ಯು. ಯು ಬಯಸುತ್ತಿದ್ದರೆ, ಸಿಟಿಕೌನ್ಸಿಲಿನವರ ಹಿಂದಿನ ಪದ್ಧತಿಯನ್ನು ಇಟ್ಟುಕೊಳ್ಳುತ್ತಿದ್ದರೆ, ಎಲ್ಲರಿಂದ ಕೆಲವು ತಾಪದಾಯಕವಾದ ಈ ನಳಪಟ್ಟಿಯನ್ನು ಕಡಿಮೆ ಮಾಡಿ ತಿಂಗಳಿಗೆ ೧॥ ಅಥವಾ ಬಹಳವಾದರೆ ೨ ರ ಮನಿಗೆ ತಂದು ನಿಲ್ಲಿಸುವದು ಮ್ಯು. ಗೆ ಭೂಷಣವಾದದ್ದು.

ನಳಪಟ್ಟಿಯನ್ನು ಕಡಿಮೆ ಮಾಡುವ ಪುಣ್ಯವನ್ನು ಯಾರೂ ಕಟ್ಟಿಕೊಳ್ಳಲಿಲ್ಲವಲ್ಲ!

ಈಗಿನ ಅಧಿಕಾರಾರೂಢ ಪ್ರೆಸಿಡೆಂಟ (ಮಿ. ಮುಳಕೋಟಿ) ರೇ ಈ ಸ್ಪೆಶಲ್ ನಳಪಟ್ಟಿಯನ್ನೇರಿಸಲು ಮೂಲಕಾರಣರೆಂದು ನಾವು ಅನ್ನಲಾರೆವು. ಹಿಂದಕ್ಕೆ ಕೈ. ವಾ. ಮಿ. ಕರಗುದರಿಯವರು ಪ್ರೆಸಿಡೆಂಟರಿದ್ದಾಗ್ಗೆ ಮಿ. ದೇಸಾಯಿ, ಮಿ. ಜೋಗ, ಮಿ. ಮುಳಕೋಟಿ ಈ ತ್ರಿಮೂರ್ತಿಗಳು ಸ್ಪೆಶಲ್ ನಳಪಟ್ಟಿಯ ವಿಚಾರಣೆಯ ಸಬ್ ಕ. ಮೆಂಬರರು. ಈ ವಿದ್ವಾನ ರಲ್ಲಿ ಮಿ. ದೇಸಾಯಿ ಅವರು ಕಲೆಕ್ಟರ, ಮಿ. ಕರಗುದರಿ ಮೊದಲಾದವರು ಇದ್ದರು. ಮಿ. ಮುಳಕೋಟಿ ಯವರು ಮೊದಲು ಎರಡೇ ರೂ. ನಳಪಟ್ಟಿ ಇರಬೇಕೆಂದು ಅಭಿಪ್ರಾಯಕ್ಕೆ ಬಂದರೆ ಈಗಿನ ದ. ಉಳಿದವರ ಅಭಿಪ್ರಾಯಕ್ಕೆ ಕಳೆದ ಡಿಸೆಂಬರ ಮಾಸ ಕರಕ್ಕೆ ತಲೆ ಬಾಗಿಸಿದರು. ಕಳೆದ ಡಿಸೆಂಬರ ರ ತಿಂಗಳು, ಶಿಫಾರಸು ನಮ್ಮ ತಿಳಿದಿದ್ದು. ಅಂತೆ ಈ ಹೊಸ ಕಾಯದೆಯಿಂದ ನಳಗಳಲ್ಲಿ ನೀರು ಬಾರದೆ ಬದ್ದವರ ಜನರ ಕಳ್ಳತನಗಳಿಂದ ನೀರು ಬಾರದಾಗಿದೆ. ಆಗ ಮಿ. ಮುಳಕೋಟಿಯವರು ಪ್ರೆಸಿಡೆಂಟರು ಇದ್ದ ಪ್ರೆಸಿಡೆಂಟರಾಗಿಲ್ಲ. ಈಗಲಂತೂ ಇದ್ದಾರೆ. ಪೈವಟಿಯೋಗದಿಂದ ಮ್ಯು. ಯಲ್ಲಿ ಇವರ ಮತವೇ ಪ್ರಬಲವಾಗಿ ಇದೆ. ಜನರಗೋಳಾಟವನ್ನು ಕಡಿಮೆ ಮಾಡುವ ಮನಸ್ಸಿದ್ದರೆ ಮಿ. ಮುಳಕೋಟಿಯವರು ಈ ಬದಲು ಸ. ಕ. ಯಲ್ಲಿ ಠರಾವನ್ನು ಪಾಸಕೊಟ್ಟು ಸ್ಪೆಶಲ್ ನಳಪಟ್ಟಿಯನ್ನು ೧॥ ಇಲ್ಲವೆ ೨ ಮಾಡಿದ ಜನರಿಗೆ ನಿರಾಳವಾಗಿ ತೀರುವ ಬಡವರನ್ನೆಲ್ಲ ಬರಿಸಿ ಗೋಳಾಟವೂ ಕಡಿಮೆಯಾಗುವದು. ಮನೆಪಟ್ಟಿಯನ್ನು ೧೦೦ ಕ್ಕೆ ೫ ರಂತೆ ಆಕರಣಿಯನ್ನು ಮಾಡಬೇಕು.

ಗಾಡೀ ಪಟ್ಟಿಯು ಬಿದಿ ಹೊಸ ಪಟ್ಟಿಯು ಬಂತಿತು.

ಊರ ಕರಗಳು ಏರಿದಂತೆ ಶೈಕರ ಭಿಕಾರಿಗಳೂ ಹೊರಕಾಗಿ ಟಾಂಗಾ, ದಮನೆ, ಮೋಟಾರುಗಳ ದರಗಳೂ ಏರಿವೆ. ಆದರೂ ಗಾಡಿಯವರಿಗಾಗಿದ್ದಾರೆ. ಸಾಟಿ, ಸಿಕೇರಾ ಬಜಾರದಂಗಡಿಗಳ ಮೇಲೆಯೂ ಹೊಸ ಕರ ಕೊಡುವವರಿರುವರೆಂಬಲ್ಲಿ, ಅವುಗಳ ಕರದಿಷ್ಟು ಮನೆಪಟ್ಟಿಯನ್ನು ಕಡಿಮೆಮಾಡುವದರಲ್ಲಿ ಬರುವದೆಂಬುದು, ಹಾಗೆಯೇ ಅವುಗಳ ಮೇಲೆ ಕರವೇರಿಸುವದೆಂತಲೂ ಕೇಳಿಕೆ. ಮನೆಪಟ್ಟಿಯನ್ನು ಕಡಿಮೆ ಮಾಡುವವೆಂಬ ಸೇರಿದಷ್ಟಕ್ಕೆ ಕರ್ತವ್ಯ ಮುಗಿದುದಿಲ್ಲ. ಹೊಸ ಕರಗಳನ್ನು ಹೇರುವ ಮ್ಯು. ಯ ಮಾದರಿಯಿಂದ ಕೂಡಿಸಿ, ಕೆಟ್ಟದಕ್ಕೆ ಉತ್ಪನ್ನವನ್ನು ಹೆಚ್ಚು ಮಾಡುವ ಪದ್ಧತಿಯನ್ನು ಬಿಡುವದು. ಮುಳಕೋಟಿಯವರು ಸ್ಪೆಶಲ್ ನಳಪಟ್ಟಿಯನ್ನು ತಗ್ಗಿಸುವದು ಅವರ ಕರ್ತವ್ಯವಾಗಿದೆ. ಕೂಡದವರಾದರೆ ರಸ್ತಾವರೆಂ ಬಂತೆ, ಮನಸ್ಸಿದ್ದರಿಂದ ಏನಾದರೊಂದು ನೆಪತೆಗೆಯುತ್ತಿಲ್ಲವೆಂದು ನಾವು ನಂಬುವೆವು.

ಜನರೇ! ಏಳಿರಿ. ಟೊಂಕಕಟ್ಟಿರಿ.

ಜನರು ಎಚ್ಚರಿಯಬೇಕು. ಸೈಜರ ಹೇಳಿ ಧಾರವಾಡಕ್ಕೆ, ಮ್ಯು. ಯನ್ನೇ ನಂಬಿ ಕೂಡಬಾರದು. (Caesar cannot become a wolf, unless people become sheep) " ಜನರು ಕುರಿಗಳಾಗದ್ದರೆ ಸೀಜರನು ತೋಳನಾಗಲಾರನು " ಎಂಬ ಇಂಗ್ಲಿಷ ನಾಣ್ಣುಡಿಯನ್ನು ಲಕ್ಷ್ಯದಲ್ಲಿಟ್ಟು ಮ್ಯು. ಯ ಅನ್ಯಾಯವಾದ ಕರಗಳಿಗೆ ಬಲವತ್ತರವಾದ ವಿರೋಧವನ್ನು ತೋರಿಸಬೇಕು. ಅಂದರೆ ಕಲ್ಯಾಣಚಿಂತಕರಾದ ಕಾರಭಾರಿಗಳಿಗೆ ಹೆಚ್ಚು ದಕ್ಷತೆಯಿಂದ ಸುಧಾರಣಾ ಕಾರ್ಯವನ್ನು ಕೈಕೊಳ್ಳಲು ಹೆಚ್ಚು ಉತ್ಸಾಹವು ಬರುವದು. ಅದ್ದರಿಂದ ಜನರೇ ಏಳಿರಿ ಏಳಿರಿ! ಟೊಂಕ ಕಟ್ಟಿರಿ!

—

ಧಾರವಾಡ ಮ್ಯುನಿಸಿಪಾಲಿಟಿಯು ಪ್ರಸಿದ್ಧಪತ್ರಿಕೆಯು.

—c—

ಇತ್ತೀಚೆಗೆ ಈ ಊರ ಕೆಲವು ವರ್ತಮಾನ ಪತ್ರಗಳಲ್ಲಿ ಮತ್ತು ವಿಶೇಷವಾಗಿ ಮೊನ್ನೆ ತಾರೀಖು ೯-೬-೩೨ ಇನಸಿಯ ವಿಜಯ ಪತ್ರದಲ್ಲಿ ಧಾರವಾಡ ಮ್ಯುನಿಸಿಪಾಲಿಟಿಯ ಕಾರಭಾರ(ಅಡ್ಮಿನಿಸ್ಟ್ರೇಶನ)ದ ಬಗ್ಗೆ ಪುಷ್ಕಳ ಸುಳ್ಳು ವಿಧಾನಗಳು ಪ್ರಸಿದ್ಧವಾಗಿದ್ದು ಅವರಿಂದ ಜನರ ಮನಸ್ಸಿನ ಮೇಲೆ ವಿಪರೀತ ಕಲ್ಪನೆಯು ಆಗುವ ಸಂಭವವಿದೆ. ಅದನ್ನು ತೆಗೆದು ಹಾಕಿ ಖರೇ ಪರಿಸ್ಥಿತಿಯನ್ನು ಜನರಿಗೆ ತಿಳಿಸುವದರ ಸಲುವಾಗಿ ಈ ಪತ್ರಿಕೆಯನ್ನು ಧಾರವಾಡ ಮ್ಯುನಿಸಿಪಾಲಿಟಿಯ ಪಕ್ಷದಿಂದ ಪ್ರಸಿದ್ಧಗೊಳಿಸಿದೆ.

ಮನೆಪಟ್ಟಿ

ಮ್ಯುನಿಸಿಪಾಲಿಟಿಯಿಂದ ಈಗ ೪ ವರ್ಷಗಳ ಕೆಳಗೆ ಅಂದರೆ ಸನ್ ೧೯೨೮-೧೯೨೯ನೇ ಸಾಲಿನಲ್ಲಿ ಒಬ್ಬ ಸ್ಪೆಶಲ್ ಆಫೀಸರನ್ನು ನೇಮಿಸಿ ಮನೆಪಟ್ಟಿಯನ್ನು ರಿವ್ಯಾಯಿಜ ಮಾಡಿಸಿದ್ದು ಖರೇ ಆದೆ. ಆದರೆ ಅದರಲ್ಲಿ ೧೧ರಿಂದ ೧೫ ಸಾವಿರ ವರೆಗೆ ಮನೆಪಟ್ಟಿಯನ್ನು ಏರಿಸಿದರೆಂದು ಪ್ರಸಿದ್ಧಿಸಿದ್ದು ಸುಳ್ಳಿಂದೆ. ಆ ರಿವ್ಹಿಜನ್‌ದಲ್ಲಿ ನಾಲ್ಕು ಸಾವಿರ ರೂಪಾಯಿ ಮಾತ್ರ ಏರಿಸಲ್ಪಟ್ಟಿತು. ಮತ್ತು ಮ್ಯುನಿಸಿಪಾಲಿಟಿ ಆಕ್ಟ ಪ್ರಕಾರ ಊರಲ್ಲಿ ಮನೆ ಬಾಡಿಗೆಯು ಏರಲಿಕ್ಕೆ ಹತ್ತಿದೆ ಎಂದು ಮ್ಯುನಿಸಿಪಾಲಿಟಿಯವರಿಗೆ ತಿಳಿದರೆ ದರ ವರ್ಷನಷ ಮನೆಪಟ್ಟಿ ರಿವ್ಹಿಜನ್ ಮಾಡಿಸಲಿಕ್ಕೆ ಬರುತ್ತದೆ. ಮತ್ತು ೪ ವರ್ಷಗಳ ವರೆಗಾಗಿ ಊರ ಎಲ್ಲಾ ಮನೆಗಳ ಮನೆಪಟ್ಟಿಯನ್ನು ಒಮ್ಮೆ ಯಾದರೂ ರಿವ್ಹಾಯಿಜ ಮಾಡಿ ತೀರಬೇಕೆಂದು ಠಾಯಿದೆ ಅದೆ. ಆ ಪ್ರಕಾರಕ್ಕೆ ೧೯೩೧-೩೨ನೇ ಸಾಲಿನಲ್ಲಿ ಅಂದರೆ ಹಿಂದಿನ ರಿವ್ಹಿಜನ್‌ದಿಂದ ೪ ವರ್ಷಗಳು ಪೂರಾ ತೀರಿದ ಬಳಿಕ ವರ್ಷದಲ್ಲಿ ಅಮಲಿನಲ್ಲಿ ಬರುವಂತೆ ಮನೆಪಟ್ಟಿಯನ್ನು ಈ ಸಾರೆ ರಿವ್ಹಾಯಿಜ ಮಾಡಿಸಿದೆ. ಈ ರಿವ್ಹಿಜನ್‌ದಲ್ಲಿ ಕೆಲವು ಮನೆಗಳಿಗೆ ಹಿಂದಿನಕಿಂತ ಮನೆಪಟ್ಟಿ ಕಡಿಮೆ ಆಗಿದೆ ಮತ್ತು ಕೆಲವುಗಳಿಗೆ ಹೆಚ್ಚು ಆಗಿದೆ. ಏರಿಸಿದ ಬಾಡಿಗೆಯನ್ನು ಹೋಲಿಸಿದ ಬಳಿಗೆ ೪ ಟ್ರಿಬ್ಯುನಲ್ಲೇ ಏರಿಸುವವರಲ್ಲಿ ಬಂದಿರುವರು. ಒಟ್ಟು ಸಾಸು ೬೦೦೦ ಮನೆಗಳಲ್ಲಿ ಸುಮಾರು ೧೫೦೦ ಮನೆಗಳ ಪಟ್ಟಿಗೆ ಏರಿದ್ದು ಕಂಡದರಿಂದ ಅವುಗಳ ಟ್ರಿಬ್ಯುನಲ್ಸನ್ನು ಹೆಚ್ಚು ಮಾಡಿದ. ಮತ್ತು ಈ ಪ್ರಕಾರ ಏರಿದ ಟ್ರಿಬ್ಯುನಲ್ಸ ಅಂದರೆ ಅಜಮಾಸು ೪೭೦೦ ರೂ. ಆಗಿನ್ನು ೧೧೦೦೦-೧೨೦೦೦ ಅಂತ ಏರಿದಷ್ಟು ಪೂರ್ಣ ಸುಳ್ಳು ಸಂಗತಿ ಆದೆ. ಇದರಲ್ಲಿಯೂ ಕೂಡ ಅಜಮಾಸು ಅರ್ಧದಷ್ಟು ನೂರಾರು, ಬಳಿ ಒಪ್ಪಿದ್ದನ ಗುತ್ತ, ಟ್ರಿಬ್ಯುನಾರ್ ಪಟ್ಟಿಯ ಊರ ಹೊರಗಿನ ಇಮಾರತಿಗಳ ಮೇಲೆಯೇ ಏರಿದೆ. ಈ ಏರ ಅರ್ಧದಲ್ಲಿ ಅಜಮಾಸು ಬಂದು ನಾಲ್ಕಾರು ರಕಮು ಉಪ್ಪಿನಮೊಸ ಇಮಾರತಿಗಳ ಮೇಲೆ ಏರಿದೆ. ಅದ್ದರಿಂದ ಊರ ಜನರ ಮೇಲೆ ಅತಿಸ್ವಲ್ಪ ಪ್ರಮಾಣದಿಂದ ಈ ಟ್ಯಾಕ್ಸ ಏರಿಂದಿದೆ. ಮತ್ತು ೪ ಬದಲು ೫೦೦೦ ಮನೆಗಳಿಗೆ ಹಿಂದೆ ಇದ್ದ ಕರದಲ್ಲಿ ಏನೂ ಹೆಚ್ಚು ಆಗಿಲ್ಲಾ.

ಇನ್ನು ಚೀಫ ಆಫೀಸರರನ್ನು ಈ ಕೆಲಸಕ್ಕೆ ನೇಮಿಸದೇ ಕಮೀಟಿಯ ಮೆಂಬರರನ್ನು ನೇಮಿಸಿದ್ದಕ್ಕೆ ಕೆಲ್ಸವಾಗುತ್ತಿಲ್ಲವೋ ಹ್ಯಾಂಗೆಂದು ಬರೆದಿದೆ. ಆ ಏರೆ ಖರೆ ಸಂಗತಿಯಂದರೆ. ೧೯೨೫ನೇ ಸಾಲಿನಲ್ಲಿ ಮೇ. ಮಿ. ಕರಗುದರಿ ಇವರು ಪ್ರೆಸಿಡೆಂಟರಿದ್ದಾಗ್ಗೆ ಒಂದು ಇಂಥ ಕಮೀಟಿಯನ್ನು ನೇಮಿಸಿದ್ದರು. ಆದರೆ ಆವರು ಒಂದು ವರ್ಷವಾದರೂ ಯೋಜನೆ ತೆಲಸ ಮಾಡದ್ದರಿಂದ ಹಿಂದಿನ ವರ್ಷದ ಮ್ಯಾನೇಜಿಂಗ ಕಮೀಟಿಯು ಹೇಳಿದರನ್ನು, ತಮ್ಮ ಕಮೀಟಿಯ ಮೆಂಬರರು ಏರಿ ಕೆಲಸ ಮಾಡಲಿಕ್ಕೆ ವೇಳೆಗೆ ಸುವಿಧಾಗಿ ಬರುವದಿಲ್ಲಾ ಕಾರಣ ಈ ಕೆಲಸ ಆಗುವದು ಆವಶ್ಯವಿದೆ ಮತ್ತು ಚೀಫ ಅಫೀಸರ ಅಥವಾ ರಿವ್ಯಾಯಿಜಿಂಗ ಸ್ಪೆಶಲ್ ಆಫೀಸರನ್ನು ನೇಮಿಸತಕ್ಕ ಯವೇ ಪ್ರಕಾರ ರಿವ್ಹಿಜನ್ ಕೆಲಸ ಮಾಡಿಸಬೇಕೆಂದು ರಿಪೋರ್ಟು ನೀಡಿದ್ದು ಮಾ ಡಿ ದ್ದ ರ ಮೇಲೆ ಮ್ಯುನಿಸಿಪಾಲಿಟಿ ಯ ವ ರು ಚೀಫ ಸ್ಪೆಶ ಲ ಆಫೀಸರನ್ನು ತಾವಿದರ ವಿಶೇಷ ಖರ್ಚು ಬೀಳದಿರುವದೆಂದು ಚೀಫ ಆಫೀಸರರಿಗೇ ಈ ಕೆಲ್ಸ ಮಾಡುವದಕ್ಕೆ ಹಚ್ಚುವ ಠರಾವಮಾಡಿದರು. ಖರೇ ಹಕೀಕತ್ತು ಹೀಗಿದ್ದು ಅದನ್ನು ಡವಳತಿ ಮಾಡಿ ತಿಳಿದುಕೊಳ್ಳದೇ ಜೋಡಿಸಿದರೊಂದು ಅಯೋಗ್ಯ ವಿಧಾನ ಮಾಡಿದ್ದು ಆಗಲೇ ಗೈರು ಆದೆ. ಮತ್ತು ಚೀಫ ಆಫೀಸರರು ೩॥ ತಿಂಗಳಷ್ಟೇ ಸದರ ಕೆಲಸವನ್ನು ಪೂರಾಮಾಡಿ ೧೯೩೧-೩೨ನೇ ಸಾಲಿನಲ್ಲಿಯೇ ಮನೆಪಟ್ಟಿ ರಿವ್ಹಿಜನ್ ಅಮಲಿನಲ್ಲಿ ಬರುವಂತೆ ಅತಿ ಶೀಘ್ರ ಕೆಲಸಮಾಡಿ ಉತ್ಪನ್ನವನ್ನು ಹೆಚ್ಚಿಸಿದ್ದ ಕ್ಕಾಗಿ ಮುನಿಸಿಪಾಲ್ಟಿಯವರು ಅವರಿಗೆ ಅವರ ರಿಪೋರ್ಟಿನ ಮೇಲಿಂದ ಸ್ಪೆಶಲ್ ಅಲಾವನ್ಸ ಕೊಡಬೇಕೆಂದು ಠರಾವ ಮಾಡಿದರು. ಅದಾಗಿ ಈಗ ೩॥ ತಿಂಗಳು ಆದರೂ ಅದನ್ನು ಚೀಫ ಆಫೀಸರರು ತೆಗೆದುಕೊಂಡಿಲ್ಲಾ. ಮತ್ತು ಆ ಠರಾವು ಆದಾಗ್ಯೆ ಈಗಿನ ಪ್ರೆಸಿಡೆಂಟರಾದ ಮಿ. ಮುಳಕೋಟಿ ಇವರು ಹಜರ ಇದ್ದಿಲ್ಲಾ.

ಭಂಗಿ ಪಟ್ಟಿ

ಈ ಪಿಡಿಂಗದ ಕೆಳಗೆ ಸ್ಪೆಶಲ್ ಭಂಗಿ ಪಟ್ಟಿಯನ್ನು ಕೊಡುವವರು ಕೂಡಾ ಜನರಲ್ ಭಂಗಿಪಟ್ಟಿ ಕೊಡಬೇಕೆಂಬ ಅನ್ಯಾಯದ ಠರಾವು ಮಾಡಿರುವರೆಂದು ಬರೆದದೆ. ಇದಕ್ಕಾಗಿ ಮೊದಲಿನಿಂದ ... ಹೋದವರ್ಷ ಆಚೀವರ್ಷ ಮತ್ತು ... ತಾವು ಕೊಟ್ಟ ... ಕೊಳ್ಳಬೇಕು. ಹಿಂದಿನಂತೆಯೇ ... ಕೊಡುವ ಪದ್ಧತಿ ಆದೆ. ... ಹೆಚ್ಚು ಕಡಿಮೆ ಮಾಡಿದ್ದಾ ... ನ್ಯಾಯವು ಹಾಗು ಸ್ಪೆಶ್ಯ ... ಬರುಗಳು ... ಮತ್ತು ೧೫೦೦೦ ಹಾಗು ... ಈ ಕಟ್ಟು ... ವಾಗಿ ೬೦೦೦ ಮತ್ತು ...

ಅಂದಿನ ಮೇಲೆ ಖಾಸಗಿ ವ್ಯವಸಾಯಗಳನ್ನು ಸೃಷ್ಟಿ ಮಾಡಿಸಲಿಕ್ಕೆ ಪಟ್ಟಣದ ಖರ್ಚಿನವರು ಪಟ್ಟಿಸಕ್ಕಿಂತ ಹೆಚ್ಚು ಅಂದರೆ ಅಜಮಾಸು ೪೦೦೦ ರೂಪಾಯಿಗಳನ್ನು ಊರಜನರಲ್ಲಿ ಟ್ಯಾಕ್ಸದ ಉತ್ಪನ್ನದಿಂದ ಕೊಡಬೇಕಾಗುತ್ತಿತ್ತು. ಇಂದಿನ ಮೇಲೆ ಖಾಸಗಿ-ವ್ಯವಸಾಯಗಳನ್ನು ಇಟ್ಟುಕೊಂಡು ಸ್ವತಂತ್ರರೀತಿಯಿಂದ ಇರಬೇಕೆಂಬ ಸ್ಥಿತಿಸಂತರ ಸಲುವಾಗಿ ಆ ಖರ್ಚವನ್ನು ಊರ ಜನರು ಕೊಡಬೇಕಾಗುತ್ತಿತ್ತು. ಇದು ಅನ್ಯಾಯವಾದ್ದರಿಂದ ಮತ್ತು ಖರ್ಚನವನ್ನು ಉತ್ಪನ್ನವು ಅದೇ ಬಾಬತಿಯಿಂದ ಆದರು, ಆಗತಕ್ಕದ್ದೆಂಬ ಸರ್ವ ಸಮ್ಮತವಾದ ತತ್ವಕ್ಕನುಸರಿಸಿ ಸ್ಪೆಶಲ್ ಥಂಗಿಪಟ್ಟಿಯು ಏರಿಸಲ್ಪಟ್ಟಿದೆ. ಅದರಂತೆಯೇ ಜನರಲ್ ಶ್ಯಾನಿಟರಿ ಖರ್ಚ ಜನರಲ್ ಥಂಗಿ ಪಟ್ಟಿಯಿಂದಲೇ ತೀರತಕ್ಕದ್ದರಿಂದ ಅದನ್ನು ಕೆಲವು ಪ್ರಮಾಣದಿಂದ ಏರಿಸಿರುತ್ತದೆ. ಇದರಲ್ಲಿ ಅನ್ಯಾಯವು ಹ್ಯಾಗಾಗಿರುವದೋ ತಿಳಿಯದು.

ನೀರಿನ ಪಟ್ಟಿ

ಹೋದ ಅನೇಕ ವರ್ಷಗಳಿಂದಲೇ ನೀರಿನ ಪಟ್ಟಿಯನ್ನು ಏರಿಸ ತಕ್ಕದ್ದೆಂದು ಎಲ್ಲರೂ ಪದಂ ಬಟ್ಟು ಅದನ್ನು ಹ್ಯಾಗೆ ಏರಿಸಬೇಕೆಂಬ ಬಗ್ಗೆ ಮಾತ್ರ ಚರ್ಚೆನಡೆಯಿತು. ಸನ್ ೧೯೨೦ ನೇ ಸಾಲಿನ ತನಕ ಯಾವೊಂದು ನಿರ್ಧಾರವಾಗಿಲ್ಲ. ಹಾಗೂ ೧೯ ನೇ ವರ್ಷದಲ್ಲಿ ೧೯೨೧ ಆರಿಸಲ್ಪಟ್ಟವರು ಪ್ರೆಸಿಡೆಂಟರು ಆಗ್ಗೆ ಆವರ ಅಧ್ಯಕ್ಷತೆಯ ಕೆಳಗೆ ೧೯೨೧ ರ ಸುಮಾರಿನಲ್ಲಿ ರಾವಸಾಹೇಬ ದೇಶಾಯಿ, ಬಿ. ಎ., ಎಲ್. ಎಲ್. ಬಿ. ಮತ್ತು ಮಿ. ಮುಳಕೋಟಿಯವರದೊಂದು ಸಬ್ ಕಮಿಟಿ ಯು ನೇ ಮಿ. ನೆ ಲ್ಲ ಟ್ಟು ಆದರಲ್ಲಿ ಮಿ. ಮುಳಕೋಟಿ ಇವರು ಗೈರ ಹಾಜರ ಇದ್ದಾಗ್ಗೆ ಉಳಿದ ಮೆಂಬರರು ಸದ್ಯದಲ್ಲಿ ಮಾಡಿದಂತೆ ಈಗ ಅಮಲಿನಲ್ಲಿ ತಂದಿರುವ ನೀರಿನ ಪಟ್ಟಿ ದರಗಳನ್ನು ಠರಾಯಿಸಿದರು ಮತ್ತು ಅವುಗಳನ್ನು ಮ್ಯುನಿಸಿಪಾಲಿಟಿಯವರು ಠರಾವ ಮಾಡಿದ ಮೇಲೆ ಮಿ. ಕರಗುದರಿ ಇವರು ಪ್ರೆಸಿಡೆಂಟರಿದ್ದಾಗ್ಗೆ ತಮ್ಮ ಸಹಿಯಿಂದ ಪ್ರಸಿದ್ಧ ಮಾಡಿದರು. ಮುಂದೆ ರೀತಿ ಪ್ರಕಾರ ಸರಕಾರದವರು ಅವುಗಳಿಗೆ ಮಂಜೂರಿಯನ್ನು ಕೊಟ್ಟರು. ಹೀಗಿದ್ದು ನಮ್ಮ ಗಳೇ ಅಂದರೆ ಈಗ ನಾಲ್ಕಾರು ತಿಂಗಳಲ್ಲಿಯೇ ನೀರಿನ ಪಟ್ಟಿಯನ್ನು ಏರಿಸಲಾಗಿ ಏರಿಸಿರುವರೆಂಬ ಧೋರಣವನ್ನು ಪ್ರಸಿದ್ಧ ಮಾಡುವ ಲೇಖವು ಆಗಿರೇ ಅಯೋಗ್ಯವಾದದ್ದು. ಜನರಲ್ ಸಟ್ಟ ಪಟ್ಟಿಯನ್ನು ಮಾಫವಾಡಿ ಸ್ಪೇಶಲ್ ಸಟ್ಟ ಪಟ್ಟಿ ಇರಿಸದ್ದರ ಕಾರಣವೇನೆಂದರೆ- ಮಂದೇ ಮೇಲೆ ಜನರಲ್ ಹಾಗೂ ಸ್ಪೇಶಲ್ ಎರಡೂ ಟ್ಯಾಕ್ಸಗಳನ್ನು ಹೇರುವದು ಮ್ಯುನಿಸಿಪಲ್ ಆಕ್ಟಿನ ವಿರುದ್ಧವಾಗುವದೆಂದು Legal Remembrancer ಇವರು ಅಭಿಪ್ರಾಯ ಕೊಟ್ಟ ಪ್ರಕಾರ ಸರಕಾರದವರು ಆ ಪ್ರಕಾರ ಟ್ಯಾಕ್ಸ ಹೇರುವದು ಇನ್ನು ಮುಂದೆ ಬಂದು ಮಾಡಬೇಕೆಂದು ತಮ್ಮ ರ ರಾ ವ ಮಾ ದಿ ಪ್ಟರ ಮೇಲಿಂದ ಈ ಮೇಲಿಗೆ ದುರಸ್ತ ಮಾಡಿದು, ಮತ್ತು ನೀರಿನ ಪುರವಠೆಯ ಬಗ್ಗೆ ಆಗುವ ಖರ್ಚ ಆದನ್ನು ಆದರ ಉತ್ಪನ್ನದಿಂದಲೇ ಭಾಗಿಸತಕ್ಕದ್ದೆಂಬ ಸರ್ವ ಸಾಮಾನ್ಯ ವ್ಯವಹಾರ ತತ್ವಕ್ಕನುಸರಿಸಿ ನೀರಿನ ದರಗಳನ್ನು ಆಕರಣೆ ಮಾಡುವದರಲ್ಲಿ ಬಂದಿದೆ. ಮತ್ತು ಶ್ರೀಮಂತರಿಗೆ ಕರದ ಭಾರವು ಸ್ವಲ್ಪ ಹೆಚ್ಚಿಗೆ ಪ್ರಮಾಣದಿಂದ ಮತ್ತು ಬಡವರಿಗೆ ಸ್ವಲ್ಪ ಕಡಿಮೆ ಪ್ರಮಾಣದಿಂದ ಬೀಳಬೇಕೆಂಬ ಸರ್ವ ಸಮ್ಮತವಾದ ತತ್ವಕ್ಕನುಸರಿಸಿ ನೀರಿನ ದರಗಳನ್ನು ಹೆಚ್ಚು ಕಡಿಮೆ ಮಾಡಿದೆ. ಮುನಸಿಪಲ್ ಟ್ಯಾಕ್ಸ ಮುಂತಾದ ಇನ್ನುಳಿದ ಟ್ಯಾಕ್ಸದ ದರಗಳು ಇದೇ ತತ್ವಕ್ಕೆ ಅನುಸರಿಸಿ ಇದ್ದದ್ದು ಎಲ್ಲರಿಗೂ ಗೊತ್ತಿದೆ. ಅದ್ದರಿಂದ ಈಗ ಅಮಲಿನಲ್ಲಿ ಬಂದಿರುವ ನೀರಿನ ಪಟ್ಟ ದರಗಳು ಮಿ. ಕರಗುದರಿಯವರು ಪ್ರೆಸಿಡೆಂಟರಿದ್ದಾಗ್ಗೆ ವಿಶೇಷ ಕಾಳಜಿಯಿಂದ ... ಗೊತ್ತುಮಾಡಿದ್ದವು. ಇರುವದರಿಂದ ... ಯದ ಧೋರಣವು ಏನೂ ಇಲ್ಲಾ ... ನ ಪುರವಠೆಯು ಊರಲ್ಲಿ ಎಲ್ಲಾ ... ಆಗಬೇಕೆಂಬ ಪ್ರಶ್ನೆಯು ಬ ... ಟಿ ಇಂಜನಿಯರಿಗೆ ಕೇಳಿ ... ಲೆದ ಮೇಲೆ ಆದರಂತೆ ಮಾ ... ವಿಚಾರ ಮಾಡುವದರಲ್ಲಿ ... ಇದ್ದು ಇದ್ದು ಇದ್ದ

ಬಜಾರ

ಬಜಾರಿಯ ದರಗಳನ್ನು ಏರಿಸಿದ್ದಾರೆಂದು ಬರೆದಿರುವದು ಪ್ರಸ್ತುತ ರೀತಿಯಿಂದ ಮಿಥ್ಯವಿದೆ. ಬಡಜಗ್ಗರು ಉಪಯೋಗಿಸುವ ಆಹಾರದ ಧಾನ್ಯಗಳಿಗೆ ಹಾಗೂ ಸಾಮಾನುಗಳಿಗೆ ಅಂದರೆ, ಜೋಳ, ಗೋಧಿ ಅಕ್ಕಿ ಮತ್ತು ದೇಶೀ ವಸ್ತ್ರ ವಗೈರೆ ಸಾಮಾನುಗಳಿಗೆ ದರವನ್ನು ಕಡಿಮೆ ಮಾಡಿದೆ. ರೇಶಿ ಸರಾಪು ಮುಂತಾದ್ದು ಶ್ರೀ, ಬಂಗಾರ ಬೆಳ್ಳಿ ಮುತ್ತು ರತ್ನ ಮುಂತಾದವುಗಳ ಮೇಲೆ ದರವನ್ನು ಏರಿಸಿದೆ. ಇದರ ಮೇಲಿಂದ ನೋಡಿದರೆ ಶ್ರೀಮಂತರು ಮತ್ತು ಶೋಕಿನ ಉಪಯೋಗದ ... ಸಾಮಾನುಗಳಿಗೆ ಅಧಿಕವಾಗಿದ್ದು ... ಮೇಲೆ ಆದಿ ಆ ದರಗಳ ಹೆಚ್ಚಳ ಮ್ಯುನಿಸಿಪಾಲಿಟಿ ಆಸ್ತಿಗಳಲ್ಲಿ ಎಂದು ಜಾಗರೂಕರು ನೋಡಬಹುದು.

ಇದರಂತೆಯೇ ಇನ್ನುಳಿದ ಟ್ಯಾಕ್ಸಗಳ ಸ್ಥಿತಿ ಸ್ವಪಾತಿದ್ದು ಅದಲ್ಲವೇ. ಕರ ಶ್ರೀಮಂತರ ಪಟ್ಟಣದ ವ್ಯಾಪಾರಿಗಳ ಮತ್ತು ಬಡವರಿಗೆ ತಮ್ಮ ಪ್ರಮಾಣದಿಂದ ಕರದ ಭಾರವು ಬೀಳಬೇಕೆಂಬ ತತ್ವವನ್ನು ಅನುಸರಿಸಿದೆ. ಗಾಡಿ ಪಟ್ಟಿ ಏರ್ಪಾಡು ಮಾಡಲ್ಪಟ್ಟಿದ್ದರಲ್ಲಿ ವ್ಯಾಪಾರಿಗಳು ಉಪಯೋಗಿಸುವ ವಿಷಯ ಗಾಡಿಗಳ ಪಟ್ಟಿಯನ್ನು ೧೧ ರೂಪಾಯಿಯಿಂದ ೧೫ ಕ್ಕೆ ಏರಿಸಿದೆ ... ದ ೧ ರೂಪಾಯಿಯಿಂದ ೧೫ ಮಾಡಿದ ಗಾಡಿಗಳಿಗೆ ೬ ರೂಪಾಯಿಯಿಂದ ೧೨ ಮತ್ತು ೧೫ ರೂಪಾಯಿಗಳವರೆಗೆ ಏರಿಸಿದ್ದರು. ಮತ್ತು ಕ್ಯಾಬಿನ ಹಾದ್ದಿನ ಖರ್ಚು ಎಲ್ಲಾ ಅವರ ಉತ್ಪನ್ನದಿಂದಲೇ ಭಾಗಿಸಬೇಕೆಂದು. ಸ್ವಾರಿಯ ಕೋದ ಗಳನ್ನು ಮೊದಲಿನಂತೆಯೇ ಮಿಡಿ ... ಕುದುರೆ ... ಗಾಡಿಗಳ ದರಗಳನ್ನು ೪ ರೂಪಾಯಿಯಿಂದ ೧ ರೂಪಾಯಿ ಮಾಡಿದೆ. ಓಟಿನ ಕರದ ಪಕ್ಷಗಳಲ್ಲಿ ಹ್ಯಾಗೆ ಅನ್ಯಾಯವಾಗಿದೆಯೋ ತಿಳಿಯದಂತಾಗಿದೆ.

ಮಾರ್ಕೆಟು

ಧಾರವಾಡ ಮಾರ್ಕೆಟು ಈಗ ೧೦ ೧೫ ವರ್ಷಗಳ ಹಿಂದೆ ಕಟ್ಟಿದ್ದು ಅದನ್ನು ಪ್ರಸಕ್ತ ಕಟ್ಟಿಸಲಿಕ್ಕೆ ದುಡ್ಡು ಇಲ್ಲಿಲ್ಲದ್ದರಿಂದ ಇಲ್ಲಿಯ ವರೆಗೂ ಅದರ ಖುಲ್ಲಾ ಜಾಗಾ ಹಾಗೆಯೇ ಬಿದ್ದಿರುತ್ತದೆ. ಮ್ಯುನಿಸಿಪಾಲಿಟಿಯು ಸರ್ವಸಾಧಾರಣ ಕಾಮಗಾರಿ ಕೂಡ ನಡೆಯುವದು. ಈ ದಿವಸಗಳಲ್ಲಿ ದುಸ್ತರವಾಗಿ ರಂಥ ಖರ್ಚಿನ ಬಾಬುಗಳನ್ನು ಕೆಲಿಗೂ ಬದ್ಧವಾಗಿದ್ದಿಂದ ಕೈಕೊಳ್ಳುವದು ಮ್ಯುನಿಸಿಪಾಲಿಟಿಯವರಿಗೆ ಅಸಾಧ್ಯವಾದದ್ದರಿಂದ ಮ್ಯುನಿಸಿಪಲ್ ಮಾರ್ಕೆಟಿನ ಸುತ್ತ ಏನೂ ಉತ್ಪನ್ನ ಬಾರದೇ ಬರಿಯ ಜಾಗವನ್ನು ಬಿದ್ದವುಗಳಿಂದ ಅಂಗಡಿಗಳನ್ನು ಕಟ್ಟಿಕೊಂಡು ಉಪಯೋಗ ಮಾಡಿದರೆ ಮ್ಯುನಿಸಿಪಾಲಿಟಿಯವರಿಗೆ ಮತ್ತು ಜನರಿಗೂ ವ್ಯಾಪಾರದ ವೃದ್ಧಿಯಾಗುವದು ಮತ್ತು ಮಾರ್ಕೆಟಿಗೆ ಶೋಭೆಯು ಬಂದಂತೆ ಆಗುವದೆಂದು ತಿಳಿದು ಪರಿ ಖುಲ್ಲಾ ಜಾಗೆಯು ಪ್ರಸ್ತುತ ವ್ಯಾಪಾರಿ ಜನರ ಮಾರ್ಗ ಆದರ ವಾಟಿ ಮಾಡಿ ಮಾರಲ್ಪಟ್ಟಿದೆ. ಈಗಿದ್ದ ಮಾರ್ಕೆಟಿನ ಸ್ಥಿತಿಯಲ್ಲಿ ಅನೇಕ ಜನರಿಗೆ ಸುಲಭವಾಗಿ ವ್ಯಾಪಾರಮಾಡಲಿಕ್ಕೆ ಅಂಗಡಿಗಳು ಮತ್ತು ತಕ್ಕ ಜಾಗಗಳು ಇಲ್ಲದ್ದರಿಂದ ಏಪಕ ಜೋಪ್ಡಿಯಲ್ಲಿ ಬಿದ್ದವರಿಂದ ಆಗಲ್ಪಟ್ಟು ದೂರ ಸರಿಸಲಿಕ್ಕೆ ಅನ್ಯಾಯ ವ್ಯವಸ್ಥೆ ಮಾಡಲ್ಪಟ್ಟಿರುವದು.

ಈ ಜಾಗಾ ಸಲುವಾಗಿ ಒಂದು ಪಾಟಿಯಿಂದ ಮಾರ್ಕೆಟ ಹಾಗೂ ಮ್ಯುನಿಸಿಪಲ್ ಆಸ್ತಿಯು ಕಟ್ಟಿಸಬೇಕೆಂದು ಸಮ್ಮತಕ್ಕೆ ನಿರ್ಧರಿಸಿದೆ. ಮುನಸಿಪಲ್ ಆಸ್ತಿ ... ಈಗಿನ ಮುನಸಿಪಲ್ ... ಈಗ ೧೯೧೦ ವರ್ಷಗಳಿಂದ ಹಿಂದೆ ಎಲ್ಲಾ ಪ್ರೆಸಿಡೆಂಟರು ಗುತ್ತಿಗೆ ... ಮ್ಯುನಿಸಿಪಲ್ ಆಸ್ತಿಯ ... ಅವಶ್ಯವಾದದ್ದೆಂದು ... ನಿರ್ಧಾರವಾಗಿದ್ದು ... ಮ್ಯುನಿಸಿಪಾಲಿಟಿಯ ... ಈಗ ಮ್ಯುನಿಸಿಪಾಲಿಟಿಯ ...

[illegible]

ಈ ಸಂಗತಿ ಎಲ್ಲರಿಗೂ ತಿಳಿದಿದೆ. ... ಈ ಬಗ್ಗೆ ಯಾವ ಆಕ್ಷೇಪವು ... ಇಲ್ಲವೆಂದು ಮ್ಯುನಿಸಿಪಾಲಿಟಿಯವರಿಗೆ ಅನಿಸಿದೆ.

[illegible]

ಇವೆಲ್ಲ ಈ ಪ್ರಕಾರ ... ವ್ಯಾಪಾರ ... ಮ್ಯುನಿಸಿಪಾಲಿಟಿ ... ಹಿಂದಿನ ... ಈ ರೀತಿಯಾಗಿ ... ರಸ್ತೆಗಳ ... ಗಟಾರಗಳ ... ಮ್ಯುನಿಸಿಪಾಲಿಟಿಯವರು ... (Residential bungalows) ... ಈ ಪ್ರಕಾರದ ಉತ್ಪನ್ನ ಹಾಗೂ ಖರ್ಚಿನ ಬಗ್ಗೆ ಮ್ಯುನಿಸಿಪಾಲಿಟಿಯವರ ಅನಿಸು ಅವರ ಮತ್ತು ರಾಜಕೀಯ ಮಾಡಬಹುದಾಗಿದೆ.

ಈಗ ೧೯೨೧ ವರ್ಷದ ಹಿಂದಿನ ಮತ್ತು ಈಗ ಜಮಾಖರ್ಚಿನ ಬಾಬುಗಳು ಹ್ಯಾಗೆ ಹೆಚ್ಚು ಕಡಿಮೆ ಆಗಿರುತ್ತವೆಂದು ಎಲ್ಲರಿಗೂ ತಿಳಿಯಲಿ ಮುಖ್ಯ ಮುಖ್ಯ ಬಾಬುಗಳ ಮುಖ್ಯ ಆಂಕಿಗಳನ್ನು ಇದರ ಕೆಳಗೆ ಕೊಟ್ಟಿರುತ್ತೇವೆ.

ಜಮಾ. ಬಾಬುಗಳು.	೧೯೧೭-೧೮	೧೯೨೧-೨೨	ಖರ್ಚ. ಬಾಬುಗಳು.	೧೯೧೭-೧೮	೧೯೨೧-೨೨
ಕರದ ವಸೂಲಿ,	೩೧೦೦೦	೪೪೫೦೦	ಜನರಲ್ ಅಡ್ಮಿನಿಸ್ಟ್ರೇಶನ್,	೫೨೬೦	೭೭೦೦
ಟೋಲು,	೭೦೦೦	೮೦೦೦	ಕರವಸೂಲಿ,	೨೩೦೦	೩೯೦೦
ಮನೆಪಟ್ಟಿ,	೧೪೭೦೦	೨೭೭೦೦	ಬಜಾರ ಟೋಲುವಸೂಲು,	೪೩೦೦	೮೪೨೦
ನೀರಪಟ್ಟಿ (ಜನರಲ್ ವ ಸ್ಪೇಶಲ್)	೨೦೦೦೦	೩೭೦೦೦	ದೀಪದ ಸಪ್ಪಳ,	೪೯೦೦	೭೪೬೦
ಥಂಗೀಪಟ್ಟಿ (ಜನರಲ್ ಸ್ಪೇಶಲ್)	೫೦೦೦	೯೮೦೦	ಕೆಲಗೇರಿ ನೀರಿನ ಆ ಕಟ್ಟಿಗೆ.	೧೧೩೦೦	೨೪೯೦೦
ಮಾರ್ಕೆಟಭಾಡಿಗೆ,	೫೦೦೦	೮೨೦೦	ಖರ್ಚ ಬ ಇತರೆ ಖರ್ಚ,	೮೪೦೦	೧೧೨೯೦
ಶಾಳೆಯ ಫೀ,	೧೫೦೦	Nil	ನೀರಿನ ಖರ್ಚ,	Nil	೧೦೬೦೦
ಇತರ ಕಿರಕೋಳ,	೧೯೮೦೦	೫೩೭೦೦	ಶ್ಯಾನಿಟರಿ ಖಾತೆ,	೧೨೪೦೦	೨೧೫೦೦
			ಮೈಲಿ,	೪೦೩	೮೦೦
			ಪಬ್ಲಿಕ ವರ್ಕ್ಸ ನವಕರ ಪಗಾರ,	೧೦೦೦	೨೦೦೦
			ಶಾಲೆಗಳ ಖರ್ಚ,	೨೦೯೨೦	೪೬೮೦೦
			ಸರಕಾರದ ಸಾಲ,	೧೫೨೨೬	೧೫೨೨೬
			ಇತರ ಕಿರಕೋಳ ಖರ್ಚ,	೩೧೩೬೪	೪೫೧೬೪
ಒಟ್ಟು ಜಮಾ	೧೦೭೯೦೦	೧೬೫೮೦೦	ಒಟ್ಟು ಖರ್ಚ	೧೧೭೬೦೦	೨೦೨೯೦೪

ತಾರೀಖು ೧೧-೮-೧೯೨೨

ಧಾರವಾಡ ಮ್ಯುನಿಸಿಪಾಲಿಟಿ.

ಸತ್ಯಮೇವಜಯತೆ.

[ಗುಣವಾಗದಿದ್ದರೆ ಹಣಪರತ.]

ಪಥ್ಯ ಧಾತು ಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯ ಸ್ತಂಭಕವಾದ ಇಲ್ಲಾ

ಮದನೋದ್ಭವ ಗುಳಿಗೆ-

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಸ್ಖಲನ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ ಕಾಮೋತ್ತೇಜಕ ಮನೋಹಾರಕ, ಇಂದ್ರಿಯ ಸ್ತಂಭಕ, ಗರ್ಮಿಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿದ ಎಲ್ಲತರದ ಗಾಯಗಳು, ಪಿತ್ತದ ಬಾಧೆಗಳು, ಹೊಟ್ಟೆಶೂಲೆ, ವಾತರೋಗ ಮುಂತಾದ ಅತಿತ್ವರಿತ ಗುಣವಾಗಿ ಶರೀರಕ್ಕೆ ಸಿರೋಗತವೂ, ಶಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ೩೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೩೦ ಗುಳಿಗೆಗಳಿಗೆ ನಾಲ್ಕು ರೂಪಾಯಿ, ಇವನ್ನು ಸೇವಿಸುವಾಗ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು-

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಸಿಥಿಲತೆ, ನಿರ್ಬಲತೆ, ಮೊದಲಾದವು ಸತ್ಯಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವ, ಕೆಟ್ಟ ವಿಕಾರಗಳು, ಗುಣದಿಂದ ಇಂದ್ರಿಯ ಚೈತನ್ಯವನ್ನುಂಟು ಮಾಡಿ ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೩ ರೂ ಅನುಪಾನ ಪತ್ರಿಕೆ ಔಷಧಸಂಗಡ ಟಪಾಲ ಖರ್ಚು ಬೇರೆ ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ— ವೈದ್ಯ ಜಿ ಎಚ್ ಜೋಶಿ ಮತ್ತು ಕಂಪನಿ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ— ಹುಬ್ಬಳ್ಳಿ.

ವ್ಯವಹಾರದ ವೇಳೆ— ಮುಂಜಾನೆ ೧೧ ರಿಂದ ಮಧ್ಯಾಹ್ನದ ೩—೩೦ ರವರೆಗೆ ಶನಿವಾರ ೧೧ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲ ನಡೆಯತಕ್ಕ ವ್ಯವಹಾರಗಳು.

ಚಾಲೂ ಖಾತೆಗಳು— ಪುಕ್ಕಟೆಯಾಗಿ ತೆಗೆಯಲ್ಪಡುವವು

ಮುದ್ದತೀ ಠೇವುಗಳು— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು.

ಸೇವ್ಹಿಂಗ ಬ್ಯಾಂಕ— ಠೇವುಗಳು ತೆಗೆದುಕೊಳ್ಳಲ್ಪಡುವವು ಬಡ್ಡೀದರ ೪ ರೂ.

ಸರಕಾರೀ ಹಾಗೂ ಇತರ ಶಾರಣಗಳು

ಸುರಕ್ಷಿತತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ಸಫೆ ವಸೂಲುಮಾಡಿ ಆಯಾ ಖಾತೆಗಳಿಗೆ ಜಮೆ ಓಡಿಸುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಮಾಲ ಹಾಗೂ ರೋಖಿಯಾ ಉದಾರಿ ಕೊಡಲ್ಪಡುವವು. ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತಿಗೆದುಕೊಳ್ಳಲ್ಪಡುವವು. ಚೆಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತುಗಳನ್ನು ಕೊಡುವದರಲ್ಲಿ ಬರುವದು ದರ ಹಾಗೂ ನಿಯಮಗಳ ಪ್ರತಿಗಳೂ, ಮೊಖತ್ಯಾರ ಪತ್ರಗಳೂ ಸದರೀ ಬ್ಯಾಂಚದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಆರ್, ಎ, ಒಬ್ರಿಸ

ತಾ. ೨೨-೮-೨೨ ಜ್ಯ, ಎಂಜಂಟ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಬ್ರ್ಯಾಂಚ ಆಫೀಸ— ಹುಬ್ಬಳ್ಳಿ.

———o———

ಸೇವಿಂಗ್ಸ ಬ್ಯಾಂಕ.

ಕೆಳಗೆ ಬರೆದಿರುವಶರ್ತುಗಳ ಪ್ರಕಾರ ಈ ಬ್ಯಾಂಕಿನವರು ಠೇವಿನ ರಕಮುಗಳನ್ನು ಸ್ವೀಕರಿಸುವರು.

೧ ಯಾವದೇ ಒಂದು ವರ್ಷದಲ್ಲಿ ೧ ನೇ ಜನೇವರಿಯಿಂದ ೩೧ ನೇ ದಶಂಬರದೊಳಗಾಗಿ ೨೦೦೦ ರೂ. ಗಳಿಗಿಂತ ಹೆಚ್ಚಾಗಿ ಇರುವ ಠೇವನ್ನು ಸ್ವೀಕರಿಸುವದಿಲ್ಲ

೨ ಇಬ್ಬರಾಗಲಿ ಇಬ್ಬರಿಗಿಂತ ಹೆಚ್ಚಿನ ಜನರ ಹೆಸರಿನಲ್ಲಾಗಲಿ, ಠೇವನ್ನು ಸ್ವೀಕರಿಸುವೆವು ಮತ್ತು ಉಳಿದ ಹಣವನ್ನ ಹಯಾತಿಯಿರುವ ಉಳಿದ ಒಬ್ಬನಿಗಾಗಲಿ ಹಯಾತಿಯಿರದ ಉಳಿದಹಲವರಿಗಾಗಲಿ ತಿರುಗಿ ಕೊಡುವದರಲ್ಲಿ ಬರುವದ

೩ ೧೦೦೦೦ ರೂಪಾಯಿಗಳವರೆಗೆ ದರಸಾಲ್ ದರ ಶೇಕಡಾ ೪ ರೂ ಯಂತೆ ಬಡ್ಡಿಯು ಕೊಡಲ್ಪಡುವದು.

೪ ಬ್ಯಾಂಕಿನ ಮಾಹಿತಿಯಬಗ್ಗೆ ಸದರೀ ಮಾಹಿತಿಯ ಪುಸ್ತಕಗಳು ಬ್ಯಾಂಕ ಆಫೀಸಿನಲ್ಲಿ ಸಿಗುವವು. ಪತ್ರವ್ಯವಹಾರ ಮಾಡಿತರಿಸಿ ಕೊಳ್ಳಬಹುದು.

೨೬-೪-೧೯೩೩ ಎ. ಟಾಸ. ಏಜಂಟ್ರು

ಇಂಪೀರಿಯಲ್ ಬ್ಯಾಂಕು ಹುಬ್ಬಳ್ಳಿ

ಸಂಗೀತ ಸ್ವರಬೋಧಿನಿ ಬೆಲೆ ೦—೧೨—೦

ಸಂಗೀತ ಸ್ವರಬೋಧಿನಿಯು— ಹಾರ್ಮೋನಿಯಮ್, ವೀಣಾಮೊದಲಾದ ಜಂತ್ರ, ತಂತ್ರಿ ವಾದ್ಯಗಳನ್ನು ಬಾರಿಸಲಿಕ್ಕೂ, ಹಾಡಲಿಕ್ಕೂ ಕಲಿಯಲು ಅತ್ಯವಶ್ಯವ ಗ್ರಂಥವಾಗಿದೆ. ಶಾಸ್ತ್ರೋಕ್ತ ಗಾಯನ—ವಾದನಗಳನ್ನು ಕಲಿಯುವವರಿಗೆ ಸುಲಭಸಾಧ್ಯವಾಗುವಂತೆ ಬರೆಯಲ್ಪಟ್ಟ ಸಂಗೀತ ಪುಸ್ತಕಗಳು ಕರ್ನಾಟದಲ್ಲಿರದ್ದರಿಂದಲೇ ಈ ಪುಸ್ತಕನ್ನು ಕನ್ನಡಭಾಷೆಯಲ್ಲಿ ರಚಿಸಿದೆ. ಬೆಲೆ ೦—೧೨—೦ ರೋಕ ತೆಗೆದುಕೊಳ್ಳುವವರಿಗೆ ೧೦೦ ಕ್ಕೆ ೨೫ ರಂತೆ ಕಮೀಶನ್ ಕೊಡಲಾದೀತು.

ಕರ್ನಾಟಕ ಗಾಯನಸಾರ— ಇದು ಎಲ್ಲ ದೆವತಾಸ್ತೋತ್ರ ಪದಗಳಿಂದ ತುಂಬಿತುಳುಕುತ್ತಲಿದೆ. ಬೆಲೆ ೦—೬—೦ ರೂ ರೋಕ ಗೆತೆದುಕೊಳ್ಳುವವರಿಗೆ ೧೦೦ಕ್ಕೆ ೨೫ ರಂತೆ ಕಮೀಶನ್ ಕೊಡಲಾದೀತು.

ಸಂಗೀತ ವಿದ್ಯಾಮಾರ್ಗದರ್ಶಿನಿ (ಅಚ್ಚಿನಲ್ಲಿದೆ) ಬೆಲೆ ೧—೪—೦ ರೂ.

ಸಂಗೀತ ವಿದ್ಯಾಂಜನ (ಅಚ್ಚಿನಲ್ಲಿದೆ) ಬೆಲೆ ೨—೮—೦ ರೂ.

ಮೊದಲಿನವೆರಡು ಪುಸ್ತಕಗಳನ್ನು ನೋಡಿದಲ್ಲಿ ಮುಂದಿನವೆರಡು ಪುಸ್ತಕಗಳ ಮಹತ್ವವು ಕಂಡುಬರುವದು ಪ್ರತಿಗಳು ಸ್ವಲ್ಪೇ ಉಳಿದಿವೆ. ಆರ್ಡರ ಕೊಡುವವರು ಈಗಲೇ ನಾಲ್ಕಾಣೆಯ ಪೋಸ್ಟಲ್ ಸ್ಟಾಂಪಿನೊಂದಿಗೆ ಆರ್ಡರಕೊಡಬಹುದು. ಗ್ರಂಥಕರ್ತರಮೊಹರಿಲ್ಲದ ಪುಸ್ತಕವು ಕಳವಿನದೆಂದು ತಿಳಿಯಲಾದೀತು.

ಪತ್ತೆ— ಸೋಮಪ್ಪಾ ಭಗವಾನದಾಸ ಉಳ್ಳಿ ಬೊಮ್ಮಾಪುರದ ಲಿಂಗನಪೇಟ

ಬಣಗಾರಓಣಿ ಹೊಸಹುಬ್ಬಳ್ಳಿ (೨೮ ೫-೨೨)

ಮೈಸೂರಲ್ಲಿ ನಿತ್ಯವೂ ಹೊರಡುವ

ಸತ್ಯವಾದಿ

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ, ರಾಜಕೀಯ, ಸಾಮಾಜಿಕ, ಅರ್ಥನೀತಿ, ಮತ್ತು ಸಾಹಿತ್ಯ ವಿಚಾರಗಳನ್ನು ಚರ್ಚಿಸುವ ದೈನಿಕ ಪತ್ರವು. ಎಲ್ಲ ದೇಶ-ವಿದೇಶದ ಸುದ್ದಿಗಳು ಸರಸಾಗಿ ವಿವೇಚಿಸಲ್ಪಡುವವು. ವಾರ್ಷಿಕ ಚಂದಾ ಅಂಚೇವೆಚ್ಚಸಹಿತ ೧೫-೦-೦ ರೂ. ಜಾಹಿರಾತುಗಳ ಪ್ರಕಟಣೆಯಿಂದ ವ್ಯಾಪಾರಸ್ಥರಿಗೆ ತುಂಬಾ ಲಾಭಕರ ಏಜಂಟರುಗಳು ಬೇಕು ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ಸತ್ಯವಾದಿ ಪ್ರೇಸ ಮೈಸೂರ.

....

ಶ್ರೀ. ಭಾರತ ಜಗತ್ಪ್ರಸಿದ್ಧ ಒಗಜ್ಜಾಹೀರ ನೋಟೀಸ

ದುಷ್ಟೇವನೆಬಾಯಿಯಿತು!) ೫೦೦ ರೂಪಾಯಿ ಬಕ್ಷೀಸ (ಸುಧೈವ ಬಿಕು!

ಈ ಮೃತ್ಯುಂಜಯ ಗುಳಿಗೆಯಿಂದಾ ಗುಣಬರುವದಿಲ್ಲೆಂದು ಸಿದ್ಧ ಮಾಡಿದವರಿಗೆ ಐದುನೂರು ರೂಪಾಯಿ ಭಕ್ಷೀಸ

ಈ ಸುಸಂಧಿಯನ್ನು ‖ ಶ್ರೀ ರೇವಣಸಿದ್ಧೇಶ್ವರ ಪ್ರಸನ್ನ ‖ ಕಳೆದುಕೊಳ್ಳಬೇಡಿ

ಆರ್ ಎಲ್. ಹಿರೇಮಠ ಆರೋಗ್ಯಮಂದಿರ ಆರ್ಯ ವನೌಷಧಿ ಕಾರಖಾನಾ ಕಮತನೂರ ಜಿಲ್ಲಾ ಬೆಳಗಾಂವ

ಕಳಕ (ಬತ್ತಿ) ರಸಾಯನ ಔಷಧ ತಕ್ಕೊಂಡು ಯಾಕ ಸಾಯುತ್ತೀರಿ?

ಅಪ್ಪುವನ್ನಾರು ಶುದ್ಧ) ಮೃತ್ಯುಂಜಯ ಗುಳಿಗೆಗಳು. (ನಷ್ಟತಿಯುದಿ ೧ಬಿಸಿ)

ಇದರಿಂದ ಉಪದಂಶ ಗರ್ಮಿ (ಉಷ್ಣ) ಪರ್ಮಿ ಮುಂತಾದ ಎಲ್ಲ ಪ್ರಕಾರದ ಮಹಾರೋಗ ಚೆಂಡ ಕತ್ತರಿಸಿ ಬಿದ್ದರೂ ಸಹ ೭ ದಿನಸದಲ್ಲಿಗುಣ, ಇಂಥ ಪ್ರಖರ ರೋಗದಿಂದ ಉತ್ಪನ್ನವಾಗುವ ಉಪಗರ್ಮಿ [ಉಪದಂಶ] ಪರ್ಮಿಚಡಿ ಒಡೆದ ಗಂಟು ಅತಿಶಯ ಬಾತದ್ದು ಇಂದ್ರಿಯ ತಿದಿಕ ಗ್ರಂಥಿ ರಕ್ತ ಸ್ರಾವ ದಾವ್ನ ನ್ಯೂಣಸುಧ ಮುಖ ಮೈ ಮೇಲೆ ಗರ್ಮಿ ಒಡೆದು ತೀವ್ರ ಹೊಂಬಿದ್ದ ಸಂಧಿವಾಯು ಅಂಗಳಕ್ಕೆ ನಾತ ಬಿದ್ದ ಮೂಗು ಕೊಪ್ಪುವದುಮೂಳವ್ಯಾಧ ವಗೈರೆ ಕಾರಣದಿಂದ ಜನನೇಂದ್ರಿಯ ಶಿಥಿಲತಾ ಅಥವಾ ನಪುಂಸಕತ್ವ ಸ್ವಪ್ನಾವಸ್ಥೆ ಒನವಿಯಿಂದಾ ಧಾತು ಅಥವಾ ಖರ ನಿಳೆರಾ ಸಂಭೋಗದ ವೇಳೆಯಲ್ಲಿ ಶ್ವಾಸ ಹತ್ತೋಣ ಸ್ವಂತ ವೀರ್ಯಘಾತ ಆಗೋಣ ಮದನೋವು ವಾತ— ಮುಂತಾದ ಅನೇಕ ರೋಗಗಳ ನ ಲೀ ಆಶಾಸ್ತ್ರ ಜನರ ಕದಿಯಿಂದಾ ಪಾರಜ ರಸಕಸ್ಪರಿ ವಗೈರೆ ವಿಷದ ಅವರ ಧಾತು ರೂಪ ಪದಾರ್ಥ ವ ಅಪಕಾರಕ ವಸ್ತು ಸೇವನ ಮಾಡುವದರಿಂದಾ ತಮ್ಮ ಮೈಯೊಳಗೆ ರಸಾಯಣ ನಿಂತು ಕೈಕಾಲುಗಳಲ್ಲಿ ಒಡೆದು ತಮಗೂ ಮುಂದಾಗುವ ಸಂತತಿಗೂ ಅನೇಕ ರೋಗ ಉದ್ಭವಿಸಿ ಭಯಂಕರ ಪರಿಣಾಮ ಘಟಾಯಿಸುತ್ತದೆ ಇಂಥ ರೋಗವು ಬಹು ದಿವಸದಿಂದ ವಿರಲಿ ಹೊಸಸಿರಲಿ ಮುಂತಾದ ರೋಗಗಳ ಮೇಲೆ ಈ ನಮ್ಮ ಔಷಧ ಗುಳಿಗೆಯನ್ನು ಉಪಯೋಗ ಮಾಡಿದರೆ ತತ್ಸಂಬಂಧಿ ಯಾವತ್ತು ರೋಗಗಳು ತ್ವರಿತ ಹೋಗಿ ಶರೀರದೊಳಗಿನ ರಸಾಯನ ನಷ್ಟ ಹೊಂದಿ ಶೀಘ್ರದಲ್ಲಿ ದೂರಾಗಿ ಪ್ರಕೃತಿ ಉತ್ತಮ ಬಂದಾಯಿಸುತ್ತದೆ. ಕೈಯ ೩೦ ಗುಳಿಗೆಗೆ ೫ ರೂಪಾಯಿ ಟಪಾಲ ಖರ್ಚ ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡ ನಮ್ಮ ಕಾರಖಾನೆಯೊಳಗೆ ಇಂಥ ಎಷ್ಟೋ ಮಹತ್ವ ಪೇಟಂಟ ಔಷಧಗಳು ತಯಾರಾಗುತ್ತವೆ. ಒಂದುವೇಳೆ ಅನುಭವ ತಕ್ಕೊಂಡರೆ ಖಾತ್ರಿ ಪೂರ್ಣವಾಗುತ್ತಿಗೆ ಒಂದು ಆಣೆ ತಿಕೀಟು ಕಳಿಸಿದಲ್ಲಿ ಕ್ಯಾಟಲಾಗು ಕಳಸಕ್ಕದೆ

ಪತ್ತೆ—ಡಾ॥ ಹಿರೇಮಠ ಸಂಜೀವನಿ ಬಿಲ್ಡಿಂಗ ಕಮತನೂರ

೨೧—೨—೨೨ ಪೋಸ್ಟ ಸಂಕೇಶ್ವರ ಜಿಲ್ಲಾ ಬೆಳಗಾಂವ

ಕುಲಕರ್ಣಿ ಸನ್ಸ ಕಂಪನಿ, ಧಾರವಾಡ ಇವರ ವತನದಾರ ರೆಂಟೆಗಳು

ಈ ರಂಟೆಯ ಶ್ರೇಷ್ಠ ಗುಣಗಳೆಂದರೆ—

ಸಾಮಾನುಗಳು ಮಜಬೂತ ಇದ್ದು ಎತ್ತಿಗೆ ಅತಿ ಹಗರಾದದ್ದು.

೨ ಕಾಲೊಳಗೆ ಹೆಂಟೆಗಳು ದೀಳದೆ ಇರುವದರಿಂದ ಎತ್ತಿನಕಾಲಿಗೆ ಎಷ್ಟು ಇಜಾ ಆಗುವದಿಲ್ಲ

೩ ರೆಂಟೆಯು ಎಷ್ಟು ಹೊಯ್ದಾಡುವದಿಲ್ಲ. ಆದುದರಿಂದ ಹಿಡಿಯುವವರಿಗೆ ಏನೂ ಶ್ರಮವಾಗುವದಿಲ್ಲ ಈಸು ಡೊಂಕಾಗಿದ್ದು ಅದಕ್ಕೂ ಮತ್ತು ಕುಳಕ್ಕೂ ನಡವೆ ಹೆಚ್ಚಿಗೆ ಅಂತರವಿರುವದರಿಂದ ಎತ್ತುಗಳಿಗೆ ಹೊಡೆತ ತಗಲುವದಿಲ್ಲ.

ಇದರೊಳಗೆ ಸಣ್ಣ ದೊಡ್ಡ ಆಕೃತಿಯ ೪ ಪ್ರಕಾರದ ರೆಂಟೆಗಳಿರುತ್ತವೆ. ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ

ತಿಳಕೊಳ್ಳತಕ್ಕದ್ದು ೧—೮—೩೩ ಕುಲಕರ್ಣಿ, ಸನ್ಸಕಂಪನಿ ಧಾರವಾಡ

ಸುಪ್ರಸಿದ್ಧ **ಶಾಂತವೀರ** ಸುವಾಸಿ

ಹುಡುಕಿನ ಔಷದ	ಚೀಟು ೧೦೦ಕ್ಕೆ	೪—೮—೦	೯ ಕಜ್ಜಿಯ ಮಲಮು ದಬ್ಬಿ	೧ಕ್ಕೆ	೦—೪—೦
ದಂತಮಂಜನ	೧೦೦	೪—೮—೦	೧೦ ಗಜಕರ್ಣ ಮಲಮು ,,	,,	೦—೪—೦
ರೋಮಸಂಹಾರಿ	,,	೪—೮—೦	೧೧ ಇಸಬಿನ ಮಲಮು ,,	,,	೦—೩—೦
೩ ಹೇನೂ ಕೀರು ನಾಶಕ ,,	,,	೧—೧೨—೦	೧೨ ವ್ರಣನಾಶಕ ಮಲಮು ,,	,,	೦—೬—೦
೪ ಕಣ್ಣು ಬೇನೆಯ ಔಷದ ,,	,,	೧—೦—೦	೧೩ ಮೂಳೆಕಸುರೂಲವ್ಯಾಧಿಗೆ ಮಲಮು ,,		[illegible]
೫ ಕ್ರಿಮಿನಾಶಕ(ಜಂತಿನಪುಡಿ	,,	೪—೦—೦	೧೪ ರಕ್ತಮೂಲವ್ಯಾಧಿನಾಶಕ ಚೂರ್ಣ ,,		[illegible]
೬ ಜ್ವರಹರ ಚೂರ್ಣ ,,	,,	೧—೦—೦	೧೫ ಬಾಣಂತಿ ಗುಳಿಗೆಗಳು ,,		೬—೦—೦
೭ ಪಿತ್ತಶಾಂತಿಯಾಗುವದಕ್ಕೆ	,,	೪—೦—೦	ಪಶುಸಂಜೀವಿನಿ (ದನದ ಔಷಧ) ,,		೧—೬—೦
೮ ನೀಲೀಕಪ್ಪು ಮಸಿಪುಡಿ ,,		೧—೦—೦			
ಅಫ್ಲೋಗಪ್ರತಿಬಂಧಕ ಗುಳಿಗೆ	,,	—೦—೦			

ಸೂಚನೆ:—ಪ್ರತಿನಿತ್ಯ ಸಾವಿರಾರು ಚೀಟುಗಳು ಖರ್ಚಾಗುವವು. ಎಲ್ಲ ಪ್ರಸಿದ್ಧ ವ್ಯಾಪಾರಸ್ಥರಲ್ಲಿ ಮಾರಲಿಕ್ಕೆ ಸಿಗುವವು. ರೋಕ ತಿಗೆದುಕೊಂಡರೆ ಭರಪೂರ ಕಮಿಶನ್. ೧ ರೂಪಾಯಿಗಿಂತಕಡಿಮೆ ಔಷಧ ನಮ್ಮಲ್ಲಿ ವ್ಹಿಪಿಯಿಂದ ಕಳುಹಿಸಲಿಕ್ಕಾಗುವದಿಲ್ಲ. ಔಷಧವನ್ನು ಬೇಡುವವರು ಒಂದು ನಾಲ್ಕಾಣೆ ಅಂತ ರಕಮು ಮುಂಗಡ ಕಳುಹಿಸಬೇಕು. ಟಪಾಲ ಖರ್ಚುಬೇರೆ.

ಡಾಕ್ಟರ:— ಎಚ್. ಆರ್. ಶಿತ್ತೂರ (V. D)

ಪಶುಸಂಜೀವಿನಿ ಔಷಧ

ಮಂಗಳವಾರ ಪೇಟೆ ಧಾರವಾಡ

ಶಂತೀವಿಳಾಸ

ಶಾಂತವೀರ, ಧಾರವಾಡ

ಅಚ್ಚು ಕೂಟದವರಿಗೆ ಅತ್ಯುತ್ತಮಸಂಧಿ.

ಮಹಾಶಯರೆ! ಈ ಕೆಳಗೆ ಬರೆದವಿಳಾಸಕ್ಕೆ ಬರೆದುಕೊಂಡಲ್ಲಿ ಪ್ರಿಂಟಿಂಗ ಮಶಿನ್ ಟ್ರೆಡಲ್ ಟಾಯಿಪು ಮೊದಲಾದ ಅಚ್ಚುಕೂಟದ ಎಲ್ಲ ಅತ್ಯುತ್ತಮ ಸಾಹಿತ್ಯಗಳನ್ನು ಯೋಗ್ಯಬೆಲೆಗೆ ತೀವ್ರವೇತರಿಸಿಕೊಡುವೆವು ಹಾಗೂ ಅಚ್ಚುಹಾಕಿಸತಕ್ಕ ಪುಸ್ತಕಗಳಿದ್ದಲ್ಲಿಯೂ ಇತರ ಯಾವಬಗೆಯ ನಮೂನೆಗಳಿದ್ದಲ್ಲಿಯೂ ನಮ್ಮ ಕಡೆಗೆ ಕಳಿಸಿಕೊಟ್ಟಲ್ಲಿ ಸುಲಭ ದರದಲ್ಲಿ ಅತ್ಯುತ್ತಮ ಪ್ರಿಂಟನ್ನು ಮಾಡಿಕೊಡಿಸುವೆವು ವಿಶೇಷ ಮಾಹಿತಿಯ ಸಮಕ್ಷಮ [illegible] ಹೊಸ-ಹಳೆ ಪ್ರೆಸುಗಳನ್ನು ಕೊಡಕೊಳ್ಳುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಪತ್ತೆ—ರಾಮಚಂದ್ರ ಸದಾಶಿವ [illegible]

ಕಮಿಶನ ಏಜಂಟ

ಹೊಸಯಲ್ಲಾಪುರ [illegible]

ಈ ಪತ್ರವನ್ನು [illegible] ಇವರು ತಮ್ಮ [illegible] ಪ್ರೆಸ್ಸಿನಲ್ಲಿ ಸಿದ್ಧ ಮಾಡಿದರು.

ವಾಗ್ವಿಲಾಸ ಬುಕ್‌ಡಿಪೋ

ಪ್ರಿಯರೇ ಬೇಗನೆ ವಿ.ಪಿ.ಯಿಂದಾ ತಂಸಿ ಓದಿ ಆನಂದಪಡಿಯಿರಿ ೧೫೪ ಆದ್ದುನ್ನು ಹಣಾ ಕಳಿಸಬೇಕು.

ಇರಲಿ

	ರೂ ಆ ಪೈ		ರೂ ಆ ಪೈ
ಮುರಾರಿ ಶಿಕ್ಷಕ ಬಸ್ಸಿಕೊಪ್ಪಕೃತ	೧ ೦ ೦	ಮಾನವ ಧರ್ಮ	೦–೧೨–೦
ಗುಸಲ್‌ಮಾನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧–೦–೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೦ ೧೨ ೯	ಪ್ರಭಾವಿಜಯನಾಟಕ	೧–೦–೦
ಮಂಜು ಗೋಪಾಲಕಥೆ	೧ ೪ ೦	ತುಕಾರಾಮ ನಾಟಕ	೧ ೪–೦
ವಲಾಹಾರಾಣ ಪ್ರತಾಪಸಿಂಹ	೧ ೬ ೦	ಶ್ರೀಧರ್ಮರಹಸ್ಯ ನಾಟಕ	೧–೦ ೦
ಜೋಗಳಪದ	೦ ೪ ೦	ಸಾಗ್ರಸಂಗೀತ ಮದನಮೋಹಿನಿ	೦–೧೨–೦
ಶ್ರೀ ಧರ್ಮನೀತಿ	೦ ೧೨ ೦		
ದಿವ್ಯ ಸುಂದರಿ ಬುದಿಯೋ ಕೃತ	೧ ೦ ೦	ಹಿಂದ ಶಿ ವಿನಾಸ ಪೈರ್ಸ್ಯ ಯಂತ್ರ ಮಂತ್ರತಂತ್ರ ಸಹಿತ	೧– ೮–
ಕಾದಂಬ ವಿಚಿತ್ರ ಕಾರಸ್ಥಾನ	೦ ೨೦		
ಹಿಂದು ಟಾ ಕಾಯಿದೆ ಚಿನ್ನ ಮುಳಗುಂದಕೃತ	೬ ೦ ೦	ಸಟೀಕ ವಿಚಾರ ಸಾಗರವೇದಾಂತ	೪–೦ ೦
ಅಶೋಕ ಕಾದಂಬರಿ	೧ ೬ ೦	ಜ್ಞಾನಸಿಂಧು ವಚನವೇದಾಂತ	೪–೦–೦
ಸಚಿತ್ರ ರುದ್ರಕಾಸನ ಪಾಪ		ಪಂಚತತ್ವ ಸಿಜಗ ದೆ ಶಿವಯೋಗ ವಿವರ	೨–೦–೦
ಸ್ವಪ್ನಗಳ ಫಲವಿಚಾರ	೦–೧೨–೦	ಸಿದ್ಧಾಂತಬಿಂದು ಪ್ರಕಾಶ	೧–೮–೦
ಅದುಸ ಹುಡಗಿ	೦–೧೨–೦	ಸಟೀಕ ಸಿದ್ದಿಗ ಜಿ ಕೈವಲ್ಯಪದ್ಧತಿ	೧–೪–೦
ವೀರಶೈವಾಚಾರ	೧–೦–೦	ಸಟೀಕ ಸದಣ್ಣಸ್ವಾಮಿಗಳ ಕೈವಲ್ಯ	೧–೪–೦
ಕಲ್ಪವೃಕ್ಷ ಅರುಬೇಳಿನ ಕೃತ	೧–೬–೦	ಶ್ರೀ ಧ್ಯಾನಲಿಂಗ ಲೀಲೆ	೧–೨–೦
ಶ್ರೀ ಕೃಷ್ಣಫಲ ಪಂಚಸಿದ್ಧಿ ಅನುಭವಸಿರಿ	೩–೮–೦	ಗರ್ಭಿಣಿ ಸಂಸಂಗೋಪನ	೦–೧೨–೧
ಕೋಕಶಾಸ್ತ್ರ ರತಿವಿಲಾಸ	೧–೮–೦	ರಾಮಕೃಷ್ಣ ಪರಮಹಂಸ ಚರಿತ್ರ	೧ ೪–೦
ಸುಖಸಾಮ್ರಾಜ್ಯ	೧–೪–೦	ಲಗ್ನವಿಧಾನ	೦–೪–೧
ಸಂಸಾರದಿಂದ ಸದ್ಗತಿ	೧–೦–೦	ಬಸವಣ್ಣನವರಲೀಲಾ	೦–೩–೦
ವಿಸ್ವಭಾನು ಕಾವಜಿ ವಕೀಲ	೧–೦–೦	ಮಂಗಳಾರತಿ ಪದಗಳು	೦–೩–೦
ತಾವ ಪರೀಕ್ಷಾ ಪಾವಟಿ ವಕೀಲ	೦–೮–೦	ಶರೀರ ಮರ್ಮಶಾಸ್ತ್ರ	೧–೦–೦
ಮುಳಗುಂದ ಪೂರ್ಣಾನಂದಸ್ವಾಮಿಯ ಕೈವಲ್ಯದರ್ಪಣ	೧–೪–೦	ಆರೋಗ್ಯ ಜೀವನ ಹರಡೇ ಕೃತ	೦–೮–೦
ಕಾವ ದಿನ	೦ ೮–೦	ಲಲಿತಲೀಲಾನಾಟಕ ಸಂಗೀತ	೧–೦
ಪ್ರೇಮಸುಂದರಿ	೦–೬–೦	ಸಂಗೀತ ಸಮಯಸಾರ ಮೈಸೂರು	೧ ೧೨ ೦

ಪತ್ತೆ ಎಂ. ಆರ್ ಶಿವನಾಗಪ್ಪಾ ಪಚ್ಚಿಸರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು.

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ– ಸ್ಟೇಶನ ರೋಡ ಹುಬ್ಬಳ್ಳಿ ಶಾಖಾ– ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ ಬಿಂದೂರಾವ ನಾರಾಯಣ ಮುತಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್ ಎಮ್ ಎಸ್. ಶ್ರೀ ಕೃಷ್ಣರಾವ ವಂಕಟರಾವ ಭಂಡಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ ಶ್ರೀನಿವಾಸರಾವ ರಾಮರಾವ ಮಾಳಾಪೂರ ಬಿ. ಎ. ಎಲ್ ಎಲ್. ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ. (ಏಜಂಟ ಅಫೀಶಿಯೋ)

ಚಾಲೂ ಖಾತೆಗಳು– ೫೦ರೂ. ಗಳಿಂದ ತೆಗೆಯಲ್ಪಡುವವು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೩೦೦

ಸೇವಿಂಗ್ಸ ಬ್ಯಾಂಕ– ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತೀ ಠೇವುಗಳು– ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ;— ೬ ತಿಂಗಳ ಮುದ್ದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬ರಂತೆ; ೧೨ ತಿಂಗಳ ಮುದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬॥ ಯಂತೆ

ಇತರ ಕಾರ್ಯಗಳು– ಬಂಗಾರ ಒಡ್ಡಗಳ ಗಟ್ಟಿಗಳನ್ನು ತರಿಸಿಕೊಡುವದು ಸರಕಾರೀ ಪ್ರಾಮಿಸರಿನೋಟು, ಸ್ವಾಂಪಬಾಂಡ, ಚೆಕ್ಕು, ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ ತಗೊಂಡು ಕೊಡಕೊಳ್ಳ ಮಾಡಲು ಬರುವದು. ಸದರೀ ಬ್ಯಾಂಕಿನ ನಿಯಮಗಳ, ಬೇಕಾದ ಸ್ಪಷ್ಟ ವಿವರ ತಿಳಿಸಿಕೊಳ್ಳಬಹುದು

ಹೆಚ್ಚಿನ ಮಾಹಿತಿಯು ಕೇಳಿದಲ್ಲಿ ಸಂಕ್ಷೇಪವಾ ಆಗುವ ಪತ್ರ ವ್ಯವಹಾರದಿಂದ ತಿಳಿಯಕೊಳ್ಳಬಹುದು, ಮೆನೇಜಿಂಗ ಡೈರೆಕ್ಟರ ಬ್ಯಾಂಕ ಸ್ವಾಸ್ಥ್ಯದಿಂದ ಒದಗಿಸಿ

ಚಂದಾದಾರರಿಗೆ ಸೂಚನೆ.

—೦—

೧ ಸನ್ ೧೯೩೩ನೇ ಇಸವಿಯ ಚಂದಾದಾರರಿಗೆ ಇನಾಮಿನ ಪುಸ್ತಕಗಳು ರವಾನೆಯಾಗ ತೊಡಗಿವೆ

೨ ಈಗ ನಾವು ಮಾಡಿದ ವ್ಹಿ. ಪಿ. ಯನ್ನು ಸ್ವೀಕರಿಸಿದ ಎಲ್ಲ ಚಂದಾದಾರರಿಗೂ ಇನಾಮಿನ ಪುಸ್ತಕವನ್ನು ಕಳುಹಿಸ್ಸೇವೆ

೩ ೧೯೩೧ನೆಯ ವರ್ಷದ ಯಾವ ಚಂದಾದಾರರು ವ್ಹಿ. ಪಿ. ಯನ್ನು ತಿರುಗಿ ಬಿಟ್ಟಿರುವರೋ ಅಂಥ ಚಂದಾದಾರರು ವಾರ್ಷಿಕ ವರ್ಗಣಿ ೩-೧೨-೦ ರೂ. ಗಳನ್ನು ಮನಿಯಾರ್ಡರ ಮಾಡಿದಲ್ಲಿ ಇನಾಮಿನ ಪುಸ್ತಕವು ದೊರೆಯುವದು.

೪ ಇಲ್ಲವೆ ನಾವು ಮೊದಲು ಮಾಡಿದ ವ್ಹಿ. ಪಿ. ಯನ್ನು ಚಂದಾಮನಿಯಾರ್ಡರ ಮಾಡಿದರೆ ೧೯೩೨—೧೯೩೩ ಸಾಲಿನ ಎರಡೂ ಪುಸ್ತಕಗಳು ದೊರೆಯುವವು.

ಮ್ಯಾ ವಿಜಯ ಧಾರವಾಡ

—

ನಮ್ಮ ಬಾತಮಿದಾರರಿಗೆ ಸೂಚನೆ.

—(೦)—

ನಮ್ಮ ಬಾತಮಿದಾರರಲ್ಲಿ ಹಲವರು ತಮ್ಮ ಬಾತಮಿಗಳನ್ನು ಪಾಕೀಟಿನಲ್ಲಿ ಹಾಕಿ ಕಳಿಸುವದರಿಂದ ನಿಷ್ಕಾರಣವಾಗಿ ಹೆಚ್ಚು ಹಣವು ಖರ್ಚಾಗುವದು. ಆದ್ದರಿಂದ ಇನ್ನುಮುಂದೆಬಾತಮಿದಾರರು ಬುಕ್ಕಪೋಸ್ಟ ಮಾಡಿಯೇ ಕಳಿಸತಕ್ಕದ್ದು

ಹಲವು ಬಾತಮಿದಾರರು ಮುದ್ದಾಮ ಬೇರಿಂಗು ಕೈಂದು ನಾಟಪೇಟಮಾಡಿ ಕಳಿಸುವರು. ಇಲ್ಲಿ ನಾವು ದುಪ್ಪಟ್ಟು ಚಾರ್ಜಕೊಟ್ಟು ತೆಗೆದುಕೊಳ್ಳಬೇಕಾಗುವದು.

ಈ ಎರಡು ಮಾರ್ಗಗಳು ಸರಿಯಲ್ಲವಾದ್ದರಿಂದ ನಾವು ಮೊದಲೇ ಸೂಚನೆಯನ್ನು ಕೊಟ್ಟಿದ್ದೇವೆ ಇನ್ನು ನಾವು ನಾಟಪೇಟ ಪತ್ರಗಳನ್ನು ಸ್ವೀಕರಿಸುವದಿಲ್ಲ.

ಮ್ಯಾ ವಿಜಯ ಧಾರವಾಡ.

—

ನೋಟಿಸಿನದರಗಳು.

—೦—

ತಿಂಗಲಕಾಲದಿನ ಎಂಟುಪಙ್ತಿಗಳಿಗೆ ಒಂದುರೂಪಾಯಿ; ಮುಂದೆ ಪ್ರತಿಯೊಂದು ಪಙ್ತಿಗೆ ಎರಡು ಆಣೆ, ಇಂಗ್ಲಿಷ ಪ್ರತಿಯೊಂದು ಪಙ್ತಿಗೆ ಆರು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಎಳು ಆಣೆ. ದೀರ್ಘಕಾಲದಿನ ಜಾಹೀರಾತುಗಳಿಗೆ ಕಡಿಮೆ ದರ ಕಾರ್ಯಕಾರಿಯಾದ ದರಗಳನ್ನು ಕೊಡುವದು ಕೇಳಿಗನಿಸಿಕಸಕ್ಕೆ ಪತ್ರವ್ಯವಹಾರ ಮಾಡಬಹುದು / ಮ್ಯಾ. ವಿ ಧಾರವಾಡ

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಬಿ ಇವರು ತಮ್ಮ ನಾರಾಯಣ ಪ್ರೆಸ್‌ನಲ್ಲಿ ಛಾಪಿಸಿ, ಪ್ರಕಟ ಮಾಡಿದರು.

R. N. B 1443

ನಿತ್ಯ ಪತ್ರ

- ಸ್ಥಾಪಕರು -

ಶ್ರೀ. ಕೃಷ್ಣಾಚಾರ್ಯ ಹೊಸಕೆರೆ.

(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಗುರುವಾರ ತಾರೀಖು ೨೪ ನೇ ಆಗಸ್ಟ ೧೯೨೨. (ಸಂಚಿಕೆ ೧೮೭

ನೋಟೀಸು.

ಧಾರವಾಡ ಶಹರದ ಮಹಾಜನರಿಗೆ— ಧಾರವಾಡ ವಾ। ಕೋರ್ಟಿನ ನಂ। ನಾರ್ಥೂರ ಕಡಿಂದಾ ಇದರ ಮೂಲಕ ತಿಳಿಯಪಡಿಸಲಿಕ್ಕೆ ಧಾರವಾಡ ಶಹರ ಮಂಗಳವಾರಪೇಟ ಸಂಬಾಜಿ... ಸ ಮುನಸಿಪಾಲಿಟಿ ೧೬ನೇ ನಂ। ಮನಿ ಅಪ್ಪಯ್ಯ ನ ಕೇಶ ಜಯರಾಮ ನೊಗ್ಲಿಯವರ ವ ಪಾರ್ಥಸಾರಥಿ ರಾಮಲಿಂಗಪ್ಪ ನೊಗ್ಲಿಯವರ ಇವರಿಬ್ಬರ ಸಮೇತ ಮನಿ ಲಿಲಾವಿನಿಂದಾ ಮಾರಲಿಕ್ಕೆ ಮ್ಮ, ವಾ। ಜ ಡ್ಜ ಸಾಹೇಬ ಹುಕೂಮ್ಮಾದವರು ತಾ॥ ೧೭-೮ ೨೨ ನೇ ಇಸವಿ ದಿವಸ ಮಾರಲಿಕ್ಕೆ ಹುಕುಮ. ಮಾಡಿದ ಪ್ರಕಾರ ಸದರ ಮನಿ ನಮ್ಮಿಂದ ತಾ॥ ೨೭-೮-೨೨ ನೇ ಇಸ್ವಿ ರೋಜ ರವಿವಾರ ದಿವಸ ಮುಂಜಾನೆ ೮ ಗಂಟೆಕ್ಕೆ ಪ್ರಕಟ ರೀತಿಯಿಂದ ಸದರ ಮನಿಯು ಮುಂದೆ ಲಿಲಾವಿನಿಂದಾ ಮಾರಲ್ಪಡುವದು. ಲಿಲಾವಿನ ಶರ್ತಗಳು ಲಿಲಾವಿನ ಕಾಲಕ್ಕೆ ಓದಲ್ಪಡುವವು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸೂಟಿ ದಿವಸ ಬಿಟ್ಟು ನಮ್ಮ ಕಚೇರಿಯಲ್ಲಿ ಬಂದು ತಿಳಕೊಳ್ಳಬಹುದು. ಸದರ ಮನಿ ತಗೊಳ್ಳತಕ್ಕವರು ಸದರ ತಾರೀಖಿನ ದಿವಸ ಸದರ ಜಾಗ್ಯಕ್ಕೆ ಹಾಜರ ಇರತಕ್ಕದ್ದು ಅಂತ ತಿಳಿಸೋದು.

ಧಾರವಾಡ ಆರ್, ವ್ಹಿ, ಕುಸನೂರ.

ತಾ, ೧೮-೮-೨೨ ವಕೀಲ ನಾಝೀರ,

ಕಟ್ಟಿಗೆಯ ಅಳತೆಯ ಚಂತ್ರಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-೮ ಆಣೆ.

ಪ್ರತಿ- ರಾಮರಾವ ಬಿಕ್ಕಾರು. ಕ್ಯಾಂಪ ಪ್ರದ ಕರ್ನಾಟಕ ಬುಕ್ಕಡಿಪ್ಪೋ, ಧಾರವಾಡ

ಧಾರವಾಡ ಮ್ಯು, ಯ ಕಾರಭಾರಿ ವ್ಹಾ ಛಾರವಾಡಕ್ಕರ ಗೋಳಾಟವು.

—○—

ಧಾರವಾಡ ಮ್ಯು, ಯಲ್ಲಿ ಮನೆಪಟ್ಟಿ, ನಳ ಪಟ್ಟಿ, ಭಂಗೀಪಟ್ಟಿಗಳು ಅಧಿಕಗೊಳ್ಳು ಹೆಚ್ಚಿದ ಸಂಗತಿಯನ್ನು ನಾವು ಈ ಹೊದಲು ೧೦-೧೨ ದಿವಸಗಳ ಹಿಂದೆ ಹಿಡಿಸಿದ್ದೇನೆ ಈ ಹೊತ್ತು ಪುನಃ ಆ ವಿಷಯದಂತಬ ಹೆಚ್ಚಾದ ಮಾಹಿತಿಯನ್ನು ಕೊಡುವ ಪ್ರಕಾರಮಾಡುತ್ತೇವೆ.

ಮನೆಪಟ್ಟಿಯು ಮನೆಗಳನ್ನು ಮಾರುವಲು ಮೂಲವಾಯಿತು.

ಮನೆಪಟ್ಟಿಯು ಆಕ ರ್ಯಾಯ ಬಾಡಿಗೆಕ ಅನ್ವಸ್ಥದಮೇಲೆ ಅಂದರೆ ೧೦೦ ಕ್ಕೆ ೯ ರಂತೆ ಪ್ರಮಾಣ ಬಾಯಿಯಾಗುತ್ತದೆ. ಅಗ್ಗ ಮನೆಯ ನಿರ್ಜನ ವಾಗೂ ಕೊಡತಕ್ಕ ಮನೆಪಟ್ಟಿಗಳನ್ನು ಪಬಾಶಕರು ಕೊಡತಕ್ಕದ್ದು ನ್ಯಾಯವಾದದ್ದು. ದಾಗೆ ಮಾಡುವದು ಅನ್ಯಾಯವಲ್ಲವೆ? ಬೆಳಗಾಂವಿಯಂಥ ಮ್ಯು, ಯಲ್ಲಿ ನೂರಕ್ಕೆ ೫ ರಂತೆ ಇರುವದು ಇಲ್ಲಿ ನೂರಕ್ಕೆ ೯ ರಂತೆ ಇದೆ. ಇದ್ದಗೂ ಇರಲಿ. ಇದರಲ್ಲಿ ಮನೆಪಟ್ಟಿ, ಭಂಗೀಪಟ್ಟಿ, ನಳಪಟ್ಟಿಗಳನ್ನು ಕಳೆಯುವಿರುವದು ಮೊದಲೇ ದುಬ್ಬಾಳ. ಮೇಲೆ ಅಧಿಕ ಮಾಡಬೇಕೆಂಬತೆ ಜನರಿಗೆ ತಾಪದಾಯಕವಾಗಿದೆ. ಅದರಲ್ಲಿ ಹೊಂಬಲ ಅವಶ್ಯವಾಗಿ ಪಾತ್ರರಾದವರಿದ್ದರಂತೂ ತೀರಿದೇ ಹೋಯಿತು. ಊರು ಬಿಟ್ಟೇ ಹೋಗಬೇಕಾಗುವದು. ಸಿಮಾಗಿಯೂ ನೂರಕ್ಕೆ ೫ ರಂತೆ ಮನೆಪಟ್ಟಿಯನ್ನು ಕೂಡಿಸುವದು ನ್ಯಾಯವಾದದ್ದು. ಇದಲ್ಲದೆ ಮ್ಯು, ಗೆ ಕೊಡತಕ್ಕ ಪಟ್ಟಿಗಳನ್ನು ಕೊಡಲು ಪಬಾಶಕರ ಮನೆಪಟ್ಟಿಯನ್ನು ಹೇಳುವದು ನ್ಯಾಯವನ್ನು ತಪ್ಪಿದ ಮಾರ್ಗವು.

ನಳಪಟ್ಟಿಯು ನಳಗಳನ್ನು ತೀರಿಸಲು ಕಾರಣವಾಯಿತು.

ಇದರ ಅಂಚಿನ ನಳಗಳನ್ನು ತೆಗೆದುಕೊಂಡವರಿಗೆ ವರ್ಷಕ್ಕೆ ೧೨ ರೂ, ಯಂತೆ ಸ್ಪೆಶಲ ನಳಪಟ್ಟಿ ಯಿತ್ತು. ಮನೆಪಟ್ಟಿಯಲ್ಲಿ ಸಾರ್ವಜನಿಕ ನಳಪಟ್ಟಿಯು ಇದ್ದೇ ಇತ್ತು. ಸ್ಪೆಶಲ ನಳಪಟ್ಟಿಯನ್ನು ಕೊಡುವವರಿಂದ ಸಾರ್ವಜನಿಕ ನಳಪಟ್ಟಿಯನ್ನು ತೆಗೆದುಕೊಳ್ಳುವದು ನ್ಯಾಯವಲ್ಲ ವಿಚಾರವಾದದೆಂದು ಕೆಲವರು ಹೇಳುತ್ತಿದ್ದರು, ಈ ಪದ್ಧತಿಯು ಎಲ್ಲಿಯೂ ಇರಲಿಲ್ಲ. ಜನರ ಅನುಕೂಲತೆಗಳನ್ನು ಲಕ್ಷಿಸಿ, ಆರೋಗ್ಯದ ದೃಷ್ಟಿಯನ್ನು ಸಂಪಾದಿಸಿಕೊಳ್ಳಲಿಕ್ಕಾಗಿ, ಸ್ಪೆಶಲ ನಳಗಳನ್ನು ತೆಗೆದುಕೊಂಡವರಿಗೆ ಸಾರ್ವಜನಿಕ ನಳಪಟ್ಟಿಯನ್ನು ಬಿಟ್ಟದ್ದು ಯೋಗ್ಯವೇ ಆಯಿತು. ಸಾರ್ವಜನಿಕ ನಳಪಟ್ಟಿಯನ್ನು ಸೂಟುಕೊಟ್ಟಂತೆ ಮಾಡಿ, ಸ್ಪೆಶಲ ನಳಪಟ್ಟಿಯನ್ನು ಹೇರಿದ್ದು ತೀರ ಅನ್ಯಾಯ ದಾಗೂ ಅಯೋಗ್ಯವಾದದ್ದು. ಮಾಡಿಕೊಟ್ಟ ಮಾನ್ಯರಾಗಬೇಕಾದವರೆಂದೆ ಮ್ಯು, ಯವರು ಮಾಡಿದರೆಂದು ನಿರ್ಧಾರವಾಗಿ ಹೇಳಬಹುದು. ೧ ರಿಂದ ೫ ರೂ, ಗಳವರೆಗೆ ಮನೆಪಟ್ಟಿಯುಳ್ಳವರಿಗೆ ಕೆಲಸಕ್ಕೆ ಬಾಧಕವಾದಂತೆ ಕಾಣಬಹುದು ಇದೂ ಭ್ರಾಂತಿಯೇ ಸರಿ.

೧ ರೂ, ಮನೆಪಟ್ಟಿ ಇದ್ದವರಿಗೆ ವರ್ಷಕ್ಕೆ ೧೨ ರೂ, ಸ್ಪೆಶಲ ನಳಪಟ್ಟಿ.

೧ ರಿಂದ ೩ ರೂ, ಗಳವರೆಗೆ ೧೮ ರೂ, ೩ ರಿಂದ ೬ ರವರೆಗೆ ೨೪ ರೂ.

ಈ ಪ್ರಕಾರ ಸ್ಪೆಶಲ ನಳಪಟ್ಟಿಯಾದೆ. ೧ ರಿಂದ ೩ ರೂ, ಗಳ ಮನೆಪಟ್ಟಿ ಕೊಡುವವರೆಲ್ಲರೂ ಸಾಧಾರಣತಃ ಬಡವರೇ ಸರಿ. ಅವರು ಸ್ಪೆಶಲ ನಳ ತೆಗೆದುಕೊಳ್ಳುವ ಸಂಭವವಿಲ್ಲವಷ್ಟೆ? ಒಬ್ಬರು ಇಂಥ ಮಬ್ಬಿಗೆ ಮಾರುಹೋಗುತ್ತಾರು? ನರಳೊಳುವು

...ಶಲ್ ನಳಗಳಿಗೆ ಅಥವಾ ಸಾರ್ವಜನಿಕ ನಳಗಳಿಗೆ ಹೋಗುವರು. ಸ್ಪೇಶಲ್ ನಳ ತೆಗೆದುಕೊಳ್ಳದವರಿಗೆ ಸಾರ್ವಜನಿಕ ನಳಪಟ್ಟಿಯು ಸ್ಥಿರವಾಗಿಯೇ ...ದೆ. ಹುಬ್ಬಳ್ಳಿ, ಸೊಲ್ಲಾಪೂರ, ವಿಜಾಪೂರ, ಸಾತಾರೆ, ಪುಣೆ, ಅಹಮ್ಮದನಗರ ಮುಂತಾದ ಮ್ಯು. ಗಳಲ್ಲಿ ತಿಂಗಳಿಗೆ ೧॥ ರೂ. ಅಥವಾ ೨ ರೂ.ಗಳಿಗಿಂತ ಹೆಚ್ಚಿನ ನಳಪಟ್ಟಿಯಿಲ್ಲ. ಮುಂಬೈಯಲ್ಲಿ ಮಾತ್ರ ನೀರಿನ ಪ್ರಮಾಣದಿಂದ ಸ್ಪೇಶಲ್ ನಳಪಟ್ಟಿಯಿದೆ. ಧಾರವಾಡ ಮ್ಯು. ಗೂ ಮುಂಬಯಿ ಮ್ಯು. ಗೂ ಸ... ನೋಡಿದರೆ ಆನೆಯಮುಂದೆ ಆಡು, ಕುದುರೆಯ ಮುಂದೆ ಕತ್ತೆಯಂತಾಗಿದೆಯೆಂದು ಹೇಳಬಹುದು. ಮುಂಬೈಯ ಸುಧಾರಣೆಯೇನು? ರಸ್ತೆಗಳೇನು? ಸಾರ್ವಜನಿಕ ನಳಗಳೇನು? ಎರಡೂ ಹೊತ್ತು ನೀರಿನಪ್ರವರ್ತಿಯೇನು? ಧಾರವಾಡದಲ್ಲಿ ಇವುಗಳಲ್ಲೊಂದಾದರೂ ಉಂಟೋ? ಇದೂ ಇರಲಿ. ಮುಂಬೈ ತತ್ವವನ್ನಾದರೂ ಧಾರವಾಡವು ಅನುಸರಿಸಿದ್ದರೆ ಅದು ಸರಿಯೆಂದು ಯಾರೊಬ್ಬರೂ ಹೇಳಬಹುದು. ಯಾಕಂದರೆ ನೀರಿನ ಪ್ರಮಾಣದಿಂದ ನಳಪಟ್ಟಿಯು ಹೆಚ್ಚು ಕಡಿಮೆಯಾಗುವದು. ಹಾಗೆ ಮಾಡದೆ ದೊಡ್ಡ ಮನೆಯವರು ಶ್ರೀಮಂತರು. ಆದ್ದರಿಂದ ಸಣ್ಣ ಮನೆಯವರಿಗಿಂತ ಹೆಚ್ಚು ಪಟ್ಟಿಯನ್ನು ಕೊಡಿರೆನ್ನುವದು ಹಾಸ್ಯಾಸ್ಪದ ಹಾಗೂ ಅನ್ಯಾಯವಾದದ್ದಲ್ಲವೆ? ದೊಡ್ಡ ಮನೆಯಲ್ಲಿ ಒಬ್ಬಿಬ್ಬರಿದ್ದು, ಸಣ್ಣ ಮನೆಯಲ್ಲಿ ದೊಡ್ಡ ಕುಟುಂಬವಿದ್ದರೆ ಈ ನೀರಿನ ಸ್ಪೇಶಲ್ ಪಟ್ಟಿಯು ಸರಿಯಾಗುವದೇ? ಅವರು ನಿಷ್ಕಾರಣವಾಗಿ ಮನೆದೊಡ್ಡದೆಂದು, ಶ್ರೀಮಂತರೆಂದು ಸ್ವಲ್ಪ ನೀರಿಗಾಗಿ ಹೆಚ್ಚು ಕರಕೊಡಬೇಕೆ? ಇದು ಯೋಗ್ಯವೇ? ನ್ಯಾಯವೇ? ಈ ಪದ್ಧತಿಯು ಯಾವ ತರ್ಕಶಾಸ್ತ್ರಕ್ಕೆ ಸರಿಯಾಗಿರುವದು? ಈ ಪದ್ಧತಿಯು ಯಾವ ಪಂಡಿತಮಾನ್ಯರಿಗೆ ಒಪ್ಪುವದು? ಹಾಗೆ ಒಪ್ಪುವವರೆಲ್ಲರೂ ಮೂರ್ಖರೆಂದೇ ಹೇಳಬಹುದು, ಇನ್ನು ಖರ್ಚು ೪೦ ಸಾವಿರ ಉತ್ಪನ್ನ ೩೦-೩೫ ಸಾವಿರ ಇದ್ದುದರಿಂದ ಹೀಗೆ ಸ್ಪೆಶಲ್ ನಳಪಟ್ಟಿಯನ್ನು ಆತಿಗಿಟ್ಟು ಏರಿಸಬೇಕಾಯಿತೆಂದು ಉದ್ಗಾರಗಳು ಮ್ಯು. ಯವರಿಂದ ಹೊರಡುವವೆಂದು ನಮ್ಮ ಕೇಳಿಕೆ. ಅದಕ್ಕೆ ಹಾಸಿಗೆಗೆ ಬಿದ್ದಷ್ಟು ಕಾಲು ಚಾಚಿರೆಂದು ನಮ್ಮ ಹೇಳಿಕೆ. ಹಾಗೂ ಖರ್ಚ ಕಡಿಮೆ ಮಾಡಿರೆಂದು ನಮ್ಮ ಆಗ್ರಹ. ಹಾಗಾಗದಿದ್ದಲ್ಲಿ ಬೇರೆ ಬಾಬುಗಳಿಂದ ಖರ್ಚುಮಾಡಿರಿ.

ಧಾರವಾಡದಲ್ಲಿ ನೀರಿನ ಪ್ರವಿತ್ರತೆಯೆಷ್ಟು? ಕೆರೆಯಲ್ಲಿ ನೀರೆಷ್ಟು? ಎಂಬುದು ಎಲ್ಲರಿಗೂ ಗೊತ್ತೇ ಅದೆ, ಇನ್ನೊಂದು ಸಾರೆ ೨ ತಾಸು ನೀರು ಪೂರೈಸಬೇಕಾದರೆ ಮ್ಯು. ಗೆ ಸಾಕುಬೇಕಾಗಿ ಹೋಗುವದು. ಕೆಲವು ನಳಗಳಿಗೆ ನೀರೇ ಏರುವದಿಲ್ಲ. ಕೆಲವೆಡೆಗೆ ತಾಸಿಗೆ ನಾಲ್ಕಾರು ಕೊಡ ತುಂಬಬೇಕಾದರೆ ರಾಮಾಯಣ ಹನುಮಾಯಣವಾಗಿ ಹೋಗುತ್ತದೆ. ಕೆಲವರಂತೂ ಈ ಮೊದಲಿನ ನಳಗಳಿಗೆ ಸಾಷ್ಟಾಂಗ ಹಾಕಿ ಬಂದು ಮಾಡಿಸಿಬಿಟ್ಟಿದ್ದಾರೆ. ಈಗ ಸ್ಪೇಶಲ್ ನಳಪಟ್ಟಿಯು ಹೆಚ್ಚಿದ್ದರಿಂದಲಂತೂ ನೂರಾರು ನಳಗಳ ಮಾಲಕರು ಅವುಗಳನ್ನು ಬಂದು ಮಾಡಲು ತಿಳಿಸುವರಾಗಿ ವಾರ್ತೆ. ಆಗಲೇ ಹಲವು ನಳಗಳು ಬಂದಾಗಿರುವದನ್ನು ನಾವು ಕಂಡಿದ್ದೇವೆ. ನಂದನವನವನ್ನು ಹಾಳು ಮಾಡಲು ಮಂಗನ ಕಾಯಿಯು ಹುಟ್ಟಿದಂತೆ ಸ್ಪೇಶಲ್ ನಳಗಳನ್ನು ಕೀಳಲು ಸ್ಪೇಶಲ್ ನಳಪಟ್ಟಿಯು ಕಾರಣವಾಯಿತು. ಹಾಗಾದರೆ ನೀರಿನ ಉತ್ಪನ್ನವು ಹೇಗೆ ಬೆಳೆಯುವದೋ ದೇವರೇ ಬಲ್ಲ. ಇದೇ ಸ್ಥಿತಿಯು ಸ್ಥಿರವಾಗಿಯೇ ಉಳಿದರೆ ತಿಂಗಳೊಪ್ಪತ್ತಿನಲ್ಲಿ ಪ್ರೆಸಿಡೆಂಟ ಮೆಂಬರ ಮೊದಲಾದ ಮ್ಯು. ಯ ಅಭಿಮಾನಿಗಳ ಹೊರತು ಬಹುಶಃ ಎಲ್ಲರೂ ಸ್ಪೇಶಲ್ ನಳಗಳನ್ನು ಬಂದು ಮಾಡಿಸಿಕೊಳ್ಳಬಹುದು. ಹಾಗೆ ಮಾಡಿದರೇ ನ್ಯಾಯವಾದದ್ದೆಂದು ಯಾರೊಬ್ಬರೂ ಹೇಳಬಹುದು. ಹೀಗೆ ಸ್ಪೇಶಲ್ ನಳಪಟ್ಟಿಯು ಕಡಿಮೆಯಾಗಬಾರದೆಂದು ಮ್ಯು. ಯು ಬಯಸುತ್ತಿದ್ದರೆ, ಕರಕೊಡುವವರ ಹಿತವನ್ನು ಇಚ್ಛಿಸುತ್ತಿದ್ದರೆ, ಎತ್ತಲಾರದ ತೆರದಿ ತಾಪದಾಯಕವಾದ ಈ ನಳಪಟ್ಟಿಯನ್ನು ಕಡಿಮೆ ಮಾಡಿ ತಿಂಗಳಿಗೆ ೧॥ ಅಥವಾ ಬಹಳವಾದರೆ ೨ ರ ಮನೆಗೆ ತಂದು ನಿಲ್ಲಿಸುವದು ಮ್ಯು. ಗೆ ಭೂಷಣವಾದದ್ದು.

ನಳಪಟ್ಟಿಯನ್ನು ಕಡಿಮೆಮಾಡುವ ಪುಣ್ಯವನ್ನು ಯಾರೂ ಕಟ್ಟಿಕೊಳ್ಳಲಿಲ್ಲವಲ್ಲ?

ಈಗಿನ ಅಧಿಕಾರಾರೂಢ ಪ್ರೆಸಿಡೆಂಟ (ಮಿ, ಹುಲಕೋಟಿ) ರೇ ಈ ಸ್ಪೇಶಲ್ ನಳಪಟ್ಟಿಯನ್ನೇರಿಸಲು ಮೂಲಕಾರಣರೆಂದು ನಾವು ಅನ್ನಲಾರೆವು. ಹಿಂದಕ್ಕೆ ಕೈ. ವಾ. ಮಿ. ಕರಗುದರಿಯವರು ಪ್ರೆಸಿಡೆಂಟರಿದ್ದಾಗ್ಗೆ ಮಿ. ದೇಸಾಯಿ, ಮಿ ಜೋಗ, ಮಿ. ಹುಲಕೋಟಿ ಈ ತ್ರಿವರ್ಗರು ಸ್ಪೇಶಲ್ ನಳಪಟ್ಟಿಯ ವಿಚಾರಣೆಯ ಸಬ್ ಕ. ಮೆಂಬರು. ಈ ವಿದ್ವಾನರಲ್ಲದೆ ಮಿ. ಸೆಜವಿಕ ಆಸಿ. ಕಲೆಕ್ಟರ, ಮಿ, ಕರಗುದರೀ ಮೊದಲಾದವರೂ ಇದ್ದರು. ಮಿ. ಹುಲಕೋಟಿಯವರು ಮೊದಲು ಎರಡೇ ರೂ. ನಳಪಟ್ಟಿ ಇರಬೇಕೆಂದರೂ, ಉಳಿದವರ ಅಭಿಪ್ರಾಯಕ್ಕೆ ಅಂದರೆ ಈಗಿನ ಹೊಸ ಕರಕ್ಕೆ ತಲೆ ಬಾಗಿಸಿದರು. ಉಳಿದಮೆಂಬರರು ತಿಳಿದೋ, ತಿಳಿಯದೆಯೋ ಸಮ್ಮತಿಸಿದರು. ಅಂತೇ ಈ ಹೊಸ ಕರಭಾರದಿಂದ ನಳಗಳಲ್ಲಿ ನೀರು ಬರದಿದ್ದರೂ ಜನರ ಕಣ್ಣೊಳಗಿಂದ ನೀರು ಬರಹತ್ತಿವೆ. ಈಗ ಮಿ, ಹುಲಕೋಟಿಯವರು ಪ್ರೆಸಿಡೆಂಟ, ವ್ಹಾ, ಪ್ರೆಸಿಡೆಂಟರಿಂದಿಲ್ಲ. ಈಗಲಂತೂ ಇದ್ದಾರೆ. ಸ್ವಪ್ರಯೋಗದಿಂದ ಮ್ಯು, ಯಲ್ಲಿ ಇವರ ಮತಕ್ಕೆ ಮಾನವೂ ಇದೆ. ಜನರಗೋಳಾಟವನ್ನು ಕಡಿಮೆ ಮಾಡುವ ಮನಸಿದ್ದರೆ ಮಿ, ಹುಲಕೋಟಿಯವರು ಈ ಮೊದಲು ಸ, ಕ, ಯಲ್ಲಿ ಸೂಚನೆಕೊಟ್ಟ ಪ್ರಕಾರ ಸ್ಪೆಶಲ್ ನಳಪಟ್ಟಿಯನ್ನು ೧॥ ಇಲ್ಲವೆ ೨ ಮಾಡಿದರೆ ಇವರಿಗೆ ಸರ್ವರಿಗಿಯೂ ಕೀರ್ತಿ ಬರುವದಲ್ಲದೆ ಜನರ ಗೋಳಾಟವೂ ಕಡಿಮೆಯಾಗುವದು. ಸ ಸೆಪಟೆಂಬರನ್ನಾ ೧೦೦ ಕ್ಕೆ ೫೦ ರಂತೆ ಇಳಿಕೆಯನ್ನು ಮಾಡಬೇಕು.

ಗಾಡೀ ಪಟ್ಟಿಯು ಏರಿ ಹೊಸ ಪಟ್ಟಿಯು ಕುಳಿತಿತು.

ಉಳಿದ ಕರಗಳು ಏರಿದಂತೆ ರೈತರ ಛಕಡಿಗಳ ಹೊರತಾಗಿ ಟಾಂಗಾ, ಡಮಣಿ, ಮೊಟಾರುಗಳ ದರಗಳೂ ಏರಿವೆ. ಅವರೂ ಗಾಬರಿಯಾಗಿದ್ದಾರೆ. ನಾಟಕ, ಸಿನೇಮಾ ಬಹಾದಂಗಡಿಗಳ ಮೇಲೆಯೂ ಹೊಸ ಕರ ಕೂಡುವದಿರುವದೆಂತಲೂ, ಅವುಗಳ ಕರವಷ್ಟು ಮನೆಪಟ್ಟಿಯನ್ನು ಕಡಿಮೆಮಾಡುವದರಲ್ಲಿ ಬರುವದೆಂತಲೂ, ಹಾಗೆಯೇ ಅವುಗಳ ಮೇಲೆ ಕರಹೇರಿರುವರೆಂತಲೂ ಕೇಳಿಕೆ. ಮನೆಪಟ್ಟಿಯನ್ನು ಕಡಿಮೆಮಾಡುವೆವೆಂದು ಹೇಳಿದಷ್ಟಕ್ಕೆ ಕರ್ತವ್ಯ ಮುಗಿಯಲಿಲ್ಲ. ಹೊಸ ಕರಗಳನ್ನು ಪ್ರಜೆಯ ಮ್ಯು. ಯ ಮಾದರಯಿಂದ ಕೂಡಿಸಿ, ರೆವ್ಹಿನ್ಯು ಉತ್ಪನ್ನವನ್ನು ಹೆಚ್ಚು ಬೆಳೆಸುವ ಹವಣಿಕೆಯಲ್ಲಿರುವ ಮಿ. ಹುಲಕೋಟಿಯವರು ಸ್ಪೇಶಲ್ ನಳಪಟ್ಟಿಯನ್ನಾ ತಗ್ಗಿಸುವದು ಅವರ ಕರ್ತವ್ಯವಾಗಿದೆ. ಕೊಡದಪಾರವು ರವಿವಾರವೆಂಬಂತೆ, ಮನಸಿಲ್ಲದ್ದರಿಂದ ಏನಾದರೊಂದು ನೆವತೆಗೆಯಲಿಕ್ಕಿಲ್ಲವೆಂದು ನಾವು ನಂಬಿರುವೆವು.

ಜನರೇ! ಏಳಿರಿ. ಟೊಂಕಕಟ್ಟಿರಿ.

ಜನರೂ ಕಣ್ತೆರೆಯಬೇಕು. ದೈವದ ಮೇಲೆ ಭಾರಹಾಕಿ, ಮ್ಯು, ಯನ್ನೇ ನಂಬಿ ಕುಳಿತಿರಾರದು. (Cæsar cannot become a wolf, unless people become sheep) " ಜನರು ಕುರಿಗಳಾಗದಿದ್ದರೆ ಸೀಝರನು ತೋಳನಾಗಲಾರನು " ಎಂಬ ಇಂಗ್ಲಿಷ ನಾಣ್ನುಡಿಯನ್ನು ಲಕ್ಷ್ಯದಲ್ಲಿಟ್ಟು ಮ್ಯು. ಯ ಅಸಹ್ಯವಾದ ಕರಗಳಿಗೆ ಬಲವತ್ತರವಾದ ನಿಷೇಧವನ್ನು ತೋರಿಸಬೇಕು. ಅಂದರೆಯೇ ಕಲ್ಯಾಣಚಿಂತಕರಾದ ಕಾರಭಾರಿಗಳಿಗೆ ಹೆಚ್ಚು ದಕ್ಷತೆಯಿಂದ ಸುಧಾರಣಾ ಕಾರ್ಯವನ್ನು ಕೈಕೊಳ್ಳಲು ಹೆಚ್ಚು ಉತ್ಸಾಹವು ಬರುವದು. ಆದ್ದರಿಂದ ಜನರೇ ಏಳಿರಿ! ಏಳಿರಿ!! ಟೊಂಕ ಕಟ್ಟಿರಿ!

ವೀರವಾಮನರಾಯರ ಬಿಡುಗಡೆ.

ಹೀರಬಾದಶಾ ಮಿಯಾಸರ ಬಂಧಮುಕ್ತತೆ.

ಹಿಂದಲಗಾ ತುರಂಗದಿಂದ ವೀರವಾಮನರಾಯರು ೧೯ ನೇ ತಾರೀಖಿಗೆ ಬಿಡುಗಡೆಯಾದರು. ಉಮರಾವತಿಯಲ್ಲಿ ಅವರ ಸ್ವಾಗತದ ತಯಾರಿಯು ನಡೆದದೆ, ಕಲಕತ್ತಾ ತುರಂಗದಿಂದ ಹೀರಬಾದಶಾ

ಮಿಯಾನನ ೧೪ ನೇ ತಾರೀಖಿನ ರಾತ್ರಿ ಹತ್ತುಗಂಟೆಗೆ ಬಿಡುಗಡೆಯಾಯಿತು. ಆಗ ಜಯಘೋಷದೊಡನೆ ಇತರ ಕೈದಿಗಳು ಅವರನ್ನು ಬೀಳ್ಕೊಟ್ಟರು. ಪೀರಜಾದರಾವರಿಗೆ ತಮ್ಮ ಇತರ ಮಿತ್ರರಿಗೆ ಬೆಟ್ಟಿಯಾಗಗೊಡಲಿಲ್ಲ.

* * * *

ನಮ್ಮ ಇಲಾಖಾಧಿಪತಿಗಳು ಧುಳೆಯಲ್ಲಿ ಮಾನ[illegible]ವನ್ನು [illegible] ೧೮ ತಾರೀಖಿಗೆ ದೇವಾಲಯದಲ್ಲಿ ಮುಕ್ಕಾಂ ಮಾಡಿದರು.

ಎರೋಡದ ಪ್ರೊ. ಕಾ. ಕೆ. ವಿ. ಕೆ. ಗಳ ತಪಾಸಣೆಯಾಯಿತು. ಪೋಲೀಸರಿಗೆ ಆಕ್ಷೇಪಾರ್ಹಗಳೇನೂ ದೊರೆಯಲಿಲ್ಲ.

ಮಿ. ಆಂಧ್ರ ಜನರು ತಮಗೆ ದೊರೆತ ದಕ್ಷಿಣೆಯನ್ನು ಟಿಳಕ ಸ್ವರಾಜ್ಯ ಫಂಡಿಗೆ ಕೊಟ್ಟರು ಫಂಡಿನವರು ರಾಷ್ಟ್ರೀಯ ಯುನಿವ್ಹರ್ಸಿಟಿಯು ಮಛಿಯುವಾ ಮಂದಿರದಲ್ಲಿ ಅದನ್ನಿಟ್ಟರು.

ಅಮ್ಮನವರು ಬರುವ ನವ್ಹಂಬರದಲ್ಲಿ ಒಂದು ಸಭೆಯನ್ನು ಕರೆದು ಅದರಲ್ಲಿಹಾಸ ಉಮೇದವಾರರಿಗೆ ಮತಕೊಡಬೇಕೆಂಬ ನಿರ್ಣಯವನ್ನು ಮಾಡತಕ್ಕವರಿದ್ದಾರೆ.

ಗಣೇಶ ಜಯಂತಿಯ ಬಗ್ಗೆ ಸರ್ವರಿಗೂ ವಿನಂತಿ

—o—

ಬರುವ ಶನಿವಾರ ಗಣೇಶ ಜಯಂತಿಯಿರುವದಷ್ಟೇ. ಪರದೇಶೀ ಬಣ್ಣದ ಗಣಪತಿಗಳು ಅಶುದ್ಧವಾದವುಗಳಾದ್ದರಿಂದ ಅವು ಪೂಜೆಗೆ ತಕ್ಕವುಗಳಲ್ಲ. ಆದಕಾರಣ ದೇಶೀಬಣ್ಣದ ಅಥವಾ ಏನೂ ಬಣ್ಣವಿಲ್ಲದ ಶುದ್ಧ ಗಣಪತಿಗಳನ್ನೇ ಪೂಜಿಸಿರಿ,

ಪರದೇಶೀ ಪಟಾಕಿಗಳನ್ನು ಕೊಂಡು ಅನಾವಶ್ಯಕವಾಗಿ ಪರದೇಶಕ್ಕೆ ದುಡ್ಡು ಕಳಿಸಬೇಡಿರಿ. ಪರದೇಶೀ ಚಿತ್ರದ ಕಾಗದಗಳನ್ನು ಹಚ್ಚಿ ಗಣೇಶನ ಮಂಟಪವನ್ನು ಅಶುದ್ಧ ಮಾಡಬೇಡಿರಿ.

ಪ್ರಾಚೀನಕಾಲದಿಂದ ಕಲಾಕೌಶಲ್ಯದ ಸುಂದರ ವಸ್ತುಗಳಿಗೋಸ್ಕರ ಹೆಸರಾದ ನಮ್ಮ ಭರತಖಂಡದಲ್ಲಿ ಶ್ರೀ ಗಣೇಶನ ಮುಂದೆ ಪರದೇಶೀ ಒಡವೆಗಳನ್ನಿಟ್ಟು ಶೃಂಗಾರ ಮಾಡುವದು ಲಜ್ಜಾಸ್ಪದವು ಅಂಥ ನಾಚಿಕಗೇಡಿತನವನ್ನು ಮಾಡಬೇಡಿರಿ. ಚಂದವಾದ ನಮ್ಮ ದೇಶೀ ವಸ್ತುಗಳನ್ನೇ ಶ್ರೀ ಗಣೇಶನ ಮುಂದೆ ಇಡಿರಿ.

ಕಡೆಯಲ್ಲಿ ಹೇಳತಕ್ಕದ್ದೇನೆಂದರೆ- ಶುದ್ಧ ಗಣಪತಿಯನ್ನು ಏಕೋಭಾವದಿಂದ ಪೂಜೆ ಮಾಡಿ, ಈಗ ನಮ್ಮ ಭರತ ಖಂಡದ ಮೇಲೆ ಬಂದಿರುವ ಆಪತ್ತುಗಳನ್ನು ನಿವಾರಣೆ ಮಾಡಿ, ಮುಂದಿನ ವರ್ಷದ ಗಣೇಶ ಜಯಂತಿಯೊಳಗಾಗಿ ನಮಗೆ ಸ್ವರಾಜ್ಯವನ್ನೀಯೆಂದು ಪ್ರಾರ್ಥಿಸಿರಿ.

ವಿ. ಬಾ. ಜೋಶಿ.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟುಂಬಿಕರಸಂಗ್ರಹಕ್ಕೆ ಅವಶ್ಯವಾದದ್ದು.

—o—

ಕಾಲರಾ, ವಿಷೂಚಿಕಾ, ಪಟಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯಂತ ಉಪಯುಕ್ತ ಅತ್ಯಂತ ಖಾತ್ರಿಯಾದ ಔಷಧವು. ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹಿಸಿಟ್ಟು ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು.

ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ

ಕಾಲರಾಪಿಲ್ಸ- ೨೫ ಗುಳಿಗೆಗೆ ೦-೧೩-೦ ರೂ, ೧೨೦ ಕ್ಕೆ ೩-೮-೦ ರೂ, ಟಪಾಲ ಖರ್ಚು ಬೇರೆ.

ಕ್ಲೋರೋಡಾಯಿನ್- ಬಾಟ್ಲಿ ಒಂದಕ್ಕೆ ೦-೧೨-೦ ರೂ, ಟಪಾಲಖರ್ಚು ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ- ೨೫ ಕ್ಕೆ ೧-೦-೦ ರೂ, ೧೦೦ ಕ್ಕೆ ೩-೦-೦ ರೂ ಟಪಾಲಖರ್ಚು ಬೇರೆ.

ಪತ್ತೆ:- ಡಾ. ಎಸ್. ಆರ್. ಕಿತ್ತೂರ. V. D.

ಶಾರೀರವಿಕಾಸ- ಶಾಂತವೀರ, ಧಾರವಾಡ. | ಮೃತಸಂಜೀವಿನಿ ಔಷಧ ಧಾರವಾಡ.

ಶ್ರೀ. ಗಣೇಶ ಮೇಳಾ, ಧಾರವಾಡ;

ಈ ಸಾರೆಯ ಶ್ರೀಗಣಪತ್ಯುತ್ಸವದಲ್ಲಿ, ಶ್ರೀಗಜಾನನ ಪ್ರೇರಣೆಯಿಂದಲೇ, ಉಜ್ವಲ ರಾಷ್ಟ್ರೀಯ ವಿಚಾರಗಳ ಪ್ರಸಾರಕ್ಕಾಗಿ, ಅಷ್ಟೇ ಉಜ್ವಲ ತರುಣರ, ಹೊಸತೆ ಕಾಣಿಸಿದ ಮೇಳೆಯು, ಜನ್ಮಸೇವೆಯನ್ನು ಕರ್ನಾಟಕಸ್ಥರ ಮುಂದಿಟ್ಟಿದೆ. ಅದನ್ನು ಗ್ರಹಣಮಾಡಿ, ಈ ರಾಷ್ಟ್ರಸೇವಾಭಿಲಾಷೀ ತರುಣರಿಗೆ ಉದಾರಾಶ್ರಯವನ್ನು ಕೊಟ್ಟು, ಕ್ರಿಯೆಯನ್ನು ಪರಿಯುವದು ಧಾರವಾಡಸ್ಥರ ಕರ್ತವ್ಯವು. ಮೇಳೆಯ ಪದ್ಯಗಳಲ್ಲಿ ಕನ್ನಡ. ಹಿಂದುಸ್ತಾನಿ. ಮತ್ತು ಮರಾಠಿ, ಈ ಮೂರೂ ವರ್ಗಗಳ ಸಮಾವೇಶವಾಗುತ್ತದೆ. ಮೇಳೆಯನ್ನು ಬರಮಾಡಲಿಚ್ಛಿಸುವವರು ೨ ದಿನ. ಮುಂಚಿತವಾಗಿಯೇ ಕೆಳಗಿನ ವಿಳಾಸಕ್ಕೆ ತಿಳಿಸಬೇಕು. ಮೇಳೆಯ ಉತ್ಪನ್ನವನ್ನು ಸಾರ್ವಜನಿಕ ಕಾರ್ಯಕ್ಕಾಗಿಯೇ ಉಪಯೋಗಮಾಡಲಾದೀತು.

ಕಾರ್ಯಾಲಯ "ಕರ್ಮವೀರಕಚೇರಿಯಬಳಿ" ತಾ॥೨೨-೮-೧೯೨೨	ಬಳವಂತ ದತ್ತಾತ್ರಯ ಗೋಡಬೋಲೆ ಕಾರ್ಯದರ್ಶಿ.

ಮಹತ್ವದ ಸೂಚನೆ
ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ದರಖಾಸ್ತಫಾರ್ಮ, ವಕೀಲ ಪತ್ರ ಎಗ್ರಿಮೆಂಟ ಪತ್ರಿಕೆಗಳು ಯೋಗ್ಯದರದಿಂದ ನಮ್ಮಲ್ಲಿದೊರೆಯುವವು.

ಮ್ಯಾ. ವಿ. ಧಾ.

ಮೈಸೂರಲ್ಲಿ ನಿತ್ಯವೂ ಹೊರಡುವ

ಸತ್ಯವಾದಿ

—(೦)—

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ ರಾಜಕೀಯ, ಸಾಮಾಜಿಕ, ಅರ್ಥಶಾಸ್ತ್ರ, ಮತ್ತು ಸಾಹಿತ್ಯ ವಿಚಾರಗಳನ್ನು ಚರ್ಚಿಸುವ ದೈನಿಕ ಪತ್ರವು ಎಲ್ಲ ದೇಶ ವಿದೇಶದ ಸುದ್ದಿಗಳು ಸರಿಯಾಗಿ ವಿವೇಚಿಸಲ್ಪಡುವವು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧೫-೦-೦ ರೂ. ಜಾಹಿರಾತುಗಳ ಪ್ರಕಟನೆಯಿಂದ ವ್ಯಾಪಾರಸ್ಥರಿಗೆ ಬಹಳ ಲಾಭಕರ. ಏಜಂಟರುಗಳು ಬೇಕು. ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ಸತ್ಯವಾದಿ ಪ್ರೆಸ್, ಮೈಸೂರ.

....

ಶ್ರೇಷ್ಠ ಪ್ರತಿಯ ಮಾಸಪತ್ರಿಕೆ

ಕರ್ನಾಟಕ ಸುಂದರಿ.

—o—

ವಾರ್ಷಿಕ ವರ್ಗಣಿ ೨ರೂ ೪ ಆಣೆ.

ಸಂಪದುತ್ಪಾದನೆ, [illegible] ಶಿಕ್ಷಣವು ಕಥೆ[illegible] ಮಹಿಮೆ, ಕೂಟಸ್ಪರ್ಧೆ, ನೀತಿಯ ಮಹಾಪುರುಷರ ವಿಚಾರೀ ಅಭ್ಯಾಸ. ಅಶಿಕ್ಷಿತರಿಗೂ ಕೂಡಾ ತಿಳಿಯುವ ಸುಲಭ ಭಾಷೆಯಲ್ಲಿ ವಿವೇಚಿಸಿದ ಕರ್ನಾಟಕ ಸುಂದರಿಯ ಮೊದಲನೇ ಸಂಚಿಕೆಯು ಸೆಪ್ಟೆಂಬರ ೨೦ನೇ ತಾರೀಖಿಗೆ ಹೊರಡುವದು ಎರಡನೇ ಸಂಚಿಕೆಯಿಂದ "ವಿಚಿತ್ರ ಸಂಶೋಧನೆ" ಮನೋವೇಧಕ ನಾನಾ ಸಾಮಾಜಿಕ ಕಾದಂಬರಿಯೊಂದಿಗೆ ವಿವಿಧ ವಿಷಯಗಳೂ ಪ್ರಕಟವಾಗುವವು ಚಂದಾದಾರರಾಗಿರಿ! ನಮ್ಮ ಕೆಳಗಿನ ಪತ್ತೆಯ ಮೇಲೆ ಚಂದಾಹಣವನ್ನು ಮನಿಯಾರ್ಡರ ಮಾಡಿರಿ.

ಪತ್ತೆ:— ಸಂಚಾಲಕ ಕರ್ನಾಟಕಸುಂದರಿ ಅಮಿನಭಾವಿ ಪಿ. ಓ. ಧಾರವಾಡ

ಧಾರವಾಡ ವಿಜಯ ಪ. ಶನಿವಾರ ತಾರೀಖು ೨೭ ನೇ ಅಗಸ್ಟ ೧೯೩೨ ನೇ ಇಸ್ವಿ

(...en tial bunglows) ಈಗ ಹೊಸ ನ ... ಮನೆಪಟ್ಟಿ ಕೂಡ್ರಿಸಿದ್ದು ಅದನ್ನು ವಸೂಲ ಮಾಡಲಿಕ್ಕೆ ವಿಶೇಷ ಜೋರಿನಿಂದ ಕೆಲಸವನ್ನು ನಡಿಸಿದೆ. ಈ ಪ್ರಕಾರದ ಉತ್ಪನ್ನ ಹಾಗೂ ಖರ್ಚ ... ಮ್ಯುನಿಸಿಪಾಲಿಟಿಯವರು ಅದಷ್ಟು ಕಾಳಜಿ ... ಕಾಟಿಳಸರು ಮಾಡಹತ್ತಿದ್ದಾರೆ.

ಈಗ ೪-೫ ವರ್ಷಗಳ ಹಿಂದ ಮತ್ತು ಈಗ ಜಮಾಖರ್ಚಿನ ಬಾಬುಗಳು ಹ್ಯಾಗೆ-ಹೆಚ್ಚು ಕಡಿಮೆ ಆಗಿರುತ್ತವೆಂಬದು ಎಲ್ಲರಿಗೂ ತಿಳಿಯುವಂತೆ ಮುಖ್ಯ ಮುಖ್ಯ ಖಾತೆಗಳ ತುಲನಾತ್ಮಕ ಅಂಕಿಗಳನ್ನು ಇದರ ಕೆಳಗೆ ಕೊಟ್ಟಿರುತ್ತೇವೆ.

ಜಮಾ.			ಖರ್ಚು.		
ಬಾಬುಗಳು.	೧೯೧೬-೧೭	೧೯೩೧-೩೨	ಬಾಬುಗಳು.	೧೯೧೬-೧೭	೧೯೩೧-೩೨
ಶಹರ ಜಕಾತಿ,	೩೫೦೦೦	೪೪೫೦೦	ಜನರಲ್ ಅಡ್ಮಿನಿಸ್ಟ್ರೇಶನ್,	೫೨೦೦	೬೦೦೦
ಟೋಲು,	೬೦೦೦	೮೦೦೦	ಕರವಸೂಲಿ,	೨೩೦೦	೩೪೦೦
ಮನೆಪಟ್ಟಿ,	೧೪೬೦೦	೨೨೨೦೦	ಜಕಾತ ಟೋಲವಸೂಲ,	೪೩೦೦	೮೪೦೦
ನಳಪಟ್ಟಿ (ಜನರಲ್ ವ ಸ್ಪೇಶಲ್)	೨೦೦೦೦	೩೨೦೦೦	ದೀಪಹಚ್ಚುವದು,	೪೯೦೦	೬೪೦೦
ಭಂಗೀಪಟ್ಟಿ (ಜನರಲ್- ಸ್ಪೇಶಲ್)	೫೯೦೦	೯೨೦೦	ಕೆಲಗೇರಿ ನೀರಿನ | ಆ ಕಟ್ಟಿಗೆ-	೧೧೩೦೦	೨೪೦೦೦
ಮಾರ್ಕೆಟಭಾಡಿಗೆ,	೫೦೦೦	೮೨೦೦	ಖರ್ಚು | ಬ ಇತರಖರ್ಚು,	೮೪೦೦	೧೧೨೦೦
ಶಾಲೆಯ ಫೀ,	೧೫೦೦	Nil	ಗಟರ ಖರ್ಚು,	Nil	೧೦೬೦೦
ಇತರ ತಿರಕೋಳಿ,	೧೯೮೦೦	೫೩೮೦೦	ಶ್ಯಾನಿಟರಿ ಖಾತೆ,	೧೨೩೦೦	೨೧೫೦೦
			ಮೈಲಿ,	೪೦೦	೮೦೦
			ಪಬ್ಲಿಕ ವರ್ಕ್ಸ ನವಕರ ಪಗಾರ,	೧೦೦೦	೨೦೦೦
			ಶಾಲೆಗಳ ಖರ್ಚು,	೨೦೯೦೦	೪೬೮೦೦
			ಸರಕಾರದ ಸಾಲಾ,	೧೫೨೬೬	೧೫೩೨೬
			ಇತರ ತಿರಕಳ ಖರ್ಚು,	೩೧೩೬೪	೪೫೧೬೪
ಒಟ್ಟು ಜಮಾ	೧೦೬೯೦೦	೧೬೮೫೦೦	ಒಟ್ಟು ಖರ್ಚು	೧೧೬೬೦೦	೩೦೨೪೦೦

ತಾರೀಖು ೨೧-೮-೧೯೩೨ ಧಾರವಾಡ ಮ್ಯುನಿಸಿಪಾಲಿಟಿ.

ಯನವ್ಹರ ಸಾಹೇಬರವರು ಮೃತರಾದರೆಂದು ಮಾಸ್ಕೋದ ತಾರು ಅನ್ನುತ್ತದೆ.

ಆಯರ್ಲಂಡದ ಸಿನಫಿನ ಪಿಲೇದಾರರ ಬಲವು ಹೆಚ್ಚಿ ಆವರು ಆದವೀ ಪಾಲಾದರೆಂದು ಲಂಡನದ ತಾರಿನ ಅಭಿಪ್ರಾಯ

ಜಿನೋವ್ಹಾದಲ್ಲಿ ರಾಷ್ಟ್ರ ಸಂಘ ಕಮಿಟಿಯು ಕೂಡುವದದೆ. ಅದಕ್ಕೆ ಹಿಂದುಸ್ಥಾದ ವತಿಯಿಂದ ಮಾಜೀ ನ್ಯಾಯಿಸರಾಯರೂ, ಸರ ಶಿವಸ್ವಾಮಿ ಅಯ್ಯರರೂ ಪ್ರತಿನಿಧಿಗಳಾಗಿ ಹೋಗುವರೆಂಬ ದಟ್ಟವಾರ್ತೆ

....

ಶಿರಸಿಯಿಂದ ನಾಗಭೂಷಣರೆಂಬವರಿಂದ ಒಂದು ಲೇಖ ಬಂದಿದೆ. ವಿಚಾರಗಳು ಸರಸಾಗಿದವಿರು ... ವನರಿಂದ ಅವಕಾಶ ಕೊಡಲಾಗುವದಿಲ್ಲ.

... ದ ಬಗ್ಗೆ ... ಘಟ್ಟದ ಮುಟಿಸ್ಪಡೆಯ ... ಎಂಬವರಿಂದ ಆಸಹಕ್ಕೆ ಪ್ರಪಂಚ ಪ್ರತಿಸ್ಪರ್ಧಿ, ಕನ್ನಡಿಗರ ಕರ್ತವ್ಯ ಎಂಬ ಎರಡು ಲೇಖಗಳು ಬಂದಿವೆ. ವಿಚಾರ ಸರಣಿಯು ಸರಿಯಾಗಿದ್ದರೂ, ಭಾಷಾ ಶೈಲಿಯು ಅಷ್ಟು ಕಟ್ಟಾಗಿಲ್ಲ. ಹಾಗೂ ಬಹಳ ಉದ್ದವಾದ ಬಂದ ಒಂದ ಶಬ್ದಗಳಿಂದಲೇ ಲೇಖವನ್ನು ಬರೆದಿರುವದರಿಂದಲೇ ಲೇಖವು ನಿಷ್ಕಾರಣವಾಗಿ ಬೆಳೆದಿದೆ. ಆದ್ದರಿಂದ ಸ್ಥಳಕೊಡೆವು.

(ಲೇಖಕರು ವಿವೇಚಿಸಬೇಕಾದ ವಿಧಾನಗಳನ್ನು ಸ್ವಲ್ಪದರಲ್ಲಿಯೇ ಅಚ್ಚುಕಟ್ಟಾದ ರೀತಿಯಲ್ಲಿ ವಿವೇಚಿಸಿದಲ್ಲಿ ಅತ್ಯಾನಂದದಿಂದ ಸ್ಥಳಕೊಡುವೆವು)

ನಮ್ಮ ಲೇಖಕ್ಕೆ ಮ್ಯು.ಯ ಉತ್ತರ.

ಇಂದಿನ ವಿಶಂ ... ಂದರೆ ನಾವು ಈಪೊದಲು ಮಾಡಿದ ಧಾರವಾಡ ಮ್ಯು.ಯ ಮೇಲಿನ ಟೀಕಾ ಲೇಖಕ್ಕೆ ಉತ್ತರವೆಂದು ಮ್ಯು.ಯವರಿಂದ ಒಂದ ಪ್ರಸಿದ್ಧೀ ಪತ್ರಿಕೆಯು. ಅದು ಪ್ರಕಟಗೊಂಡಿದ್ದರೂ ಧಾರವಾಡಕ್ಕೆ ... ಇರುವದರಿಂದ ಉಳಿದ ವಿಷಯಗಳನ್ನು ಇಂದುಕೊಡದೆ, ಸದರ ಅವರ ಪ್ರಕಟಣೆಯನ್ನೇ ಪ್ರಸಿದ್ಧಿಸಿದ್ದೇವೆ. ಇನ್ನೂ ಮ್ಮೆ ಅವರ ಪ್ರಕಟನೆಗೆ ಸಮರ್ಪಕ ಹಾಗೂ ಸಬಯಾದ ಉತ್ತರವನ್ನು ಕೊಡುವೆವೆಂದು ಈಗಲೇ ಹೇಳಿ ಬಿಡುವೆವು ಅದುವರೆಗೆ ವಾಚಕರು ಮ್ಯು ಯವರ ಪ್ರಕಟಣೆ ಹಾಗೂ ಈಮೊದಲು ನಮ್ಮಿಂದ ಪ್ರಸಿದ್ಧವಾದ ಎರಡೂ ಲೇಖಗಳನ್ನು ಮನನ ಮಾಡಿಕೊಳ್ಳಿರಿ.

ನಿತ್ಯ ಪತ್ರಕ್ಕೆ ರಜೆ ಪ್ರತಿವರ್ಷದಂತೆ ಶ್ರೀ ಜ್ಞಾನೋತ್ಸವ ಪ್ರಯುಕ್ತ ನಾಳಿನ (೨೭-೮-೩೨) ಸಂಚಿಕೆಯು ಹೊರಡದು. ನಾಡದು ಅಂದರೆ ೨೮-೮-೩೨ ನೇ ಸಂಚಿಕೆಯನ್ನು ಹೊರಡಿಸದೆ, ೩೦-೮-೩೨ ನೇ ನಿತ್ಯ ಪತ್ರಕ್ಕೆ ವಾರದ ಸೂಟಿಯಿದ್ದರೂ ಅಂದಿನ ವಾರ ಪತ್ರವನ್ನೇ ನಿತ್ಯದ ಚಂದಾದಾರರಿಗೆ ಕಳಿಸಿ ಕೊಡುವೆವು.

ಮ್ಯಾ. ವಿ, ಧಾರವಾಡ.

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ಪಾಠಶಾಲೆ ಪ್ರೇಸಿನಲ್ಲಿ ಛಾಪಿಸಿ. ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ.

- ಸ್ಥಾಪಕರು -
ಶ್ರೀ. ಆಚಾರ್ಯ ಬಾಲಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಶನಿವಾರ ತಾರೀಖು ೬ ನೇ ಅಗಸ್ಟ ೧೯೨೨. (ಸಂಚಿಕೆ ೧೨೨

ನೋಟೀಸು.

ಧಾರವಾಡ ಶಹರದ ಯಾವತ್ತು ಜನರಿಗೆ— ಧಾರವಾಡ ಡಿಂ| ಕೋರ್ಟಿನ ಡಂ| ನಾಝರರ ಕಡಿಂದ ಧಾರವಾಡ ಇದರ ಮೂಲಕ ತಿಳಿಯಬೇಕೆಲ್ಲಾ ಧಾರವಾಡ ಶಹರ ಮಂಗಳವಾರಪೇಟೆ ಕಂಟ್ರಾಟೋಣೆಯಲ್ಲಿರುವ ಮುನಸಿಪಾಲಿಟಿ ೧೬ನೇ ನಂ| ಮನಿ ಅಲ್ಪವಯಿ ಸರ್ವೇಶ ಜಯರಾಯ ಪೊಟ್ಲಿಯಾರ ವ ಪಾರ್ಥಸಾರಥಿ ರಾಮಲಿಂಗಪ್ಪ ಮೊಸ್ಲಿಯಾರ ಇವರಿಬ್ಬರ ಸ್ವೋಪಿಕ ಮನಿ ಲಿಲಾವಿನಿಂದಾ ಮಾರಲಿಕ್ಕೆ ಸ, ಡಿಂ| ಜಡ್ಜ ಸಾಹೇಬ ಬಹಾದ್ದೂರವರು ತಾ|| ೧೭-೮-೨೨ ನೇ ಇನವಿ ದಿವಸ ಮಾರಲಿಕ್ಕೆ ಹುಕುಮ ಮಾಡಿದ ಪ್ರಕಾರ ಸದರ ಮನಿ ನಮ್ಮಿಂದ ತಾ|| ೨೭-೮-೨೨ ನೇ ಇಸ್ವಿ ರೋಜ ರವಿವಾರ ದಿವಸ ಮುಂಜಾನೆ ೮ ಗಂಟೆಕ್ಕೆ ವ್ಯಕ್ತ ರೀತಿಯಿಂದ ಸದರ ಮನಿಯ ಮುಂದೆ ಲಿಲಾವಿನಿಂದಾ ಮಾರಲ್ಪಡುವದು. ಲಿಲಾವಿನ ಶರ್ತುಗಳು ಲಿಲಾವಿನ ಕಾಲಕ್ಕೆ ಓದಲ್ಪಡುವವು. ವಿಶೇಷ ಮಾಹಿತಿ ಬೇಕಾದಲ್ಲಿ ಸೂಟಿ ದಿವಸ ಬಿಟ್ಟು ನಮ್ಮ ಕಚೇರಿಯಲ್ಲಿ ಬಂದು ತಿಳಕೊಳ್ಳಬಹುದು. ಸದರ ಮನಿ ತಗೊಳ್ಳತಕ್ಕವರು ಸದರ ತಾರೀಖಿನ ದಿವಸ ಸದರ ವ್ಯಾಳ್ಯಕ್ಕೆ ಹಾಜರ ಇರೋಣಾಗಬೇಕು. ತೀಯೋದು.

ಧಾರವಾಡ ಆರ್. ವ್ಹಿ. ಕುಸನೂರ.
ತಾ. ೧೮-೮-೨೨ ಡೆಪ್ಯುಟಿ ನಾಝರ,

ಕಟ್ಟಿಗೆಯ ಅಳತೆಯ ಜಂತ್ರಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-೮ ಆಣೆ. ಪತ್ತೆ- ರಾಮರಾವ ಬಳ್ಳಾರಿ. ಕೈಂಡ ಪ್ರದರ್ಕರ್ನಾಟಕ ಬುಕ್ಕಡಿಪೋ ಧಾರವಾಡ

ಧಾರವಾಡ ಮ್ಯುನಿಸಿಪಾಲಿಟಿಯು ಪ್ರಸಿದ್ಧಪತ್ರಿಕೆಯು.

ಇತ್ತೀಚೆಗೆ ಈ ಊರ ಕೆಲವು ವರ್ತಮಾನ ಪತ್ರಗಳಲ್ಲಿ ಮತ್ತು ವಿಶೇಷವಾಗಿ ಮೊನ್ನೆ ತಾರೀಖು ೯-೮-೨೨ ಇನವಿಯ ವಿಜಯ ಪತ್ರದಲ್ಲಿ ಧಾರವಾಡ ಮ್ಯುನಿಸಿಪಾಲಿಟಿಯ ಕಾರಭಾರ(ಅಡಮಿನಿಸ್ಟ್ರೇಶನ) ದ ಬಗ್ಗೆ ಪ್ರಶ್ನೆಗಳು ಸುಳ್ಳು ವಿಧಾನಗಳು ಪ್ರಸಿದ್ಧಿಸಲ್ಪಟ್ಟಿದ್ದು ಅದರಿಂದ ಜನರ ಮನಸ್ಸಿನ ಮೇಲೆ ವಿಪರೀತ ಕಲ್ಪನೆಯು ಜಗುವ ಸಂಭವವದೆ. ಅದನ್ನು ತೆಗೆದು ಹಾಕಿ ಖರೇ ಹಕೀಕತ್ತನ್ನು ಜನರಿಗೆ ತಿಳಿಸುವಗೋಸ್ಕರ ಈ ಪತ್ರಿಕೆಯನ್ನು ಧಾರವಾಡ ಮ್ಯುನಿಸಿಪಾಲಿಟಿಯ ವತಿಯಿಂದ ಪ್ರಸಿದ್ಧಗೊಳಿಸಿದೆ.

ಮನೆಪಟ್ಟಿ

ಮ್ಯುನಿಸಿಪಾಲಿಟಿಯಿಂದ ಈಗ ೪ ವರ್ಷಗಳ ಕೆಳಗೆ ಅಂದರೆ ಸಂನ್ ೧೯೧೭ ೧೮ನೇ ಸಾಲಿನಲ್ಲಿ ಒಬ್ಬ ಸ್ಪೇಶಲ್ ಆಫೀಸರರನ್ನು ನೇಮಿಸಿ ಮನೆಪಟ್ಟಿಯನ್ನು ರಿವ್ಹಾಯಿಜ ಮಾಡಿಸಿದ್ದು ಖರೇ ಅದೆ. ಅದರೆ ಆದರಲ್ಲಿ ೧೦ರಿಂದ ೧೫ ಸಾವಿರ ವರೆಗೆ ಮನಿಪಟ್ಟಿಯನ್ನು ಏರಿಸಿದರೆಂದು ಪ್ರಸಿದ್ಧಿಸಿದ್ದು ಸುಳ್ಳಿಅದೆ. ಆ ರಿವ್ಹಿಜನ್ನದಲ್ಲಿ ನಾಲ್ಕು ಸಾವಿರ ರೂಪಾಯಿ ಮಾತ್ರ ಏರಿಸಲ್ಪಟ್ಟಿತು. ಮತ್ತು ಮ್ಯುನಿಸಿಪಾಲಿಟಿ ಆಕ್ಟ ಪ್ರಕಾರ ಊರಲ್ಲಿ ಮನೆ ಬಾಡಿಗೆಯು ಏರಿಕ್ಕೆ ಹತ್ತಿದೆ ಎಂದು ಮ್ಯುನಿಸಿಪಾಲಿಟಿಯವರಿಗೆ ತಿಳಿದರೆ ಪರವರ್ಷಕು ಮನೆಪಟ್ಟಿ ರಿವ್ಹಿಜನ್ ಮಾಡಿಸಲಿಕ್ಕೆ ಬರುತ್ತದೆ. ಮತ್ತು ೪ ವರ್ಷಗಳ ವೆಳಗಾಗಿ ಊರ ಎಲ್ಲಾ ಮನೆಗಳ ನೆಪಟ್ಟಿಯನ್ನು ಒಮ್ಮೆಯಾದರೂ ರಿವ್ಹಾಯಿಜ ಮಾಡೇ ತೀರಬೇಕೆಂದು ಕಾಯಿದೆ ಅದೆ. ಆ ಪ್ರಕಾರಕ್ಕೆ ೧೯೨೨ ೨೩ನೇ ಸಾಲಿನಲ್ಲಿ ಅಂದರೆ ಹಿಂದಿನ ರಿವ್ಹಿಜನ್ನದಿಂದ ೪ ವರ್ಷಗಳು ಪೂರಾ ತೀರಿ ೫ನೇ ವರ್ಷದ ಅಮಲಿನಲ್ಲಿ ಬರುವಂತೆ ಮನೆಪಟ್ಟಿಯನ್ನು ಈ ಸಾರೆ ರಿವ್ಹಾಯಿಜ ಮಾಡಿಸಿದೆ. ಈ ರಿವ್ಹಿಜನ್ನದಲ್ಲಿ ಕೆಲವು ಮನೆಗಳಿಗೆ ಹಿಂದಿನಕಿಂತ ಮನೆಪಟ್ಟಿ ಕಡಿಮೆ ಆಗಿದೆ ಮತ್ತು ಕೆಲವುಗಳಿಗೆ ಹೆಚ್ಚು ಆಗಿದೆ. ಬಹುತೇಕ ಬಾಡಿಗೆಯನ್ನು ನೋಡಿದ ಮೇಲೆ ಟ್ಯಾಕ್ಸ್ ಏರಿಸುವದನ್ನ ಹಿಡಿದರು. ಅದ ಸುಮಾರು ೭೦೦೦ ಮನೆಗಳಲ್ಲಿ ಸುಮಾರು ೧೬೦೦ ಮನೆಗಳ ಬಾಡಿಗೆ ಏರಿದ್ದು ಕಂಡದ್ದರಿಂದ ಅವುಗಳ ಟ್ಯಾಕ್ಸನ್ನು ಹೆಚ್ಚು ಮಾಡಿದೆ. ಮತ್ತು ಈ ಪ್ರಕಾರ ಏರಿದ ಟ್ಯಾಕ್ಸ ಅಂದರೆ ಅಜಮಾಸು ೪೭೦೦ ರೂ. ಆಗಿದ್ದು ೧೦೦೦೦ ೧೨೦೦೦ ಅಂತ ಬರೆದದ್ದು ಪೂರಾ ಸುಳ್ಳು ಸಂಗತಿ ಅದೆ. ಇದರಲ್ಲಿಯೂ ಸಹಾ ಅಜಮಾಸು ಅರ್ಧದಷ್ಟು ಮಾಳಮಡ್ಡಿ, ಟಿಕಾರೆ ಬಸಪ್ಪನ ಗುಡ್ಡ, ಪೆನ್ಶನರ್ಸ ಪಗ್ರವ ಊರ ಹೊರಗಿನ ಇಮಾರತಿಗಳ ಮೇಲೆಯೇ ಏರಿದೆ. ಉಳಿದ ಅರ್ಧದಲ್ಲಿ ಅಜಮಾಸು ಒಂದು ಪ್ರಕಾರ ದ ಹು ಊರಲ್ಲಿಯಹೊಸ ಇಮಾರತಿಗಳ ಮೇಲೆ ಬಿದ್ದಿರುತ್ತದೆ. ಅದ್ದರಿಂದ ಊರ ಜನರ ಮೇಲೆ ಅತಿಸ್ವಲ್ಪ ಪ್ರಮಾಣದಿಂದ ಈ ಟ್ಯಾಕ್ಸ ಏರಿಯವರು. ಮತ್ತು ಅಜಮಾಸ ೫೮೦೦ ಮನೆಗಳಿಗೆ ಹಿಂದೆ ಇದ್ದ ಕರದಲ್ಲಿ ಏನೂ ಹೆಚ್ಚು ಆಗಿಲ್ಲಾ.

ಇನ್ನು ಚೀಫ ಆಫೀಸರರನ್ನು ಈ ಕೆಲಸಕ್ಕೆ ನೇಮಿಸದೇ ಕಮಿಟಿಯ ಮೆಂಬರರನ್ನು ನೇಮಿಸಿದ್ದರೆ ಕೆಲ್ಸವಾಗುತ್ತಿದ್ದಿಲ್ಲವೋ ಪ್ಯಾಂಗೆಂದು ಬರೆದಿದೆ. ಆದರೆ ಖರೇ ಸಂಗತಿಯೆಂದರೆ- ೧೯೨೧ನೇ ಸಾಲಿನಲ್ಲಿ ಮಿ. ಕರಿಗುದರಿ ಇವರು ಪ್ರೆಸಿಡೆಂಟರಿದ್ದಾಗ

ಬಂದು ಇಂಥ ಕಮೀಟಿಯನ್ನು ನೇಮಿಸಿದ್ದರು. ಆದರೆ ಅವರು ಒಂದು ವರ್ಷವಾದರೂ ಯಾವ ಕೆಲಸ ಮಾಡದ್ದರಿಂದ ಹಿಂದಿನ ವರ್ಷದ ಮ್ಯಾನೇಜಿಂಗ ಕಮೀಟಿಯು ಚೇರಮನ್ನರು, ತಮ್ಮ ಕಮೀಟಿಯ ಮೆಂಬರರು ಸದರಿ ಕೆಲಸ ಮಾಡಲಿಕ್ಕೆ ವೇಳೆಗೆ ಸರಿಯಾಗಿ ಬರುವದಿಲ್ಲಾ ಕಾರಣಾ ಈ ಕೆಲಸ ಆಗುವದು ಅಸಾಧ್ಯವಿದೆ ಮತ್ತು ಚೀಫ್ ಆಫೀಸರ ಅಥವಾ ಇನ್ನ್ಯಾರಾದರೂ ಸ್ಪೇಶಲ್ ಆಫೀಸರರನ್ನು ನೇಮಿಸಿ ಕಾಯದೇ ಪ್ರಕಾರ ರಿವ್ಹಿಜನ್ನ ಕೆಲಸ ಮಾಡಿಸಬೇಕೆಂಬ ರಿಪೋರ್ಟ ನೇದ್ದು ಮಾ ಡಿ ದ್ದ ರ ಮೇಲೆ ಮ್ಯುನಿಸಿಪಾಲಿಟಿ ಯ ವ ರು ಬೇ ರೆ ಸ್ಪೇ ಶ ಲ ಆಫೀಸರರನ್ನು ಕಳಿಸುವ ವಿಶೇಷ ಖರ್ಚು ಬೀಳು ವದೆಂದು ಚೀಫ ಆಫೀಸರರಿಗೇ ಈ ಕೆಲಸ ಮಾಡುವದಕ್ಕೆ ಹಚ್ಚುವ ಠರಾವಮಾಡಿದರು. ಖರೇ ಸಂಗತಿ ಹೀಗಿದ್ದು ಅದನ್ನು ಚವಕಶಿ ಮಾಡಿ ತಿಳಿದುಕೊಳ್ಳದೇ ಯಾವನಾದರೊಂದು ಅಯೋಗ್ಯ ವಿಧಾನ ಮಾಡಿದ್ದು ಅಗದೀ ಸ್ಥಿರ ಇದೆ. ಮತ್ತು ಚೀಫ ಆಫೀಸರರು ೩|೪ ತಿಂಗಳಲ್ಲಿಯೇ ಸದರ ಕೆಲಸವನ್ನು ಪೂರಾಮಾಡಿ ೧೯೩೩| ೩೪ ನೇ ಸಾಲಿನಲ್ಲಿಯೇ ಮನೆಪಟ್ಟಿ ರಿವ್ಹಿಜನ್ನ ಅಮಲಿನಲ್ಲಿ ಬರುವಂತೆ ಅತಿ ತೀವ್ರ ಕೆಲಸಮಾಡಿ ಉತ್ಪನ್ನವನ್ನು ಹೆಚ್ಚಿಸಿದ್ದಕ್ಕಾಗಿ ಮುನಸಿಪಾಲ್ಟಿಯವರು ಅವರಿಗೆ ಅವರ ರಿಪೋರ್ಟಿನ ಮೇಲಿಂದ ಸ್ಪೇಶಲ್ ಅಲಾವನ್ಸ ಕೊಡಬೇಕೆಂದು ಠರಾವ ಮಾಡಿದರು. ಆದಾಗ್ಯೂ ಈಗ ೩|೪ ತಿಂಗಳು ಕಳೆದರೂ ಅದನ್ನು ಚೀಫ್ ಆಫೀಸರರು ತೆಗೆದುಕೊಂಡಿಲ್ಲಾ. ಮತ್ತು ಆ ಠರಾವು ಆದಾಗ್ಯೆ ಈಗಿನ ಪ್ರೆಸಿಡೇಂಟರಾದ ಮಿ.| ಮುಲಕೋಟಿ ಇವರು ಹಾಜರ ಇದ್ದಿಲ್ಲಾ.

ಭಂಗಿ ಪಟ್ಟಿ

ಹುಬ್ಬಳ್ಳಿಯಲ್ಲಿ ಇದೇ ವರ್ಷ ಗಣೇಶಮೇಳಾ ಮಂಡಳವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟು ಸಂಸ್ಥೆಯ ಪರಿಯಿಂದ ಕರ್ನಾಟಕ ಪ್ರೆಸ್ಸಿನಲ್ಲಿ ಒಂದು, ಹಳೇ ಹುಬ್ಬಳ್ಳಿಯಲ್ಲಿ ಒಂದು, ಹೊಸ ಹುಬ್ಬಳ್ಳಿಯ ಕಿಲ್ಲೆಯಲ್ಲಿ ಒಂದು ಹೀಗೆ ೩ ಗಣಪತಿಗಳು ಕುಳಿತಿದ್ದವು. ಉತ್ಸವವು ಯಥಾಸಾಂಗವಾಯಿತು. ಈ ಸಾರೆಯ ಉತ್ಸವದಲ್ಲಿಯ ವಿಶೇಷವೆಂದರೆ ಮೇಳಾ ಸಮ್ಮೇಲನವು. ಮೇಳಾ ಸಮ್ಮೇಲನಕ್ಕೆ ಹುಬ್ಬಳ್ಳಿಯ ೮ ಮೇಳಾಗಳೂ ಧಾರವಾಡದ ಒಂದು ಮೇಳಾವೂ ಬಂದಿತ್ತು. ಎಲ್ಲ ಮೇಳಾಗಳ ಮೇಲಾಟವಾಗಿ ಹುಬ್ಬಳ್ಳಿಯ ಲೋಕಪಾವನ್ಯ ಮೇಳಾವು ಮೊದಲನೇದೆಂದು ನಿರ್ಣಯವಾಯಿತು. ಎಲ್ಲ ಮೇಳಾಗಳಿಗೂ ಒಂದೊಂದು ರೌಪ್ಯ ಪದಕ ಕೊಡುವದರಲ್ಲಿ ಬಂತು. (ಇನ್ನೂ ಕೊಟ್ಟಿಲ್ಲ. ಅದಕ್ಕೆ ಇನ್ನೂ ಅಚ್ಚು ಹಾಕಿಸತಕ್ಕದ್ದಿದೆ) ಮೇಳಾದ ನಿರ್ಣಯವನ್ನು ಮಾಡಲು ಎಲ್ಲ ಪಂಥಗಳ ಮಂಡಳರನ್ನು ಆರಿಸಿದ್ದರು. ಈ ಬಗೆಯ ಹೊಸ ಪದ್ಧತಿಯು, ಉತ್ಸಾಹ ಜನಕ, ಐಕ್ಯವರ್ಧಕ ಮೇಳಾ ಪದ್ಧತಿಯನ್ನು ಸ್ಥಾಪಿಸಿದ್ದೂ, ಕಾರ್ಯವನ್ನು ಯಶಸ್ವಿಯಾಗಿ ಕೊನೆಗಾಣಿಸಿದ್ದೂ ಡಾ. ಹರ್ಡೀಕರರ ಅವಿಶ್ರಾಂತ ಶ್ರಮವೆಂದೇ ಹೇಳಬಹುದು. ಹಾಗೂ ಅವರಿಗೆ ಸಹಾಯಮಾಡಿದ ಅಲ್ಲಿಯ ತರುಣ ವರ್ಗವೂ ಸ್ತುತಿಗೆ ಪಾತ್ರವಿದೆ.

ಡಾ. ಹರ್ಡೀಕರರಿಗೆ ನಮ್ರಸೂಚನೆ.

—೦—

(ಲೇ. ನಿಷ್ಪಕ್ಷಪಾತಿ ಹುಬ್ಬಳ್ಳಿ.)

ಈ ಸಾರೆ ಇಲ್ಲಿಯ ಶ್ರೀ ಗಜಾನನೋತ್ಸವವು ಡಾ. ಹರ್ಡೀಕರರವರ ಅವಿಶ್ರಾಂತಶ್ರಮ, ನಿಸ್ವಾರ್ಥ ಬುದ್ಧಿ, ಪರಸ್ಪರ ಸಮಭಾವ ಮೊದಲಾದ ಸದ್ಗುಣಗಳಿಂದ ಹೊಗಳುವತಕ್ಕವಾಗಿ ಪರಿಣಮಿಸಿತು. ವ್ಯಾಖ್ಯಾನ ಮೊದಲಾದವುಗಳದ್ವಾರದಿಂದ ಜನರಿಗೆ ಹಿತೋಪದೇಶವೂ ಮಾಡಲ್ಪಟ್ಟಿತು. ಸ್ಥಾಯಿಕವಾದ ಗಣೇಶಮೇಳಾ ಮಂಡಳವೆಂಬ ಸಂಸ್ಥೆಯೂ ಸ್ಥಾಪನವಾಯಿತು. ಹೀಗೆ ಈ ಬಗೆಯ ಕಾರ್ಯವಾದದ್ದು ಡಾ ಹರ್ಡೀಕರರವರಿಂದಲೇ ಆಯಿತು. ಅದಕ್ಕಾಗಿ ಡಾ. ಹರ್ಡೀಕರರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ ಸರಿ. ಆದರೆ ನನ್ನ ದೃಷ್ಟಿಯಿಂದ ಈ ಸಾರೆಯ ಈ ಉತ್ಸವದಲ್ಲಿ ಡಾ, ಹರ್ಡೀಕರರವರಲ್ಲಿದ್ದ ಒಂದು ಮಹತ್ವದ ಕುಂದಿರುವದೆಂದು ತೋರುವದು. ಡಾ ಹರ್ಡೀಕರರಂಥವರ ವಿಷಯವಾಗಿ

ಮೈಸೂರಿನ ವಿಶ್ವಸ್ತ ಪತ್ರಿಕೆಯೆನಿಸಿ ಹೊರಡುವ

ಸತ್ಯವಾದಿ

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ ರಾಜಕೀಯ, ಸಾಮಾಜಿಕ, ಆರ್ಥಿಕ, ಮತ್ತು ಸಾಹಿತ್ಯ ವಿಷಯಗಳನ್ನು ಚರ್ಚಿಸುವ [illegible] ವು ಎಲ್ಲ ದೇಶ-ವಿದೇಶದ ಸುದ್ದಿಗಳು ಸರಸವಾಗಿ [illegible] ವೇಚಿಸಲ್ಪಡುವವು. ವಾರ್ಷಿಕ ಚಂದಾ ಅಂಚೆ [illegible] ಚ್ಚ ಸೇರಿ ೧॥-೮-೦ ರೂ [illegible] ಬಾಹಿರಾತುಗಳ [illegible] ಟಕ್ಕೆಯಿಂದ ವ್ಯಾಪಾರಸ್ಥರಿಗೆ ಚಂದಾ [illegible] ಬಂಟರುಗಳು ಬೇಕು. ವಿಶೇಷ ಮಾಹಿತಿ ಕೇಳ. ವಿಳಾಸಕ್ಕೆ ಮ್ಯಾನೇಜರ ಸತ್ಯವಾದಿ ಪ್ರೆಸ, ಮೈಸೂರ.

ಧಾರವಾಡ ವಿಜಯ ಬುಧವಾರ ತಾರೀಖು ೬ ನೇ ಸಪ್ಟಂಬರ ೧೯೩೩ ನೇ ಇಸ್ವಿ

ಕ್ಕಣಿಕೆಯನ್ನಿತ್ತುವದು ಸನ್ನಂಥವನ ಯೋಗ್ಯತೆಯ. ಆದರೂ ಹೇಳದಿದ್ದರೆ ನಡೆಯುವಂತಿಲ್ಲ. ಯಾಕಂದರೆ ಡಾ. ಹರ್ಡೀಕರರವರು ಕರ್ನಾಟಕದ ಭಾವಿ ಮುಂದಾಳುಗಳು. ಅವರಲ್ಲಿ ಈಗ ಕಂಡುಬಂದ ಕುಂದು ಹಾಗೇ ಮನೆಮಾಡಿಕೊಂಡು ಉಳಿದರೆ, ಅವರಿಂದ ಕರ್ನಾಟಕ ಮಾತೆಯು, ತದ್ದ್ವಾರಾ ಹಿಂದ ಮಾತೆಯ ಸೇವೆಯು ಆಗತಕ್ಕಷ್ಟು ಆಗಲಿಕ್ಕಿಲ್ಲ. ಎಂದುಹೇಳಿ ಅದರೂ ಎಷ್ಟು ತೀವ್ರ ಆಗಬೇಕೋ, ಅಷ್ಟು ತೀವ್ರ ಆಗಲಿಕ್ಕಿಲ್ಲ. ಅಂತೇ ನಾನು ಅವರಿಗೊಂದು ಸೂಚನೆಯನ್ನು ಮಾಡುವದೆಂದರೆ—

ಡಾ, ಹರ್ಡೀಕರರೇ! ನಿಮ್ಮ ಮನಸಿನೊಳಗಿನ ಮಹಾರಾಷ್ಟ್ರ, ಕರ್ನಾಟಕನೆಂಬ ಭೇದಭಾವವನ್ನು ತೆಗೆದುಹಾಕಿರಿ ಕನ್ನಡ, ಮರಾಠೀ ಜಗಳವನ್ನು ತಗ್ಗಿಸಿರಿ. ಹೀಗೇಕೆನ್ನುವೆನೆಂದರೆ ಮೊನ್ನಿನ ಗಣೇಶಮೇಳಾ ಮಂಡಳ ಸಮ್ಮೇಲನ ಸಮಯದಲ್ಲಿ ಕಂಡು ಬಂದ ಪಕ್ಷಪಾತವು. ನಿಜವಾಗಿಯೂ ಹಳೇ ಹುಬ್ಬಳ್ಳಿಯ ವಿದ್ಯಾರಣ್ಯ ಮೇಳೆಯು ಮೊದಲನೆಯ ನಂಬರು ಒಡೆಯಬೇಕಿತ್ತು. ಅಥವಾ ಚಾಲುಕ್ಯರುತಿ ಸಂಸ್ಥೆ ಧಾರವಾಡ, ರಾಷ್ಟ್ರೀಯ ಶಾಲಾ ಹುಬ್ಬಳ್ಳಿ. ಈ ಎರಡು ಮೇಳೆಗಳಲ್ಲಿ ಯಾವದೊಂದು ಮೊದಲು ನಂಬರನ್ನು ಪಡೆಯಬೇಕಾಗಿತ್ತು. ಹಾಗೂ ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರಿಯ, ವೆಂಕಟೇಶ ಹುಬ್ಬಳ್ಳಿಯು ೫ ೬ ನಂಬರನ್ನು ಒಡೆಯಬೇಕಿದ್ದು. ಈಗ ೧ನೇ ನಂಬರು ಬಂದ ಲೋಕಮಾನ್ಯ ಮೇಳಾ ಹುಬ್ಬಳ್ಳಿ ಇದು ಕಡೆಯ ನಂಬರು ಹೊಂದತಕ್ಕದ್ದು. ಹೀಗಿದ್ದೂ ಲೋಕಮಾನ್ಯ ಮೇಳೆಯೇ ಒಂದಕ್ಕೆಂದು ಬರಲು ಲೋಕಮಾನ್ಯರ ಮೇಲಿನ ಪ್ರೇಮದಿಂದಲೋ, ಮಹಾರಾಷ್ಟ್ರದ ಮೇಲಿನ ಪ್ರೀತಿಯಿಂದಲೋ, ಸ್ವತಃ ಲೋಕಮಾನ್ಯ ಮೇಳಾದ ಅಸ್ತಿತ್ವಕರೆಂಬ ಅಭಿಮಾನದಿಂದಲೋ ನೀವುಲೋಕಮಾನ್ಯ ಮೇಳೆಯನ್ನು ಮೊದಲನೆಯವರೆನಿಸಿದಿರೆಂದು ನನ್ನ ಗ್ರಹಿಕೆಯಾಗಿದೆ. ಹಾಗೂ ಇದರಂತೆಯೇ ಅಲ್ಲಿ ಕೂಡಿದ ಜನರ ತಿಳುವಳಿಕೆಯಾಗಿದೆ. ಹೀಗೆ ನಿಮ್ಮ ಬಗ್ಗೆ ಜನರಲ್ಲಿ ವಿಕಲ್ಪವು ಹುಟ್ಟುವದು ನಮ್ಮ ಕರ್ನಾಟಕಕ್ಕೆ ಹಾನಿಕರವಾದ್ದರಿಂದ ಮಹಾರಾಷ್ಟ್ರ ಕನ್ನಡನೆಂಬ ಅಭಿಮಾನವನ್ನು ಬಿಟ್ಟು, ಈಗಿನಂತೆಯೇ ಲೋಕಜಾಗೃತಿಯ ಕಾರ್ಯ ಮಾಡುವಿರೆಂದು ನಂಬಿರುವೆನು. ಹಾಗೂ ಮೇಳಾಗಳಿಗೆ ಕೊಡತಕ್ಕ ಕಾವ್ಯ ಮುದ್ರಿಕೆಯ ಮೇಲೆ ಕನ್ನಡಲಿಪಿಯನ್ನೇ ಅಚ್ಚು ಹಾಕಿಸಿರೆಂಬದಾಗಿ ನನ್ನ ಆಗ್ರಹದ ಸೂಚನೆ.

ಅಮೃತ ಸರದ ಗುರುಕಾಬಾಗ ಪ್ರಕರಣವು ಪರಿಣಾಮಕ್ಕೆ ಹೋಗಿದೆ. ಆದರೂ ಶಾಂತತೆಯು ಸ್ಥಿರವಾಗಿಯೇ ಇದೆ.

ರಾಮರಾವ ಹರಿಹರ ಇವರಿಗೆ ಒಂದು ರೂಪಾಯಿ, ಅರುಜಣರಿಗಾಗಿ ೧ ದಿವಸದ ಶಿಕ್ಷೆ, ೬೦ ರೂ. ದಂಡ

—(೦)—

(ಬೇ. ರಾಣೇಬಿನ್ನೂರ ವಾಸಿ)

ಈ ಮೊದಲು ರಾಣೇಬಿನ್ನೂರಲ್ಲಿ ರದ್ದೀ ಟಿಕೀಟು ಮಾರಿದ ಬಗ್ಗೆ ಮಿ. ರಾಮರಾವ ಹರಿಹರ ಎಂಬವರ ಮೇಲೆ ಖಟ್ಲೆಯಾಗಿತ್ತಷ್ಟೇ? ಸದರಿಯವರಿಗೆ ಹುಬ್ಬಳ್ಳಿಯ ರೇ. ಮ್ಯಾ, ರವರು ೪೨೦ನೇ ಕಲಮಿನನ್ವಯ ಒಂದು ದಿವಸದ ಶಿಕ್ಷೆ, ೬೦ರೂ ಗಳ ದಂಡವನ್ನು ವಿಧಿಸಿದರು. ರಾಣೇಬಿನ್ನೂರ ಜಿಟ್ಟೀ ಜಟ್ಟಿಯನ್ನು ಉಪಸ್ಥಿತ ಮಾಡಿ, ನಿಷ್ಕಾರಣವಾಗಿ ಶ್ರೀಮಾನ್ ಕಾರ್ಯ ಕರ್ತರಂಥವರಿಗೆ ಮೊದಲಾದ ಎಷ್ಟು ದೇಶಭಕ್ತರಿಗೆ ದಂಡ ಶಿಕ್ಷೆ ಮಾಡಿಸಲು ಈ ಮಹನೀಯರೇ (ಮಿ. ರಾಮರಾಯರೇ) ಮೂಲಕಾರಣರು.

....

ಸರಸ್ವತೀ ಸ್ತವನ

—೦—

ಸೂಚನೇ- ಸರಸಿಜಾಕ್ಷಿಯೇ ದೇವಪೂಜಿತೆ |
ಸದನವಾಗಿಹಾ ನಿನ್ನ ಮಹಿಮೆಯ '
ರವಭರಿತವಾಗಿಹ ೨ ಸರ್ವರಿಗದನು ಒಣ್ಣಿಸಲು |
ಕರದಿ ವೀಣೆಯ ಪಿಡಿಸಿ ಆಂದದಿ |'
ಉರುತರದ ಗಾನವನು ಮಾಡುವಿ |
ಸರಸ್ವತಿಯೇ ನೀನು ಜನತೆಯ ಮರುಳುಮಾಡಿರುವಿ ||
ಕರದಿ ಪುಸ್ತಕ ಪಿಡಿದು ಒನರಿಗೆ |
ತರತರದ ವಿದ್ಯೆಯನು ಪಾಲಿಸಿ |
ವರದೆಯಂತೆನೀನು ತ್ರಿಜಗದಿ ಶೋಭಿಸುವಿ ಮಾತೆ ||೧||
ಧವಳಿತವು ನಿನ್ನಾತ್ಮತೇಜವು |
ಅವನಿತಲದೊಳು ಶಾಂತಿಯು ಹಳೇ |
ಭುವನ ಜನವಂದಿತಳು ನೀನು ನೀರಜಾಕ್ಷಿಣಿಯೇ ||
ಕವಿಕುಲಕೆ ಜೀವಿತವು ಶಾರದೆ |
ಸವಿಯು ಆಗಿಹ ನಿನ್ನ ವಾಣಿಯು|
ಅವರಿಗಿತ್ತು ನೀನು ಪಾಡಿವಿ ಈಶಮಹಿಮೆಯನು ||೨||
ಶಿಶಿಯ ಆಸನದಿಂದ ನಿನ್ನಯ |
ಒಜುಮೆಯೀ ನೀಲ ಸ್ಥಿತಿಯನ್ನು |
ನಲಿದು ತೋರುವಿ ನೀನು ನಿನ್ನಯಭಕುತಿವರ್ಗಕ್ಕೆ ||
ಬಲದಿ ನೀನು ನಿನ್ನ ವಿದ್ಯೆಯ |
ಒಲಿದು ನಿನ್ನನು ಸ್ತುತಿಸುವರಿಗೆ |
ಸಲಮುದದಿ ಸಕಲವನು ಕೊಡುವಿ ಮಯೂರ
ರವಾಹನಳೆ || ೩ ||
ಆವಿಯಲಿ ಈ ನಮ್ಮ ದೇಶವು |
ಸಾಧುಸಜ್ಜನರಿಂದ ಕಡಿದಿ |
ಬಾದೆಂಬಿಕೆಯು ಆಗಿ ಮೆರೆದವು ಅಂದದಿಂದದಲಿ ||
ಕಾದುವಳು ಸಾಂಪ್ರತಕೆ ಮಾತೆಯು|
ಆಧಿಭೌತಿಕ ಶಾಸ್ತ್ರದೊಡನೆ |
ಸಾಧನೆಯು ಇಲ್ಲದಲದೇವಿಯೆ ಆಶಿದೊರೆದಿಹಳು|
ಜನನಿಯುದರದಿ ಜನಿಸಿ ಜನತೆಯು |
ಅನುದಿನದಿ ಸನ್ಮಾರ್ಗವಂ ಸಲೆ |
ದನದ ತೆರದು ಬಿಟ್ಟು ಪರಸೇವೆಯನು ವಹಿಸಿಹದು ||
ತನುದಿನಾ ದಣಿವನ್ನು ಅರಿಯದೆ |
ಧನವೆಲ್ಲಾ ಪರರಿಗೊಪ್ಪಿಸಿ, |
ಮನದಿಮರಗುತಲಿಹದು ಸದ್ಯಕೆ ವಿಶ್ವವ್ಯಾಪಕಳೆ ||೫||
ಮನದಿ ಬೇಡುವೆ ನಿನ್ನ ವಾಣಿಯ |
ಹನಿಸು ಜನಕೇ ನಿನ್ನ ವಿದ್ಯೆಯ |
ಅಣುಗನೆಂದದಿ ಕೃಷ್ಣ ಗುರುವಿನಮುದದಿ
ನಮಿಸುವೆನು ||

. ಕೃಷ್ಣಮೂರ್ತಿ ಧಾರವಾಡ.

....

ಕಾಲುಕೆದರು ಜಗಳಕೆಗೆಯುವ ಕರ್ನಾಟಕ ಟಾಯಿಮ್ಸ ಕಾರರೇಇದರ್ಕುತ್ತರವೇನು?

—೦—

ಇಲ್ಲಿಯ ಪಂಡ-ಬಂಡ ಹೆಸರಿನಿಂದೊಪ್ಪುವ ಕರ್ನಾಟಕ ಟಾಯಿಮ್ಸ ಕಾರರು ನಾವು ಮ್ಯು. ಯ ಲೇಖವನ್ನು ಅರ್ಥಾತ್ ಮ್ಯು, ಯಹುಳುಕನ್ನು ಹೊರಗೆಡಹಿದ್ದಕ್ಕಾಗಿ ನಮ್ಮ ಮೇಲೆ ಟೀಕಾಸ್ತ್ರವನ್ನು ಹೂಡಿ, ಮ್ಯು, ಯನ್ನೆತ್ತಿಹಿಡಿಯುವ ಹವ್ಯಾಸಕ್ಕೆ ಬದ್ಧರಾಗಿ ನಮಗೆ ಉಪದೇಶ ಮಾಡಿದ್ದಾರೆ. ಅವರ ಸಿದ್ಧಾಂತಗಳೆಲ್ಲ ಯಾವಾಗಲೂ ಕುತ್ಸಿತವಾದವುಗಳಿರುವದರಿಂದ ಸಹಸಾ ನಾವು ಅವಕ್ಕೆ ಉತ್ತರವನ್ನೇ ಕೊಡುತ್ತಿರುವದಿಲ್ಲ. ಇತ್ತೀಚೆಗಾಗಿ ನಮ್ಮ ಬಂಧುಗಳಿಗೆ ನಮ್ಮ ಮೇಲೆ ಹರಿಹಾಯಲು ಅವುಗಳೇ ದೊರೆತಿರಲಿಲ್ಲ. ಯಾವದೊಂದು ಆಸುಬೇಕಾಗಿತ್ತು. ಅನಾಯಾಸವಾಗಿ ದೊರೆತ ಈ ಸಂಧಿಯನ್ನು ಅವರೇಕೆ ಕಳೆದುಕೊಂಡಾರು? ಇರಲಿ, ಕಾಲುಕೆದರಿ ಜಗಳಕ್ಕೆನಿಲ್ಲುವ ಪಂಡ-ಬಂಡ ಹೆಸರಿನ ನಮ್ಮ ಬಂಧುಗಳೇ ಇದಕ್ಕೆ ಉತ್ತರಕೊಡಿರಿ.

೧. ಅನ್ನು ನಾವು ಟೀಕೆ ಮಾಡುವೆವೆಂದು ಗೊತ್ತಿದ್ದೂ, ನಮ್ಮ ಪೂರ್ಣ ಟೀಕೆಯು ಮುಗಿಯುವವರೆಗೆ ತಣ್ಣಗೆ ಕುಳಿತುಕೊಳ್ಳಲಿಲ್ಲ ಏಕೆ? ಕೈಗಳು ಹಾತೊರೆಯುತ್ತಿದ್ದವೇನ?

೨. ನಮ್ಮ ಮೇಲೆ ಬ್ರಾಹ್ಮಣ-ಬ್ರಾಹ್ಮಣೇತರ ಭೇದಭಾವವನ್ನು ಹುಟ್ಟಿಸುವೆವೆಂಬ ಆರೋಪವನ್ನು ಹೊರಿಸಿರುವಿರಲ್ಲವೇ? ಟೀಕಾಸ್ತ್ರವನ್ನು ಹೂಡಲು ಸಮಯ ಬರದ ಹೊರತು ನಾವು ಅಕ್ಷರಶಬ್ದವನ್ನು ತೆಗೆಯುವವರಲ್ಲ. ಇದುವರೆಗೆ ಮ್ಯು, ಯ ಸಲುವಾಗಿ ಲೇಖ ಬರೆಯುವಂತಹ ಸಂಗತಿಗಳಾವವೂ ಇರಲಿಲ್ಲ. ಈಗ ಒಮ್ಮೆಂದೊಮ್ಮೆ ಮ್ಯು, ಯ ಕರವು ಎರಿದ್ದರಿಂದ ಟೀಕಾಸ್ತ್ರವನ್ನು ಹೂಡಿದೆವು.

೩. ಇಲೆಕ್ಷನ್ನು ಸಮೀಪಿಸಿತೆನ್ನುವಿರಿ. ಇನ್ನೂ ಇಲೆಕ್ಷನ್ನು ಏಳು- ಎಂಟು ತಿಂಗಳವದೆ. ನವ್ಹಂಬರದಲ್ಲಿ ಇಲೆಕ್ಷನ್ನ ಎಂಬ ನಿಮ್ಮ ಕಲ್ಪನೆಯದೆ. ಕರಕೊಟ್ಟು ಆರುತಿಂಗಳಾಗದಮೊತ್ತು ಹೋಟಂನಾಗಲು ಬರನು. ವರ್ಷಾರಂಭದ ಒಂದೆರಡು ತಿಂಗಳಲ್ಲಿಯೇ ಯಾರೂ ಒಳ್ಳೇ ಆಸ್ಥೆಯಿಂದ ಕರಕೊಡಲಾರರು. ಆದ್ದರಿಂದ ನವ್ಹಂಬರದಲ್ಲಿ ಇಲೆಕ್ಷನ್ನಾಗದೆಂದು ನಮಗೆ ಕಂಡೇ ಇತ್ತು. ಆದರಂತೆಯೇ ಮಾರ್ಚ- ಎಪ್ರೀಲದ ವರೆಗೆ ಮುಂದೆ ಬಿದ್ದೇಬಿದ್ದಿದೆ.

೪. ಮ್ಯು. ಗಾಗಿ ಜನರಲ್ಲ. ಜನರಿಗಾಗಿ ಮ್ಯುನಸಿಪಾಲಿಟಿಯು. ಜನರ ಹಿತವನ್ನು ಮ್ಯು. ಯವರು ಮಾಡಬೇಕೇ ಹೊರತು ಜನರ ಅಹಿತವನ್ನು ಮಾಡಬಾರದು. ಜನರ ಹಿತಕ್ಕಾಗಿ ಜನರಿಂದ ಅಲ್ಪಕರ ವಸೂಲಿ ಮಾಡಿ, ಅಲ್ಪ ಖರ್ಚಿನಲ್ಲಿ ಕಾರ್ಯ ಮಾಡಬೇಕು.

೫ ಸ್ಪೇಶಲ್ ನಳಪಟ್ಟಿಯು ಸ್ಪೆಶಲ್ ನಳಪಟ್ಟಿಯನ್ನು ತೆಗೆದುಕೊಂಡ ಎಲ್ಲರಿಗೂ ಸರಿಯಾಗಿರುವದು, ನ್ಯಾಯವಾದದ್ದಲ್ಲವೆ? ಹೀಗಿದ್ದೂ ಹೆಚ್ಚು ಕಡಿಮೆ ಯೇಕೆ? ಆದರೂ ಆಗಲಿ. ನೀರಾದರೂ ಸಾಕಷ್ಟು ಬಿಡಬಾರದೆ?

೬. ನಿರಂತರ ಉತ್ಪನ್ನ ಬರುವ ಮಾರ್ಕೇಟಿನ ಸ್ಥಳಗಳನ್ನು ಗುತ್ತೇ ಕಟ್ಟಿಕೊಂಡು ಹೋಗುವವರಂತೆ ಮ್ಯು. ಯವರು ಕೆಲವೊಂದು ರಕಮಿಗೆ ಮಾರಬೇಕೇ? ... ಮಾಡಿದರೂ ಪಾಲಲಿ. ಒಂದ ಹಣವನ್ನು ನಿರಂತರ ಉತ್ಪನ್ನ ಬರುವ ಮಾರ್ಕೇಟನ್ನು ಕಟ್ಟಿಸಬೇಕೋ? ಉತ್ಪನ್ನ ಬರದ ಚಂದವಾದ ಮ್ಯು ಯ ಇಮಾರತಿಯನ್ನು ಕಟ್ಟಿಸಬೆ ಕೋ ನೀವೇ ಹೇಳಿರಿ.

೮, ಮ್ಯು. ಯ ಮೆಂಬರರು ಬರನ್ನರಿಂದ ಸ್ಪೆಶಲ್ ಡ್ಯುಟಿಯನ್ನು ನಿಯಮಿಸಬೇಕಾಯಿತೆಂದು ಮ್ಯು. ಯವರನ್ನುವರು. ಮೆಂಬರರು ಕಾರ್ಯಮಾಡದ್ದಕ್ಕಾಗಿ ಕರಕೊಡುವವರ ಮೇಲೆ ೬೦೦ ರೂ. ಗಳ ಭಾರವು ಯೋಗ್ಯವೆ?

೯, ಮ್ಯುನಸಿಪಾಲ್ಟಿಯ ಜಮಾ ಖರ್ಚಿನ ಲೆಕ್ಕವು ಪ್ರಸಿದ್ಧವಾಗಿವೆಯಷ್ಟೆ? ಧಾರವಾಡ ಮ್ಯು.ಯಲ್ಲಿ ಖರ್ಚು ಹೆಚ್ಚು ಬೆಳೆದಂತೆ ಬೆಳಗಾಂವಿಯ ಮ್ಯು. ಯಲ್ಲಿಯೂ ಖರ್ಚು ಹೆಚ್ಚು ಬೆಳೆದಿರಬಹುದಲ್ಲವೆ? ಅಲ್ಲಿ ಮಾತ್ರ ಮನೆಪಟ್ಟಿಯು ಉತ್ಪನ್ನದ ಮೇಲೆ ೧೦೦ಕ್ಕೆ ೫ರಂತೆ ಇರುವದೇಕೆ? ಇಲ್ಲಿ ಮಾತ್ರ ೧೦೦ಕ್ಕೆ ೧೦-೧೧ ರ ಮನೆಪಟ್ಟಿ ಬಂದಿರುವದೇಕೆ? ಎಂಬದನ್ನು ಮ್ಯು. ಯವರು ವಿಚಾರ ಮಾಡಬಾರದೇ?

೧೦ ಜನರು ಜಾಸ್ತಿಗಿಂತ ಮ್ಯು. ಯವರು ಖರ್ಚಿನ ಬಗ್ಗನ್ನೇ ಹೆಚ್ಚಿಗೆ ತೋರಿಸಿರುವರು. ಹೀಗಾದರೆ ಮ್ಯು. ಯು ನಡೆಯುವದೆಂತು? ಈ ಬಗ್ಗೆ ಯೋಗ್ಯ ವಿಚಾರ ಮಾಡಬಾರದೆ?

ಟಾಯಿಮ್ಸಕಾರರೇ! ಸಿಟ್ಟಾಗಬೇಡಿರಿ. ನಮ್ಮ ವರಿಕೆ ಸರಿಯಾದ ಉತ್ತರಕೊಡಿರಿ. ನಾವು ದ್ವೇಷವನ್ನು ಬೆಳೆಸುವವರಲ್ಲ. ನಿಷ್ಕಾರಣವಾಗಿ ಟೀಕಾಸ್ತ್ರವನ್ನು ಹೂಡುವವರಲ್ಲ, ಕರ್ನಾಟಕದಲ್ಲಿ ಭೇದಭಾವವು ಹುಟ್ಟಬೇಕೆಂದು ನಮ್ಮ ಮನಸಿನಲ್ಲಿ ಸಹಸಾ ಇಲ್ಲ. ನಾವು ಯಾವಾಗಲೂ ಐಕ್ಯವನ್ನೇ ಕೋರುವೆವು. ನೀವು ನಮಗೆ ಬುದ್ಧಿವಾದವನ್ನು ಹೇಳಿದಂತೆ ನಾವು ನಿಮಗ ಒಂದು ಬುದ್ಧಿವಾದವನ್ನು ಹೇಳುವದೆಂದರೆ ನಿಮ್ಮ ಮನಸಿನಲ್ಲಿಯ ಬ್ರಾಹ್ಮಣದ್ವೇಷವೆಂಬ ಕಿಲ್ಮಿಷವನ್ನು ಮೊದಲು ತಗೆದೊಗೆದು ಆ ಮೇಲೆ ಲೆಕ್ಕಣಿಕೆಯನ್ನೆತ್ತಿರಿ ಅಂದರೆ ನಿಮ್ಮಿಂದ ನಿಜವಾಗಿಯೂ ರಾಷ್ಟ್ರಕಾರ್ಯವಾಗುವದೆಂಬುದನ್ನು ನಾವು ಖಂಡಿತವಾಗಿ ಹೇಳಬಲ್ಲೆವು.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟುಂಬಿಕರಸಂಗ್ರಹಕ್ಕೆ ಅವಶ್ಯವಾದದ್ದು.

—o—

ಕಾಲರಾ, ಮೂರಿಕಾ, ಪಟಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯಂತ ಉಪಯುಕ್ತ, ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹಪಡಿಸಿಟ್ಟು, ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸುವರೆ ಕಾಲರಾ ಬೇನೆಯು ಎಂದೂ ಬರಲಾರದು.

ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ

ಕಾಲರಾಪಿಲ್ಸ- ೨೪ ಗುಳಿಗೆಗೆ ೦—೧೨—೦ ರೂ, ೧೨೦ ಕ್ಕೆ ೩-೮ -೦ ರೂ. ಟಪಾಲ ಖರ್ಚುಬೇರೆ.

ಕ್ಲೋರೊ ಡಾಯಿನ್- ಬಾಟ್ಲಿ ಒಂದಕ್ಕೆ ೦—೧೨—೦ ರೂ, ಟಪಾಲುಖರ್ಚು ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ- ೨೫ ಕ್ಕೆ ೧-೦-೦ ರೂ, ೧೦೦ ಕ್ಕೆ ೩-೦-೦ರೂ ಟಪಾಲಖರ್ಚು ಬೇರೆ.

ಪತ್ತೆ- ಡಾ. ಎಸ್. ಆರ್. ಕಿತ್ತೂರ. V D.

ತಾಲನಿವಾಸ- ಶಾಂತವೀರ, ಧಾರವಾಡ. ಪಶುಸಂಜೀವಿನಿ ಔಷಧ, ಧಾರವಾಡ.

ಅಮದಾಬಾದ ತುರಂಗದಿಂದ ದೇ. ಬ ಗಣೇಶ ದಾಮೋದರ ಸಾವರಕರರವರ ಬಿಡುಗಡೆಯಾಯಿತು. ಈಗ ಅವರು ಪೂರ್ಣಬೇನೆಯಿಂದ ಬಳಲುತ್ತಿರುವರು.

ದಿಂದಿಗಾಲದ ೭ ಸ್ಪ್ರ, ಕೀ. ರು ಜಾಮೀನು ಕೊಡದೆ ತುರಂಗ ಕಂಡರು.

ಅಮದಾಬಾದದ ವಿ. ಮಹಮ್ಮದಲ್ಲಿ ಅಕಾರ ಅಲ್ಲಿಯವರಿಗೆ ೧೨ಳ ಅರಸ್ಪರ್ಯ, ಒಂದು ವರ್ಷದ ಶಿಕ್ಷೆಯಾಯಿತು.

ಸೂಚನೆ- ಹಾಯಕೋರ್ಟ ಠರಾವು ನಾಳಿನ ಸಂಚಿಕೆಯಲ್ಲಿ ಬರುವದು. ಅನಿವಾರ್ಯವಕ್ಕಾಗಿ ಇಂದು ಕೊಡಲು ಆಗಲಿಲ್ಲವೆಂಬಕ್ಕೆ ವಿಷಾದಿಸುತ್ತೇನೆ.

ಮ್ಯಾ ಎ. ಧಾ.

ಅತ್ಯಂತ ಧಾತುಪೌಷ್ಟಿಕ ವೀರ್ಯವರ್ಧಕ ಶಕ್ತಿವರ್ಧಕ

ಕಾಮೋದ್ದೀಪಕ ಚೂರ್ಣ ಅಥವಾ ಗುಳಿಗೆಗಳು. ಕಿರಾತಪಾಕವು- ಇದು ಅಸ್ತಿಗತ ಜ್ವರದ ಮೇಲೆ ದಿವ್ಯ ಔಷಧವು ಇರುತ್ತದೆ ಬೆಲೆ ೨ರೂ ಗೆ ೧ ಬಾಟ್ಲಿ.

ಈ ಚೂರ್ಣದ ಸೇವನೆಯಿಂದ ೫ ಕಾಲದಲ್ಲಿ (ಬಾಲ್ಯಾವಸ್ಥೆಯಲ್ಲಿ) ಬಲಾತ್ಕಾರದಿಂದ ಇಂದ್ರಿಯ ಪತನವನ್ನು ಮಾಡಿ ಉಂಟಾದ ದುರ್ಬಲತೆಯನ್ನು ಹೋಗಲಾಡಿಸಿ ಸ್ಥಿರವಾದ ಬಲವನ್ನು ಉಂಟು ಮಾಡುತ್ತದೆ.೧ರೂ. ೮ ತೊಲಾ ಚೂರ್ಣ ಅಥವಾ ೧೬ ಗುಳಿಗೆಗಳು.

ರಾಮಬಾಣ ಗುಟಿಕಾ

ಪ್ಲೇಗಿನಮೇಲೆ ಇಂಥ ಔಷಧವನ್ನು ಇದರವರೆಗೆ ಯಾರು ಶೋಧಿಸಿಲ್ಲವೆಂದು ಪ್ರತಿಜ್ಞಾಪೂರ್ವಕ ಹೇಳಬಹುದು. ೧ರೂ. ೭೬ಮಾತ್ರೆಗಳು

ಜುಲಾಬಿನ ಗುಳಿಗೆಗಳು. ೧ರು. ೭೪ ಮಾತ್ರೆಗಳು

ಬಿಜ್ಜ ಹುರುಕಿನ ಮುಲಾಮಿನ ಡಬ್ಬಿಗಳು

೩ರೇ ದಿವಸಗಳಲ್ಲಿ ಗುಣಬಾರದಿದ್ದಲ್ಲಿ ಹಣವನ್ನು ಮರಳು ಕಳುಹಿಸುವೆವು ೩ ... ಕ್ಕೆ. ೧ರು

ಮೂಲವ್ಯಾಧಿಯ ...

ರಕ್ತಮೂಲವ್ಯಾಧಿ ಮೊಳಕೆಯುಳ್ಳ ಮೂಲವ್ಯಾಧಿ ಮುಂತಾದ ಯಾವತರ ... ಮೂಲವ್ಯಾಧಿಗಳನ್ನು ಒಂದುವಾರದೊಳಗಾಗಿ ಗುಣಪಡಿಸುತ್ತದೆ- ಗಿವಾರದ ಔಷಧದ ಬೆಲೆ ೩ರೂಪಾಯಿ

೧ ಹಿಂಗಾಷ್ಟಕ ಚೂರ್ಣ ೧ರು. ೧೦ ತೊಲೆ.

೧ ಸೀತೋಪಲಾದಿ ಚೂರ್ಣ ೧ರು. ೮ ತೊಲೆ

ದಂತಮಂಜನ

೧ ಡಬ್ಬಿಯ ಬೆಲೆ ೩ ಆಣೆ ೧ರು ೬ ಡಬ್ಬಿ

ಡಾ. ಎಸ್. ಎಸ್ ಹೆಬಸೂರ

ಆಯುರ್ವೇದಿಷ್ಟ ತ್ಯಾಂಡ ಬಾಯೊಕೆಮಿಸ್ಟ,

ಧಾರವಾಡ

ಸೋಲಏಜಂಟ್ಸ

ದಿ. ಕರ್ನಾಟಕ ಟ್ರೆಡಿಂಗಕಂಪನಿ ಮೋತೀತಲಾವ ರೋಡ ಧಾರವಾಡ.

ವಾಗ್ವಿಲಾಸ ಬುಕ್ ಡಿಪೋ

ಪ್ರೇಮಿಗಳು ಬೇಗನೆ ವಿ.ಪಿ.ಯಿಂದಾಗಲಿ ಕಂಟು ಒದಿ ಆನಂದಪಡೆಯಿರಿ ಗ್ರಂಥಗಳನ್ನು ಹಣ ಕಳಿಸಬೇಕು

ರಲಿ

	ರೂ. ಆ. ಪೈ.		ರೂ. ಆ. ಪೈ.
ಸಂಗೀತ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಹಾಸತಿ ಧರ್ಮ	೦–೧೨–೦
ಋಷಿಪ್ರಸಾದ ಪಠ್ಯ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧–೦–೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೬ ೧೨ ೬	ಶ್ರೀಧ ವಿಜಯ ನಾಟಕ	೧–೦–೦
ಸಂಜು ಗೋಘಾಕಥೆ	೧ ೪ ೦	ತುಕಾರಾಮ ನಾಟಕ	೦ ೪–೦
ಲಕ್ಷ್ಮಣಾ ಪ್ರತಾಪಸಿಂಹ	೧ ೬ ೦	ಶ್ರೀಧರ್ಮರಹಸ್ಯ ನಾಟಕ	೧–೦ ೦
ಕೀರ್ತನಪದ	೦ ೪ ೦	ಸಾಗ್ರಸಂಗೀತ ಮದನಮೋಹಿನಿ	೦–೧೨–೦
ಧರ್ಮನೀತಿ	೦ ೧೨ ೦		
ಸುಂದರಿ ಕುಮಾರಿ ಕೃತ	೧ ೦ ೦	ಹಿಂದ ವಿನಾಶಿ ವೈದ್ಯ ಯಂತ್ರ ಮಂತ್ರತಂತ್ರ ಸಹಿತ	೧–೮–
ಕಾಮಿನಿ ವಿಲಾಸ ಕಾದಂಬರಿ	೦ ೨೦	ಸಟೀಕ ವಿಚಾರ ಸಾಗರವೇದಾಂತ	೪–೦ ೦
ಒಂದನೇ ಭಾಗ ಕಾಯಿದೆ ಜನ್ನ ಮುಳಗುಂದಕೃತ	೬ ೦ ೦	ಬ್ರಹ್ಮಸಿಂಧು ವಚನವೇದಾಂತ	೪–೦–೦
ಭಕ್ತಿನಾಟಕ ಕಾದಂಬರಿ	೧ ೬ ೦	ಪಂಚತತ್ವ ನಿಜಗುಣ ಶಿವಯೋಗ ವಿವರ	೨ ೦–೦
ಸಾಹಿತ್ಯಪ್ರಯೋಜನ ವಿಚಾರ	[illegible]	ಸಿದ್ಧಾಂತಬಿಂದು ಪ್ರಕಾರ	೦–೮–೦
ಗ್ರಹಗಳ ಫಲವಿಚಾರ	೦–೧೨ ೦	ಸಟೀಕ ನಿಜಗುಣ ಕೈವಲ್ಯಪದ್ಧತಿ	೦–೪–೦
ಅಕ್ಷಯ ಹುಡುಗಿ	೦–೧೩–೦	ಸಟೀಕ ಸದಾಶಿವಸ್ವಾಮಿಗಳ ಕೈವಲ್ಯ	೦–೪–೦
ವೀರಶೈವಾಚಾರ	೦–೦–೦	ಶ್ರೀ ಧ ಸದಲಿಂಗಲೀಲೆ	೦–೨–೦
ಕಲ್ಪವೃಕ್ಷ ಆದುಬೇಳಿನ ಕೃತ	೦–೮–೦	ಗರ್ಭಚಿಂತಾಸಂಗೋಪನ	೦–೧೨–೦
ಸ್ತ್ರೀ ಶಿಕ್ಷಣ ಉಪದೇಶ ಸಿದ್ಧಿ ಅನುಭವಸಿದ್ಧಿ	೨ ೮–೦	ರಾಮಕೃಷ್ಣ ಪರಮಹಂಸ ಚರಿತ್ರೆ	೦ ೪–೦
ಕೋಕಶಾಸ್ತ್ರ ರತಿವಿಲಾಸ	೦–೮–೦	ಲಕ್ಷ್ಮಿಪ್ರಸ್ತಾನ	೦–೪–೦
ಸುಖಸಾಮ್ರಾಜ್ಯ	೦–೪–೦	ಬಸವಣ್ಣನವರಲೀಲಾ	೦–೩–೦
ಸಂಸಾರದಿಂದ ಸದ್ಗತಿ	೦–೦–೦	ಸಾಂಗಳಿಕ ಶಿವಜನಪದಗಳು	೦–೩–೦
ಒಪ್ಪಂದ ಭಾನು ಪಾವಟೆ ವಕೀಲ	೦–೦–೦	ಶರೀರ ಮರ್ಮಶಾಸ್ತ್ರವು	೦–೨–೦
ಮಾದ ಸರ್ವಸ್ವ ಪಾವಟೆ ವಕೀಲ	೦–೮–	ಆರೋಗ್ಯ ಜೀವನ ಪರದೇಶಿಕೃತ	೦–೮–೦
ಸಾಳಗುಂದ ಸಾಮೂತಸ್ವಾಮಿಯ ಕೈವಲ್ಯದರ್ಪಣ	೦–೪–೦	ಲಿಂಬಿಲೀಲಾನಾಟಕ ಸಂಗೀತ	೦–೦–೦
ಕಾಮರೋಗನು	೦ ೮–೦	ಸಂಗೀತ ಸಮಯಸಾರ ಪ್ಯಾಸೂರು	೦–೧೨ ೦
ಪ್ರೇಮಮಂದಿರ	೦ ೮–೦		

ಪತ್ರ ವಿ. ಆರ್. ಶಿವನಾಗಪ್ಪಾ ಕಳ್ಳಿಮರ ವಾಗ್ವಿಲಾಸ ಬುಕ್‌ಡಿಪೋ ಧಾರವಾಡ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು.

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ– ೫೦ ಸ್ಟೇಶನ್ ರೋಡ ಹುಬ್ಬಳ್ಳಿ ಶಾಖಾ– ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲಿಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್. ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಛಂದಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮ ಪೂರ ಬಿ. ಎಲ್. ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ. (ಏಜೆಂಟ ಆಫೀಸಿಯೋ)

ಚಾಲೂ ಖಾತೆಗಳು– ಶಿಲ್ಲಕು ಗಳಿಸಿದ ಹೆಗೆಯಲ್ಪಡುವವು. ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ ...

ಸೇವಿಂಗ್ಸ ಬ್ಯಾಂಕ–ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತಿ ಠೇವುಗಳು– ೨೦ ರೂಪಾಯಿಗಳಿಗೆ ಕಡಿಮೆಯಲ್ಲದ ರಕಮುಗಳು ಸ್ವೀಕರಿಸಲ್ಪಡುವವು, ಬಡ್ಡೀದರ– ೬ ತಿಂಗಳ ಮುದ್ದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬ಯಂತೆ; ೧೨ ತಿಂಗಳ ಮುದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬॥ ಯಂತೆ

ಇತರ ಕಾರ್ಯಗಳು- ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ಖರಿಸಿಕೊಡುವದು ಸರಕಾರೀ ಪ್ರಾಮಿಸರಿನೋಟ, ವಾರಬಾಂಡ, ಚೆಕ್ಕು, ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ್ ತಕ್ಕೊಂಡು ಕೊಡಕೊಳ್ಳುವದರಲ್ಲಿ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದಲ್ಲಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಸಮಕ್ಷಮದ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು,

ಮೆಸರ್ಸ ದೇಶಪಾಂಡೆ ಅ್ಯಂಡ ಕೋ ಮ್ಯಾನೇಜಿಂಗ ಏಜಂಟ್ಸ

ನಮ್ಮ ಬಾತಮಿದಾರರಿಗೆ ಸೂಚನೆ.

—(೧)—

ನಮ್ಮ ಬಾತಮಿದಾರರಲ್ಲಿ ಹಲವರು ತಮ್ಮ ಬಾತಮಿಗಳನ್ನು ಪಾಕೀಟದಲ್ಲಿ ಹಾಕಿ ಕಳಿಸುವದರಿಂದ ನಿಷ್ಕಾರಣವಾಗಿ ಹೆಚ್ಚು ಹಣವು ಖರ್ಚಾಗುವದು. ಅದ್ದರಿಂದ ಇನ್ನು ಮುಂದೆಬಾತಮಿದಾರರು ಬುಕ್ಕಪೋಸ್ಟ ಮಾಡಿಯೇ ಕಳಿಸತಕ್ಕದ್ದಾಗಬೇಕು.

ಹಲವು ಬಾತಮಿದಾರರು ಮಸ್ತು ಖರ್ಚಾಗುತ್ತಿದೆ ನಾಟಪೇಟಮಾಡಿ ಕಳಿಸುವರು. ಇಲ್ಲಿ ನಾವು ದುಪ್ಪಟ್ಟು ಚಾರ್ಜಕೊಟ್ಟು ತೆಗೆದುಕೊಳ್ಳಬೇಕಾಗುವದು.

ಈ ಎರಡು ಮಾರ್ಗಗಳು ಸರಿಯಲ್ಲವಾದ್ದರಿಂದ ನಾವು ಮೊದಲೇ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ನಾವು ನಾಟಪೇಟ ಪತ್ರಗಳನ್ನು ಸ್ವೀಕರಿಸುವದಿಲ್ಲ.

ಮ್ಯಾ. ವಿಜಯ. ಧಾರವಾಡ.

ಚಂದಾದಾರರಿಗೆ ಸೂಚನೆ.

—೦—

೧ ಸನ್ ೧೯೩೨ನೇ ಇಸವಿಯ ಚಂದಾದಾರರಿಗೆ ಇನಾಮಿನ ಪುಸ್ತಕಗಳು ರವಾನೆಯಾಗ ಹೋಗಿವೆ

೨ ಈಗ ನಾವು ಮಾಡಿದ ವ್ಹಿ. ಪಿ. ಯನ್ನು ಸ್ವೀಕರಿಸಿದ ಎಲ್ಲ ಚಂದಾದಾರರಿಗೂ ಇನಾಮಿನ ಪುಸ್ತಕವನ್ನು ಕಳುಹಿದ್ದೇವೆ

೩ ೧೯೩೨ನೆಯ ವರ್ಷದ ಯಾವ ಚಂದಾದಾರರು ವ್ಹಿ. ಪಿ. ಯನ್ನು ತಿರುಗಿ ಬಿಟ್ಟಿರುವರೋ ಅಂಥ ಚಂದಾದಾರರು ವಾರ್ಷಿಕ ವರ್ಗಣಿ ೩–೧೨–೦ ರೂ. ಗಳನ್ನು ಮನಿಯಾರ್ಡರ ಮೂಲಕ ಕಳಿಸಿದಲ್ಲಿ ಇನಾಮಿನ ಪುಸ್ತಕವು ದೊರೆಯುವದು.

೪ ಇಲ್ಲವೆ ನಾವು ಮೊದಲು ಮಾಡಿದ ವ್ಹಿ. ಪಿ. ಯನ್ನು ಚಂದಾಮನಿಯಾರ್ಡರು ಮಾಡಿದರೆ ೧೯೩೨—೧೯೩೩ ಸಾಲಿನ ಎರಡೂ ಪುಸ್ತಕಗಳು ದೊರೆಯುವವು.

ಮ್ಯಾ. ವಿಜಯ ಧಾರವಾಡ

ನೋಟೀಸಿನದರಗಳು.

ತಿಂಗಳಕಾಲಮಿನ ಎಂಟುಸಾಲುಗಳಿಗೆ ಒಂದೂಕಾಲು ರೂಪಾಯಿ; ಮುಂದೆ ಪ್ರತಿಯೊಂದು ಸಾಲಿಗೆ ಎರಡು ಆಣೆ; ಇಂಗ್ಲಿಷ ಪ್ರತಿಯೊಂದು ಸಾಲಿಗೆ ಆರು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಏಳು ಆಣೆ. ದಬ್ಬೆಕಾಲಮಿನ ಒಳಗೆ ನಮ್ಮ ಬಾರ್ಜುಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ವಾರ್ತಾಹರ ಪ್ರೆಸಿನಲ್ಲಿ ಛಾಪಿಸಿ, ಪ್ರಸಿದ್ಧ ಮಾಡಿದರು.

ವಿಜಯ

ನಿತ್ಯ ಪತ್ರ

— ಸ್ಥಾಪಕರು —
ಶ್ರೀ. ತಿ. ಆ. ಅನ್ನ್ಯಾಚಾರ್ಯ ವಾಳಂಬೇಕರ
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಗುರುವಾರ ತಾ|| ೭ನೇ ಸೆಪ್ಟಂಬರ ೧೯೨೨. (ಸಂಚಿಕೆ ೨೫೫

ವಿಜಯದ ಸಂಪಾದಕರ ಬಿಡುಗಡೆಯು ಇಂದೇ ೮ ಲ|| ಗಂಟೆಗೆ ಆಗುವದು.

ದೇ|| ಭ. ವರದರಾಜುಲು ನಾಯಡುರವರ ಪ್ರತಿಜ್ಞೆ

—oo—

ಒಂದು ಕಾಸು ಸಹ ತೆರಿಗೆ ಕೊಡೆನು.

ಇತ್ತಲಾಗ ಜೇಲಿನಿಂದ ಬಿಡಲ್ಪಟ್ಟ ತಮಿಳು ನಾಡಿನ ಮುಖಂಡರಾದ ಡಾಕ್ಟರ್ ವರದರಾಜುಲು ನಾಯುಡುರವರು ಸೇಲಮಿನಲ್ಲಿ ಒಂದು ಭಾಷಣ ಕೊಟ್ಟರು. ಅದರಲ್ಲಿ ಕಾಂಗ್ರೆಸಿನ್ನ ಪರವಾಗಿ ಮಾ... ಪಾರ್ಟಿನ ಅಪ್ಪಣೆಯಾಗುವ ವರೆಗೆ ನಾವು ಪಕ್ಷಗಳಲ್ಲಿ ಹೊಸ ಕಮಿಟಿಗಳನ್ನು ಸ್ಥಾಪಿಸಿ, ಮೆಂಬರನ್ನು ಸೇರಿಸಿ ತಿಲಕ ಸ್ವರಾಜ್ಯ ನಿಧಿಯನ್ನು ಕೂಡಿಸಬೇಕೆಂದೂ ಇದಲ್ಲದೆ ನಮ್ಮ ಮುಂದಿನ ಹಕಿಗೆಯು ಹೊಂದಿದನೆಂದೂ ಹೇಳಿದರು. ಮಹಾತ್ಮಾಜಿಯವರು ಹಿಂದೂ ದೇಶದ ಧರ್ಮ ಸ್ವರೂಪರೆಂದೂ ಅವರನ್ನು ಜೈಲಿನಲ್ಲಿಟ್ಟದ್ದರಿಂದ ಧರ್ಮಕ್ಕೆ ಬಂಧನವಾಯಿತೆಂದೂ ಅದರಿಂದ ಯಾವತ್ತೂ ಜನರನ್ನೂ ಈ ಸರಕಾರದೊಡನೆ ಸಹಕರಿಸಬಾರದೆಂದೂ ಹೀಗೆ ಮಾಡಿ ಒಂದು ಕೈಯ್ಯಾದರೂ ಕೊಟ್ಟರೆ ತಾನು ಮಹಾತ್ಮಾಜಿಯವರ ಬಂಧನಕ್ಕೆ ಸಹಾಯಕನಾಗಿ ಅಧರ್ಮವನ್ನು ಮಾಡಿದ ಹಾಗಾಗುವದೆಂದೂ ಹೇಳಿದರು. ಅದರಿಂದ ತಾನು ವರ್ಷಕ್ಕೆ ೧೨೦೦ ರೂಪಾಯಿ ಮೇಲೆ, ತೆರಿಗೆ ಕೊಡಬೇಕಾದರೂ ಮಹಾತ್ಮಾಜಿಯವರನ್ನು ಬಿಡುವವರೆಗೆ ಅದರಲ್ಲೊಂದು ಕಾಸು ಕೂಡ ಕೊಡಲಾರೆನೆಂದೂ ಇದರಿಂದ ನನ್ನ ಸ್ಥಿತಿಯು ಎಂಥಾ ಸ್ಥಿತಿಗೆ ಬಂದರೂ ಚಿಂತೆಯಿಲ್ಲವೆಂದೂ ಘೋರ ಪ್ರತಿಜ್ಞೆ ಮಾಡಿದ್ದಾರೆ.

—

ಬಾಬು ಘೋಷರ ಅಗಾಧ ಗಣಿತಜ್ಞಾನ

—o—

ಮದ್ರಾಸಿನ ಸುಪ್ರಸಿದ್ಧ ಗಣಿತಜ್ಞ ರಾಮಾನುಜನ ಸುಪ್ರಸಿದ್ಧ ಜೀವಿತವು ಸಮಾಪ್ತಿಯಾಯಿತಷ್ಟೆ! ಈಗ ಬಾಬು ಸೋಮೇಶಚಂದ್ರ ಘೋಷ ಎಂಬ ಅದ್ಭುತ ಗಣಿತಜ್ಞನು ಪ್ರಖ್ಯಾತನಾಗಿ ಈಗ ತಾನೇ ಲಂಡನ ಪಟ್ಟಣಕ್ಕೆ ಹೋಗಿರುತ್ತಾನೆ. ಅತನ ಅದ್ಭುತ ಗಣಿತ ಶಾಸ್ತ್ರಜ್ಞತೆಯನ್ನು ಅಲ್ಲಿಯ ಕೇಂಬ್ರಿಜ್ ನ ಪ್ರೊಫೆಸರರು ಪ್ರತ್ಯಕ್ಷ ಪರೀಕ್ಷಿಸಿ, ಇಂಥ ಅದ್ಭುತವಾದ ಜ್ಞಾನವು ಲಂಡನ ಪಟ್ಟಣಕ್ಕೆ ಇದುವರೆಗೆ ಯಾರೂ ಬಂದಿಲ್ಲವೆಂದು ಹೇಳತೊಡಗಿರುತ್ತಾರೆ. ೮ ೧೦ ಅಂಕೆಗಳ ಕ್ಲಿಷ್ಟವಾದ ಗುಣಾಕಾರ ಭಾಗಾಕಾರಗಳನ್ನು ಈತನು ಬಾಯಿಂದಲೇ ಲೆಕ್ಕಮಾಡಿ ಹಾಗು ತಪ್ಪದಂತೆ ಸ್ವಲ್ಪ ಕಾಲದಲ್ಲಿಯೇ ಹೇಳುತ್ತಿರುವನು. ಅಷ್ಟೇ ಅಲ್ಲದೆ ಎಷ್ಟೋ ಹಿಂದಿನ ವರ್ಷಗಳಲ್ಲಿ ಯಾವ ತಾರೀಖಿಗೆ ಯಾವ ವಾರವು ಬಂದಿತ್ತೆಂಬುದನ್ನು ಸಹ ಸರಿಯಾಗಿ ಹೇಳುತ್ತಿರುವನು. ಈತನು ಕೇವಲ ೨೩ ವಯಸ್ಸಿನವನು ಸ್ವಯಂಪಾಕಿಯೂ ಯೋಗಮಾರ್ಗ ಸಂಪನ್ನನೂ ಆಗಿರುವನು.

—

ಬಿಜಾಪುರ ಮ್ಯುನಿಸಿಪಾಲಿಟಿಯು ಗ್ರ್ಯಾಂಟು ರದ್ದು ಮಾಡುವದು!

— (o) —

ಹೋದ ರಾಷ್ಟ್ರೀಯ ಸಪ್ತಾಹದ ಕಡೆಯ ದಿವಸದ ಜಾಲಿಯನ್‌ವಾಲಾ ಸ್ಮಾರಕದ ದಿವಸ ಬಿಜಾಪುರ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡ ಚೇರಮನರಾದ ರಾ|| ನಾಗಪ್ಪ ಶೆಟ್ಟಿ ಅಲೂರು ಇವರು ರಜದ ದಿವಸವೇ ಮೆಂಬರ ಬಾಯಿ ಸಮ್ಮತಿಯಿಂದ ಮುನಿಸಿಪಾಲ ಶಾಲೆಗಳಿಗೆ ರಜಾ ಕೊಟ್ಟರು! ಕೂಡಲೇ ಮುನಿಸಿಪಾಲಿಟಿಯು ಆ ಶಾಲೆಗಳ ಸಲುವಾಗಿ ಅಧಿಕಾರಿಗಳ ಸೈನ್ಯ ತೆಗೆದು ಸರಕಾರದವರು ಈ ಸಂಬಂಧ ಮಾಡಿ "ಶಾಲೆಗಳ ಕೆಲಸವು ಯೋಗ್ಯ ರೀತಿಯಲ್ಲಿ ನಡೆಯದ್ದರಿಂದ ೧೨೦೦ ರೂಪಾಯಿಯ ವಾರ್ಷಿಕ ಗ್ರ್ಯಾಂಟನ್ನು ರದ್ದು ಮಾಡಿದ್ದೇವೆಂದು ತಿಳಿಯತಕ್ಕದ್ದು" ಎಂಬರ್ಥದ ಪತ್ರವನ್ನು ಕಳಿಸಿರುವರು!

ಸರಕಾರದ ಈಗಯುಕ್ತ ಹುಕುಮ ಪಡಾ ಧಮಕಿಯನ್ನು ಲಕ್ಷ್ಯಕ್ಕೆ ತಂದು ಲೋಕಪ್ರತಿನಿಧಿಗಳಾದ ಮೆಂಬರರು ಮಾಫಿ ಬೇಡುವರೆಂಬ ಕಲ್ಪನೆಯು ಸಹ ಹಾಸ್ಯಾಸ್ಪದವೇ. ಬಡು ಜನರಿಗೆ ಖಾತ್ರಿಯಿರುವದರಿಂದ, ಅದರ ಬಗ್ಗೆ ವಿಶೇಷ ಚರ್ಚೆಯಿಲ್ಲ. ಆದರೆ ಕೆಲವು ಮೆಂಬರರ ಮನಸ್ಸಿನಲ್ಲಿ ಗ್ರ್ಯಾಂಟಿನ ದುಡ್ಡನ್ನು ಹೇಗೆ ಭರ್ತಿಮಾಡಬೇಕೆಂಬ ಬಗ್ಗೆ ಚಿಂತೆ ಹತ್ತಿರುವದೆಂದು ತಿಳಿಯುತ್ತದೆ.

ವಸ್ತುತಃ ಬೀದಿಗಳಲ್ಲಿ ದೀಪ, ಶಾಲೆಗಳಲ್ಲಿ ಹುಡುಗರಿಗೆ ಅಕ್ಷರ ಗುರ್ಬ, ದವಾಖಾನೆಯಲ್ಲಿ ರೋಗಿಗಳಿಗೆ ೧ ಡೋಜು ಔಷದ ಇಷ್ಟು ಸಿಕ್ಕರೆ ಮುನಿಸಿಪಾಲಿಟಿಯಲ್ಲಿ ವಾದಂಕಾಯಿತು! ಅದಷ್ಟು ಮಿತವ್ಯಯದಿಂದ ಈ ಕೆಲಸಗಳನ್ನು ಮಾಡಿಸಿದರೆ ಶಿರ್ಶಿ ಮ್ಯುನಿಸಿಪಾಲಿಟಿಯ ದಿವಾಳಿ ಹೊರಡುವ ಸಂಭವವಿಲ್ಲ! ಇವಲ್ಲದೆ, ಮ್ಯುನಿಸಿಪಾಲಿಟಿಯ ಮತ್ತು ಶಿರ್ಶಿ ಊರಿನ ಮಾನಾಭಿಮಾನಕ್ಕಾಗಿ ಮುನಸಿಪಲ್ ನೌಕರರು ಹಲ ಕೆಲವು ಕಡಿಮೆ ಪಗಾರ ತಕ್ಕೊಳ್ಳಲಿಕ್ಕೆ ರಾಜೀ ಆಗಬಹುದು. ಮೇಲಾಗಿ ಅಲ್ಪಸ್ವಲ್ಪ ತೆರಿಗೆ ಯೇರಿಸಿದರೂ ಜನರು ಕೊಡಲು ಖುಶಿಯಾಗಬಹುದು. ಇಷ್ಟರ ಮೇಲೂ ಸರಕಾರದವರು, ಮುನಿಸಿಪಾಲಿಟಿಯನ್ನು ಡಿಸಮಿಸ್ ಮಾಡಿದರೆ ಸ್ಥಾನಿಕ ಸ್ವರಾಜ್ಯದ ಅನುಭವಸ್ತೊಂದು ಬಂದಂತಾಯಿತು.

ಆದ್ದರಿಂದ. ಕೇವಲ ೮೦೦೦ ರೂಪಾಯಿಗಳಿಗಾಗಿ ಸರಕಾರದ ಮಾಫಿ ಬೇಡಿ ಅಖಿಲಭಾರತದಲ್ಲಿ ಎಲ್ಲಿಯೂ ಆಗದಂಥ ಕೆಲಸವನ್ನು ಮಾಡಿ ತಮ್ಮ ಸ್ವಾಭಿಮಾನ ಸಂಗಡಲೇ ಶಿರ್ಶಿ ಶಹರದ ಅಭಿಮಾನಕ್ಕೆ ಕಳಂಕ ಹಚ್ಚಿಸಬಾರದೆಂಗೇ ನನ್ನ ಆಗ್ರಹದವಿನಂತಿಯಿದೆ. ಈ ವಿಚಾರಣೆ ಬಗ್ಗೆ ಸೋಮವಾರ ಕೂಡುವ ಜನರಲ ಕಮಿಟಿಯಲ್ಲಿ ಬಹಳ ಅಭಿಮಾನಯುಕ್ತ ನಿರ್ಣಯವೇ ಆಗತಕ್ಕದ್ದು. ಅದರ ಮೂಲಕ ಶಿರ್ಶಿಯ ಎಷ್ಟು ಆರ್ಥಿಕ ಹಾನಿಯಾದರೂ ಅಡ್ಡಿಯಿಲ್ಲ. ಮುಂದೆ ತಿಳಿಸುವೆನು.

ಒಬ್ಬ ತೆರಿಗೆದಾರ.

......

ಕರ್ನಾಟಕ ವೈಭವಕಾರರ ಖಟ್ಲೆ

—೦—

ಕರ್ನಾಟಕ ವೈಭವಕಾರರ ಖಟ್ಲೆಯು ನಾಲ್ಕನೇ ತಾರೀಖು [illegible] ಸಾಹೇಬರವರ ಕೋರ್ಟಿನಲ್ಲಿ ನಡೆಯಿತು. ವೈಭವಕಾರರಿಗೆ ಕೂಡಲು ಖುರ್ಚಿಯು ಕೊಡಲ್ಪಟ್ಟಿತ್ತು. ಪ್ರೋ. ಇನಸ್ಪೆಕ್ಟರರು ವೈಭವದಲ್ಲಿಯ ಕೆಲವು ಲೇಖಗಳನ್ನೋದಿ ತೋರಿಸಿದರು. ವೈಭವಕಾರರು ಈಗ ಏನೂ ಹೇಳಲಾರೆನೆಂದು ಹೇಳಿದ ಬಳಿಕ ಖಟ್ಲೆಯು ಇನ್ನೊಂದು ಮುಂದಕ್ಕೆ ಬಿದ್ದಿದೆ.

ಮುಳಸೀ ಸತ್ಯಾಗ್ರಹಿಗಳ ಬಂಧನ.

—೦—

ಮುಳಸೀ ಸತ್ಯಾಗ್ರಹದಲ್ಲಿ ಮುಖಂಡರಾದ ದೇ. ಭ. ಪಿ. ಎಮ್. ಬಾಪಟರವರನ್ನು ಸಂಗಡ ೨೩ ಸತ್ಯಾಗ್ರಹಿಗಳನ್ನು ಕಳೆದ ೨ನೇ ತಾರೀಖಿನ ದಿವಸ ಸತ್ಯಾಗ್ರಹ ಸಮಯದಲ್ಲಿ ಬಂಧಿಸಿದರು. ಬಂಧಿಸಿದವರಲ್ಲಿ ಇಬ್ಬರು ವೃದ್ಧ ಸ್ತ್ರೀಯರೂ ಇರುವರಾಗಿ ತಿಳಿಯುತ್ತದೆ.

ಸರಸ್ವತೀ ಧರ್ಮಾರ್ಥ ವಿದ್ಯಾಪ್ರಸಾರಕ ವಾಚನಾಲಯ ಹುಬ್ಬಳ್ಳಿ,

ಇದುವರೆಗೆ ಹುಬ್ಬಳ್ಳಿಯಲ್ಲಿ ಸರಸ್ವತಿ ಧರ್ಮಾರ್ಥ ವಿದ್ಯಾಪ್ರಸಾರಕ ವಾಚನಾಲಯ ಮತ್ತು ವಿದ್ಯಾರಣ್ಯ ವಾಚನಾಲಯ ಎಂಬೀ ಎರಡು ವಾಚನಾಲಯಗಳು ಒಳ್ಳೇ ಆಸ್ಥೆಯಿಂದ ಲೋಕಶಿಕ್ಷಣ ಕಾರ್ಯವನ್ನು ಕೈಕೊಂಡು ಇಲ್ಲಿಯವರೆಗೆ ಸಾಗಾಣಿಸಿರುವವು. ಆದರೆ ಇದಕ್ಕೂ ವಿಶಿಷ್ಟವಾದ ರೀತಿಯಿಂದ ಜನತೆಯ ಸೇವೆಯನ್ನು ಮಾಡಲಿಕ್ಕೆ ಟೊಂಕಕಟ್ಟಲುಬೇಕು. ಜನರ ಉತ್ಕಟೇಚ್ಛೆಯಿದ್ದದ್ದನ್ನು ಮನಗಂಡು ನಾವು ನಿಯೋಜಿತ ಮಂಡಲದ ಪರವಾಗಿ ಈ ಎರಡೂ ವಾಚನಾಲಯಗಳು, ಇನ್ನು ಮುಂದೆ ಸಂಯುಕ್ತವಾಗಿಯೇ ನಡೆಯುವವೆಂದು ಸರ್ವರಿಗೂ ಸಾರಿ ಹೇಳುತ್ತೇವೆ.

ವಿಚಾರನಿಶ್ಚಯಗಳು.

೧ ಈ ಸಂಯುಕ್ತ ಸಂಸ್ಥೆಯು ಇನ್ನು ಮುಂದೆ "ಶ್ರೀ, ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ" ವಾಚನಾಲಯವೆಂಬ ಹೆಸರಿನಿಂದಲೇ ಶ್ರೇಯವನ್ನು ಪಡೆಯಲಿಚ್ಛಿಸುವದು

೨ ಕಾರ್ಯ ನಿರ್ವಾಹಕ ಮಂಡಲದಲ್ಲಿ ದ್ವಾದಶ ಸಭಾಸದರ ಸಮಾವೇಶವಾಗುತ್ತದೆ

೩ ಈ ಮಂಡಲದ ಪರವಾಗಿ ಶ್ರೀಮನ್ ಅನಂತರಾವ ದೇಸಾಯಿ ವಕೀಲ ಇವರು ಅಧ್ಯಕ್ಷರಾಗಿಯೂ, ಡಾ, ಹುಸೇದರವರು ಉಪಾಧ್ಯಕ್ಷರಾಗಿಯೂ ನಿಯೋಜಿಸಲ್ಪಟ್ಟರು.

೪ ಈ ಮಂಡಲದಲ್ಲಿಯೇ ಈರ್ವರು ಕಾರ್ಯನಿರ್ವಾಹಕರಾಗಿ ಆರಿಸಲ್ಪಟ್ಟರು.

೫ ಸಾರ್ವತ್ರಿಕರೀತಿಯಲ್ಲಿ ತಾ|| ೧೦-೯-೨೩ ನೇ ದಿವಸ ನಾಗರೀಕರ ಸಭೆಯು ಕಲೆತು ಪುನರ್ಘಟನೆಯನ್ನು ಕೈಕೊಳ್ಳತಕ್ಕವರಿದ್ದಾರೆ. ಅದಕ್ಕೋಸ್ಕರವೇ ಆ ಹೊತ್ತು ಸರ್ವರು ಎರಡು ಘಂಟೆಗೆ "ಸರಸ್ವತಿ" ನಿಲಯಕ್ಕೆ ಬಂದು ವಿಚಾರವಿನಿಮಯ ಮಾಡಬೇಕೆಂದು ಮಂಡಲದ ಪರವಾಗಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಸ, ಧ. ವಿ, ಪ್ರ, ವಾಚನಾಲಯದ ಕಚೇರಿಯಲ್ಲಿ—

ದಿ:೦, ಭಾ, ಶು, ೧೧ ಶಿವಪ್ಪಾ ಬಸಪ್ಪಾ [illegible]

ಸ್ತ,೧೫ನೆಯ ಹುಬ್ಬಳ್ಳಿ ಈ ಸಭೆಯ ನಿ, ಅಧ್ಯಕ್ಷ.

ಕರ್ನಾಟಕ ರಾಷ್ಟ್ರೀಯ ವಿದ್ಯಾಲಯ ಧಾರವಾಡ.

—೦—

ಈ ಸಂಸ್ಥೆಯಿಂದ ವೇ|| ಮು|| ರಾ|| ನರಸಿಂಹಾಚಾರ್ಯ ಪುಣೇಕರರವರು ಇಲ್ಲಿಗೆ ಬಂದು ಸಂಸ್ಥೆಯ ವಿಷಯಕ್ಕೆ ಮಾಹಿತಿ ಕೊಟ್ಟದ್ದು ಕೇಳಿ ಮನಸಿಗೆ ಬಹಳ ಸಮಾಧಾನವಾಯಿತು. ಸಂಸ್ಥೆಯ ವಿಷಯಕ್ಕೆ ಆದರ ಭಾವವುತ್ಪನ್ನವಾಯಿತು. ಜನರು ಭೇದಬುದ್ಧಿಯಿಲ್ಲದೆ ಸಹಾಯಮಾಡಿರುತ್ತಾರೆ. ಆದರಲ್ಲಿಯೂ ಪರಮಪೂಜ್ಯರಾದ ವೇ|| ಮು|| ಆಚಾರ್ಯರ ಸಮದೃಷ್ಟಿ, ಸಾತ್ವಿಕಸ್ವಭಾವ, ವ ರಸಿಕತೆ, ಲೋಕಸ್ವಭಾವ ಪರಿಚಯಗಳೂ ಜನರ ಮನಸ್ಸಿನಮೇಲೆ ಬಹಳ ಪರಿಣಾಮವನ್ನುಂಟುಮಾಡಿದುವು. ೧೫-೬-೨೩

ಕೆ, ಎಂ. ಬೆಳವಣಕಿ.

ರಾಣೇಬಿನ್ನೂರ ವೃತ್ತಾಂತ.

—೦—

೧ ಮೊದಲೇ ಗೊತ್ತಾದ ಮೇರೆಗೆ ಈ ಊರಲ್ಲಿ ಶ್ರೀ, ಗಜಾನನ ಉತ್ಸವವು ವಿದ್ಯಾರ್ಥಿಗಳಿಂದ ಬಹು ಸಂಭ್ರಮವಾಗಿ ಜರುಗಿತು. ಹಾವೇರಿಯ ಶ್ರೀ, "ಸದ್ಗುರು" ಮಾಸಿಕ ಪುಸ್ತಕದ ಸಂಪಾದಕರಾದ ವೇ|| ರಾ|| ರಾ|| ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ ಮಾಸ್ತರರ ಬ್ರಹ್ಮಚರ್ಯದ ಮೇಲೆ ಪರಿಣಾಮಕಾರಕ ವ್ಯಾಖ್ಯಾನವಾಯಿತು.

೨ ಇಲ್ಲಿ ಎರಡು ವರ್ಷಗಳಿಂದ "ಚೀಫ ಆಫೀಸರ" (ಮ್ಯುನಸಿಪಾಲಿಟಿಯಲ್ಲಿ) ಕೆಲಸವನ್ನು ಒಳ್ಳೇ ಉತ್ತಮರೀತಿಯಿಂದ ಮಾಡಿದ ಮಿ, ಗೋಂವಿಯವರು, ಮ್ಯು, ಯ ಬ್ರಾಹ್ಮಣೇತರರ ತಂಟೆಯ ಮೂಲಕ ಕೆಲಸ ಮಾಡಲಿಚ್ಛಿಸುವದಿಲ್ಲೆಂದು ರಾಜೀನಾಮೆಯನ್ನು ಕೊಟ್ಟಿರುತ್ತಾರೆ. ಆ ರಾಜೀನಾಮೆಯು ಮಂಜೂರಾಗಿರುವದಂತೆ.

೩ ಇಲ್ಲಿ ಸಪ್ಟೆಂಬರ ೨ ನೇ ತಾ|| ಗೆ ಜರಗುವ ತಾಲೂಕಾ ಲೋಕಲಬೋರ್ಡ ಚುನಾವಣೆಯಲ್ಲಿ ಬ್ರಾಹ್ಮಣರೊಬ್ಬರೂ ಸಹ ಉಮೇದವಾರರಾಗಿ ನಿಂತಿರುವದಿಲ್ಲಾ. ಇದರ ದೆಶೆಯಿಂದಾ ಬ್ರಾಹ್ಮಣರನ್ನು ಅಭಿನಂದಿಸದೇ ಇರಲಾರೆವು.

೪ ಇಲ್ಲಿ ಎಲ್ಲತರದ ಖಾದಿಯು (ಪಕ್ಕಾ ಕೈನೂಲಿನದು) ವಿಪುಲವಾಗಿ ಹುಟ್ಟುತ್ತಿದ್ದು, ಧಾರವಾಡ, ಬೆಳಗಾಂವ, ಪುಣೇ ಗದಗಗೆ ಕಳಿಸಲ್ಪಡುತ್ತದೆ.

೫ ಈ ಊರಲ್ಲಿ ನೆರೆಯುವ ಧಾರವಾಡ ಜಿಲ್ಲಾ ೨ ನೇ ಪರಿಷತ್ತಿನ ಕಾಲಕ್ಕೆ ಒಂದು ದೊಡ್ಡ ಖಾದೀ ಪ್ರದರ್ಶನವಾಗತಕ್ಕದ್ದಿರುವದು.

೬ ದಸರೆಯ ಹಬ್ಬಕ್ಕೆ ಇಲ್ಲಿ ಒಂದು ನೂಲುವ ಶರ್ಯತ್ ಆಗತಕ್ಕದ್ದಿರುವದು, ಹೆಚ್ಚಿನ ನಂಬರಿನ ನೂಲು ತೆಗೆದವರಿಗೆ ಇನಾಮು ಕೊಡಲ್ಪಡುವದು.

೭ ಈ ತಾಲೂಕಿನಲ್ಲಿ ಕೈನೂಲಿನ ಪಟ್ಟೇಗಳು ವಿಫುಲವಾಗಿ ಸಿಗುವವು. ಮಗ್ಗಗಳೂ ಸಹ ಬಹಳ ಇರುವದರಿಂದ, ಧಾರವಾಡ ಜಿಲ್ಹೆಯಲ್ಲಿ ಖಾದೀ ಹುಟ್ಟುವಳೀಬಗ್ಗೆ ಹೆಸರಾಗಿರುವದು.

ರಾಣೇಬೆನ್ನೂರವಾಸಿ.

ಮಹಾತ್ಮರ ವರ್ಣನೆ.

—(೦)—

ಪದ-ವಾಟಿ

(ಆರುಹಿತವರುನಿನಗೀಈಮೂವರೊಳಗೆ) ಯೆಂಬಂತೆ

ಧನ್ಯಧನ್ಯನು ಜಗದಿಗಾಂಧಿ ಭೂಪಾ | ಮಾನ್ಯಮಾನ್ಯನು ನೀನುರಾಷ್ಟ್ರಕುಲದೀಪಾ||ಪ|| ಹಿಂದುದೇಶದಕಷ್ಟ ಚನ್ನಾಗಿನೀನರಿತು | ಮುಂದಸಹಕಾರಬೀರಿದಿನ ಕಲಜನಕೆ | ಸ್ವಾದೀನಮಯಂಜಗತ್ಪ್ರಾಗಳಿಬೇಕೆಂದು | ಬೋಧಿಸಿದಮಹಾಮಹಿಮಪುಣ್ಯಪುರುಷಾ ||೧|| ಲೋಕಮಾನ್ಯರಕಾಂಕ್ಷ ಪೂರೈಸಲುಜಗ | ದೇಶವೀರನೀಭಾರತಾಂಬೆಯೊಳುಪುಟ್ಟಿ | ಶಾಕುಮನುಜರಸಂಗಸಾಕುಸಾದಕೆನ್ನುತಲಿ | ಲೋಕದಲಿತಂಗುರುವನಾರಿದಮಹಾತ್ಮಾ ||೨|| ಹಿಂಸೆನಮಾಡಲುಬೇಡ | ಸುರೆಯಸೇವಿಸಬೇಡ | ಅಸಮರಾದತತ್ವನುರಿಯಬೇಡ | ದೇಶಸೇವೆಮಾಡಿ ಮಾತೃಭಕ್ತಿಯತೋರಿ | ಹೊಂದು ಸದ್ಗತಿಯೆಂದುಸುರಿದನುಮಹಾತ್ಮಾ ||೩||

—ಸಾಧುಸೇವಕ—

ಮುಂಬಯಿ ಸೆಂಟ್ರಲ್ ಕೊ ಒಪರೇಟಿವ್ ಇನ್‌ಸ್ಟಿಟ್ಯೂಟ.

ಮುಂಬಯಿ ಪ್ರಾಂತಿಕ ಸಹಕಾರಿ ಪರಿಷತ್ತು ೧೯೨೨.

ಸರಕ್ಯುಲರ ನ. ೧.

ರವಿವಾರ ತಾ|| ೩೦ ಜುಲೈ ೧೯೨೨ ಈ ದಿವಸ ಮುಂಬಯಿಯಲ್ಲಿ ನೆರೆದ ಕಾನ್ಫರನ್ಸ ಕಮಿಟಿಯವರು ಠರಾಯಿಸಿರುವ ಮೇರೆಗೆ ಈ ವರ್ಷದ ಪ್ರಾಂತಿಕ ಸಹಕಾರಿ ಕಾನ್ಫರನ್ಸು ಬರುವ ದಶಂಬರ ತಿಂಗಳ ತಾ|| ೯, ೧೦, ೧೧, ಈ ದಿವಸಗಳಲ್ಲಿ ನೆರೆಯಬೇಕಾಗಿ ನಿಶ್ಚಿತವಾಗಿರುವದು. ಸಂಘಗಳು, ಸಹಕಾರಿಗಳು ಮತ್ತು ಸಹಕಾರದಲ್ಲಿ ಪ್ರೀತಿಯುಳ್ಳ ಇತರರು ಈ ತಿಂಗಳ ಅಂತ್ಯದೊಳಗಾಗಿ ಕಾನ್ಫರನ್ಸ ಚರ್ಚಿಸಬೇಕಾಗಿ ತಮಗೆ ಕಂಡ ವಿಷಯಗಳನ್ನು ಬರೆದು ತಿಳಿಸಬೇಕಾಗಿ ವಿನಂತಿಯದೆ. ಕಾನ್ಫರನ್ಸ ಕಮಿಟಿಯ ಎರಡನೆಯ ಸಭೆಯು ಸಪ್ಟಂಬರ ತಿಂಗಳ ಮೊದಲನೇ ವಾರದಲ್ಲಿ ಕೂಡ ತಕ್ಕದ್ದಿದ್ದು ಆ ಕಾಲಕ್ಕೆ ಚರ್ಚಿಸತಕ್ಕ ವಿಷಯಗಳ ಯಾದಿ ಮಾಡಲ್ಪಡುವದು. ಮತ್ತು ಆ ನಂತರ ಬೇಗನೇ ಆಯಾವಿಷಯಗಳಮೇಲೆ ಮುದ್ದೆಗಳನ್ನು ತೆಗೆಯುವ ಕುರಿತು ವಿಷಯಗಳಯಾದಿಯು ಪ್ರಸಿದ್ಧಿಸಲ್ಪಡುವದು.

ಮುಂಬಯಿ. ೮-೮-೧೯೨೨.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟಂಬಿಕರಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ, ಮಾರಿಕಾ, ವಟಿಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯುಪಯುಕ್ತ ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹವಿಟ್ಟು ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸುವದರಿಂದ ಕಾಲರಾ ಬೇನೆಯು ಎಂದೂ ಬರಲಾರದು.

ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ

ಕಾಲರಾಪಿಲ್ಸ- ೨೫ ಗುಳಿಗೆಗೆ ೦—೧೨—೦ ರೂ, ೧೦೦ ಕ್ಕೆ ೨-೮-೦ ರೂ, ಟಪಾಲ ಖರ್ಚುಬೇರೆ.

ಕ್ಲೋರೋಡಾಯಿನ್- ಬಾಟ್ಲಿ ಒಂದಕ್ಕೆ ೦—೧೨—೦ ರೂ, ಟಪಾಲಖರ್ಚು ಬೇರೆ,

ಪ್ಲೇಗ ಪ್ರತಿಬಂಧಕಗುಳಿಗೆ- ೨೫ ಕ್ಕೆ ೧-೦-೦ ರೂ, ೧೦೦ ಕ್ಕೆ ೩-೦-೦ ರೂ ಟಪಾಲಖರ್ಚು ಬೇರೆ.

ಪತ್ತೆ:- ಡಾ, ಎಸ್. ಆರ್. ಕಿತ್ತೂರ. V D.

ಕಾರಿನಪಿಕಾಸ- ಶಾಂತವೀರ, ಧಾರವಾಡ.

ಪಶುಸಂಜೀವನಿ ಶೋಧಕ. ಧಾರವಾಡ.

ಹಾವು ಕಚ್ಚಿದವರಿಗೆ ಸುಲಭ ಔಷಧ

—೦—

ವಿಷ ಸರ್ಪದಿಂದ ಕಚ್ಚಲ್ಪಟ್ಟವರಿಗೆ ೫ ತೊಲಿ ಹೊಗೆಸೊಪ್ಪನ್ನು ೧೦ ತೊಲಿ ನೀರಿನಲ್ಲಿ ಕಲಿಸಿ, ನೀರಿನಲ್ಲಿ ಹೊಗೆಸೊಪ್ಪು ಚನ್ನಾಗಿ ನೆನೆದ ತರುವಾಯ ಸೊಪ್ಪನ್ನು ಕಿವಿಚಿ ಹೊರಕ್ಕೆ ತೆಗೆದು ಹಾಕಿಬಿಟ್ಟು ಶೋಧಿಸಿಕೊಂಡನೀರನ್ನೆಲ್ಲಾ ಕುಡಿಯಬೇಕು. ಸ್ಮೃತಿತಪ್ಪಿ ಬಾಯಿಬಾರದಂತೆ ಇದ್ದರೆ ಮೂಗಿನ ದ್ವಾರದಿಂದ ಹೊಯ್ಯಬೇಕು. ನೀರು ಒಳಕ್ಕೆ ಸೇರಿದ ೫ ನಿಮಿಷಗಳಲ್ಲಿ ವಾಂತಿಗೆ ಆರಂಭವಾಗುವುದು. ಆ ವಾಂತಿಯಲ್ಲಿ ವಿಷವು ಕಳೆದು ಹೋಗುವುದು. ಒಂದು ಗಂಟೆಯೊತ್ತಿನಲ್ಲಿ ಆರೋಗ್ಯವಾಗುವುದು. ಹೊಗೇಸೊಪ್ಪಿನ ತೋಟಕ್ಕೆ ನಾಗರ ಹಾವು ನುಗ್ಗುವುದೇ ಇಲ್ಲ. ಹಾವಿನ ವಿಷಕ್ಕೆ ಅತ್ಯುತ್ತಮ ಪರಿಹಾರಕ ಮೂಲಿಗೆಯೆಂದು ಹೈದರಾಬಾದಿನ ಹಕೀಂ ಮಹಮ್ಮದ್ ಯೂನಿಸ್‌ರವರು “ ಪ್ರಾಕ್ಟಿಕಲ್ ಮೆಡಿಸಿನ್ ” ಎಂಬ ಪತ್ರಿಕೆಗೆ ಬರೆದಿರುತ್ತಾರೆ.

ಸಾಭಾರ ಸ್ವೀಕಾರ

ಆತ್ಮೋದ್ಧಾರ ಗ್ರಂಥಮಾಲೆಯ ಪ್ರಥಮ ಪುಷ್ಪವಾದ ಸಾಕ್ರೆಟಿಸ ಚರಿತ್ರವು ಮುಟ್ಟಿದೆ. ವಾರ್ಷಿಕ ವರ್ಗಣಿ ೧-೧೨-೦ ರೂ. ದೊರೆಯತಕ್ಕ ಸ್ಥಳ ವಾಮನ ಅನಂತ ಹೊನ್ನಿ ರಾ. ತಾ. ಅಧ್ಯಾಪಕ ಶಿರಶಿ

ಸೂಚನೆ- ಈ ಮೊದಲು ಪ್ರಸಿದ್ಧ ಮಾಡಿದಂತೆ ವಿಜಯದ ಠರಾವನ್ನು ಇಂದು ಕೊಡಲಾಗಲಿಲ್ಲ. ನಾಳೆಯಂತೂ ನಮ್ಮ ಸಂಪಾದಕರ ಬಿಡುಗಡೆಯ ಆನಂದ ವಾರ್ತೆ ಅದ್ದರಿಂದ ನಾಳದಿನ ಸಂಚಿಕೆಯಲ್ಲಿ ವಿಜಯದ ಮೇಲಿನ ಹಾಯಕೋರ್ಟ ಠರಾವನು ಕಾಣಬಹುದು.

ವ್ಯಾ, ವಿ, ಧಾ.

ಮೈಸೂರಲ್ಲಿ ನಿತ್ಯವೂ ಹೊರಡುವ

ಸತ್ಯವಾದಿ

—೦—

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ ರಾಜಕೀಯ, ಸಾಮಾಜಿಕ ಅರ್ಥನೀತಿ, ಮತ, ಸಾಹಿತ್ಯ ವಿಚಾರಗಳನ್ನು ಚರ್ಚಿಸುವಿಕೆ.

ಅಗ್ರಲೇಖನ, ಸಮಾಲೋಚನೆ, ಮೈಸೂರು ಇಂಡಿಯಾ ಮತ್ತು ವಿದೇಶದ ತಾತ್ಕಾಲಿಕ ವರ್ತಮಾನ ಸಂಗ್ರಹ, ಬ್ರಿಟಿಷ್ ಇಂಡಿಯಾದಲ್ಲಿಯ ಸ್ವರಾಜ್ಯ ಮತ್ತು ಅಸಹಕಾರಚಳವಳಿ, ವಿನೋದಲಹರಿ ಇತ್ಯಾದಿ ವಿಷಯಗಳನ್ನು ಒಳಗೊಂಡಿರುವದು.

ಚಂದ	ಸ್ಥಳದವರಿಗೆ.	ಪರಸ್ಥಳದವರಿಗೆ.
೧ ತಿಂಗಳಿಗೆ	೦-೮-೦.	೧-೦-೦.

ಶನಿವಾರ ಪ್ರಕಟಿಸಲ್ಪಡುವ “ ವೀಕ್ ಎಂಡ ಇಶ್ಯು ” (ವಾರಪತ್ರಿಕೆ) ಗೆ ವರ್ಷಕ್ಕೆ ಚಂದಾ ಸ್ಥಳಕ್ಕೆ ೧-೦-೦. ಪರಸ್ಥಳಕ್ಕೆ ೨-೦-೦.

ಈ ಪತ್ರಿಕೆಯಲ್ಲಿ ಜಾಹೀರಾತುಗಳ ಪ್ರಕಟನೆಯಿಂದ ವ್ಯಾಪಾರಸ್ಥರಿಗೆ ತುಂಬಾ ಲಾಭಕರ. ಎಲ್ಲೆಲ್ಲೂ ಚಾತ್ಮೀದಾರರೂ, ಏಜೆಂಟರೂ ಬೇಕು.

ವಿಳಾಸ- ಸತ್ಯವಾದಿ ಆಫೀಸ್, ಅಲವಾಲಪೇಟೆ ಮೈಸೂರ.

ಮಹತ್ವದ ಸೂಚನೆ

ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ದರಖಾಸ್ತಫಾರ್ಮ, ವಕೀಲ ಪತ್ರ

ಎಂಡಾರ್ಸಮೆಂಟ ಪತ್ರಿಕೆಗಳು

ಯೋಗ್ಯದರದಿಂದ ನಮ್ಮಲ್ಲಿದೊರೆಯುವವು.

ವ್ಯಾ. ವಿ ಧಾ.

ವಾಗ್ವಿಲಾಸ ಬುಕ್ ಡಿಪೋ.

ಪ್ರೀಯರೀ ಬೇಗನೆ ವಿ ಪಿಯಿಂದಾ ತಂಸಿ ... ಆನಂದಪಡಿಯಿರಿ ೧ನೆಯ ಆರ್ಡ್ರನ್ನು ಹಣಾ ಕಳಿಸಬೇಕು

ಇರಲಿ	ರೂ. ಆ. ಪೈ		ರೂ. ಆ. ಪೈ
ಮರಾಠಿ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಾನವ ಧರ್ಮ	೦–೧೨–೦
ಮುಸಲ್ಮಾನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧–೦–೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೦ ೧೨ ೦	ಪ್ರಭಾವಿಜಯನಾಟಕ	೧–೦–೦
ಮುಂಜು ಗೋಘಾಕಥೆ	೧ ೪ ೦	ತುಕಾರಾಮ ನಾಟಕ	೧–೪–೦
ಮಲಾಹಾರಾಣ ಪ್ರತಾಪಸಿಂಹ	೧ ೬ ೦	ಪ್ರೇಮಧರ್ಮರಹಸ್ಯ ನಾಟಕ	೧–೨ ೦
ತೊಂಗಳಪದ	೦ ೪ ೦	ಸಾಗ್ರಸಂಗೀತ ಮದನಮೋಹಿನಿ	೦–೧೨–೦
ಶ್ರೀ ಧರ್ಮನೀತಿ	೦ ೧೨ ೦	ಹಿಂದೂ ವಿನಾಶಿ ವೈದ್ಯ ಯಂತ್ರ ಮಂತ್ರತಂತ್ರ ಸಹಿತ	೧–೮–
ದಿವ್ಯ ಸುಂದರಿ ಮುದಿಯೇ ಕೃತ	೧ ೦ ೦	ಸಟೀಕ ವಿಚಾರ ಸಾಗರವೇದಾಂತ	೪–೦ ೦
ಕಾಮಬಿ ವಿಟಿತ್ಯಕಾರಸ್ಥಾನ	೦ ೬೨೦	ಜ್ಞಾನಸಿಂಧು ವಚನವೇದಾಂತ	೪–೦–೦
ಹಿಂದು ಲಾ ಕಾಯಿದೆ ಚಿನ್ನ ಮುಳಗುಂದಕೃತ	೬ ೦ ೦	ಪಂಚರತ್ನ ನಿಜಗುಣಿ ಶಿವಯೋಗ ವಿವರ	೨–೦–೦
ಅಶೋಕ ಕಾದಂಬರಿ	೧ ೬ ೦	ಸಿದ್ಧಾಂತಬಿಂದು ಪ್ರಕಾಶ	೧–೮–೦
ಸಚಿತ್ರಯಮುನಾಸನ ಪಾಪ		ಸಟೀಕ ನಿಜಗುಣಿ ಕೈವಲ್ಯಪದ್ಧತಿ	೧–೪–೦
ಸ್ವಪ್ನಗಳ ಫಲವಿಚಾರ	೦–೧೨–೦	ಸಟೀಕ ಸರ್ಪಣ್ಣಸ್ವಾಮಿಗಳ ಕೈವಲ್ಯ	೧–೪–೦
ಅನವಿ ಪಾಠ	೦–೧೨–೦	ಶ್ರೀ ಧ್ಯಾನಲಿಲಿಂಗಲೀಲೆ	೧–೨–೦
ನಿತ್ಯವ್ಯವಹಾರ	೧–೦–೦	ಗರ್ಭಿಣಿಶಿಸುಸಂಗೋಪನ	೦–೧೨–೦
ಕಲ್ಪವೃಕ್ಷ ಅರುಬೇಳಿನ ಕೃತ	೧–೮–೦	ರಾಮಕೃಷ್ಣ ಪರಮಹಂಸ ಚರಿತ್ರೆ	೧–೪–೦
ಪ್ರತ್ಯಕ್ಷಫಲಪಂಚಸಿದ್ಧಿ ಅನುಭವಸಿದ್ಧಿ	೨–೮–೦	ಲಗ್ನವಿಧಾನ	೧–೪–೦
ಕೋಕಶಾಸ್ತ್ರ ರತಿವಿಲಾಸ	೧–೮–೦	ಬಸವಣ್ಣನವರಲೀಲಾ	೦–೩–೦
ಸುಖಸಾಮ್ರಾಜ್ಯ	೧–೪–೦	ಮಂಗಳಾರತಿ ಶಿವಭಜನಪದಗಳು	೦–೩–೦
ಸಂಸಾರದಿಂದ ಸದ್ಗತಿ	೧–೨–೦	ಶರೀರ ಮರ್ಮಶಾಸ್ತ್ರವು	೨–೦–೦
ಬಸವಭಾನು ಪಾಪಟೆ ವಕೀಲ	೧–೦–೦	ಆರೋಗ್ಯ ಜೀವನ ಹರದೇಕೃತ	೦–೮–೦
ಕಾವ ಪರೀಕ್ಷಾ ಪಾವಟೆ ವಕೀಲ	೦–೮–೨	ಲಿಖಿತಲೀಲಾನಾಟಕ ಸಂಗೀತ	೧–೦–೦
ಮುಳಗುಂದಮಾತಸ್ವಾಮಿಯ ಕೈವಲ್ಯವರ್ಣಣ	೧–೪–೦	ಸಂಗೀತ ಸಮಯಸಾರ ಮೈಸೂರು	೧–೧೨ ೦
ಕಾಮದೇವ	೧ ೮–೦		
ಪ್ರೇಮಮಂದಿರ	೦–೮–೦		

ಪತ್ತೆ ಎಸ್ ಆರ್. ಶಿವನಾಗಪ್ಪಾ ಪಲ್ಲಿನರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು.

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ– ೫೦ ಸ್ಟೇಶನ್ ರೋಡ ಹುಬ್ಬಳ್ಳಿ **ಶಾಖಾ–** ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್ ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಭಂಡಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಪ. ಕೊಲ್ಹಾಪುರ ಬಿ. ಎಲ್. ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ. (ಎಕ್ಸ ಆಫೀಶಿಯೋ)

ಚಾಲೂ ಖಾತೆಗಳು– ೫೦ರೂ. ಗಳಿಂದ ತೆಗೆಯಲ್ಪಡುವವು. ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ರಂತೆ

ಸೇವಿಂಗ್ಸ ಬ್ಯಾಂಕ– ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತೀ ಠೇವುಗಳು– ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ– ೬ ತಿಂಗಳ ಮುದ್ದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬ರಂತೆ; ೧೨ ತಿಂಗಳ ಮುದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬॥ ಯಂತೆ

ಇತರ ಕಾರ್ಯಗಳು– ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ಖರಿದಿಕೊಡುವದು ಸರಕಾರೀ ಪ್ರಾಮಿಸರಿನೋಟ, ವಾರಬಾಂಡ, ಚೆಕ್ಕು, ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ್ ತಕ್ಕೊಂಡು ಕೊಡಕೊಳ್ಳುವದರಲ್ಲಿ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದಲ್ಲಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು,

ಮೆಸರ್ಸ ದೇಶಪಾಂಡೆ ಆ್ಯಂಡ ಕೋ ಮ್ಯಾನೇಜಿಂಗ ಎಜಂಟ್ಸ

ನಮ್ಮ ಬಾತಮೀದಾರರಿಗೆ ಸೂಚನೆ.

—(೦)—

ನಮ್ಮ ಬಾತಮಿದಾರರಲ್ಲಿ ಹಲವರು ತಮ್ಮ ಬಾತಮಿಗಳನ್ನು ಪಾಕೇಟನಲ್ಲಿ ಹಾಕಿ ಕಳಿಸುವದರಿಂದ ನಿಷ್ಕಾರಣವಾಗಿ ಹೆಚ್ಚು ಹಣವು ಖರ್ಚಾಗುವದು. ಆದ್ದರಿಂದ ಇನ್ನುಮುಂದೆಬಾತಮಿದಾರರು ಬುಕ್ಕಪೋಸ್ಟ ಮಾಡಿಯೇ ಕಳಿಸತ್ತಹೋಗಬೇಕು.

ಹಲವು ಬಾತಮಿದಾರರು ದುಪ್ಪು ಖರ್ಚಾಗುತ್ತೆಂದು ನಾಟಪೇಟಮಾಡಿ ಕಳಿಸುವರು. ಇಲ್ಲಿ ನಾವು ದುಪ್ಪಟ್ಟು ಚಾರ್ಜಕೊಟ್ಟು ತೆಗೆದುಕೊಳ್ಳಬೇಕಾಗುವದು.

ಈ ಎರಡು ಮಾರ್ಗಗಳು ಸರಿಯಲ್ಲವಾದ್ದರಿಂದ ನಾವು ಮೊದಲೇ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ನಾವು ನಾಟ ಪೇಟ ಪತ್ರಗಳನ್ನು ಸ್ವೀಕರಿಸುವದಿಲ್ಲ.

ಮ್ಯಾ. ವಿಜಯ. ಧಾರವಾಡ.

ಚಂದಾದಾರರಿಗೆ ಸೂಚನೆ.

—೦—

೧ ಸನ್ ೧೯೩೨ನೇ ಇಸವಿಯ ಚಂದಾದಾರರಿಗೆ ಇನಾಮಿನ ಪುಸ್ತಕಗಳು ರವಾನೆಯಾಗ ತೊಡಗಿವೆ

೨ ಈಗ ನಾವು ಮಾಡಿದ ವ್ಹಿ. ಪಿ. ಯನ್ನು ಸ್ವೀಕರಿಸಿದ ಎಲ್ಲ ಚಂದಾದಾರರಿಗೂ ಇನಾಮಿನ ಪುಸ್ತಕವನ್ನು ಕಳುಹಿದ್ದೇವೆ.

೩ ೧೯೩೧ನೆಯ ವರ್ಷದ ಯಾವ ಚಂದಾದಾರರು ವ್ಹಿ. ಪಿ. ಯನ್ನು ತಿರುಗಿ ಬಿಟ್ಟಿರುವರೋ ಅಂಥ ಚಂದಾದಾರರು ವಾರ್ಷಿಕ ವರ್ಗಣಿ ೩–೧೨–೦ ರೂ. ಗಳನ್ನು ಮನಿಯಾರ್ಡರ ಮಾಡಿದಲ್ಲಿ ಇನಾಮಿನ ಪುಸ್ತಕವು ದೊರೆಯುವದು.

೪ ಇಲ್ಲವೆ ನಾವು ಮೊದಲು ಮಾಡಿದ ವ್ಹಿ. ಪಿ. ಯನ್ನು ಚಂದಾಮನಿಯಾರ್ಡರ ಮಾಡಿದರೆ ೧೯೩೨—೧೯೩೩ ಸಾಲಿನ ಎರಡೂ ಪುಸ್ತಕಗಳು ದೊರೆಯುವವು.

ಮ್ಯಾ. ವಿಜಯ ಧಾರವಾಡ.

ನೋಟಿಸಿನದರಗಳು.

ತಿಂಗಲಕಾಲಮಿನ ಎಂಟುವಳಿಗಳಿಗೆ ಒಂದೂಕಾಲು ರೂಪಾಯಿ; ಮುಂದೆ ಪ್ರತಿಯೊಂದು ವಳಿಗೆ ಎರಡುಆಣೆ; ಇಂಗ್ಲಿಷ ಪ್ರತಿಯೊಂದು ವಳಿಗೆ ಆರು ಆಣೆ. ಇಂಗ್ಲಿಷದಿಂದ ಅವಶ್ಯ ಕನ್ನಡದಲ್ಲಿ ಹಾಕುವದಿದ್ದರೆ ಎರಡರಷ್ಟು. ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ವಾರ್ತಾಹರ ಪ್ರೇಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ವಿಜಯ

ನಿತ್ಯ ಪತ್ರ

- ಸ್ಥಾಪಕರು -
ಶ್ರೀ. ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ.

ವರ್ಷ ೩) ಧಾರವಾಡ, ಶುಕ್ರವಾರ ತಾರೀಖು ೮ನೇ ಸಪ್ಟಂಬರ ೧೯೨೨. (ಸಂಚಿಕೆ ೧೮೯

ಗೋಳೀಬಾರಿನಲ್ಲಿ ಶಿಕ್ಷೆಯಾದವರ ಬಿಡುಗಡೆ.

—೦—

೧೯೨೧ ನೇ ಜುಲೈದಲ್ಲಿ ಧಾರವಾಡದಲ್ಲಿ ಗೋಳೀಬಾರಾಯಿತು. ಮೂವರು ಸತ್ತರು. ೩೦-೪೦ ಜನರಿಗೆ ಗಾಯವಾಯಿತು. ನಿರಪರಾಧಿಗಳಾದ ೨೩ ಜನರು ತುರಂಗಕಂಡರು. ಇಷ್ಟಕ್ಕೇ ಮುಗಿಯಲಿಲ್ಲ, ಅದರ ಸಂಬಂಧದಿಂದಲೇ ಲೋಕಶಾಹಿ, ಕರ್ಮವೀರ, ಕರ್ನಾಟಕವೃತ್ತ ಪತ್ರಕಾರರು ತುರಂಗಕಂಡರು. ಆ ಸಂಬಂಧದಿಂದಲೇ, ಬೇರೆ ಆರೋಪದ ಮೇಲೆ ಗೋಳೀಬಾರಿನವರ ತೀರ್ಮಾನಗುವದರೊಳಗೆ ಇಬ್ಬರು ತುರಂಗಕಂಡರು. ಈಗೀಗ ಆ ಬಾದರಾಯಣ ಸಂಬಂಧದಿಂದಲೇ ವೈಭವಕಾರರು ವಿಚಾರಣೆಯ ಜಾಳಿಗೆಯಲ್ಲಿ ಅಡಕಿಕೊಂಡಿರುವರು. ಕ್ರಾನಿಕಲ್‍ದ ಮೇಲೆ ಖಟ್ಲೆಯು ನಡೆದಿರುವದಾಗಿಯೂ ಕೇಳಿಕೆ. ವಿಜಯದ ಮೇಲಿನ ಪ್ರಸಂಗವತೂ ಗೊತ್ತೇ ಇದೆ. ಹೀಗಾಗಿ ಧಾರವಾಡ ಗೋಳೀಬಾರವು ಹಿಂದುಸ್ಥಾನವನ್ನೆಲ್ಲ ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿತು.

ಇಂಥ ಗೋಳೀಬಾರಿನ ಪ್ರಕರಣದಲ್ಲಿ ಶಿಕ್ಷೆಯಾದವರಲ್ಲಿ ಶ್ರೀ, ಹಡಪ (ಲೋಕಶಾಹಿ ಪತ್ರದ ಸಂಪಾದಕ) ರವರು ಈ ಮೊದಲೇ ಬಿಡುಗಡೆಯಾಗಿದ್ದಾರೆ. ಶ್ರೀ, ಮಹಮ್ಮದಗವಸ ಲಂಗೋಟಿಯವರು ಮೊನ್ನೆ ಧಾರವಾಡಕ್ಕೆ ಬಂದರು. ಇಂದು (ತಾರೀಖು ೬-೮-೨೨) ಪ್ರಾತಃಕಾಲದ ಆರುಗಂಟೆಗೆ ನಮ್ಮ ಮೊದಲಿನ ಎಡಿಟರರಾದ ಶ್ರೀ, ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರ ಬಿಡುಗಡೆಯಾಯಿತು. ಅವರ ಪ್ರಕೃತಿಯು ಸಾಧಾರಣ ನೆಟ್ಟಗಿದೆ. ತೂಕವು ಮಾತ್ರ ೧೦-೮ ಪೌಂಡು ಇಳಿದಿದೆ. ಧುಳೆಯಲ್ಲಿ ಅವರು ನೆಟ್ಟಗಿದ್ದರು. ಅವರ ಪ್ರವೃತ್ತಿಯಲ್ಲಿ ಸ್ವಲ್ಪಾದರೂ ಸ್ಥಿತ್ಯಂತರವಾಗಿರಲಿಲ್ಲ. ಇನ್ನು ನಮ್ಮ ಕೆಲಸವು ತೀರಿತು. ಅವರು ಬರುವವರೆಗೆ ನಾವಾಗಲೀ, ಈ ಮೊದಲಿನ ಶ್ರೀ, ಅಡಬಡ್ಡಿಯವರಾಗಲಿ ವಿಜಯದ ಧ್ಯೇಯದಲ್ಲಿ ಸ್ಥಿತ್ಯಂತರವನ್ನು ಮಾಡಲಿಕ್ಕಿಲ್ಲವೆಂದು ಹೇಳಿದ್ದೆವು. ದಯಾಘನನಾದ ಪರಮಾತ್ಮನ ಕೃಪಾಪ್ರಸಾದದಿಂದ, ಉದಾರರಾದ ವಾಚಕವೃಂದದ ಸಹಾಯದಿಂದಲೂ ನಾವು ಕೈಕೊಂಡಕಾರ್ಯವು ಸಾಧ್ಯವಾಯಿತು. ಇದೊಂದು ಸುದೈವವು.

ಇಂದೇ ಬಹುಶಃ ಒಂದುವರ್ಷದ ಶಿಕ್ಷೆಯಾದ ಉಳಿದ ಏಳು ದೇಶಭಕ್ತರ ಬಿಡುಗಡೆಯು ಆಗಿರಬಹುದು. ಅವರೆಲ್ಲರೂ ಇಂದಿಲ್ಲ ನಾಳೆ ಬರತಕ್ಕವರಿದ್ದಾರೆ. ಇಂದು ನಮ್ಮ ಎಡಿಟರರ ಸ್ವಾಗತವನ್ನು ಸಾನಂದದಿಂದ ಮಾಡುವೆವು. ಹಾಗೂ ಇಂದೇ ಬಿಡುಗಡೆಯಾಗತಕ್ಕ ಉಳಿದವರ ಶ್ರೇಯವನ್ನು ಇಚ್ಛಿಸಿ, ಉಳಿದ ೨-೩ ವರ್ಷಗಳ ಶಿಕ್ಷೆಯಾದ ದೇಶಭಕ್ತರ ಆಯುರಾರೋಗ್ಯಗಳು ಹೆಚ್ಚಲೆಂದು ದಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸಿ, ಈ ಆನಂದಪರ ಲೇಖವನ್ನು ಮುಗಿಸುವೆವು.

ವಿಜಯದ ಸಂಪಾದಕರ ಬಿಡುಗಡೆ.

—೦—

ಗೋಳೀಬಾರಿನಲ್ಲಿ ಶಿಕ್ಷೆಯಾದ ವಿಜಯದ ಮೊದಲನೆಯ ಸಂಪಾದಕ ಶ್ರೀ. ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರನ್ನು ನಿನ್ನೆ (ತಾರೀಖು ೬-೯-೨೦) ಪ್ರಾತಃಕಾಲದ ೬ ಗಂಟೆಗೆ ಧಾರವಾಡ ಜೇಲಿನಿಂದ ಬಿಡುಗಡೆ ಮಾಡಿದರು. ಇವರೊಬ್ಬರನ್ನೇ ಇಲ್ಲಿ ತರಲು ಕಾರಣವೇನೆಂದರೆ ಧುಳೇ ಜೇಲಿನಲ್ಲಿಯ ಮುಸಂಡಿಗಳನ್ನು ಬಿಟ್ಟ ಕೂಡಲೇ ಧುಳೆಯಲ್ಲಿಯೇ ಜೈಲಿಗೆಳೆಯಬಹುದೆಂಬದಾಗಿ ಅಂಜಿ, ಧಾರವಾಡಕ್ಕೆ ತಂದಿರಬಹುದು. ಇದರಂತೆಯೇ ಲೋಕಶಾಹಿ ಪತ್ರದ ಸಂಪಾದಕರನ್ನು ಧುಳೇದಿಂದ ಮುಂಬೈಗೆ ತಂದು ಬಿಟ್ಟರು. ಈ ಮೊದಲು ಧುಳೇದಿಂದ ಧುಳೆಯಲ್ಲಿಯೇ ಬಿಡುಗಡೆಯಾದ ರಾಜಕೀಯ ಕೈದಿಯೊಬ್ಬರು ಧುಳೇದ ಮೊಲಸುಗಳನ್ನು ಬಿಚ್ಚಿದವನೇ ಹೊರಗೆಳೆದದಾಗಿ ಕೇಳಿಕೆ. ಧುಳೇದ ತುರಂಗಾಧಿಕಾರಿಗಳು ಸೌಜನ್ಯವೃತ್ತಿಯುಳ್ಳವರೆಂದು ಬಿಡುಗಡೆಯಾದ ಸಂಪಾದಕರು ಹೇಳಿರುವರು.

ವಿಜಯದ ಸಂಪಾದಕರ ಬಿಡುಗಡೆಯು ಹಾಹಾ ಅನ್ನುವದರೊಳಗೆ ಊರೆಲ್ಲ ಹಬ್ಬಿ ಜನರು ಭೆಟ್ಟಿಗೆ ಬರಹತ್ತಿದ್ದಾರೆ. ನೂರಾರು ಪ್ರಶ್ನೆಗಳು ನಡೆದೇ ಇವೆ. ಸಂಪಾದಕರು ನಗುಮುಖದಿಂದಲೂ ವಿನೋದೀ ಭಾಷಣದಿಂದಲೂ, ಜನರ ಮನರಂಜನೆಯನ್ನು ತುರಂಗ ವೃತ್ತಾಂತವನ್ನು ಹೇಳುತ್ತಿರುವದರಲ್ಲಿಯೇ ನಿನ್ನಿನ ದಿನವನ್ನು ಕಳೆದರು.

ಶ್ರೀ. ಮುದ್ಗಲಾಚಾರ್ಯ ಕೌಜಲಗೇರಿಯವರನ್ನು ಧಾರವಾಡಕ್ಕೆ ತಂದಿರುವರೆಂಬದಾಗಿ ಸುದ್ದಿಯಿತ್ತು. ಇನ್ನು ತಂದಿಲ್ಲ. ಅವರ ಬಿಡುಗಡೆಯು ಏರವಡಾ ತುರಂಗದಲ್ಲಿಯೇ ಆಗುವದಾಗಿ ತಿಳಿಯುತ್ತದೆ.

ಹನ್ನೊಂದು ತಿಂಗಳ ತುರಂಗವಾಸ.

) ಲೇಖಾಂಕ- ೧)

(ಲೇಖಕ- ಶ್ರೀ. ಅಣ್ಣಾಚಾರ್ಯ ಹೊಸಕೇರಿ.)

ಧಾರವಾಡ ಗೋಳೀಬಾರಿನ ಪ್ರಕರಣದಲ್ಲಿ ಶಿಕ್ಷೆಯಾದಂಥ ೩೩ ಜನರಲ್ಲಿ ಶ್ರೀ, ಮುದ್ಗಲಾಚಾರ್ಯ ಕೌಜಲಗೇರಿ ಇವರನ್ನು ಪ್ರಕೃತಿಯ ಅಸ್ವಾಸ್ಥ್ಯತೆಯ ನೆಪ

೩ನೇ ದಿವಸ ಧಾರವಾಡದಲ್ಲಿಯೇ ಬಿಟ್ಟು. ಉಳಿದವರನ್ನು ಅಂದೇ ರಾತ್ರಿಯ ಎರಡು (ತಾ|| ೮-೧೦-೨೧) ಗಂಟೆಯ ಸಮಯದಲ್ಲಿ ಸ್ಪೇಶಲ ಟ್ರೇನಿನಿಂದ ಎರವಡೆಕ್ಕೆ ಒಯ್ದರು. ಹುಬ್ಬಳ್ಳಿಯಲ್ಲಿ ನಮಗಾಗಿ ಸ್ಪೇಶಲ ಟ್ರೇನ ಸಿದ್ಧವಾಗಿದ್ದ ಸಂಗತಿಯು ನಮಗೆ ಮುಂದಾಗಿ ಗೊತ್ತಾಗಿತ್ತು. ಮತ್ತು ರಾತ್ರಿಯಾದ ಕೂಡಲೆ ಇಲ್ಲಿಂದ ಹೊರಡಿಸುವರೆಂದು ಮುಂದಾಗಿ ಸ್ವಪ್ನ ಬಿದ್ದಿತ್ತು. ಶಿಕ್ಷೆಯಾದನಂತರ ತುರಂಗದ ಊಟ ಮತ್ತು ತುರಂಗದ ಅರಿವೆಯನ್ನು ಕೊಡುವದು ವಾಡಿಕೆಯಾಗಿರುವದು. ಆದರೆ ಸಾಯಂಕಾಲದಲ್ಲಿ ನಮಗೆ ನಮ್ಮ ಮನೆಯ ಊಟ ತರಿಸಿಕೊಟ್ಟರು. ಮತ್ತು ನಮ್ಮ ಬಟ್ಟೆಯಲ್ಲಿಯೇ ಎರವಡೆಗೆ ಒಯ್ದರು. ಸ್ಟೇಶನಕ್ಕೆ ಹೋಗುವಾಗ ಮಳೆಯು ಹತ್ತಿದ್ದರಿಂದ, ನಡೆಯುತ್ತ ಹೋದವರು ಪೂರಾ ತೋಯಿಸಿಕೊಂಡರು. ಶ್ರೀ. ವಾಮನರಾವ ಜಾಬರ, ದಾಂಡೆ, ತಿರಮಲರಾವ ಜೋಶಿ, ಮಹಮುದಸಾಹೇಬ ಸೌದಾಗರ ಮತ್ತು ನಾನು ಧಮನಿ ಬಂಡಿಯಲ್ಲಿದ್ದದರಿಂದ ನಮಗೆ ತೋಯಿಸಿಕೊಳ್ಳಬೇಕಾಗಲಿಲ್ಲ.

ಸ್ಪೇಶಲ್ ಟ್ರೇನಿನಿಂದ ಒಯ್ಯುತ್ತಿದ್ದದ್ದು ಪೋಲೀಸ ಮತ್ತು ಜೇಲಿನ ಅಧಿಕಾರಿಸ್ಥರಿಗೆ ಉತ್ಸಾಹಯುಕ್ತವಾದ ಉತ್ಸವವಾಗಿತ್ತು. ಜೇಲಿನ ಅಧಿಕಾರಸ್ಥರು ದಾರಿಗಾಗಿ ರೊಟ್ಟಿ, ತಪ್ಪಿ ಮತ್ತು ಪಥ್ಯದ ಬುತ್ತೀ ಕಟ್ಟಿಕೊಟ್ಟಿದ್ದರು. ಆದರೆ ನಮ್ಮ ಹತ್ತರ ಸಾಕಷ್ಟು ಬುತ್ತಿ ಇದ್ದದರಿಂದ ನಾವು ಈ ಊಟವನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ದಾರಿಯಲ್ಲಿ ಬೆಳಗಾವಿ, ಮಿರಜಿ, ಕರ್ಹಾಡ ಮತ್ತು ಕೋರೆಗಾವ ಸ್ಟೇಶನಗಳಲ್ಲಿ ನೂರಾರು ಜನರು ನಮ್ಮನ್ನು ಕಾಣಲಿಕ್ಕೆ ಬಂದಿದ್ದರು. ಪುಣೆಯ ಸ್ಟೇಶನದಲ್ಲಿ ಸಾವಿರಾರು ಜನರು ಕೂಡಿದ್ದರು. ಆದರೆ ಪೋಲೀಸರು ಎರವಡೆಯ ಜೇಲಿನ ದಾರಿಯಲ್ಲಿ ಬಂಡಿಯನ್ನು ನಿಲ್ಲಿಸಿ, ನಮಗೆ ಪರಭಾರೆ ತುರಂಗದ ದಾರೀ ಹಿಡಿಸಿದರು. ನಮಗಾಗಿ ಪುಣೆಯಿಂದ ಎರಡು ಮೋಟಾರ ಲಾರಿಗಳು ಬಂದಿದ್ದವು. ನಾವು ಪರಭಾರೆ ಹೋದ ವರ್ತಮಾನ ಕೇಳಿ ಲಾರಿಗಳು ಅರ್ಧ ದಾರಿಗೆ ಬಂದು ನಮ್ಮನ್ನು ಕೂಡಿಕೊಂಡವು. ತುರಂಗಕ್ಕೆ ಹೋದ ಕೂಡಲೆ, ನಮ್ಮ ಕಾವಲುಗಾರರ ಗಿದ್ದ ೩೦-೪೦ ಜನ ಶಿಪಾಯರು ನಮ್ಮನ್ನು ಜೇಲಿನ ಅಧಿಕಾರಸ್ಥರಿಗೆ ಒಪ್ಪಿಸಿ ಪುಣೆಯ ದಾರೀ ಹಿಡಿದರು.

ತುರಂಗದ ಒಳಭಾಗವು ಅತ್ಯಂತ ಭಯಾನಕವಾಗಿತ್ತು. ಏಳೆಂಟು ಜನ ವಾರ್ಡರರು ಹತ್ತಾರು ಜನ ಶಿಪಾಯರು ಕಯ್ಯಲ್ಲಿ ಪಿಸ್ತೂಲು ಸೋಟಾ, ಹಿಡಕೊಂಡು ದುಸ್ತೈಂದು ನಿಂತಿದ್ದರು. ಒಳಗೆ ಹೋದ ಕೂಡಲೆ ನಮಗೆ ಇಬ್ಬಿಬ್ಬರಂತೆ ಸಾಲು ಹಿಡಿದು ಕೂಡ್ರಲಿಕ್ಕೆ ಹೇಳಿದರು. ಹೊರಗೆ ಇಷ್ಟು ದೊಡ್ಡ ಮನುಷ್ಯರಿದ್ದರೂ, ತುರಂಗದಲ್ಲಿ ಛತ್ರದ ಹುಳಕ್ಕಿಂತ ನಮ್ಮ ಯೋಗ್ಯತೆಯು ಕಡಿಮೆಯೆಂದು ಜಾಣ ನಟ್ಟಂತೆ ನಮ್ಮ ಅಂತಃಕರಣದಲ್ಲಿ ಅಲ್ಲೋಲ ಕಲ್ಲೋಲವಾಗುವಂಥ ಸ್ಥಿತಿಯು ಈ ಜನರ ವರ್ತನವಿತ್ತು. ನಾವು ನಮ್ಮ ಮೈ ಮೇಲಿನ ಎಲ್ಲ ಬಟ್ಟೆಗಳನ್ನು ತೆಗೆದೆವು. ಒಂದೊಂದು ಲಂಗೋಟಿಯನ್ನು ಸುತ್ತಿಕೊಂಡು, ನಮ್ಮ ಬಟ್ಟೆಗಳ ಮೊಟ್ಟೆಗಟ್ಟಿದೆವು. ಆಗ ಸಾಯಂಕಾಲದ ೬|| ಆಗಿ ಕತ್ತಲೆಯಾಗುತ್ತ ಬಂದಿತ್ತು. ಬಟ್ಟೆಗಳ ಮೊಟ್ಟೆಗಳನ್ನು ಜೇಲಿನ ಅಧಿಕಾರಸ್ಥರಿಗೆ ಒಪ್ಪಿಸಿದನಂತರ ನಮಗೆ ಒಂದೊಂದು ಹಾಸಿಗೆ ಸುರುಳಿಯು ಮುಂದೆ ನಿಲ್ಲಿಸಿದರು. ಹಾಸಿಗೆಯಲ್ಲಿ ಒಂದು ಲಂಡಜಣ್ಣ, ಕಂಬಳಿ ಅಂಗಿ, ಟೊಪ್ಪಿಗೆ, ಕೈವಸ್ತ್ರ, ಕಂಬಳಿ ಮತ್ತು ಒಂದು ಕಾತಿಯ ತರಟು ಇಷ್ಟು ಜಿನಸುಗಳಿದ್ದು ನೀರು ಕುಡಿಯುವದಕ್ಕೆ ಹಾವಿನಂಥ ಒಂದು ಪಾತ್ರೆ ಮತ್ತು ಉಣ್ಣುವದಕ್ಕೆ ಪರಿವಾಣದಂಥ ಎರಡು ಸಪಟಿನ ಪಾತ್ರೆಗಳಿದ್ದವು ಇವನ್ನು ನಾವು ತೆಗೆದುಕೊಂಡು ಬಿಡಾರದ ದಾರೀ ಹಿಡಿದೆವು. ನಮ್ಮ ಬಿಡಾರಕ್ಕೆ ಸಪರೇಟ ಎಂಬ ಹೆಸರು. ತುರಂಗದಲ್ಲಿ ಧಾಂಧಲೆ ಹಾಕಿದವರನ್ನು ಮತ್ತು ತುರಂಗದ ಕಾಯದೆಯನ್ನು ಮುರಿದವರನ್ನು ಶಿಕ್ಷೆಯ ಸ್ವರೂಪದಿಂದ ಇಲ್ಲಿಡುವರು. ಹತ್ತತ್ತರಂತೆ ಕೋಣೆಗಳುಳ್ಳ ಎಂಟು ಸಾಲುಗಳ ೮೦ ಕೋಣೆಗಳಿರುವವು. ನಮಗೆ ಕಡೆಯ ಎರಡು ಸಾಲಿನ ಕೋಣೆಗಳನ್ನು ಕೊಟ್ಟು, ಉಳಿದಿಬ್ಬರನ್ನು ಹಿಂದಿನ ಸಾಲಿನಲ್ಲಿಟ್ಟರು. ಈ ಸ್ಥಳಕ್ಕೆ ಹೋದನಂತರ ಒಂದೊಂದು ಕೋಣೆಯಲ್ಲಿ ಒಬ್ಬೊಬ್ಬರನ್ನು ಹೊಗಿಸಿ ಬಾಗಿಲ ಹಾಕಿಕೊಂಡರು. ಕುಡಿಯುವದಕ್ಕೆ ನೀರು ಮಾತ್ರ ಕೊಟ್ಟರು. ರಾಯಿಷ್ಣಾಯಿಕನ ಫಲಾಹಾರಮಾಡಿ, ಎಡಗೈಯನ್ನು ತಲೆಗಿಂಬು ಮಾಡಿಕೊಂಡು, ಹರಿನಾಮ ಸ್ಮರಣಮಾಡುತ್ತಾ ನಿದ್ರೆಹೋದೆವು.

ಮಲಮೂತ್ರದ ವಿಸರ್ಜನೆಯ ವ್ಯವಸ್ಥೆಯು ನಮ್ಮ ಕೋಣೆಯಲ್ಲಿಯೇ ಇತ್ತು. ದಿನಾಲು ಪ್ರಾತಃಕಾಲದಲ್ಲಿ ಹೊಲೆಯರು ಬಂದು, ಕುಂಡಗಳನ್ನು ಸ್ವಚ್ಛಮಾಡುವರು. ಹೊಲಿಯರು, ಭಿಲ್ಲರು, ಬೇಡರು ಮುಂತಾದ ಕಡಿಮೆ ಕುಲದ ಜನರಿಗೆ ಈ ಹೋರೆ ಕೊಡುವರು. ಇವರೇ ರಂಗಿಗಳು. ಪ್ರಾತಃಕಾಲದ ಆರು ಘಂಟೆಗೆ ಜೇಲಿನಬಾಗಿಲ ತೆರೆಯುವದು ಘಣ್ಣ, ಘಣ್ಣ ಎಂದು ಎರಡು ಸಾರೆ ಗಂಟೆ ಹೊಡೆದ ಕೂಡಲೆ, ಜೇಲಿನ ಶಿಪಾಯರು ಬಾಗಿಲ ತೆರೆಯುವರು. ಆನಂತರ ಪ್ರತಿಯೊಂದು ಬೀದಿಯವರು ಅಂದರೆ ಸಾಲಿನವರು ನಳಕ್ಕೆ ಬಂದು ಜೋಡಿ ತೊಳಕೊಳ್ಳತಕ್ಕದ್ದು ಒಂದು ದೊಡ್ಡ ನಳವಿದ್ದು, ಒಮ್ಮೆಯಲೆ ೨೦ ಜನರು ಕೂತು ಸ್ನಾನಮಾಡುವಂತೆ ಹರಿಯನ್ನು ಕಟ್ಟಿರುವರು. ಹತ್ತು ಮಿನಿಟುಗಳಲ್ಲಿ ಪ್ರತಿಯೊಂದು ಸಾಲಿನವರು ಮುಖಪ್ರಾಜಳನ ಮಾಡಿಕೊಂಡು ಜೋಡಿಯಿಂದ ತಮ್ಮ ಬಿಡಾರಕ್ಕೆ ಹೋಗತಕ್ಕದ್ದು, ಈ ಪ್ರಕಾರ ಎಂಟೂಸಾಲಿನವರು ನಿತ್ಯಮಿಂದ ದಿನಾಲು ಆರು ಸಾರೆ ನೀರಿಗೆ ಹೋಗಬೇಕಾಗುತ್ತಿತ್ತು. ಮೋರೆತೊಳಕೊಂಡ ಕೂಡಲೆ ಜೋಳದ ಹಿಟ್ಟಿನ ಗಂಜಿಯು ಬರುವದು. ಇದು ಪ್ರಾತಃಕಾಲದ ಉಪಹಾರ. ಈ ಉಪಹಾರವಾದ ಕೂಡಲೆ ಪಾತ್ರೆಗಳನ್ನು ತೊಳಯಲಿಕ್ಕೆ ನಳಕ್ಕೆ ಹೋಗಬೇಕಾಗುತ್ತಿತ್ತು. ಇದೇ ಪ್ರಕಾರ ಹತ್ತು ಘಂಟೆಯ ಸುಮಾರಕ್ಕೆ ಸ್ನಾನಕ್ಕೂ ಅಪರಾಣ್ಹದಲ್ಲಿ ಸಾಯಂಕಾಲದ ಊಟದ ದೆಸೆಯಿಂದ ನೀರು ತರಲಿಕ್ಕೂ, ಉಂಡ ಒಳಿಕೆ ಪಾತ್ರೆಯನ್ನು ತೊಳೆಯುವದಕ್ಕೂ ನಳಕ್ಕೆ ಹೋಗಬೇಕಾಗುತ್ತಿತ್ತು. ಗಂಜಿ ಎಂದರೆ ಹಕ್ಕದಕ್ಕೆ ಹಸ್ಸುವ ಜೋಳದ ಹಿಟ್ಟಿನ ಸರಿಯು. ಇದರಲ್ಲಿ ಉಪ್ಪಿನ ಅಂಶವೇ ಇರುತ್ತಿದ್ದಿಲ್ಲ. ಇದರಂತೆ ಪ್ರಾತಃಕಾಲದ ಬೇಳೆಯು. ಇದು ಉಪ್ಪು ಹಾಕದ ತಪ್ಪಿಯು. ಕರ್ನಾಟಕದ ಜನರಿಗೆ ಈ ಪಥ್ಯದ ಊಟವು ಬೇಸರಿಕೆ ಕೊಡುವದಕ್ಕೆ ನಾಲ್ಕಾರು ದಿವಸಗಳು ಸಹ ಬೇಡ. ಸಾಯಂಕಾಲದ ಪಲ್ಯೆಯಲ್ಲಿ ಚಕ್ಕಮಟ್ಟೆಗೆ ಖಾರ ಇರುತ್ತಿತ್ತು. ಆದರೆ ಅದು ಆಳತೆಯ ಮೇಲೆ ಸಿಗತ್ತಿದ್ದದರಿಂದ ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದ ಹೊರ್ತು ಅನ್ಯ ಮಾರ್ಗವೇ ಇದ್ದಿಲ್ಲ.

ನಾವು ತುರಂಗಕ್ಕೆ ಹೋದನಂತರ ನಾಲ್ಕೈದ, ದಿವಸ ದವಾಖಾನೆ, ಕಚೇರಿಗೆ ಎಡತಾಕುವದರಲ್ಲಿಯೇ ಹೊತ್ತುಹೋಯಿತು. ಡಾಕ್ಟರರು ಪ್ರತಿಯೊಬ್ಬರ ಪ್ರಕೃತಿಯ ತಪಾಸು ಮಾಡಿ, ಗಟ್ಟಿಮುಟ್ಟ ಎದೆ, ಸಾಧಾರಣ ಎದೆ ಮತ್ತು ಅಶಕ್ತ ಎದೆ ಎಂದು ಹೇಳುವರು. ಪ್ರತಿಯೊಬ್ಬ ಕೈದಿಗೆ ನರ್ಸಿನ ಬುಕ್ಕನಂತೆ ಒಂದು ಪುಸ್ತಕಕೊಡುವರು. ಇದಕ್ಕೆ ಕೈದಿಯ ಇತಿಹಾಸದ ಪುಸ್ತಕವೆಂಬ ಹೆಸರು. ಶಿಕ್ಷೆಯಾದ ದಿವಸ, ಬಿಡುಗಡೆಯ ದಿವಸ, ಶಿಕ್ಷೆಯಾದ ಕೋರ್ಟು, ಸಾಧಾರಣ ಅಥವಾ ಸಕ್ತ ಎಂದು ಬರೆದಿಡುವರು. ಇದರಲ್ಲಿಯೇ ಮೇಲೆ ಹೇಳಿದಂತೆ ಪ್ರಕೃತಿಯ ಸ್ವರೂಪ ಬರೆಯುವರು. ಇದನ್ನು ನೋಡಿಕೊಂಡು ಜೇಲರನು ಅವರವರ ಯೋಗ್ಯತೆಯ ಪ್ರಕಾರ ಕೆಲಸ ಕೊಡುವನು; ಗುಡ್‌ಹಾರ್ಟ ಅಂದರೆ ಗಟ್ಟಿಮುಟ್ಟಿ ಎದೆಯವರಿಗೆ ಜೋಡಿಸುವದು, ನೀರಿನ ಯಂತ್ರದ ರಾಟೀ ತಿರುವುವದು, ಎತ್ತಿನಂತೆ ಎಣ್ಣೆಯ ಗಾಣ ತಿರುವುವ ಕೆಲಸಕೊಡುವರು. ನಮ್ಮಲ್ಲಿ ಗಟ್ಟುಳ್ಳವರೆಂಬವರಿಗೆ ನೀರಿನ ಪಂಪು ತಿರುವುವ ಕೆಲಸ ಬಂತು ಪಂಪಿನ ಕೆಲಸವೆಂದರೆ- ಎಂಥೆಂಥವರು ಎದೆಯೊಡಕೊಳ್ಳುವರು. ಮುಂಜಾನೆ ೭ ರಿಂದ ಸಾಯಂಕಾಲದ ೪ವರೆವರೆಗೆ ಈ ಕೆಲಸವನ್ನು ಅರ್ಧತಾಸಿನ ಸರ್ತಿಯಂತೆ ಮಾಡಬೇಕಾಗುವದು. ೬೦ ಜನರು ಈ ಕೆಲಸವಮಾಡತಕ್ಕವರು. ಮೂವತ್ತು ಜನರು ಪಾಳಿಯಿಂದ ರಾಟೆಯನ್ನು ತಿರುವತಕ್ಕದ್ದು. ಎರಡನೇ ನಂಬರಿನವರಿಗೆ ಚರಕ ಅಂದರೆ ಉಣ್ಣೆಯದಾರ

ಹೊಲುವ ಕೆಲಸ ಬಂತು. ನನಗೆ ಈ ಕೆಲಸದೊರೆತಿತ್ತು. ಮೂರನೇ ವರ್ಗದವರು ಕೆಲಸ ಮಾಡಬೇಕೆಂಬ ಆಗ್ರಹವಿದ್ದಿಲ್ಲ. ಶ್ರೀ, ರಾದ ವಾಮನರಾವ ಜರಾರ, ದಾಬಡೆನಾಯಿಕ, ತಿರುಮಲರಾವ ಜೋಶಿ ಯವರು ಈ ವರ್ಗದಲ್ಲಿ ಸೇರಿದ್ದರು. ಕೆಲಸದ ಯೋಗ್ಯಾಯೋಗ್ಯತೆಯನ್ನು ತಿಳಿಯುವದಕ್ಕಾಗಿ ಟೊಪ್ಪಿಗೆಯ ಬಣ್ಣವಿರುತ್ತಿತ್ತು. ಸಿಟ್ಟುಳ್ಳವರಿಗೆ ಬಿಳೀಟೊಪ್ಪಿಗೆ ಮಧ್ಯಮವರ್ಗದವರಿಗೆ ನೀಲಿಟೊಪ್ಪಿಗೆ ಮತ್ತು ಮುನಳರಿಗೆ ಹಳದೀಟೊಪ್ಪಿಗೆಯನ್ನು ಕೊಟ್ಟಿದ್ದರು.

ನಮ್ಮ ಪೈಕಿ ಮೆಸರ್ಸ ಮುದನೇಡಕರ ವಕೀಲ, ಕಬ್ಬೂರ ವಕೀಲ, ಕಮಲಾಪೂರ, ಅಬ್ದುಲ ರಹಿಮಾನ, ಶಾಲಂಭಟ್ಟಿ, ಅಬ್ದುಲ್ಲಾ ಇವರಿಗೆ ಪಂಪಿನ ಕೆಲಸ ಬಂದಿತ್ತು. ಆದರೆ ದೈವಯೋಗದಿಂದಲೇ ಈ ಕೆಲಸ ತಪ್ಪಿತು. ಧಾರವಾಡದ ಗೋಳೀಬಾರ ಬಣ್ಣಿಯ ಹಳಿಗೆಯು ದೇಶಗ ತುಂಬ ಹೊಡೆದಿತ್ತು ಜೇಲ ಖಾತೆಯ ಮುಖ್ಯಾಧಿಕಾರಿಯು ಸಹಜವಾಗಿ ತುರಂಗಕ್ಕೆ ಬಂದಾಗ, ನಾವು ಬಂದ ಸಂಗತಿಯು ತಿಳಿಯಿತು. ಅವರು ನಮ್ಮ ಸ್ಥಳಕ್ಕೆ ಬಂದು, ಪಂಪಿನಲ್ಲಿ ಕೆಲಸ ಮಾಡುತ್ತಿದ್ದಂಥ ಎಲ್ಲಜನರನ್ನು ಕರೆದು, ಅವರಕೂಡ ನಾಲ್ಕೈದು ಮಿನಿಟುಗಳ ವರೆಗೆ ಸಂಭಾಷಣ ಮಾಡಿ, ಇವರಿಗೆ ಪಂಪಿನ ಕೆಲಸ ಕೊಡಬೇಡಿರೆಂದು ಜೇಲರನಿಗೆ ಆಗಿಂದಾಗ ಹುಕುಮು ಮಾಡಿದರು. ಈ ಬಗೆಯಾಗಿ ನಮ್ಮ ಮಿತ್ರರು ಒಂದು ದೊಡ್ಡ ಕುತ್ತು ದಾಟಿದರು ಜೇಲಿನಲ್ಲಿ ಅನಿತ್ಯವಾರಕ್ಕೊಮ್ಮೆ ರಜೆಯಿದ್ದರೂ, ಪಂಪಿನವರಿಗೆ ರಜೆಯಿಲ್ಲ. ನಾಲ್ಕು ತಿಂಗಳ ತನಕ ಎ ನಿಬೊಡಕೊಂಡ ನಂತರ ಬಿಡುಗಡೆಯಾಗುವದು ಕೆಲಸದಲ್ಲಿ ತುಸು ನ್ಯೂನತೆ ಕಂಡ ಕೂಡಲೆ, ಹಿಂದೇ ನಿಂತ ವಾರ್ಡರರು ಒದೆ ಸುವ ಹಾಗೆ ಗದ್ದರಿಸುವರು, ಶಿದ್ರಿ ಮನೋಟಾ ಎತ್ತುವರು ಮತ್ತು ಜೇಲ ಸುಪರಿಂಟೆಂಡೆಂಟರ ಮುಂದೆ ನಿಲ್ಲಿಸಿದರಂತೂ ತೀರಿತು. ಇ ರನ್ನು ಕಂಬಕ್ಕೆ ಬಿಗಿದು, ಮುಂಜಾವಿನಿಂದ ಸಾಯಂಕಾಲದ ವರೆಗೆ ಆರಾರು ದಿವಸಗಳ ವರೆಗೆ ಅನುಭವಿಸಬೇಕಾಗುವದು. ಈ ಯಾತನೆ ತಪ್ಪಿದ್ದು ನಿಃಸಂಶಯವಾಗಿ ಸುದೈವವೇ ಸರಿ.

ಕರ್ನಾಟಕ ವೃತ್ತ ಮತ್ತು ಧನಂಜಯಕಾರರು ತುರಂಗ ಕಾಣುವರೇನು?

—೦—

ಇಲ್ಲಿ ಹೊರಡುವ ಕರ್ನಾಟಕ ವೃತ್ತ ಮತ್ತು ಧನಂಜಯಕಾರರ ಮೇಲೆ ೧೨೪ ಎ ಪ್ರಕಾರ ವಾರಂಟು ಹೊರಡುವದೆಂದು ಈಗ ನಾಲ್ಕಾರು ದಿವಸಗಳಲಾಗಾಯಿತು. ಗುಣು ಗುಣು ಇದ್ದೇ ಇತ್ತು ನಿನ್ನೆ (೭-೯-೩೩) ನ ದಿವಸ ಹೊರಟಿರುವದಾಗಿಯೂ ಅವರ ಮನೆಗೆಪೋಲೀಸರು ಹೋಗಿರುವದಾಗಿ ಯೂ ಕೇಳಿಕೆ ಶ್ರೀ. ಅಗಳಗಟ್ಟಿಯವರು ಈಗ ಊರಲ್ಲಿಲ್ಲ ಒಂದೆರಡು ದಿವಸಗಳಲ್ಲಿ ಬರಬಹುದು ವೃತ್ತಕಾರರು ತುರಂಗ ಕಾಣುವರೇನು?

ಮುಳಸಿ ಸತ್ಯಾಗ್ರಹ ಸೇನಾಧಿಪತಿ ದೇ. ಭಾಪಟ ಹಾಗೂ ೩೩ ಸತ್ಯಾಗ್ರಹಿಗಳನ್ನು ಬಂಧಿಸಿದರು.

ಶ್ರೀ ಗುತ್ತಲ, ಮಣಿಯಾರರವರು ನಿನ್ನೆ ಸಾಯಂಕಾಲದ ಗಾಡಿಗೆ ಬಂದರು, ಶ್ರೀ. ಜರಾರ, ಕಮಲಾಪೂರ, ಜೋಶಿ ಇವರ ಬಿಡುಗಡೆಯ ತಾರು ಬಂದಿದೆ ನಿನ್ನಿನ ಸಭೆಯ ಸಾಗ್ರಸಂಗತಿಯನ್ನು ನಾಳಿನ ಸಂಚಿಕೆಯಲ್ಲಿ ಕಾಣಬಹುದು

ಗುರುಕಾಬಾಗ ಕಡೆಗೆ ಹೋಗಲು ಸಂ. ವದನ ಮೋಹನ ಮಾಲವಿಯವರು, ಲಾಲಾ ದುನಿಚಂದರವರಿಗೆ ಪ್ರತಿಬಂಧವಾಯಿತು.

....

ಅಧ್ಯಾಪಕರು ಬೇಕು.

ಋಗ್ವೇದದವನ್ನೂ ಋಕ್ಶಾಖೆಯ ಯಾಜ್ಞಿಕವನ್ನೂ ಬಲ್ಲಂಥ ಮತ್ತು ಸಾಹಿತ್ಯದಲ್ಲಿ ನಿಷ್ಣಾತರಾದಂಥ ಒಬ್ಬ ಅಧ್ಯಾಪಕರು ಬೇಕು. ಅಧ್ಯಾಪನ ಕಾರ್ಯಮಾಡಬಿಚ್ಛಿಸುವವರು ತಮ್ಮ ಅಧ್ಯಯನ ಮೊದಲಾದವುಗಳನ್ನು ತಿಳಿಸಬೇಕು. ಪಗಾರದ ಇತರ ಕರಾರುಗಳನ್ನು ಪತ್ರಮುಖಾಂತರ ಗೊತ್ತು ಮಾಡಿಕೊಳ್ಳಬೇಕು.

ವ್ಯವಸ್ಥಾಪಕ
ಶ್ರೀ ಶೇಷಾಚಲವೇದ-ಸಂಸ್ಕೃತ ಪಾಠಶಾಲಾ
ಪೋ ಅನಂತಪುರ ಜಿ. ಧಾರವಾಡ

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟುಂಬಿಕರಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ, ಮಾರಿಕಾ, ಪಟಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯುಪಯುಕ್ತ ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧನನ್ನು ಅವಶ್ಯವಾಗಿ ಸಂಗ್ರಹವಲ್ಲಿಟ್ಟು ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು.
ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ

ಕಾಲರಾಪಿಲ್ಸ- ೨೫ ಗುಳಿಗೆಗೆ ೦—೧೨—೦ ರೂ, ೧೨೦ ಕ್ಕೆ ೩-೪ -೦ ರೂ, ಟಪಾಲ ಖರ್ಚುಬೇರೆ.
ಕ್ಲೋರೋಡೈಯಿನ್- ಬಾಟ್ಲಿ ಒಂದಕ್ಕೆ ೦—೧೨—೦ ರೂ, ಟಪ ಲಖರ್ಚು ಬೇರೆ,
ಪ್ಲೇಗ ಪ್ರತಿಬಂಧಕಗುಳಿಗೆ- ೨೫ ಕ್ಕೆ ೧-೦-೦ ರೂ, ೧೦೦ ಕ್ಕೆ ३-೦- ೦ರೂ ಟಪಾಲಖರ್ಚು ಬೇರೆ.

ಪತ್ತೆ:- ಡಾ. ಎಸ್. ಆರ್. ಕಿತ್ತೂರ V D.

ಶಾರಿನವಿಲಾಸ- ಶಾಂತವೀರ,
ಧಾರವಾಡ.

ಪಶುಸಂಜೀವಿನಿ ಔಷಧ
ಧಾರವಾಡ.

ಮೈಸೂರಲ್ಲಿ ನಿತ್ಯವೂ ಹೊರಡುವ

ಸತ್ಯವಾದಿ

—೦—

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ ರಾಜಕೀಯ, ಸಾಮಾಜಿಕ ಅರ್ಥನೀತಿ, ಮತ, ಸಾಹಿತ್ಯ ವಿಚಾರಗಳನ್ನು ಚರ್ಚಿಸುವಿಕೆ

ಅಗ್ರಲೇಖನ, ಸಮಾಲೋಚನೆ, ಮೈಸೂರು ಇಂಡಿಯಾ ಮತ್ತು ವಿದೇಶದ ತಾತ್ಕಾಲಿಕ ವರ್ತಮಾನ ಸಂಗ್ರಹ, ಬ್ರಿಟಿಷ್ ಇಂಡಿಯಾದಲ್ಲಿಯ ಸ್ವರಾಜ್ಯ ಮತ್ತು ಸಂಸ್ಥಾನಗಳ, ವಿಶೇಷ ವಾರ್ತೆ ಇತ್ಯಾದಿ ವಿಷಯಗಳನ್ನು ಒಳಗೊಂಡಿರುವದು.

ಚಂದ	ಸ್ಥಳದವರಿಗೆ.	ಪರಸ್ಥಳದವರಿಗೆ.
೧ ತಿಂಗಳಿಗೆ	೦-೮-೦	೧-೦-೦.

ಶನಿವಾರ ಪ್ರಕಟಿಸಲ್ಪಡುವ "ಸತ್ಯವಾದಿ" (ವಾರಪತ್ರಿಕೆ) ಗೆ ವರ್ಷಕ್ಕೆ ಒಂದಾ ಸ್ಥಳಕ್ಕೆ ೧-೦ ೦. ಪರಸ್ಥಳಕ್ಕೆ ೨-೦-೦

ಈ ಪತ್ರಿಕೆಯಲ್ಲಿ ಜಾಹೀರಾತುಗಳ ಪ್ರಕಟನೆಯಿಂದ ವ್ಯಾಪಾರಸ್ಥರಿಗೆ ತುಂಬಾ ಲಾಭಕರ. ಎಲ್ಲೆಲ್ಲೂ ಬಾತ್ಮೀದಾರರೂ, ಏಜೆಂಟರೂ ಬೇಕು.
ವಿಳಾಸ- ಸತ್ಯವಾದಿ ಆಫೀಸು, ಬಲಮುರಿ ರೋಡ
ಮೈಸೂರು.

ಮಹತ್ವದ ಸೂಚನೆ
ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ದರಖಾಸ್ತಫಾರ್ಮ, ವಕೀಲ ಪತ್ರ
ಎಂಡಾರ್ಸಮೆಂಟ ಪತ್ರಿಕೆಗಳು
ಯೋಗ್ಯದರದಿಂದ ನಮ್ಮಲ್ಲಿದೊರೆಯುವವು.
ಮ್ಯಾ. ವಿ ಧಾ.

ವಾಗ್ವಿಲಾಸ ಬುಕ್ ಡಿಪೋ

ಪ್ರೀಯರೇ ಬೇಗನೆ ವಿ ಪಿಯಿಂದಾ ತಂಸಿ ಓದಿ ಆನಂದಪಡಿಯಿರಿ ೧೯ನೆ ಆಡ್ವಾನ್ಸು ಹಣಾ ಕಳಸಬೇಕು

ಸರಿ

	ರೂ. ಆ. ಪೈ		ರೂ. ಆ. ಪೈ
ಸುರ್ಸ್ಯಾರಿ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಾನವ ಧರ್ಮ	೦-೧೨-೦
ತುಳಸೀರಾಮನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧-೦-೦
ಶ್ರೀ ಸಿದ್ಧಾರೂಢಸ್ವಾಮಿಗಳ ಕೈವಲ್	೦ ೧೨ ೬	ಪ್ರಭಾವಿಜಯನಾಟಕ	೧-೦-೦
ಸುಜು ನೋಫಾಕಥೆ	೧ ೪ ೦	ತುಕಾರಾಮ ನಾಟಕ	೧ ೪-೦
ವಾಲ್ಮೀಕಿ ರಾಮಾಯಣ ಪ್ರಸಾಪಸಿಂಹ	೧ ೬ ೦	ಶ್ರೀ ಧರ್ಮರಹಸ್ಯ ನಾಟಕ	೧-೦ ೦
ತೋಗಳಪದ	೦ ೪ ೦	ಸಂಗ್ರಸಂಗೀತ ಮದನಮಾಲಿನಿ	೦-೧೨-೦
ಶ್ರೀ ಧರ್ಮನೀತಿ	೦ ೧೨ ೦	ಹಿಂದಿ ವಿನಾನಿ ವೈದ್ಯ ಯಂತ್ರ ಮಂತ್ರತಂತ್ರ ಸಹಿತ	೧-೮-
ವಿಶ್ವ ಸುಂದರಿ ಮುದಿಯೋ ಕೃತ	೧ ೦ ೦	ಸಟೀಕ ವಿಚಾರ ಸಾಗರವೇದಾಂತ	೪-೦ ೦
ಕಾಮುಬಿ ವಿಟಿತ್ರಕಾರಸ್ಥಾನ	೦ ೬ ೦	ಜ್ಞಾನಸಿಂಧು ವಚನವೇದಾಂತ	೪-೦-೦
ಹಿಂದೂ ಲಾ ಕಾಯಿದೆ ಚಿನ್ನ ಮುಳಗುಂದಕೃತ	೬ ೦ ೦	ಪಂಚರತ್ನ ನಿಜಗುಣ ಶಿವಯೋಗ ವಿವರ	೨-೦-೦
ಅಶೋಕ ಕಾದಂಬರಿ	೧ ೬ ೦	ಸಿದ್ಧಾಂತಬಿಂದು ಪ್ರಕಾರ	೧-೮-೦
ಸಚಿತ್ರಯಮುನಾಪನ ವಾವ ಸ್ವಪ್ನಗಳ ಫಲವಿಚಾರ	೦-೧೨-೦	ಸಟೀಕ ನಿಜಗುಣ ಕೈವಲ್ಯಪದ್ಧತಿ	೧-೪-೦
ಅಡವಿ ಹುಡುಗಿ	೦-೧೨-೦	ಸಟೀಕ ಸಪಣ್ಣಸ್ವಾಮಿಗಳ ಕೈವಲ್ಯ	೧-೪-೦
ವೀರಶೈವಾಚಾರ	೧-೦-೦	ಶ್ರೀ ಧಾನಲಿಂಗಲೀಲೆ	೧-೧-೦
ಕಲ್ಪವೃಕ್ಷ ಅರುಬೇಲಿನ ಕೃತ	೧-೮-೦	ಗರ್ಭಣಿರಿಸುಸಂಗೋಪನ	೦-೧೨-೦
ಪ್ರತ್ಯಕ್ಷಫಲಪಂಚಸಿದ್ಧಿ ಅನುಭವಸಿದ್ಧಿ	೨-೮-೦	ರಾಮಕೃಷ್ಣ ಪರಮಹಂಸ ಚರಿತ್ರೆ	೧ ೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೦-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣನವರಲೀಲಾ	೦-೩-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳಾರತಿ ಶಿವಭಜನಪದಗಳು	೦-೩-೦
ಬಸವಭಾನು ಪಾವಟೆ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ವಾದ ಪರೀಕ್ಷಾ ಪಾವಟೆ ವಕೀಲ	೦-೮-೦	ಆರೋಗ್ಯ ವೀಜನ ಪರದೇಶಕೃತ	೦-೮-೦
ಮುಳಗುಂದನಾತಸ್ವಾಮಿಯ ಕೈವಲ್ಯವರ್ಣಣ	೧-೪-೦	ಲಿಖಿತಲೀಲಾನಾಟಕ ಸಂಗೀತ	೧-೦-೦
ಕಾಮಧೇನು	೧ ೮-೦	ಸಂಗೀತ ಸಮಯಸಾರ ಮೈಸೂರು	೧-೧೨ ೦
ಪ್ರೇಮಮಂದಿರ	೦-೮-೦		

ಪತ್ತೆ. ಎಂ ಆರ್. ಶಿವನಾಗಪ್ಪಾ ಪಬ್ಲಿಶರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು-

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ- ೫೦ ಸ್ಟೇಶನ್ ರೋಡ ಹುಬ್ಬಳ್ಳಿ **ಶಾಖಾ**- ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ. ಕುರಂದವಾಡಕರ ಎಲ್ ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಭಂಡಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮಾಳಾಪೂರ ಬಿ.ಎ. ಎಲ್. ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ. (ಎಕ್ಸ ಆಫೀಶಿಯೋ)

ಚಾಲೂ ಖಾತೆಗಳು- ೫೦ರೂ, ಗಳಿಂದ ತೆಗೆಯಲ್ಪಡುವವು. ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ರಂತೆ
ಸೇವಿಂಗ್ಸ-ಬ್ಯಾಂಕ-ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತೀ ಠೇವುಗಳು- ೫೦ ರೂಪಾಯಿಗಳಿಗೆ ಕಡಿಮೆಯಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ- ೬ ತಿಂಗಳ ಮುದ್ದತೀ ರಕಮಿಗೆ ೧೦೦ಕ್ಕೆವರ್ಷಕ್ಕೆ೬ರಂತೆ; ೧೨ ತಿಂಗಳ ಮುದತೀ ರಕಮಿಗೆ ೧೦೦ಕ್ಕೆವರ್ಷಕ್ಕೆ೬॥ ಯಂತೆ

ಇತರ ಕಾರ್ಯಗಳು- ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ತರಿಸಿಕೊಡುವದು ಸರಕಾರೀ ಪ್ರಾಮಿಸರಿನೋಟು, ವಾರಬಾಂಡ, ಚೆಕ್ಕು ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ್ ತಕ್ಕೊಂಡು ಕೊಡಕೊಳ್ಳುವದರಲ್ಲಿ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದಲ್ಲಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು,

ಮೆಸರ್ಸ ದೇಶಪಾಂಡೆ ಎಂಡ ಕೋ. ಮ್ಯಾನೇಜಿಂಗ ಎಜಂಟ್ಸ

ನಮ್ಮ ಖಾತೆಮೆದಾರರಿಗೆ ಸೂಚನೆ.

—(೦)—

ನಮ್ಮ ಖಾತೆಮೆದಾರರಲ್ಲಿ ಪಲವರು ತಮ್ಮ ಖಾತೆಪುಗಳನ್ನು ಪಾಕೀಟಸಲ್ಲಿ ಹಾಕಿ ಕಳಿಸುವದರಿಂದ ನಿಷ್ಕಾರಣವಾಗಿ ಹೆಚ್ಚು ಹಣವು ಖರ್ಚಾಗುವದು. ಆದ್ದರಿಂದ ಇನ್ನು ಮುಂದೆ ಖಾತೆಮೆದಾರರು ಬುಕ್ಕಪೋಸ್ಟು ಮಾಡಿಯೇ ಕಳಿಸತಕ್ಕದ್ದಾಗಬೇಕು.

ಹಲವು ಖಾತೆಮೆದಾರರು ದುಡ್ಡು ಖರ್ಚಾಗುತ್ತೆಂದು ನಾಟಪೇಟ ಮಾಡಿ ಕಳಿಸುವರು. ಇಲ್ಲಿ ನಾವು ದುಪ್ಪಟ್ಟು ಚಾರ್ಜ ಕೊಟ್ಟು ತೆಗೆದುಕೊಳ್ಳಬೇಕಾಗುವದು.

ಈ ಎರಡು ಮಾರ್ಗಗಳು ಸರಿಯಲ್ಲವಾದ್ದರಿಂದ ನಾವು ಮೊದಲೇ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ನಾವು ನಾಟ ಪೇಟ ಪತ್ರಗಳನ್ನು ಸ್ವೀಕರಿಸುವದಿಲ್ಲ.

ಮ್ಯಾ. ವಿಜಯ, ಧಾರವಾಡ.

ಚಂದಾದಾರರಿಗೆ ಸೂಚನೆ.

—೦—

೧ ಸನ್ ೧೯೩೨ನೇ ಇಸವಿಯ ಚಂದಾದಾರರಿಗೆ ಇನಾಮಿನ ಪುಸ್ತಕಗಳು ರವಾನೆಯಾಗ ತೊಡಗಿವೆ

೨ ಈಗ ನಾವು ಮಾಡಿದ ವ್ಹಿ. ಪಿ. ಯನ್ನು ಸ್ವೀಕರಿಸಿದ ಎಲ್ಲ ಚಂದಾದಾರರಿಗೂ ಇನಾಮಿನ ಪುಸ್ತಕವನ್ನು ಕಳುಹಿದ್ದೇವೆ.

೩ ೧೯೩೧ನೆಯ ವರ್ಷದ ಯಾವ ಚಂದಾದಾರರು ವ್ಹಿ. ಪಿ. ಯನ್ನು ತಿರುಗಿ ಬಿಟ್ಟಿರುವರೋ ಅಂಥ ಚಂದಾದಾರರು ವಾರ್ಷಿಕ ವರ್ಗಣಿ ೩-೧೨-೦ ರೂ. ಗಳನ್ನು ಮನಿಯಾರ್ಡರ ಮಾಡಿದಲ್ಲಿ ಇನಾಮಿನ ಪುಸ್ತಕವು ದೊರೆಯುವದು.

೪ ಇಲ್ಲವೆ ನಾವು ಮೊದಲು ಮಾಡಿದ ವ್ಹಿ. ಪಿ. ಯನ್ನು ಚಂದಾಮನಿಯಾರ್ಡರ ಮಾಡಿದರೆ ೧೯೩೨—೧೯೩೩ ಸಾಲಿನ ಎರಡೂ ಪುಸ್ತಕಗಳು ದೊರೆಯುವವು.

ಮ್ಯಾ. ವಿಜಯ ಧಾರವಾಡ

ನೋಟೀಸಿನದರಗಳು.

—

ಸಿಂಗಲಕಾಲಮಿನ ಎಂಟುವಳಿಗಳಿಗೆ ಒಂದೂಕಾಲು ರೂಪಾಯಿ; ಮುಂದೆ ಪ್ರತಿಯೊಂದು ವಳಿಗೆ ಎರಡು ಆಣೆ; ಇಂಗ್ಲಿಷ ಪ್ರತಿಯೊಂದು ವಳಿಗೆ ಆರು ಆಣೆ ಇಂಗ್ಲಿಷದ ಅವತರಣಿಕೆ ಕನ್ನಡದಲ್ಲಿ ಹಾಕುವದಿದ್ದರೆ ಎಳುಆಣೆ. ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ವಾರ್ತಾಹರ ಪ್ರೇಸಿನಲ್ಲಿ ಛಾಪಿಸಿ, ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ

- ಸ್ಥಾಪಕರು -
ಶ್ರೀ. ಆಚಾರ್ಯ ಬಾಲಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಶನಿವಾರ ತಾರೀಖು ೯ನೇ ಸಪ್ಟಂಬರ ೧೯೨೨. (ಸಂಚಿಕೆ ೧೯೦

ಮೈಸೂರಲ್ಲಿ ನಿತ್ಯವೂ ಹೊರಡುವ

ಸತ್ಯವಾದಿ

—೦—

ಉಪಯುಕ್ತವಾದ ಮತ್ತು ಅಭಿರುಚಿಯುಳ್ಳ ರಾಜಕೀಯ, ಸಾಮಾಜಿಕ ಅರ್ಥನೀತಿ, ಮತ, ಸಾಹಿತ್ಯ ವಿಚಾರಗಳನ್ನು ಚರ್ಚಿಸುವಿಕೆ.

ಅಗ್ರಲೇಖನ, ಸಮಾಲೋಚನೆ, ಮೈಸೂರು ಇಂಡಿಯಾ ಮತ್ತು ವಿದೇಶಗಳ ತಾತ್ಕಾಲಿಕ ವರ್ತಮಾನ ಸಂಗ್ರಹ, ಬ್ರಿಟಿಷ್ ಇಂಡಿಯಾದಲ್ಲಿಯ ಸ್ವರಾಜ್ಯ ಮತ್ತು ಜನಸಕಾರಚಳವಳಿ, ವಿನೋದಲಹರಿ ಇತ್ಯಾದಿ ವಿಷಯಗಳನ್ನು ಒಳಗೊಂಡಿರುವದು.

	ಚಂದ ಸ್ಥಳದವರಿಗೆ.	ಪರಸ್ಥಳದವರಿಗೆ.
೧ ತಿಂಗಳಿಗೆ	೦-೮-೦.	೧-೦-೦

ಶನಿವಾರ ಪ್ರಕಟಿಸಲ್ಪಡುವ "ವೀಕ್ ಎಂಡ ಇಷು" (ವಾರಪತ್ರಿಕೆ) ಗೆ ವರ್ಷಕ್ಕೆ ಚಂದಾ ಸ್ಥಳಕ್ಕೆ ೧-೦-೦. ಪರಸ್ಥಳಕ್ಕೆ ೨-೧-೦.

ಈ ಪತ್ರಿಕೆಯಲ್ಲಿ ಜಾಹೀರಾತುಗಳ ಪ್ರಕಟನೆಯಿಂದ ವ್ಯಾಪಾರಸ್ಥರಿಗೆ ತುಂಬಾ ಲಾಭಕರ. ಎಲ್ಲೆಲ್ಲೂ ಬಾತ್ಮೀದಾರರೂ, ಏಜೆಂಟರೂ ಬೇಕು.

ವಿಳಾಸ- ಸತ್ಯವಾದಿ ಆಫೀಸ್, ಇಲವಾಲ್‌ರೋಡ

ಮೈಸೂರ.

ಪೇಟೀಗೆ ಪೇಟಿಯೇ ಲೂಟ.

—೦—

ಇದೇ ತಿಂಗಳ ೩ ನೇ ತಾರೀಖಿನ ದಿವಸ ಕೇಲಿನ ಪಾರಾ (ಕಲಕತ್ತಾ) ದಲ್ಲಿ ದೇವರು ಹೊಳೆಗೆ ಹೋಗುವದಿವಸ ಹಿಂದೂ- ಮುಸಲಮಾನರಲ್ಲಿ ಜಗಳವಾಗಿ ಪೇಟಿಗೆ ಪೇಟೆಯೇ- ಲೂಟಿಯಾಯಿತು. ಹೆಂಗಸರು, ಹುಡುಗರು ಮೊದಲಾಗಿ ೫೩ ಜನರಿಗೆ ಗಾಯವಾಗಿದೆ. ಒಬ್ಬನು ಸತ್ತಿದ್ದಾನೆ. ಊರು ಪೋಲೀಸರ ವಶದಲ್ಲಿಯೇ ಇದೆ.

ಮುಲತಾನದಲ್ಲಿ ದಂಗೆ.

—೦—

ನೂರಾರು ಜನರು ಪ್ರಾಣಕ್ಕೆ ಎರವಾದರು.

—೦—

ಇದೇತಿಂಗಳ ೩ ನೇ ತಾರೀಖಿನ ದಿವಸ ಮುಲತಾನದಲ್ಲಿ ಭಯಂಕರ ದಂಗೆಯಾಗಿದೆ. ನೂರಾರು ಜನರು ಪ್ರಾಣಕ್ಕೆ ಎರವಾದರೆಂಬ ವಾರ್ತೆ.ಬಹಳ ಜನರಿಗೆ ಗಾಯವಾಗಿದೆ. ಮುಲತಾನವು ಸದ್ಯಕ್ಕೆ ಲಷ್ಕರಿನ ವಶದಲ್ಲಿದ್ದಂತೆಯೇ ಇದೆ. ರಾತ್ರಿಯಲ್ಲಿ ಮನೆಬಿಟ್ಟು ಹೊರಡಲು ಬರುವಂತಿಲ್ಲ. ಹಲವು ಸ್ತ್ರೀ-ಬಾಲಕರ ಪತ್ತೆಯೇ ಇಲ್ಲ.

ವಿಜಾಪುರದ ದೇ. ಭ. ಕೌಜಲಗಿಯವರಮೇಲೆ ೧೦೮ ಹೊರಟಿತು.

ವಿಜಾಪುರದ ದೇ. ಭ. ಶ್ರೀನಿವಾಸರಾವ ಕೌಜಲಗಿಯವರ ಮೇಲೆ ೧೦೮ ಹೊರಟಿದೆ. ಇದೇ ೨೧ ಕ್ಕೆ ಬಿಚ್ಚಿಯ ವಿಚಾರಣೆಯದೆ.

ವಿಜಯವು ಬಂದಿತು. ಅಮೃತವು ಹೋಯಿತು.

ವಿಜಯದ ಸಂಪಾದಕರು ಬಿಡುಗಡೆಯಾದರೆಂದು ಸಂತೋಷ ಪಡುವದರೊಳಗಾಗಿಯೇ ರಾಷ್ಟ್ರೀಯ ಪಕ್ಷದ ಅಮೃತ ಬಜಾರದ ಸಂಪಾದಕರಾದ ಬಾಬು ಮೋತಿಲಾಲ ಘೋಷರವರು ಮೃತಪಟ್ಟವಾರ್ತೆಯು ಬಂದಿದೆ. ಬಾಬುಗಳವರು ಲೋಕವನ್ನಗಲ ಪಟ್ಟತಿಪ್ಪರು. ಬಹಳಾಗಿ ಮುಪ್ಪಿನವರು. ಇವರ ಆತ್ಮನಿಗೆ ಪರಮಾತ್ಮನು ಶಾಂತಿಯನ್ನೀಯಲಿ.

ನಿಜಾಮ ಹೈದರಾಬಾದ ದಿವಾಣರ ರಾಜೀನಾಮೆ!!

—೦—

ಸರ ಅಲಿ ಇಮಾಮ ಇವರು ಹೈದರಾಬಾದಿನ ದಿವಾಣ (ಕೌನ್ಸಿಲದ ಅಧ್ಯಕ್ಷ) ರಾಗಿದ್ದರು. ಇವರಿಗೂ ಕೌನ್ಸಿಲದ ಮೆಂಬರರಾಗಿರುವ ಮಿ. ಹೈದರಿಯವರಿಗೂ ಮನಸ್ತಾಪವಾಯಿತು, ಮಿ. ಹೈದರಿಯವರು ದಿವಾಣರನ್ನು ಟೀಕೆ ಮಾಡಿದ ಪತ್ರಗಳನ್ನು ತಮ್ಮ ಸ್ನೇಹಿತರಿಗೆ ಬರೆಯಹತ್ತಿದರು. ಇಂಥ ಅಪ್ರಿಯ ಗೃಹಸ್ಥನ ಕೂಡ ರಾಜ್ಯಭಾರ ನಡಿಸುವದು ಪ್ರಶಸ್ತವಾಗದ್ದೆಂದು, ಸರ ಸಯ್ಯದರು ಒಮ್ಮಿಂದೊಮ್ಮೆ ರಾಜೀನಾಮೆ ಕೊಟ್ಟು ತಮ್ಮ ಗ್ರಾಮವಾದ ಪಾಟನಾದ ದಾರಿಯನ್ನು ಹಿಡಿದರು. ಇವರು ರಾಜೀನಾಮೆ ಕೊಡಬಾರದೆಂದು ರೆಸಿಡೆಂಟರು ಮಧ್ಯಸ್ಥಿ ಮಾಡಿದರು. ಆದರೂ ಸರ ಸಾಹೇಬರು ರಾಜೀನಾಮೆಯನ್ನು ಹಿಂದಕ್ಕೆ ತಕ್ಕೊಳ್ಳಲಿಲ್ಲ.

ಸರ ಫರೀದುದ್ದೀನ ಮುಲ್ಕ ಇವರು ಆಕ್ಟಿಂಗ ದಿವಾಣರಾಗಿದ್ದಾರೆ.

....

ಬಾಗಲಕೋಟೆಯ ಪ್ರಸಿದ್ಧ ಸಾವುಕಾರರಾದ ಶ್ರೀ. ರಾಮಣ್ಣಾನಾಯಕ ಸೋಲಾಪುರಕರ, ಸ್ವಾಮಿರಾಚಾರ್ಯ ಕೆರಸೂರ, ಹಣಮಂತರಾವ ಜನಗಿ ಇವರು ಅಸಹಕಾರಚಳವಳಿಯಲ್ಲಿದ್ದವರಿಂದ ಇನಾಮ ಜಮೀನುಗಳನ್ನು ಯಾಕೆ ಜಪ್ತಿ ಮಾಡಬಾರದು ಎಂಬ ನೋಟೀಸು ಹೊರಟಿದೆ.

ನೊನ್ನಿನ ಆನಂದವೇ ಆನಂದ.

—೦—

ಅಕ್ಟೋಬರ ತಿಂಗಳ ೮ನೇ ತಾರೀಖಿನ ದಿವಸ ಧಾರವಾಡದ ತುಂಬ ರಣಗುಟ್ಟಿತು. ಅಂದು ಯಾರ ಮೋರೆಯ ಮೇಲೂ ಆನಂದದ ಕಳೆಯಿದ್ದಿಲ್ಲ. ಮೋಹರಮು ಬಂದಾಯಿತು. ನವರಾತ್ರಿಯ ಉತ್ಸವವು ಮನೆಯಲ್ಲಿ ಬರೇ ಗಂಟೆ ಬಾರಿಸುವದರಿಂದಲೇ ಸಮಾಪ್ತಿ ಹೊಂದಿತು. ಇದೇ ಈ ವರ್ಷ ದೇಶಕಾರ್ಯಕ್ಕಾಗಿ ತುರಂಗಕ್ಕೆ ಹೋದವರಲ್ಲಿ ಒಬ್ಬರ ಹಿಂದೊಬ್ಬರಂತೆ ಹಿಂದಿರುಗಿ ಬರುವ ಸುದ್ದಿಗಳು ಬರಹತ್ತಿದ ಕೂಡಲೆ- ಮೋಹರಮುವು ಅತಿ ಸಂಭ್ರಮದಿಂದಾಯಿತು. ಗಣೇಶೋತ್ಸವವಾಯಿತು. ಈ ಉತ್ಸವ ಪೂರ್ಣವಾದ ಎರಡನೇ ದಿವಸವೇ ಊರ ತುಂಬ ಆನಂದದಂಥ ಚಿಹ್ನಗಳು ತೋರ ಹತ್ತಿದವು. ಗುರುವಾರ ಪ್ರಾತಃಕಾಲದಲ್ಲಿ ವಿಜಯದ ಮೊದಲಿನ ಸಂಪಾದಕರಾದ ರಾ. ರಾ. ಅಣ್ಣಾಚಾರ್ಯ ಹೊಸಕೇರಿ ಇವರು ಧಾರವಾಡದ ತುರಂಗದಿಂದ ತಮ್ಮ ಮನೆಗೆ ಬಂದರು. ಇವರಿಗಿಂತ ಮೊದಲು ಬಿಡುಗಡೆ ಹೊಂದಿದ ಎಂ. ಮಹಮುದ ಗೌಸ ಲಂಗೋಟಿಯವರು ಬಿಡುಗಡೆಯಾಗಿ ಬಂದಾಗ ಮೆರವಣಿಗೆ ಆಯಿತು. ಆಚಾರ್ಯರ ಸನ್ಮಾನಕ್ಕಾಗಿ ಈ ಪ್ರಕಾರದ ಮೆರವಣಿಗೆಯಾಗಬಾರದೆಂಬ ಪೂರ್ವೋದ್ದೇಶದಿಂದಲೇ ಜೇಲಿನ ಅಧಿಕಾರಸ್ಥರು ಇವರನ್ನು ಬೆಳಗಾಗುವದರೊಳಗಾಗಿ ಮನೆಗೆ ಕಳಿಸಿದರು. ಆದರೆ ಅಂದು ಸಾಯಂಕಾಲದ ಸಂಭ್ರಮವನ್ನು ಬಂದುಮಾಡುವದು ಯಾರ ಕೈಯ್ಯಲ್ಲಿರಲಿಲ್ಲ. ಸಾಯಂಕಾಲದ ಗೋವೆಯ ಬಂಡಿಯಿಂದ ದೇಶಭಕ್ತರಾದ ಗೋವಿಂದಾಚಾರ್ಯ ಗುತ್ತಲ ಮತ್ತು ಮನಿಯಾರ ಇವರು ಇಲ್ಲಿಗೆ ಬಂದ ಕೂಡಲೆ, ಸ್ಟೇಶನದಿಂದ ಊರ ತನಕ ಬಹು ಸಂಭ್ರಮದ ಮೆರವಣಿಗೆ ಹೊರಟಿತು. ಇವರು ಕಾರವಾರದ ಜೇಲಿನಲ್ಲಿದ್ದರು. ಅಲ್ಲೇ ಬಿಟ್ಟರೆ, ಅಲ್ಲಿಯ ಜನರು ಅಪೂರ್ವ ರೀತಿಯಿಂದ ಇವರ ಸ್ವಾಗತ ಮಾಡಬಹುದೆಂದು ಯೋಚಿಸಿ, ಹೊರಗೆ ಸುದ್ದಿಯನ್ನೊಡೆಯದೇ ಇವರನ್ನು ಮಾರ್ಮಾಗೋವೆಯ ತನಕ ಪೋಲೀಸ ಬಂದೋಬಸ್ತಿನಲ್ಲಿ ಮಾರ್ಮಾಗೋವೆಯ ತನಕ ತಂದು ಟಿಕೀಟು ಕೊಡಿಸಿ, ಬಂಡಿಯಲ್ಲಿ ಕೂಡಿಸಿ, ಬಂಡಿ ಹೊರಟ ನಂತರ ಇವರ ಬಲದ ಸಲಾಮು ಮಾಡಿದರು. ಪೋಲೀಸ ಮತ್ತು ಜೇಲಿನ ಅಧಿಕಾರಸ್ಥರು ಈ ಸಂಗತಿಯನ್ನು ಇಷ್ಟು ಗುಪ್ತವಿಟ್ಟರೂ ಸುದ್ದಿಯು ಹೊರಬಿದ್ದು, ಇವರು ಬರುವ ತಾರು ಧಾರವಾಡಕ್ಕೆ ಬಂದೇಬಂತು. ಇರಲಿ, ಸ್ಟೇಶನದಿಂದ ಹೊರಟ ಮೆರವಣಿಗೆಯು ಲೈನಬಜಾರ ಮತ್ತು ಮಾರ್ಕೆಟದ ಮೇಲಿಂದ ಹಾದು ಸಭೆಯ ಸ್ಥಳಕ್ಕೆ ಬಂತು. ಸಭೆಗಾಗಿ ಸಾವಿರಾರು ಜನರು ಕೂಡಿದ್ದರು. ಮಹಾತ್ಮಾ ಗಾಂಧೀಕೀಜಯ, ವಂದೇಮಾತರಂ ದ. ಜಯಘೋಷದಲ್ಲಿ ಸಭಿಕರು ಇವರ ಸ್ವಾಗತ ಮಾಡಿದರು.

ಕಾಂಗ್ರೆಸಕಮೀಟಿಯ ಅಧ್ಯಕ್ಷರಾದ ಶ್ರೀಯುತ ವಿಠ್ಠಲರಾವ ಜೋಶಿಯವರು ಅಧ್ಯಕ್ಷಪದಾರೂಢರಾಗಿ ಸಭೆಯಮುಂದೆ ಕೆಳಗಿನ ಮೂರು ಠರಾವುಗಳನ್ನಿಟ್ಟರು.

೧. ಕಲಕತ್ತೆಯ ಅಮೃತಬಝಾರ ಪತ್ರಿಕೆಯ ಸಂಪಾದಕರಾದ ಸ್ವರ್ಗವಾಸಿ ಬಾಬು ಮೋತೀಲಾಲ ಘೋಸ ಇವರ ಮೃತ್ಯುವಿನದೆಸೆಯಿಂದ ದುಃಖ ಪ್ರದರ್ಶನ.

೨. ಶ್ರೀ. ಗಣೇಶ ದಾಮೋದರ ಸಾವರಕರ ಇವರ ಬಿಡುಗಡೆಯಾದಬಗ್ಗೆ ಇವರ ಅಭಿನಂದನ.

೩. ತುರುಂಗವಾಸ [illegible] ತವಾಸವನ್ನನುಭವಿಸಿಬಂದ ದೇಶಭಕ್ತರಾದ ಅಣ್ಣಾಚಾರ್ಯ ಹೊಸಕೇರಿ, ಗೋವಿಂದಾಚಾರ್ಯ ಗುತ್ತಲ ಮತ್ತು ಮನಿಯಾರ ಇವರ ಬಹುಮಾನಮಾಡುವದು.

ಪದ್ಧತಿಪ್ರಕಾರ ಈ ಮೂರು ಠರಾವುಗಳು ಪಾಸಾದನಂತರ ಮೊದಲು ಮನೆಗೆ ಬಂದವರಾದ ಶ್ರೀ. ಅಣ್ಣಾಚಾರ್ಯರು ಸಭಿಕರ ಉಪಕಾರ ಸ್ಮರಿಸಿ, ಇಂದು ರಾತ್ರಿಯಾದ ಮೂಲಕ ಶ್ರೀಯುತ ಕಮಲಾಪೂರ, ಬಳ್ಳಾರಿ ಮೊದಲಾದವರು ಬಂದ ದಿವಸ (ಎರಡು ಮೂರು ದಿವಸಗಳಲ್ಲಿ ಬರುವರು.) ಬೇಗನೆ ಸಭೆಕೂಡಿಸುವಾ. ಆಗ ತುರಂಗದ ಸೋಜಿಗವನ್ನು ವ್ಯವಹಾರವನ್ನೂ ಹೇಳುವೆನು. ಅನಂತರ ನೀವೆಲ್ಲರೂ ತುರಂಗಕ್ಕೆ ಹೋಗಲಿಕ್ಕೆ ಉಮೇದಿಯಿಂದ ಹವಣಿಸಬಹುದೆಂದು ಹೇಳಿದರು. ಮತ್ತು ತಮಗಾದ ಮಾನವು ಅನವಶ್ಯಕವಾದದ್ದು. ಯಾವ ಮಹತ್ಕಾರ್ಯಮಾಡಿ ತುರಂಗಕ್ಕೆ ಹೋಗಲಿಲ್ಲ. ಸ್ವದೇಶದ ನಿರ್ಮಲವಾದ ಪ್ರಾಣವಾಯುವು ತಮ್ಮ ಹೃದಯದಲ್ಲಿ ಸಂಚಾರಮಾಡಹತ್ತಿದ್ದರೆ- ಅದರ ಶ್ರೇಯಸ್ಸು ನಿಜವಾದ ಸ್ವಾರ್ಥತ್ಯಾಗ ಮಾಡಿದಂಥ ಮತ್ತು ತಮ್ಮ ವಿದ್ಯಾಗುರುಗಳಾದಂಥ ದೇಶಭಕ್ತ ವಿನಾಯಕರಾವ ಜೋಶಿಯವರಿಂದಲೇ ಇರುತ್ತದೆಂದು ಹೇಳಿ, ಕೊಟ್ಟಂಥ ಮಲ್ಲಿಗೆಯ ಮಾಲೆಯನ್ನು ಪೂಜ್ಯ ಗುರುಗಳು ಕೊರಳಲ್ಲಿ ಹಾಕಿ, ಗುರುಭಕ್ತಿಯನ್ನು ವ್ಯಕ್ತಪಡಿಸಿದರು.

ಅನಂತರ ಶ್ರೀ. ಗುತ್ತಲ ಇವರ ಭಾಷಣವಾಯಿತು. ತುರಂಗವು ಮನುಷ್ಯರ ಕೊಂಡವಾಡೆಯಾಗಿರುತ್ತದೆಂದು ಇವರು ಸಪ್ರಮಾಣವಾಗಿ ಹೇಳಿದರು. ಇವರ ಭಾಷಣದ ಸಂಗತಿಯು ಮುಂದೆ ಶ್ರೀ. ಅಣ್ಣಾಚಾರ್ಯರ ಲೇಖಾಂಕಗಳಲ್ಲಿ ಬರುವದರಿಂದ [illegible] ಇಲ್ಲಿ ಕೊಟ್ಟಿರುವದಿಲ್ಲ. ಅನಂತರ ಎಂ. ಮನಿಯಾರ ಇವರ ಭಾಷಣವಾಗಿ ವಂದೇಮಾತರಂ ಗಾಂಧೀಕೀಜಯ ಎಂಬ ಜಯಘೋಷದಲ್ಲಿ ಸಭೆಯು ವಿಸರ್ಜನವಾಯಿತು. ಈ ಪ್ರಕಾರದ ಆನಂದದಿಂದ ಧಾರವಾಡದ ಮೋರೆಯ ಮೇಲೆ ಹೊಸರಕ್ತಬಂದದ್ದನ್ನು ನೋಡಿ ಯಾರಿಗೆ ಆನಂದವಾಗಲಿಕ್ಕಿಲ್ಲ?

ಗ್ರೀಕರ ಗುಂಡಿಗೆ ತಲ್ಲಣಿಸಿತು.

—೦—

ತುರುಕರ ದೊಡ್ಡ ಜಯ.

—೦—

ವಿಲಾಯತಿಯಲ್ಲಿ ತುರ್ಕಸ್ಥಾನವು ಒಂದೇ ಪರಧರ್ಮದ ದೇಶವು. ಈ ದೇಶವು ಒಂದು ಭವಿಷ್ಯಂತಿ ಭುವಿಗೆ [illegible] ಇದೊಂದು ದೇಶವು ಕ್ರಿಸ್ತಮಯವಾದರೆ ವಿಲಾಯತಿಯು ಪರಮ ಪವಿತ್ರವಾಗುವದೆಂದು ಇಂದಿಗೂ ಧರ್ಮ ದುರಭಿಮಾನಿಗಳ ಇಚ್ಛೆ. ಈ ಮೂಲಕವಾಗಿ ಒಮ್ಮೆ ಮೊಗಲ ಬಾದಶಾಹಿಯಂತೆ ವಿಸ್ತಾರಗೊಂಡಿದ್ದ ತುರುಕ ಸಾಮ್ರಾಜ್ಯವು ಸಂಕುಚಿತಕ್ಕೆ ಬರುತ್ತಾ ಬರುತ್ತಾ, ಈಗೊಂದು ಸಂಸ್ಥಾನದ ಪರಿಸ್ಥಿತಿಗೆ ಒಂದಿರುತ್ತದೆ. ಅದರೂ ಇದು ನೆರೆಯವರಾದ ಗ್ರೀಕರ ಕಣ್ಣೊಳಗೊತ್ತುತ್ತಿರುವದು.

ಮಹಾಯುದ್ಧವಾಗಿ ದೊಡ್ಡ ದೊಡ್ಡ ಮುತ್ಸದ್ದಿಗಳು ಕೂಡಿ ಬರೆದ ಸ್ವಯಂ ನಿರ್ಣಯದ ಮುಖ್ಯತತ್ವವು ತುರುಕರ ಪಾಲಿಗೆ ಬರಲಿಲ್ಲ. ಈ ಎಡೆಯು ಗ್ರೀಸ ದೇಶಕ್ಕೆ ಬಂದ ಕೂಡಲೆ ತೀರಿ ಹೋಯಿತು. ತುರುಕರನ್ನು ಕೇಳತಕ್ಕವರು ಯಾರೂ ಉಳಿಯಲಿಲ್ಲ. ಹಿಂದುಸ್ತಾನದ ಮುಸಲಮಾನರು ಖಿಲಾಫತದ ಚಳವಳಿಯನ್ನು ಮಾಡದಿದ್ದರೆ- ಇಂದು ತುರ್ಕಸ್ಥಾನದ ಸುಲ್ತಾನನು ಒಬ್ಬ ದೊಡ್ಡ ಜಹಾಗೀರದಾರನಂತೆ ವಿಲಾಯತಿಯಲ್ಲಿ ಕಾಲಕ್ಷೇಪ ಮಾಡಿಕೊಂಡಿರುತ್ತಿದ್ದನು.

ಸಂಯುಕ್ತ ಮಂಡಲದವರು ಈ ಪ್ರಕಾರ ತುರ್ಕಸ್ಥಾನವನ್ನು ಕ್ಷೀಣ ದಸೆಗೆ ತಂದದ್ದು ಹಿಂದುಸ್ಥಾನದ ಮುಸಲಮಾನರ ಮನಸಿಗೆ ಬರದಂತೆ, ಕೆಮಾಲ ಮೊದಲಾದ ವರಮನಸ್ಸಿಗೂ ಬರಲಿಲ್ಲ. ಇವರು ಏಶಿಯಾ ಮಾಯನಾರದಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದರು. ಮುಸಲಮಾನರು ಯುರೋಪದ ಹೊರಗೆ ಬೇಕಾದಷ್ಟು "ಪೈ ಡೋಸು" ಹಾಕಲಿ. ಅವರ ಉಸಾಬರೀ ಮಾಡುವದಿಲ್ಲೆನ್ನುತ್ತಿದ್ದ ಜನರಿಗೆ ರಾಜ್ಯತೃಷ್ಣೆಯಾಯಿತು. ತುರುಕರಂತೆ ಗ್ರೀಕರೂ ಒಮ್ಮೆ ಸಾಮ್ರಾಜ್ಯಾಧಿಪತಿಗಳಾಗಿ ಇಂದು ಸಣ್ಣ ಸಂಸ್ಥಾನಿಕರಾಗಿದ್ದಾರೆ. ಇವರು ಇದೇ ಸಮಯವೆಂದು ತಿಳಿದು ಏಶಿಯಾಮಾಯನಾರದಲ್ಲಿ ದಂಡಯಾತ್ರೆಯನ್ನು ಹೊರಡಿಸಿ, ಕೇಮಾಲಪಾಷಾನ ಆಳಿಯ ರಾಜಧಾನಿಯಾದ ಅಂಗೋರಾ ಪಟ್ಟಣ

ಹುಬ್ಬಳ್ಳಿ ಪೇಟೆ ಕರಾಗಿ [illegible] ನೇ ವ್ಯಕ್ತಿ ಮನೆ [illegible] ಹೊಸ ಅಂಗಡಿಯು ಗೋವಿಂದಸ್ವಾಮಿ ಕೃಷ್ಣಸ್ವಾಮಿ ಮುದ್ಲಿಯಾರ ಇವರ ಕಡೆಯಿಂದ [illegible] ತಕ್ಕೊಂಡಿರುತ್ತೇವೆ. ಕಾರಣ ಸದರ ಅಂಗಡಿಯ ಮೇಲೆ ಯಾರದಾದರೂ ವಸ್ತು ವಿಷಯವಾದರೂ ಬಾಬತಿದ್ದರೆ ಈ ನೋಟೀಸು ಪ್ರಸಿದ್ಧವಾದ [illegible] ದಿವಸಗಳಲ್ಲಿ ಕೆಳಗೆ ಸಹಿ ಮಾಡಿದವರ ಕಡೆಗೆ ತಿಳಿಸಬೇಕು. ತಿಳಿಸದೆ ಇದ್ದರೆ ಸದರಿ ಅಂಗಡಿಯ ಸಂಬಂಧ ಮುಂದೆ ಯಾರ ತಕರಾರು ನಡಿಯಲಿಕ್ಕಿಲ್ಲ.

ಧಾರವಾಡ

ತಾ, ೨೦-೪-೨೩

ಕೆ, ಎಸ್, ಜೋಶಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡ ವ್ಯಾಪಾರೋದ್ಯೋಗ ಕಂ ಲಿಮಿಟೆಡ್.

ನೋಟೀಸು

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾ. ಹಿರೇ ಕುರುವತ್ತಿ ಗ್ರಾಮದಲ್ಲಿರುವ ಪಾರ್ವತಿ ಕೋಮ ಈರನಗೌಡಾ ಸಿದ್ದನಗೌಡರ ಸಾ. ಹಿರೇಲಿಂಗಳ್ಳಿ ಇವಳಿಗೆ ಧಾರವಾಡ ಜಿಲ್ಲಾ ಕಣಗಿನ ತಾಲೂಕ ಹಿರೇಲಿಂಗಳ್ಳಿ ಗ್ರಾಮದಲ್ಲಿರುವ ಕೆಳಗೆ ಸಹಿಮಾಡಿದವನ ಕಡೆಯಿಂದ ನೋಟೀಸ ಕೊಡುವದರಲ್ಲಿ ಬರುತ್ತದಲ್ಲಾ ನೀನು ನನಗೆ ಲಗ್ನ ಹೆಂಡತಿ ಇದ್ದು ನಿನ್ನನ್ನು ಆಜಮಾಸ ೬-೭ ವರ್ಷದ ಕೆಳಗೆ ಲಗ್ನ ಮಾಡಿಕೊಂಡು ಬಂದಲಾಗಾಯ್ತು, ನೀನು ನನ್ನ ಸಂಗಲಾ ಹಲೋತಿಯಿಂದಾ ಬಾಳ್ವೆ ಮಾಡಿಕೊಂಡಿದ್ದು, ಒಂದವಳು ಈಗ ಆಜಮಾಸ ೩೦ ದಿವಸಗಳ ಕೆಳಗೆ ನಿನ್ನ ತವರ ಮನಿ ಹಿರೇ ಕುರುವತ್ತಿಯಿಂದ ನಿನ್ನ ಕಕ್ಕಾ ಬಸನಗೌಡಾ ನಿನ್ನ ತಮ್ಮನನ್ನು ಕರಕೊಂಡು ನಮ್ಮಲ್ಲಿಗೆ ಬಂದು ನಿನ್ನನ್ನು ಕಳಿಸಿಕೊಡು, ಅಂತಾ ಕೇಳಿದರು ಅದಕ್ಕೆ ನಾನು ಈಗ ಒಕ್ಕಲತನದ ಹಂಗಾಮು ಇದ್ದು ನನಗೆ ಅಡಿಗೆ ಮಾಡಲಿಕ್ಕೆ ಯಾರೂ ಇರುವದಿಲ್ಲ. ಈಗ ಕಳಿಸೋದಿಲ್ಲ ಅಂತಾ ಅವರಿಗೆ ಹೇಳಿದೆ. ಅವರು ನಮ್ಮಲ್ಲಿ [illegible] ೮ ದಿವಸ ಇದ್ದು ಊರಿಗೆ ಹೊರಟು ಹೋದರು. ನಾನು ಅವರನ್ನು ಕಳಿಸಿ ಹೊಲಕ್ಕೆ ಹೊರಟು ಹೋದೆ. ಬಳಿಕ ನೀನು ಭಾವಿಗೆ ನೀರಿಗೆ ಹೋಗಬೇಕೆಂತಾ ಕೊಡಗಳನ್ನು ತೆಗೆದುಕೊಂಡು ಮನಿ ಕೀಲಿ ಹಾಕಿ ನನ್ನ ಮನೆಯ ಹೆಣ್ಣುಮಗಳ ಕೈಯಲ್ಲಿ ಕೀಲಿ ಕೈ ಕೊಟ್ಟು ಹೋದವಳು ಹಾಗೇ ಸರಭರಿ ನಿನ್ನ ಕಕ್ಕಾ ಅವರ ಸಂಗಡಾ ಹೊರಟು ಹೋದಿ. ರುತ್ತೀನಿ ನಾನು ಸಂಜೆಗೆ ಹೊಲದಿಂದ ಬಂದು ಕೇಳಲಾಗಿ ಭಾಂವಿಗೆ ನೀರಿಗೆ ಹೋದಾಕಿಯು ಬರಲಿಲ್ಲಾ ಅಂತಾ ನನ್ನ ಮಗಳು ಹೇಳಿದಳು. ನಾನು ಹುಡುಕಿದೆ. ನಾನು ಮಾಡಿ ನೋಡಿದೆ ನಮ್ಮಲ್ಲಿ ಇದ್ದಿಲ್ಲಾ ಅವಳು ನಿನ್ನ ಕಕ್ಕಾ ಅವರ ಸಂಗಡಾ ಹೋಗಿದ್ದಾಳೆ ಅಂತಾ ಖಾತ್ರಿಯಾಯಿತು. ಈ ವರಿಗೂ ಸುಮ್ಮನೇ ಇಟ್ಟಿ ನೀನು ನನ್ನಲ್ಲಿ ಆರಿಗೆ ಬರುವದಕ್ಕೆ [illegible] ನನ್ನ ಹೊರತು ಯಾರೂ ಇರುವದಿಲ್ಲಾ ನನ್ನ ಕೆಲಸಕ್ಕೆ ತೊಂದರೆ ಆಗತದೆ. ಅಂತಾ ತಿಳಿದಿದ್ದು ನೀನು ಈ ವರಿಗೂ ಬಾರದೆ ಇದ್ದದ್ದು ಹ್ಯಾಂಗೂ ನೀನು ನನಗೆ ಹೇಳದೇ ಹೋದದ್ದು ಬಹಳ ತಪ್ಪು ಇರುತ್ತದೆ ಇದರೂ ಚಿಂತಿಲ್ಲಾ ನಾನು ನಿನಗೆ ಈ ನೋಟೀಸಿನ ದ್ವಾರ ತಿಳಿಸೋದೇನಂದರೆ ನೀನು ಈ ನೋಟೀಸ ಮುಟ್ಟಿದ (೮) ದಿವಸದಲ್ಲಿ ಬಂದು ನೀನು ಮೊದಲಿನಂತೆ ಬಾಳ್ವೆ ಮಾಡಿಕೊಂಡು ಹೋಗಬೇಕು ಬರ ನೀನು ಈ ನೋಟೀಸಿನ ಮುದ್ದತಿಯಲ್ಲಿ ಬಂದು ನನಗೆ ಸರಿಯಾಗಿ ಬಾಳ್ವೆ ಮಾಡಿಕೊಂಡು ನನ್ನಲ್ಲಿ ನೀನು ಇರದಿದ್ದರೆ ಇದೇ ನೋಟೀಸಿನಂತೆ ತಿಳಿಯತಕ್ಕದ್ದು ಮುಂದೆ ನನ್ನ ಮೇಲೆ ನಿನ್ನ ಹಕ್ಕು ನಿನ್ನ ಮೇಲೆ ನನ್ನ ಹಕ್ಕು ಯಾವ ವಿಧದಿಂದಲೂ ಉಳಿಯುವಂತೆ ಇಲ್ಲಾ ಈ ನೋಟೀಸಿನ ಖರ್ಚು ಪ ಲಗ್ನದ ಖರ್ಚು [illegible] ಖರ್ಚ ಸಹಾ ನಿನ್ನ ತಲೆಯಮೇಲೆ ಇದ್ದೀತು ತಾರೀಖು ೨೦-೪-೧೯೨೩

ಈರನಗೌಡಾ ಶಿವರುದ್ರಗೌಡಾ ಸಿದ್ದನಗೌಡರ ಸಾಕಿನ ಹಿರೇಲಿಂಗಳ್ಳಿ

ಚಟ್ಟಿಗೆಯ ಅಳತೆಯ ಜಂತ್ರಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-೮ ಆಣೆ.

ಪತ್ತೆ- ರಾಮರಾವ ಬಳ್ಳಾರಿ. ಕ್ರಾಂತ ಪ್ರಿಂಟಿಂಗ ಕಂಪನಿ

ವಾಗ್ವಿಲಾಸ ಬುಕ್‌ಡಿಪೋ

ಪ್ರೇಮಿಗಳು ಬೇಗನೆ ವಿ ಪಿ ದಿಂದಾ ತರಿಸಿ ಓದಿ ಆನಂದಪಡಿಯಿರಿ ೧ಕ್ಕೆ ೪ ಆಣೆ ಅಡ್ವಾನ್ಸು ಹಣಾ ಕಳಿಸಬೇಕು

ಇದರಿ

	ರೂ. ಆ. ಪೈ		ರೂ. ಆ. ಪೈ
ಮರಾಠಿ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಾನವ ಧರ್ಮ	೦-೧೨-೦
ಮುಸಲ್ಮಾನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧-೦-೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೦ ೧೩ ೬	ಪ್ರಭಾವಿಜಯನಾಟಕ	೧-೦-೦
ಮಂಜು ಘೋಷಾ ಕಥೆ	೧ ೪ ೦	ತುಕಾರಾಮ ನಾಟಕ	೧-೪-೦
ಮಹಾರಾಣಾ ಪ್ರತಾಪಸಿಂಹ	೧ ೬ ೦	ಶ್ರೀ ಧರ್ಮರಹಸ್ಯ ನಾಟಕ	೧-೦ ೦
ಜೋಗಳಪದ	೦ ೪ ೦	ಸಾದ್ರಸಂಗೀತ ಮದನಮಾಲಿನಿ	೦-೧೨-೦
ಶ್ರೀ ಧರ್ಮನೀತಿ	೦ ೧೨ ೦	ಹಿಂದೀ ವಿನಾ ವೈದ್ಯ ಯಂತ್ರ	
ದಿವ್ಯ ಸುಂದರಿ ಖುದಿಯೋ ಕೃತ	೧ ೦ ೦	ಯಂತ್ರ ... ಸಹಿತ	೧-೮-
ಕಾದಂಬಿ ವಿಟಿಕ ಕಾರಸ್ಥಾನ	೦ ೧೨ ೦	ಸಟೀಕ ವಿಚಾರ ಸಾಗರವೇದಾಂತ	೪-೦ ೦
ಹಿಂದು ಲಾ ಕಾಯಿದೆ ಚಿನ್ನ ಮುಳಗುಂದಕೃತ	೬ ೦ ೦	ಜಿಜ್ಞಾಸಂ ... ಪಂಚದಶೀವೇದಾಂತ	೪-೦-೦
ಅಶೋಕ ಕಾದಂಬರಿ	೧ ೬ ೦	ಮಂಜೇಶ್ವ ಸಿದಗೌಡ ಶಿವಯೋಗ ವಿವರ	೨ ೦-೦
ಷಟ್ಚಕ್ರಯಮಸಾಸನ ಸಾಸ		ಸಿದ್ಧ ... ಪ್ರಕಾಶ	೧-೮-೦
ಸ್ವಪ್ನಗಳ ಫಲವಿಚಾರ	೦-೧೨-೦	ಸಚಿತ್ರ ... ಸಂಸ್ಕೃತಿ	೧-೪-೦
ಅಡವಿ ಹುಡಗಿ	೦-೧೩-೦	ಸಟೀಕ ಷಟ್ಸ್ಥಲ ... ಕೈವಲ್ಯ	೧-೪-೦
ವೀರಶೈವಾಚಾರ	೧-೦-೦	ಶ್ರೀ ಧ ... ನಟಲಿಂಗಲೀಲೆ	೧-೧-೦
ಕಲ್ಪವೃಕ್ಷ ಆರುಬೆರಳಿನ ಕೃತ	೧-೮-೦	ಗರ್ಭಿಣಿಸಂಸಂಗೋಪನ	೦-೧೨-೦
ಪ್ರತ್ಯಕ್ಷಫಲಪಂಚಸಿದ್ಧಿ ಅನುಭವಸಿದ್ಧಿ	೨-೮-೦	ರಾಮಕೃಷ್ಣ ಪರಮಹಂಸ ಚರಿತ್ರೆ	೧ ೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೦-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣನವರಲೀಲಾ	೦-೩-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳವಾಡ ಶಿವಭಜನಪದಗಳು	೦-೩-೦
ಬಸವಭಾನು ಪಾವಟೆ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ವಾದ ಪರೀಕ್ಷಾ ಪಾವಟೆ ವಕೀಲ	೦-೮-೦	ಆರೋಗ್ಯ ಜೀವನ ಹರಡೇಕೃತ	೦-೮-೦
ಮುಳಗುಂದನಾಗಸ್ವಾಮಿಯ ಕೈವಲ್ಯದರ್ಪಣ	೧-೪-೦	ಲಿಮಿಕಲೀಲಾನಾಟಕ ಸಂಗೀತ	೧-೦-೦
ಕಾಮಧೇನು	೧ ೮-೦	ಸಂಗೀತ ಸಮಯಸಾರ ಮೈಸೂರು	೧-೧೨ ೦
ಪ್ರೇಮಮಂದಿರ	೦-೮-೦		

ಪತ್ತೆ ಪಿ. ಆರ್. ಶಿವಲಿಂಗಪ್ಪಾ ಪಬ್ಲಿಸರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸಮಸ್ತಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು.

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ- ೫೦ ಸ್ಟೇಶನ್ ರೋಡ ಹುಬ್ಬಳ್ಳಿ **ಶಾಖಾ**- ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಬೆಕಾರಿ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್. ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಧಂಡವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮಾಳಾಪೂರ ಬಿ. ಎಲ್. ಎಲ್‌ಎಲ್.ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ. (ಎಕ್ಸ ಅಫೀಶಿಯೋ)

ಚಾಲೂ ಖಾತೆಗಳು- ೫೦ರೂ. ಗಳಿಂದ ತೆಗೆಯಬಹುದು. ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ರಂ.

ಸೇವಿಂಗ್ಸ ಬ್ಯಾಂಕ- ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತಿ ಠೇವುಗಳು- ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ- ೬ ತಿಂಗಳ ಮುದ್ದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೪ರಂತೆ; ೧೨ ತಿಂಗಳ ಮುದತೀ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಇತರ ಕಾರ್ಯಗಳು- ಬಂಗಾರ ಬೆಳ್ಳಿಗಳ ಗಟ್ಟಿ, ಇವನ್ನು ತರಿಸಿಕೊಡುವದು ಸರಕಾರೀ ಪ್ರಾಮಿಸರಿನೋಟ, ಪೋರ್ಟಬಾಂಡ, ಚೆಕ್ಕ, ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ್ ತಕ್ಕೊಂಡು ಕೊಡತಕ್ಕೊಳ್ಳುವದರಲ್ಲಿ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದಲ್ಲಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು.

ಮೆಸರ್ಸ ದೇಶಪಾಂಡೆ ಆ್ಯಂಡ ಕೋ ಮ್ಯಾನೇಜಿಂಗ ಏಜಂಟ್ಸ

ನೋಟೀಸಿನದರಗಳು:

ಸಿಂಗಲಕಾಲಮಿನ ಹತ್ತುಸಾಲುಗಳಿಗೆ ಒಂದೂ ರೂಪಾಯಿ; ಮುಂದೆ ಪ್ರತಿಯೊಂದು ವಳಿಗೆ ಒಂದು ಆಣೆ; ಇಂಗ್ಲಿಷ ಪ್ರತಿಯೊಂದು ವಳಿಗೆ ನಾಲ್ಕು ಆಣೆ ಇಂಗ್ಲಿಷದಿಂದ ಅನಕರೆಸಿ ಕನ್ನಡದಲ್ಲಿ ಹಾಕುವದಿದ್ದರೆ ಐದು ಆಣೆ. ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ ಧಾರವಾಡ

ನಮ್ಮ ಖಾತಮಿದಾರರಿಗೆ ಸೂಚನೆ.

—(೦)—

ನಮ್ಮ ಖಾತೆಮಿದಾರರಲ್ಲಿ ಹಲವರು ತಮ್ಮ ಖಾತೆಸುಗಳನ್ನು ಪಾಕೀಟಿನಲ್ಲಿ ಹಾಕಿ ಕಳಿಸುವದರಿಂದ ನಿಷ್ಕಾರಣವಾಗಿ ಹೆಚ್ಚು ಖರ್ಚು ಬೀಳುವದು. ಆದ್ದರಿಂದ ಇನ್ನು ಮುಂದೆ ಖಾತೆಮಿದಾರರು ಬುಕ್‌ಪೋಸ್ಟು ಮಾಡಿಯೇ ಕಳಿಸತಕ್ಕದ್ದು ಹೋಗಬೇಕು.

ಹಲವು ಖಾತೆಮಿದಾರರು ದುಡ್ಡು ಖರ್ಚಾಗುತ್ತೆಂದು ನಾಟಪೇಟಮಾಡಿ ಕಳಿಸುವರು. ಇಲ್ಲಿ ನಾವು ದುಪ್ಪಟ್ಟು ಚಾರ್ಜ ಕೊಟ್ಟು ತೆಗೆದುಕೊಳ್ಳಬೇಕಾಗುವದು.

ಈ ಎರಡು ಮಾರ್ಗಗಳು ಸರಿಯಲ್ಲವಾದದರಿಂದ ನಾವು ಮೊದಲೇ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ನಾವು ನಾಟ ಪೇಟ ಪತ್ರಗಳನ್ನು ಸ್ವೀಕರಿಸುವದಿಲ್ಲ.

ಮ್ಯಾ. ವಿಜಯ. ಧಾರವಾಡ.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟುಂಬಿಕರ ಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ ಮಾರಿಕಾ, ಪಟಕಿ, ಜುಲಾಬು, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಅಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯಂತಯುಕ್ತ ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹವಿಟ್ಟು ರಾತ್ರಿಯಲ್ಲಿ ಮಲಗುವಾಗ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು, ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ.

ಕಾಲರಾಪಿಲ್ಸ- ೨೫ ಗುಳಿಗೆಗೆ ೦-೧೨-೦ ರೂ, ೧೦೦ ಕ್ಕೆ ೨-೮-೦ ರೂ. ಟಪಾಲು ಖರ್ಚು ಬೇರೆ.

ಕ್ಲೋರೋಡೈಯಿನ್- ಬಾಟ್ಲಿ ಒಂದಕ್ಕೆ ೧-೦ ರೂ, ಟಪಾಲಖರ್ಚು ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ- ೫೦ ಕ್ಕೆ ೧-೦-೦ ರೂ, ೧೦೦ ಕ್ಕೆ ೩-೦- ರೂ ಟಪಾಲಖರ್ಚು ಬೇರೆ.

ಪತ್ತೆ:- ಡಾ. ಎಸ್. ಆರ್. ಕಿತ್ತೂರ. V. D.

ತಾರಿನವಿಳಾಸ- ಶಾಂತವೀರ, ಪಶುಸಂಜೀವಿನಿಔಷಧಾಲಯ

ಧಾರವಾಡ. ಧಾರವಾಡ.

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ವಾರ್ತಾಹರ ಪ್ರೇಸಿನಲ್ಲಿ ಛಾಪಿಸಿ, ಪ್ರಸಿದ್ಧ ಮಾಡಿದ್ದರು.

R. N. B 1443

ನಿತ್ಯಪತ್ರ **ವಿಜಯ** ಬೆಲೆ ೬ ಪೈ

ವರ್ಷ ೩) ಧಾರವಾಡ, ರವಿವಾರ ತಾ|| ೨೫ ನೇ ಸಪ್ಟಂಬರ ೧೯೩೨. (ಸಂಚಿಕೆ ೨೦೨

— ಶ್ರೀ. ಗೋಪಾಳಕೃಷ್ಣ ಪ್ರಸನ್ನ —

ಶ್ರೀ. ಗೋಪಾಳ ಸಂಗೀತ ನಾಟಕ ಮಂಡಳಿ.

ಧಾರವಾಡದಲ್ಲಿ ರಾ. ಗೋಪಾಳಗಿರಿಯವರ

ಅನ್ನಪೂರ್ಣಾ ಥಿಯೇಟರಿನಲ್ಲಿ.

ಶೀಘ್ರವೇ ತಮ್ಮ ಲೋಕಪ್ರಿಯ

ಪ್ರಯೋಗಗಳನ್ನು ಪ್ರಾರಂಭಿಸುವರು.

ಮ್ಯಾನೇಜರ್, ಎಸ್, ಸೋನಿ.

ಶ್ರೀ, ಗೋ, ಸಂ, ನಾ, ಮಂ,

ಧಾರವಾಡ [illegible]

ಜಾಹೀರ ನೋಟೀಸು

ಯಾವತ [illegible]

[illegible]

ಧಾರವಾಡ
ತಾ. ೧೯-೯-೩೨ [illegible]

ಧಾರವಾಡ [illegible]

ಏಜೆಂಟರು ಬೇಕು. [illegible] ಏಜೆಂಟರು ಬೇಕು.

[illegible]

[illegible] ಶ್ರೀ [illegible]

[illegible]

ಇನಾಮು ಪುಸ್ತಕ ಸಹ ವಿಜಯ ಪತ್ರದ

ವರ್ಗಣಿಯ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ ,,	೭—೦—೦ ರೂ.
೩ ,,	೪—೦—೦ ರೂ.

ವಾರಪತ್ರಕ್ಕೆ

೧ ವರ್ಷಕ್ಕೆ ೩—೧೨—೦ ರೂ.

ಒಂದು ವರ್ಷಕ್ಕಿಂತ ಕಡಿಮೆಯ ಮುದತಿಗೆ ಇನಾಮಿನ ಪುಸ್ತಕವು ದೊರೆಯದು.

ವಿಶೇಷ ಮಾಹಿತಿ ಕೆಳಗಿನವರಿಂದ ಕೇಳಬೇಕು.

ಮ್ಯಾ- ವಿಜಯ. ಧಾರವಾಡ.

ಜಾಹೀರ ನೋಟೀಸು.

—೦—

ಕೆಳಗೆ ಸಹಿ ಮಾಡಿದ ಬಸವ್ವಾ ಕೋಮ ಕರಬಸಯ್ಯಾ ವಿರಕ್ತಮಠ ಸಾಕಿನ ಚಿಕ್ಕೊಪ್ಪ ತಾಲೂಕಾ ರಾಮದುರ್ಗ ಈ ನೋಟೀಸಿನ ಮೇಲಿಂದಾ ಜಾಹೀರ ಪಡಿಸುವದೇನಂದರೆ ನನ್ನ ಗಂಡನಾದ ಕರಬಸಯ್ಯಾ ಈತನು. ೮|೯ ವರ್ಷದ ಕೆಳಗೆ ಮೃತ ಪಟ್ಟಿರುತ್ತಾನೆ. ಅವನ ತಂದೆಯಾದ ಅಂದಾನಯ್ಯಾ ಚನ್ನ ಗುರನಂಜಯ್ಯಾ ವಿರಕ್ತಮಠ ಸಾಕಿನ ಚಿಕ್ಕೊಪ್ಪ ಈತನು ಜೀವಂತ ಇದ್ದು ಯಾವತ್ತು ಖರೀದಿ ಸ್ಥಾವರ ಜಂಗಮ ಆಸ್ತಿಯು ಅವನ ಕಬಜಗೆ ಇರುತ್ತದೆ. ನನ್ನ ಗಂಡನು ತೀರಿಕೊಂಡ ಮೇಲೆ ನಾನು ನನ್ನ ಮಕ್ಕಳೊಂದ ರಾಚವ್ವಾ ವ ದುಂಡಯ್ಯಾ ಇವರನ್ನು ಇಟ್ಟುಕೊಂಡು ಎಂಟು ವರ್ಷದವರೆಗೆ ನನ್ನ ಮಾವನ ಹತ್ತರಾ ಇದ್ದೆನು, ಆ ಅವಧಿಯಲ್ಲಿ ಈತನು ದುರ್ವ್ಯಸನಕ್ಕೆ ಬಿದ್ದು ರಂಡಿಯನ್ನು ಇಟ್ಟುಕೊಂಡು ನನಗೂ ನನ್ನ ಮಕ್ಕಳಿಗೂ, ತ್ರಾಸಕೊಡಹತ್ತಿದ್ದರಿಂದ ನಾನು ಆ ಲಾಗಾಯಿತ ಬೇರೆ ಇರಲಿಕ್ಕೆ ಹತ್ತಿದೆನು ನನ್ನ ಉಪಜೀವನದ ಬಗ್ಗೆ ಕೋರ್ಟಿನಲ್ಲಿಯು ೬ ಯಕರೆ ಎಂದು ಹೊಲಾ ಮಾತ್ರ ಕೊಟ್ಟಿರುತ್ತಾನೆ. ಉಳಿದ ಯಾವತ್ತು ಆಸ್ತಿ ಅವನ ಕಬಜಗೆ ಇರುತ್ತದೆ. ಈಗ ಸದರಿಯವನು ತನ್ನ ದುರ್ವ್ಯಸನದ ಗೋಸ್ಕರ ಯಾವತ್ತು ಆಸ್ತಿ ಹಾಳು ಮಾಡಲಿಕ್ಕೆ ಹತ್ತಿರುತ್ತಾನೆ, ರಂಡಿಗೆ ಒಂದು ಹೊಲಾ ನಂದು ಮಾಡಿ ಕೊಂಡು ಕೊಟ್ಟಿರುತ್ತಾನೆ ಕಾರಣಾ ಈ ನೋಟೀಸಿನಿಂದ ತಿಳಿಸುತ್ತೇನಂದರೆ ಸದರಿಯವನಿಗೆ ಪಿತ್ರಾರ್ಜಿತ ಸ್ಥಾವರ ಆಸ್ತಿ ವಿಲೆವಾಟ ಮಾಡಲಿಕ್ಕೆ ಏನೂ ಅಧಿಕಾರವಿಲ್ಲಾ ಆ ಜಮೀನುಗಳನ್ನ ಮನಿಗಳನ್ನು ಯಾರೂ ಖರಿದಿ ವತ್ತಿ ಹಿಡಿಯಬಾರದು ಅಲ್ಲ ವಯಿ ನನ್ನ ಮಗನ ಹಕ್ಕ ಸಂಪೂರ್ಣ ಇರುತ್ತದೆ. ತಿಳಿಯೋಮ ತಾರೀಖು ೨೧-೯-೧೯೩೨ ಇಸ್ವಿ.

ಈ ಯಡಗೈ ಹೆಬ್ಬೆಟ್ಟಿನ ಗುರ್ತ ಬಸವ್ವಾ ಕೋಮ ಕರಬಸಯ್ಯಾ ವಿರಕ್ತಮಠ ಸಾಕೀನ ಚಿಕ್ಕೊಪ್ಪ ಈಕಿ ಕೈದು ಇದೆ.

———

ವಿ ಜ ಯ.

ಧಾರವಾಡ ತಾ|| ೨೪-೯-೧೯೨೨ನೇ ಇಸ್ವಿ.

ಇಂಗ್ಲಂಡದ ಕೂಲಿಕಾರರು ಯುದ್ಧವನ್ನು ವಿರೋಧಿಸಿದರು.

—o—

ಕೂಲಿಕಾರರು ಯುದ್ಧವನ್ನು ವಿರೋಧಿಸಿ, ಯುದ್ಧಕ್ಕೆ ಯಾವ ಪ್ರಕಾರದ ಸಹಾಯ ಮಾಡಕೂಡದೆಂದು ಸಂಘಗಟ್ಟಿದರು. ಇವರು ತಮ್ಮ ದೊಡ್ಡ ಸಭೆಯಲ್ಲಿ " ನಾಮದಾರ ಲಾಯಿಡ ಜಾರ್ಜ ಸಾಹೇಬರು ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳುವದಕ್ಕೆ ಗಂಡಾಂತರವಾಗಿರುತ್ತಾರೆಂದೂ ಬೇಗನೆ ಪಾರ್ಲಮೆಂಟ ಸಭೆಯು ಚುನಾವಣೆಯಾಗಬೇಕೆಂದೂ ಠರಾವು ಪಾಸಮಾಡಿದ್ದಾರೆ. ಇವರು ಈ ಪ್ರಕಾರ ಒಂದೇ ಠರಾವನ್ನು ಪಾಸಮಾಡದೆ, ನಾಮದಾರ ಲಾಯಿಡ ಜಾರ್ಜ ಸಾಹೇಬರನ್ನು ಕಾಣಲಿಕ್ಕೆ ತಮ್ಮ ಪಕ್ಷದಿಂದ ಕೆಲ ಪ್ರತಿನಿಧಿಗಳನ್ನು ಕಳಿಸುವರು. ಇವರು ಸಾಹೇಬರಿಗೆ ಯುದ್ಧಬೇಡೆಂದು ಹೇಳುವರು. ಆದರೂ ಸಾಹೇಬರು ದುರಾಗ್ರಹ ಹಿಡಿದರೆ— ಇಂಗ್ಲಂಡದೊಳಗಿನ ಎಲ್ಲ ಗಿರಣಿ, ಕಾರಖಾನೆ, ಖಾಣಿಗಳನ್ನು ಯುದ್ಧದ ನಿಷೇಧವೆಂದು ಜಾಹೀರ ಮಾಡಲೋಸ್ಕರ [illegible] ಮಾಡಿಸಿ- ಬಂದು ಮಾಡುವರು. ಕೂಲಿಕಾರರು ಈ ಪ್ರಕಾರ ತೋರಿಸಿದ ಕಲಕಲದಿಂದ ಇಂಗ್ಲಿಷ ಜನರಿಗೆ ಯುದ್ಧದ ಬಗ್ಗೆ ಎಷ್ಟು ತಿರಸ್ಕಾರವುಂಟಾಗಿರುತ್ತದೆಂಬದು ಕಂಡುಬರುವದು.

ಯುದ್ಧದ ಹೆಮ್ಮೆ ತಗ್ಗಿತು.

—o—

ಲಾರ್ಡ ಕರ್ಜನಸಾಹೇಬರು ಫ್ರೆಂಚರ ಮನಸ್ಸನ್ನು ಒಲಿಸಿಕೊಳ್ಳುವದಕ್ಕಾಗಿ ಪ್ಯಾರೀಸಕ್ಕೆ ಹೋದರು. ಅಲ್ಲಿ ತಮ್ಮ ಉದ್ದೇಶವನ್ನು ಪೂರ್ಣ ಮಾಡಿಕೊಳ್ಳುವದರ ಬದಲಾಗಿ, ತಾವೇ ಅವರ ಬಲೆಯಲ್ಲಿ ಬಿದ್ದರು. ಸಾಹೇಬರು ಅಲ್ಲಿಗೆ ಹೋದಬಳಿಕ ಯುದ್ಧ ಪ್ರಸಕ್ತಿಯನ್ನು ಹೊರಡಿಸದೆ, ಶಾಂತತೆಯನ್ನು ಕಾಯ್ದುಕೊಂಡು, ಒಪ್ಪಂದವನ್ನು ಹೇಗೆ ಮಾಡಿಸಬೇಕೆಂಬದನ್ನೇ ಪ್ರಸ್ತಾಪಿಸಿದರು. ೨೦ ನೇ ತಾರೀಖಿನ ದಿವಸ ಇವರೂ, ಪೋಂಕೇರ ಸಾಹೇಬರೂ ನಾಲ್ಕು ತಾಸುಗಳವರೆಗೆ ಗುಪ್ತವಾಗಿ ಚರ್ಚೆಮಾಡಿದರು. ಇದರ ತಾತ್ಪರ್ಯವೇನೆಂದು ಪ್ರಶ್ನೆ ಮಾಡಿದವರಿಗೆ ಸಾಹೇಬರು " ಏನೂ ಇಲ್ಲ; ಹೇಳತಕ್ಕದ್ದೇನೂ ಇಲ್ಲ; ಕೇವಲ ಸ್ನೇಹಿತರಂತೆ ಸಂಭಾಷಣೆ ಮಾಡಿದೆವೆಂದು " ಉತ್ತರಕೊಟ್ಟರು. ಕೊನೆಯಲ್ಲಿ ಬಲಿಷ್ಟ ಹಾಗು ಕನಿಷ್ಟ ಸಂಯುಕ್ತರ ಸಭೆಯನ್ನು ಕೂಡಿಸಿ ಒಪ್ಪಂದದ ವಿಚಾರ ಮಾಡಬೇಕೆಂದು ನಿರ್ಣಯವಾದಂತೆ ಪ್ರಸಿದ್ಧವಾಯಿತು. ಈ ಸಭೆಗೆ ಇಂಗ್ಲಂಡ, ಫ್ರಾನ್ಸ, ಇಟಲಿ, ಜಪಾನ, ಗ್ರೀಸ, ರೋಮಾನಿಯಾ, ಜುಗೋ-ಸ್ಲಾವಿಯಾ ಮತ್ತು ತುರ್ಕಸ್ಥಾನ ಇಷ್ಟು ದೇಶಗಳ ಪ್ರತಿನಿಧಿಗಳು ಬರಬೇಕೆಂದು ಗೊತ್ತುಮಾಡಿರುವರು. ಇದರಲ್ಲಿ ರಶಿಯಾದ ಹೆಸರು ಇರುವದಿಲ್ಲೆಂಬದನ್ನು ಧ್ಯಾನದಲ್ಲಿಡುವಂಥ ಸಂಗತಿಯು.

ಸಂಯುಕ್ತರಿಗೆ ವಿರುದ್ಧವಾಗಿ ರಶಿಯರ [illegible] ಸಂಯುಕ್ತ ಸಂಘ.

—o—

ಬೊಲ್ಶೆವಿಕರು ಈ ಬಿಕ್ಕಟ್ಟಿನ ಸಮಯದಲ್ಲಿ ಸುಮ್ಮನೆ ಕೂಡ್ರದೆ ವಿಲಾಯತಿಯ ಸಂಯುಕ್ತರಂತೆ ಆಶಿಯಾ ಖಂಡದಲ್ಲಿ ತಮ್ಮದೊಂದು ಸಂಯುಕ್ತ ಸಂಘವನ್ನು ಸ್ಥಾಪಿಸುವ ಏರ್ಪಾಡು ನಡಿಸಿದ್ದಾರೆ. ಈ ಸಂಘದಲ್ಲಿ ರಶಿಯಾ, ಅಂಗೋರಾ ಪ್ರಾಂತ, ಇರಾಣ, ಕಾಬೂಲ, ಬುಖಾರಾ, ಮಾಂಗೋಲಿಯಾ, ಕಾಕೇಶಿಯ ಪ್ರಾಂತಗಳೆಲ್ಲ ಸೇರುವವು. ಕಾಬೂಲ ದರಬಾರದಲ್ಲಿ ರಾಸಕೋಲ್ನಿಕಾಫನೆಂಬವನು ಬೊಲ್ಶೆವಿಕರ ರಾಯಭಾರಿಯಾಗಿರುತ್ತಾನೆ. ರಶಿಯರನ್ನೊಳಗೊಂಡಂಥ ಸಮಸ್ತ ಮುಸಲಮಾನರ ಒಂದು ಘಟಕವಾಗಿರುವಂತೆ ಅಮೀರರಿಗೆ ಹಿತಮಂತ್ರವನ್ನು ಹೇಳಬೇಕೆಂದು ಬೊಲ್ಶೆವಿಕ ಸರಕಾರದವರು ಈತನಿಗೆ ಸೂಚನೆ ಮಾಡಿರುತ್ತಾರೆ. ಮುಸಲಮಾನರೆಲ್ಲ ಒಂದೆಂಬ ಭಾವನೆಯು ಈ ಮೊದಲೇ ಹುಟ್ಟಿದ್ದು, ಇದರ ಆದ್ಯಪ್ರವರ್ತಕರಲ್ಲಿ ಮೌಲಾನಾ ಮಹಮದಲ್ಲಿಯವರೊಬ್ಬರಾಗಿದ್ದಾರೆ. ಮುಸಲಮಾನ ಮಂಡಲ ಸ್ಥಾಪನೆಯಾಯಿತೆಂದರೆ- ಪ್ಯಾಲೆಸ್ಟಾಯಿನ, ಅರಬಸ್ತಾನ ಮತ್ತು ಮೆಸಾಪೊಟೆಮಿಯಾದ ಅರಸರೂ ಈ ಸಂಘದಲ್ಲಿ ಸೇರಬಹುದಾಗಿರುತ್ತದೆ.

ಜಯಕ್ಕಾಗಿ ಯುದ್ಧವಲ್ಲ; ಪಕ್ಕಾ ಸ್ವಾತಂತ್ರ್ಯಕ್ಕಾಗಿ ಯುದ್ಧ.

—o—

ಕೆಮಾಲ ಪಾಶ್ಚಾನು ಒಂದು ಜಾಹೀರನಾಮೆಯನ್ನು ತೆಗೆದು " ಇಂಥ ಅದ್ಭುತ ಜಯವಾಗಲಿಕ್ಕೆ ತುರುಕರ ಕರ್ತವ್ಯದಕ್ಷತೆಯೇ ಕಾರಣವಾಗಿದೆ. ಗ್ರೀಕರ ಒಂದು ಲಕ್ಷ ಜನ ಲಯವಾಯಿತು. ನಮ್ಮದು ೧೦ ಸಾವಿರದ ಹಾನಿಯಾಗಿದ್ದು, ಇದರಲ್ಲಿ ಸತ್ತವರ ಸಂಖ್ಯೆಯು ೨೫೦೦ ಆಗಿದೆ. ಬಲಶಾಲಿಗಳೆನಿಸಿಕೊಳ್ಳಬೇಕೆಂದು ನಾವು ಯುದ್ಧ ಮಾಡುವದಿಲ್ಲ. ನಮ್ಮ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳು ಪೂರ್ಣವಾಗುವ ತನಕ ನಮ್ಮ ಕರ್ತವ್ಯವನ್ನು ಮಾಡಲಿಕ್ಕೆ ನಾವು ಹಿಡಿದ ಮಾರ್ಗವನ್ನು ಬಿಡತಕ್ಕವರು " ಎಂಬದಾಗಿ ಅಂದು, ಸಂಯುಕ್ತರಿಗೆ ಮುಂದೆ ಕೊಟ್ಟಂತೆ ತಿಳಿಸಿರುತ್ತಾನೆ.

೧ ಗ್ರೀಕರಿಂದ ಪೀಡೆ ಹೊಂದುತ್ತಿರುವಂಥ ಮುಸಲಮಾನರನ್ನು ಮುಕ್ತ ಮಾಡುವದಕ್ಕೆ ಥ್ರೇಸ ಪ್ರಾಂತಕ್ಕೆ ಹೋಗಲು ದಾರಿಯನ್ನು ಕೊಡಿರಿ.

೨ ನಾವು ಥ್ರೇಸವನ್ನು ಆಕ್ರಮಿಸಿದನಂತರ ಕಪ್ಪುಸಮುದ್ರದ ದಂಡೆಯಲ್ಲಿರುವಂಥ ಎಲ್ಲ ದೇಶಗಳ ಒಂದು ಸಭೆಯನ್ನು ಕರೆದು, ಡಾರ್ಡನೆಲೀಜದ ವಿಷಯವಾಗಿ ಸಂಭಾಷಣ ಮಾಡುವಾ.

ಈ ಸಭೆಯಲ್ಲಿ ರಶಿಯಾ, ರೋಮಾನಿಯಾ, ಬಲ್ಗೇರಿಯಾ, ಜಾರ್ಜಿಯಾ, ಅಜರ್ಬೈಜಾನ ದೇಶಗಳ ಸಮಾವೇಶವಾಗುವದು. ಬಲಿಷ್ಟರು ಮತ್ತು ಪ್ರತಿಷ್ಠಿತರು ಎಂದು ಲಾರ್ಡ ಕರ್ಜನ ಸಾಹೇಬರು ಕೂಡಿಸುವ ಪರಿಷತ್ತಿನಲ್ಲಿ ರಶಿಯಾ, ಬಲ್ಗೇರಿಯಾ, ಅಜರ್ಬೈಜಾನ- ಜಾರ್ಜಿಯಾ ದೇಶಗಳ ಹೆಸರೇ ಇರುವದಿಲ್ಲ. ಈ ಮೂಲಕ ಒಪ್ಪಂದದ ಪ್ರಸ್ತಾಪದ ಮೊದಲು- ಯಾರು ಬರತಕ್ಕದ್ದೆಂಬ ವಿಷಯವಾಗಿ ದೊಡ್ಡ ವಾದವಿವಾದವಾಗುವಂತಿದೆ.

ಇನ್ನೂ ಬೆಂಕೆಯ ಕಿಡಿಯು ಆರಿಲ್ಲ.

—o—

ಕೆಮಾಲಪಾಶ್ಚಾನು ತನಗೆ ಥ್ರೇಸಕ್ಕೆ ಪ್ರವೇಶ ಮಾಡಲು ದಾರಿಯನ್ನು ಕೊಡಬೇಕೆಂದು ಸಂಯುಕ್ತರಿಗೆ ತಿಳಿಸಿದ ವಿದ್ಯಮಾನವನ್ನು ಮೇಲೆ ಬರೆದಿದ್ದೇವೆ. ಇವನಿಗಿಂತ ಸ್ಪಷ್ಟರೀತಿಯಿಂದ, ಫರೀದಬೇಗನು ಡಾರ್ಡನೆಲೀಜ ಪ್ರಾಂತದ ಇಂಗ್ಲಿಷ ಸೇನೆಯ ಮುಖ್ಯಾಧಿಕಾರಿಯಾದ ಸರ ಚಾರ್ಲ್ಸ ಹ್ಯಾರಿಂಗಟನ ಸಾಹೇಬನಿಗೆ ತುರುಕ ಸೈನ್ಯವು ಡಾರ್ಡನೆಲೀಜವನ್ನು ದಾಟಿ ಥ್ರೇಸಕ್ಕೆ ಹೋಗುವದೆಂದೂ, ಈ ಸೈನ್ಯವು ತಾನಾಗಿ ಸಂಯುಕ್ತರ ಮೇಲೆ ಕತ್ತಿ ಹಿರಿಯದೆಂದೂ, ಸಂಯುಕ್ತರು ಅಡ್ಡಬಂದರೆ— ಅನಿವಾರ್ಯವೆಂದು ಯುದ್ಧಮಾಡಬೇಕಾಗುವದೆಂದೂ ಹೇಳಿರುತ್ತಾನೆ. ತುರುಕ ಬಂದರಗಳ ಮೇಲೆ ತೋಪು ಹೊಡೆಯಲಿಕ್ಕೆ ಸಂಯುಕ್ತರು ಗ್ರೀಕರಿಗೆ ದಾರಿ ಕೊಟ್ಟರು. ಅಂದಬಳಿಕ ನಮಗೇಕೆ ನೀವು ದಾರಿ ಕೊಡಬಾರದೆಂದು ಈತನು ಈ ಸಾಹೇಬರಿಗೆ ಸವಾಲು ಹಾಕಿದಾನೆ. ಪರಂತೂ ಹೇಳುವ

ದರಲ್ಲಿ ತಥ್ಯವಿಲ್ಲ. ಒಮ್ಮೆ ಗ್ರೀಕರು ಬಂದಿದ್ದರು. ಬ್ರಿಟಿಶ ಸೈನ್ಯ ನೋಡಿದ ಕೂಡಲೆ ಹಿಂದಿರುಗಿದರೆಂದು ಬ್ರಿಟಿಶ ಸರಕಾರದವರು ಇದಕ್ಕೆ ಉತ್ತರವೆಂದು ಜಾಹೀರುಮಾಡಿರುತ್ತಾರೆ,

ಸಂಯುಕ್ತರ ದಂಡು ಡಾರ್ಡನೆಲೀಜ ಬಿಡುವದು.

—(೦)—

ಸಂಯುಕ್ತರ ದಂಡು ಚಾನಾಕವೆಂಬ ಬಂದರದಲ್ಲಿ ಸೇರಿದೆ. ಫ್ರೇಂಚರು ಇಲ್ಲಿದ್ದ ತಮ್ಮ ದಂಡು ನಾವಿರ್ದ ದಂಡಿಗೆ ಹಿಂದಿರುಗಿ ಬರುವದಕ್ಕೆ ಅಪ್ಪಣೆ ಮಾಡಿದರು. ಕೆಮಾಲ ಪಾಶ್ಚಾನು ತಟಸ್ಥ ವೃತ್ತಿಯನ್ನು ಭಂಗಪಡಿಸಿ, ಡಾರ್ಡನೆಲೀಜವನ್ನು ದಾಟಿದರೂ ನಾವು ದಂಡನ್ನು ಕಳಿಸುವದಿಲ್ಲೆಂದು ಇವರು ಸ್ಪಷ್ಟವಾಗಿ ಹೇಳಿದ್ದಾರೆ, ಫ್ರೇಂಚರ ಒಂಟಿಯು ಹಿಡಿತವನ್ನು ನೋಡಿ, ಇಂಗ್ಲಿಷರೂ ಭೂ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವರು. ಅಂಥ ಪ್ರಸಂಗ ಬಂದರೆ- ಯುದ್ಧದ ಹಡಗುಗಳಿಂದಲೇ ಹೋರಾಡುವಂತೆ ಊಹಿಸಲ್ಪಟ್ಟಿದೆ

ಅಂಗಿಯ ಆಶೆಗಾಗಿ ಸ್ವರಾಜ್ಯದ ನಿಶಾನೆಯ ಕಳವು !!!

—೦—

ತೆಲಗುನಾಡಿಗೆ ಸೇರಿದ ಜೋನಾವರಂ ಪಟ್ಟಣದಲ್ಲಿ ಸ್ವರಾಜ್ಯ ಕಾರ್ಯಾಲಯದ ಮುಂದೆ ಹಚ್ಚಿದ್ದ ಸ್ವರಾಜ್ಯ ನಿಶಾನೆಯ ಖಾದಿಯ ಬಟ್ಟೆಯು ಎರಡು ಮೂರು ಸಾರೆ ಕಳವಾಗಿ ಹೋಯಿತು. ಯಾರು ಕಳವು ಮಾಡುತ್ತಾರೆಂದು ಗುಪ್ತವಾಗಿ ತಪಾಸ ಮಾಡಲು ಒಬ್ಬ ಸಿಪಾಯಿಯು ಇದನ್ನು ಕದ್ದು ತನಗೆ ಅಂಗೀ ಹೊಲಿಸಿಕೊಂಡನೆಂದು ಕಂಡು ಬಂತು. ಸಿಪಾಯಿಯು ವಿರೋಧ ಭಕ್ತಿಯಿಂದಾದರೂ ಸ್ವದೇಶಿಯಾದನು.

ವಿಜಾಪೂರದ ಪತ್ರ.

ನಿನ್ನೆ ದಿವಸ ದೇ. ಭ. ಕೌಜಲಗಿಯವರ ಮೇಲಿನ ಖಟ್ಲೇ ಬರೋಬರೀ ೨-೩೦ ಘಂಟೆಗೆ ನಡೆದು ೮ ಸಾಕ್ಷಿ ಆಗಿ ಖಟ್ಲೆ ೨೫ ತಾರೀಖಿಗೆ ಬಿದ್ದಿತು. ಖಟ್ಲೇದ ಕಾಲಕ್ಕೆ ಕೋರ್ಟಿನೊಳಗೆ ೨೦೦-೩೦೦ ಜನರು ಹೊರಗೆ ೭-೮ ಸಾವಿರ ಜನರು ಕೂಡಿದ್ದರು. ಶಾಂತ ರೀತಿಯಿಂದ ಕೆಲಸ ತೀರಿತು. ಆ ಮೇಲೆ ಯಾವತ್ತರು ದೇಶಭಕ್ತರನ್ನು ವಂದೇ ಮಾತರಂ ಗರ್ಜನೆಯಲ್ಲಿ ಅವರ ಮನಿಯವರಿಗೆ ಮುಟ್ಟಿಸಿ, ತಮ್ಮ ತಮ್ಮ ಮನಿಗೆ ಹೋದರು.

ಅಬಲೆಯರು ಪ್ರಬಲೆಯರಾದರು.

ಮುಂಬಯಿಯಲ್ಲಾದ ವಾಲಕೇಶ್ವರದ ಜಾತ್ರೆಯಲ್ಲಿ ಹೆಣ್ಣುಮಕ್ಕಳೇ ಏಳು ಸಾವಿರದ ಖಾದೀ ಬಟ್ಟೆಯನ್ನು ಮಾರಿದರು,

ಹುಬ್ಬಳ್ಳಿ ಮ್ಯುನಸಿಪಾಲಿಟಿ

—೦—

ಸ್ಕೂಲ ಬೋರ್ಡಿನ ವಿಚಿತ್ರ ಕೃತಿ.

ಲೇಖಾಂಕ- ೨

—೦—

(ಲೇಖಕ- ಬ್ರಾಹ್ಮಣೇತರ, ಹುಬ್ಬಳ್ಳಿ)

ಒಂದನೇ ವರ್ಷಕ್ಕೆ ನಾಲ್ವರನ್ನು ಆರಿಸಿದ ಸಂಗತಿಯನ್ನು ಹೇಳುವದಷ್ಟೇ, ಒಂದನೇ ವರ್ಷಕ್ಕೆ ಆರಿಸಿದ ನಾಲ್ವರೂ ಲಿಂಗಾಯಿತರು. ಹೊಸಬರಾಗಿ ಕೀರ ಹೊಸಬರು. ಕೆಲಸ ಮಾಡಹತ್ತಿ ಇನ್ನೂ ವರ್ಷ ಸಹ ಆಗಿರುವದಿಲ್ಲ. ಇಂಥವರನ್ನು ಸ್ಕೂಲ ಬೋರ್ಡಿನವರು ಹೇಗೆ ಶಿಫಾರಸು ಮಾಡಿದರೋ ಇದೇ ಪರಮಾಶ್ಚರ್ಯವಾಗಿದೆ. ಇನ್ನು ಅವಕಾಶವಿದ್ದರೆ, ಏನಾದರೂ ಮಾಡಲು ಬರುತ್ತಿದ್ದರೆ ಯೋಗ್ಯ ಜನರನ್ನೇ ಆರಿಸಬೇಕಾಗಿ ವಿನಂತಿಯು. ಬ್ರಾಹ್ಮಣೇತರರಲ್ಲಿಯೇ ಮಿ. ನಾಗಶೆಟ್ಟಿ, ಮಿ, ಹಿರೇಮಠ, ಮಿ. ಕ್ಷೀರಸಾಗರ, ಮಿ, ಬಡಿ ಎಂಬವರು ಇನ್ನು ಇವರೆಲ್ಲರೂ ೪-೬ ವರ್ಷ ಹುಬ್ಬಳ್ಳಿಯಲ್ಲಿ ಇದ್ದರೂ ಕೆಲಸ ಮಾಡಿದವರಿದ್ದಾರೆ. ಬೇರಾದರೆ ಬ್ರಾಹ್ಮಣರಲ್ಲಿ ಮಿ. ಗೋಕಾಕರೆಂಬವರು ೭-೮ ವರ್ಷ ಕೆಲಸ ಮಾಡಿದವರಿದ್ದು ಸೆಂಟ್ರಿಲ ಪರೀಕ್ಷೆ ಪಾಸಾದವರಿದ್ದಾರೆ. ಮೇಲೆ ಹೇಳಿದ ಬ್ರಾಹ್ಮಣೇತರರಲ್ಲಿಯೇ ಮಿ ಕ್ಷೀರಸಾಗರರೆಂಬವರೊಬ್ಬರ ೧ ನೇ ವರ್ಷಕ್ಕೆ ನಂಬರು ಸಹ ಬಂದಿತ್ತು. ಗೃಹಕೃತ್ಯದ ತೊಂದರೆಯ ಪ್ರಯುಕ್ತ ಅವರು ಹೋದಸಾರೆ ಹೋಗಲಿಲ್ಲ. ಈಗ ಆರಿಸಿದವರ ವಿಷಯಕವಾಗಿ ಸ್ಕೂಲ ಬೋರ್ಡಿನವರಿಗೆ ದೋಷ ಹೊರುವದೆಂದರೆ ಆ ದೋಷವು ಕಾಕತಾಲೀಯ ನ್ಯಾಯದಿಂದೇ ಬಂದಿರಬಹುದು. ಆದರೂ ಜನರಿಗೆ ಸಂಶಯ ಬರುವಂತಿದೆ. ಅದೇನಂದರೆ—

ಮಿ. ಗಾಣಿಗೇರ ಎಂಬವರು ಬದಲಿ ಮಾಡಹತ್ತಿದ ೧೦-೧೫ ದಿವಸಗಳಲ್ಲಿಯೇ ಕಾಯಂ ಮಾಡಲ್ಪಟ್ಟ ಹಾಗೂ ೧ ನೇ ವರ್ಷಕ್ಕೆ ಆರಿಸಲ್ಪಟ್ಟರು.

ಮಿ. ಹೊರಬ ಎಂಬವರನ್ನೂ ಆರಿಸಿದ್ದರೆ ಇವರೂ ಲಿಂಗಾಯಿತರು. ಪಗಾರರು ತಿಂಗಳಲ್ಲಿ ಕಾಯಂ ಆಗಿದೆ. ಮಿ. ಪೂಜಾರ ಇವರಾದರೂ ೧೦-೧೫ ದಿವಸಗಳಲ್ಲಿ ಕಾಯಂ ಆಗಿ, ಶಿಫಾರಸ ಹೊಂದಿದವರು.

ಮಿ. ಹೊಸರಡ್ಡಿಯವರು

ಈ ನಾಲ್ವರೂ ಅಲ್ಪಾವಧಿಯಲ್ಲಿ ಕಾಯಂ ಆಗಿ-೧ನೇ ವರ್ಷಕ್ಕೆ ಶಿಫಾರಸು ಮಾಡಲ್ಪಟ್ಟರು. ಹೋಗಲಿ ಇವರಾದರೂ ಮುಂದೆ ಬರಲಿ, ಅದಕ್ಕೂ ನಮ್ಮ ಆಕ್ಷೇಪಣೆಯನೂ ಇಲ್ಲ. ಯಾಕಂದರೆ ಕೈಗೆ ನಿಲುಕದ್ದು ಸರ್ವ ಮಾನ್ಯ ಮಿ. ತುಕ್ಕಣವರ (ಲಿಂಗಾಯಿತ) ಮಿ. ಶೀಪರಯ್ಯಾ (ಲಿಂಗಾಯಿತ) ಮಿ. ನವಲಗಿ (ಲಿಂಗಾಯಿತ) ಮಿ. ಕುಲಕರ್ಣಿ ಬ್ರಾಹ್ಮಣ ಈ ಮೊದಲಾದವರು ಎರಡುವರ್ಷಗಳ ಮೇಲ್ಪಟ್ಟಿದ್ದರೂ ಇವರಿಗೆ ಕಾಯಂ ಆಗಬಾರದ್ದೆ? ಅಂದ ಬಳಿಕ ಇಂಥ ಆಳಿಕೆಗೆ ವಿಚಿತ್ರ, ಆಳಿಕೆಯನ್ನದೆ ಮತ್ತೇನು ಅನ್ನಬೇಕು? ಅನುಭವಿಕ ಮುಲ್ಕೀ ಪರೀಕ್ಷೆ ... ಮೇಲಿದ್ದವರನ್ನು ಕಾಯಂ ಮಾಡದೆ, ... ಹೊಸಬರನ್ನು ಕಾಯಂ, ಆದರೂ ... ಅದರೊಳಗೂ ಪರೀಕ್ಷೆಯು ... ನಿಯಮಿಸಿಕೊಂಡು, ... ಆದ ಕೂಡಲೆ ಕಾಯಂ ಮಾಡುವದು ಯೋಗ್ಯವೆ? ನ್ಯಾಯವೆ? ಇವರನ್ನು ... ನಿಯಮಿಸಿಕೊಂಡು, ಮೊದಲನವರಲ್ಲಿ ಯಾರೊಬ್ಬರ ಕಾಯಂ ಎಂದು ಹುಕುಂ ಕೊಟ್ಟಿದ್ದರೆ, ಎಷ್ಟು ... ರವಾಗುತ್ತಿತ್ತು? ಇದೂ ಹೋಗಲಿ. ಇನ್ನೇ ... ಸಂಬಂಧದಿಂದ ಇವೆಲ್ಲವುಗಳ ಮೇಲೆ ... ನೊಂದು ಸಂಗತಿಯೊದಗಿದೆ. ಅದನ್ನು ಮುಂದೆ ... ...ನು.

ಕಂಪ್ರೋಜಿಟರರು ಬೇಕು.

... ... ಮಾಹಿತಿ ... ... ಕನ್ನಡ ... ... ಯೋಗ್ಯತೆ ... ... ವಿಶೇಷ ಮಾಹಿತಿ, ... ಅಥವಾ ... ... ತಿಳಿದುಕೊಳ್ಳಬಹುದು.

... ... ಎಸ್. ... ...
... ಪ್ರೆಸ. ಸ್ಟೇಷನ ರೋಡ.
ಹುಬ್ಬಳ್ಳಿ.

ನೋಟೀಸು

ಕೆಳಗೆ ಸಹಿಮಾಡಿದ ಗಣಪತರಾವ ಎನ್. ಮದಿಮಾನ ಇವರನ್ನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದ ಬ್ರ್ಯಾಂಚ ಆಫೀಸ ಹುಬ್ಬಳ್ಳಿಯ ದಲಾಲರನ್ನಾಗಿ ನೇಮಿಸಿಯದೆ. ಯಾರಿಗಾದರೂ ಬ್ಯಾಂಕಿನ ಸಂಬಂಧಿ ಕೆಲಸಗಳ ಸಲುವಾಗಿ ಮಾಹಿತಿಗಳು ಬೇಕಾದಲ್ಲಿ ಅವರನ್ನು ಕೇಳಿಕೊಂಡಲ್ಲಿ, ಅವರು ಬೇಕಾದ ಸವಲತಗಳನ್ನು ಕೊಡುವಲ್ಲಿಯೂ ಮಾಹಿತಿಯನ್ನು ತಿಳಿಸುವಲ್ಲಿಯೂ ಸಮರ್ಥರಿರುವರು.
ತಾರೀ. ೩೭-೯-೧೯೨೨
ಪತ್ತೆ ಗಣಪತರಾವ ಎನ್, ಮದಿಮಾನ, ಮತ್ತು
ಜಿ. ಎ. ಮದಿಮಾನ ಸನ್ಸ ಹುಬ್ಬಳ್ಳಿ

ಕಟ್ಟಿಗೆಯ ಆಳಕೆಯ ಯಂತ್ರಿಯು.
ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-...
ಪತ್ತೆ- ರಾಮರಾವ ಬಳ್ಳಾರಿ. ... ...
... ಕರ್ನಾಟಕ ಟ್ರೆಡಿಂಗ ಕಂಪನಿ

ವಾಗ್ವಿಲಾಸ ಬುಕ್‌ಡಿಪೋ.

ಪ್ರಿಯರೇ ಬೇಗನೆ ವಿಪಿದಿಂದಾ ತಂಸಿ ಓದಿ ಆನಂದಪಡಿಯರಿ ಗಕ್ಕಳ ಆಡ್ರೆಸ್ಸು ಕೊಡು ಕೇಳಬೇಕು

ಆಗಲಿ

	ರೂ. ಆ. ಪೈ		ರೂ. ಆ. ಪೈ
ಮರಾಠಿ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಾನವ ಧರ್ಮ	೦-೧೨-೦
ಮುಸಲ್‌ಮಾನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೦-೦-೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೦ ೧೨ ೧	ಪ್ರಭಾವಿಜಯನಾಟಕ	೬-೦-೦
ಮಂಜು ಗೋಘಾಕಥೆ	೧ ೪ ೦	ಶುಕಾರಂಭ ನಾಟಕ	೧-೪-೦
ಮಲಾಹಾರಾಣ ಪ್ರತಾಪಸಿಂಹ	೧ ೬ ೦	ಶ್ರೀಧರ್ಮರಹಸ್ಯ ನಾಟಕ	೧-೦ ೦
ಜೋಗಳಪದ	೦ ೪ ೦	ಸಾನ್ರಸಂಗೀತ ಮದನಮಾಲಿನಿ	೦-೧೨-೦
ಶ್ರೀ ಧರ್ಮನೀತಿ	೦ ೧೨ ೦	ಹಿಂದಿ ವಿನಾಸಿ ವೈದ್ಯ ಯಂತ್ರ	
ವಿದ್ಯ ಸುಂದರಿ ಮುದಿಯೋ ಕೃತ	೧ ೦ ೦	ಮಂತ್ರತಂತ್ರ ಸಹಿತ	೧-೮-
ಕಾದಂಬಿ ವಿಟಕ್ರಕಾರಸ್ಥಾನ	೦ ೬ ೦	ಸಟೀಕ ವಿಚಾರ ಸಾಗರವೇದಾಂತ	೪-೦ ೦
ಹಿಂದು ಲಾ ಕಾಯಿದೆ ಚಿನ್ನ ಮುಳಗುಂದಕೃತ	೬ ೦ ೦	ಚಿನ್ಮಯಸಿಂಧು ವಚನವೇದಾಂತ	೪-೦-೦
ಅಶೋಕ ಕಾದಂಬರಿ	೧ ೬ ೦	ಪಂಚರತ್ನ ನಿಜಗುಣ ಶಿವಯೋಗ ವಿವರ	೨-೦-೦
ಸಚಿತ್ರಯಮಕಾಸನ ಪಾಪ		ಸಿದ್ಧಾಂತಬಿಂದು ಪ್ರಕಾಶ	೧-೮-೦
ಸ್ವಪ್ನಗಳ ಫಲವಿಚಾರ	೦-೧೨-೦	ಸಟೀಕ ನಿಜಗುಣ ಕೈವಲ್ಯಪದ್ಧತಿ	೧-೪-೦
ಅಡವಿ ಹುಡುಗಿ	೦-೧೨-೦	ಸಟೀಕ ಸರ್ಪಣ್ಣ ಸ್ವಾಮಿಗಳ ಕೈವಲ್ಯ	೧-೪-೦
ಶ್ರೀರಶೈವಾಚಾರ	೧-೦-೦	ಶ್ರೀ ಧ್ಯಾನಶಿಲಿಂಗಲೀಲೆ	೧-೦-೦
ಕಲ್ಪವೃಕ್ಷ ಅರಟಿರಳಿನ ಕೃತ	೧-೮-೦	ಗರ್ಭಿಣಿಶಿಸುಸಂಗೋಪನ	೦-೧೨-೦
ಕೃತ್ತಕ್ಷ ಫಲಪಂಚಸಿದ್ಧಿ ಅನುಭವಸಿದಿ	೨-೮-೦	ರಾಮಕೃಷ್ಣ ಪರಮಹಂಸ ಚರಿತ್ರೆ	೧-೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೨-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣನವರಲೀಲಾ	೦-೩-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳವಾರ ಶಿವಭಜನಪದಗಳು	೦-೩-೦
ಜನಭಾನು ಪಾವಟಿ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ಜೀವ ಪರೀಕ್ಷಾ ಪಾವಟಿ ವಕೀಲ	೦-೮-೦	ಆರೋಗ್ಯ ಜೀವನ ಹರಡೇಕೃತ	೦-೮-೦
ಮುಳಗುಂದಮಾತಸ್ವಾಮಿಯ ಕೈವಲ್ಯದರ್ಪಣ	೧-೪-೦	ಲಿಖಿತಲೀಲಾನಾಟಕ ಸಂಗೀತ	೧-೦-೦
ಕಾಮದೇನು	೧ ೮-	ಸಂಗೀತ ಸಮಯಸಾರ ಮೈಸೂರು	೧-೧೨ ೦
ಪ್ರೇಮಮಂದಿರ	೦-೮-೦		

ಪತ್ರೆ ಎಂ ಆರ್. ಶಿವನಾಗಪ್ಪಾ ಪಲ್ಲಿಸರ ವಾಗ್ವಿಲಾಸ ಬುಕ್‌ಡಿಪೋ. ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ- ೫೦ ಸ್ಟೇಶನ್ ರೋಡ ಹುಬ್ಬಳ್ಳಿ ಶಾಖಾ- ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುಲಕರ್ಣಿ ಎಲ್ ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಭಂಡಾರಿ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮೊಳಕಾಪ್ಪೂರ ಜ. ಎ. ಎಲ್. ಎಲ್‌ಬಿ ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ (ಎಕ್ಸ ಆಫೀಶಿಯೋ)

ಚಾಲೂ ಖಾತೆಗಳು- ಜಿಂದಗಿ, ಗಳಿಂದ ತೆಗೆಯಲ್ಪಡುವವು, ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ರಂತೆ
ಸೇವಿಂಗ್ಸ ಬ್ಯಾಂಕ- ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ಯಂತೆ
ಮುದ್ದತಿ ಠೇವುಗಳು- ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ- ೬ ತಿಂಗಳ ಮುದ್ದತಿ ರಕಮಿಗೆ ೧೦೦ಕ್ಕೆವರ್ಷಕ್ಕೆ ೬ರಂತೆ; ೧೨ ತಿಂಗಳ ಮುದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬॥ ಯಂತೆ
ಇತರ ಕಾರ್ಯಗಳು- ಬಂಗಾರದ ಬೆಳ್ಳಿಗಳ ಒಟ್ಟೆಗಳನ್ನು ತರಿಸಿಕೊಡುವದು ಸರಕಾರೀ ಪ್ರಾಮಿಸರಿನೋಟ, ಶೇರಬಾಂಡ, ಚಕ್ಕು ಹುಂಡಿ ಮುಂತಾದವುಗಳನ್ನು ಯೋಗ್ಯ ಕಮೀಶನ್ ತಗೊಂಡು ಕೊಡಕೊಳ್ಳುವದಲ್ಲಿ ಬರುವವು. ಸದರೀ ಬ್ಯಾಂಕಿನ ಶೇರುಗಳು ಬೇಕಾದಷ್ಟು ಸ್ವಾಗೆ ಹೊಸ ತರಿಸಿಕೊಳ್ಳಬಹುದು.
ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ಸಮಕ್ಷ ... ಪತ್ರವ್ಯವಹಾರದಿಂದ ತಿಳಿದುಕೊಳ್ಳಬೇಕು.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತಕಲಸ.

ಕೌಟುಂಬಿಕರ ಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ ಮಾರಕಾ, ಪಟಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯುಪಯುಕ್ತ ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹವಿಟ್ಟು ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು. ಬಾಟ್ಲಿ ೧ ಕ್ಕೆ ಬೆಲೆ ೦-೮-೦ ರೂ.

ಕಾಲರಾಪಿಲ್ಸ- ೨೫ ಗುಳಿಗೆಗೆ ೦-೧೫-೦ ರೂ, ೧೦೦ ಕ್ಕೆ ೨-೮-೦ ರೂ, ಟಪಾಲ ಖರ್ಚು ಬೇರೆ.

ಕ್ಲೋರೋಡಾಯಿನ್- ಬಾಟ್ಲಿ ಒಂದಕ್ಕೆ ೦—೦ ರೂ, ಟಪಾಲಖರ್ಚು ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ- ೨೫ ಕ್ಕೆ ೧-೦-೦ ರೂ, ೧೦೦ ಕ್ಕೆ ೩-೦-೦ ರೂ ಟಪಾಲಖರ್ಚು ಬೇರೆ.

ಪತ್ರೆ:- ಡಾ. ಎಸ್. ಆರ್. ಕಿತ್ತೂರ. V. D.

ತಾರಿಸವಿಳಾಸ- ಶಾಂತವೀರ, ಪಶುಸಂಜೀವಿನಿಔಷಧ ಧಾರವಾಡ. ಧಾರವಾಡ.

—

ನೋಟಿಸಿನದರಗಳು.

ಸಿಂಗಲಕಾಲಮಿನ ಹತ್ತು ಓಳಿಗಳಿಗೆ ಒಂದೂ ರೂಪಾಯಿ; ಮುಂದೆ ಪ್ರತಿಯೊಂದು ಓಳಿಗೆ ಒಂದು ಆಣೆ; ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರಾಣೆ. ಡಬ್ಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ

—

ಅಧ್ಯಾಪಕರು ಬೇಕು.

ಋಗ್ವೇದವನ್ನೂ ಋಕ್‌ಶಾಖೆಯ ಯಾಜ್ಞಿಕವನ್ನೂ ಬಲ್ಲಂಥ ಮತ್ತು ಸಾಹಿತ್ಯದಲ್ಲಿ ನಿಷ್ಣಾತರಾದಂಥ ಒಬ್ಬ ಅಧ್ಯಾಪಕರು ಬೇಕು. ಅಧ್ಯಾಪನ ಕಾರ್ಯಮಾಡಬಿಚ್ಛಿಸುವವರು ತಮ್ಮ ಅಧ್ಯಯನ ಮೊದಲಾದವುಗಳನ್ನು ತಿಳಿಸಬೇಕು. ಪಗಾರದ ಇತರ ಕರಾರುಗಳನ್ನು ಪತ್ರಮುಖಾಂತರ ಗೊತ್ತು ಮಾಡಿಕೊಳ್ಳಬೇಕು.

ವ್ಯವಸ್ಥಾಪಕ
ಶ್ರೀ ಶೇಷಾಚಲವೇದ-ಸಂಸ್ಕೃತ ಪಾಠಶಾಲಾ
ಪೋ ಆನಂದವನ ಜಿ. ಧಾರವಾಡ

ಈ ಪತ್ರವನ್ನು ನಾರಾಯಣ ಬಾಳಕೃಷ್ಣ ಕಂಚಿ ಇವರು ತಮ್ಮ ವಾರ್ತಾಹರ ಪ್ರೆಸಿನಲ್ಲಿ ಛಾಪಿಸಿ, ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯಪತ್ರ

ಬೆಲೆ ೬ ಪೈ

ವರ್ಷ ೩) ಧಾರವಾಡ, ಸೋಮವಾರ ತಾರೀಖು ೨೫ ನೇ ಸೆಪ್ಟಂಬರ ೧೯೩೩. (ಸಂಚಿಕೆ ೨೦೩

ಧಾರವಾಡ ವ್ಯಾಪಾರೋತ್ತೇಜಕ ಕಂಪನಿ ಲಿಮಿಟೆಡ್ ಧಾರವಾಡ

ಜಾಹೀರ ನೋಟೀಸು

ಯಾವತ್ತು ಜನರಿಗೆ ತಿಳಿಸುವದೇನಂದರೆ –

ನಮ್ಮ ಕಂಪನಿಯಲ್ಲಿ ಬಂದು ವರ್ಷದ ಪ್ರಶ್ನೆಕೀ ರೇಪು ಠರಾವ ಮಾಡಿ ಆರು ರೂಪಾಯಿ ಎಂಟ್ರ್ರಿ ಒಡ್ಡೀದಂತೆ ಹತ್ತು ಸಾವಿರ (೧೦೦೦೦) ರೂಪಾಯಿಗಳ ವರೆಗೆ ತೆಗೆದುಕೊಳ್ಳಬೇಕೆಂದು ಬೋರ್ಡಿನಲ್ಲಿ ಠರಾವ ವಾಗಿರುತ್ತದೆ. ಡಿಪಾಜಿಟರರನ್ನು ಇದಕ್ಕೆ ಅಪೇಕ್ಷಿಸುವವರು ತಾ. ೧-೧೦-೩೩ ರಿಂದ ಇತ್ಯಾದಿಯಿಂದಾ ೧೦೦೦ ರೂ. ವರೆಗು ಭರಣ ಮಾಡುವವರಿಗೆ ತಂದು ಇಟ್ಟು ಹಾಕಿದ ಪಾವತಿ ಸಹ ಕೊಡಬೇಕು. ನಮ್ಮ ರಕಮು ಭರತಿ ಆದನಂತರ ಡಿಪಾಜಿಟ ತೆಗೆದುಕೊಳ್ಳುವದನ್ನು ಬಂದ ಮಾಡಿ ಅದರಲ್ಲಿ ಬಡ್ಡಿಯ ತಿಳಿಯುವದು.

ಧಾರವಾಡ
ತಾ. ೧೪-೯-೩೩

ಜಿ. ಎಸ್ ಜೋಶಿ,
ಮ್ಯಾನೇಜಿಂಗ ಡಯರೆಕ್ಟರ
ಧಾರವಾಡ ವ್ಯಾಪಾರೋತ್ತೇಜಕ ಕಂಪನಿ ಲಿಮಿಟೆಡ್, ಧಾರವಾಡ

— ಶ್ರೀ. ಗೋಪಾಳಕೃಷ್ಣ ಪ್ರಸನ್ನ —

ಶ್ರೀ. ಗೋಪಾಳ ಸಂಗೀತ ನಾಟಕ ಮಂಡಳಿ.

ಧಾರವಾಡದಲ್ಲಿ ರಾ. ಗೋಪಾಳಗಿರಿಯವರ

ಅನ್ನಪೂರ್ಣಾ ಥಿಯಟರಿನಲ್ಲಿ.

ಶೀಘ್ರವೇ ತಮ್ಮ ಲೋಕಪ್ರಿಯ

ಪ್ರಯೋಗಗಳನ್ನು ಪ್ರಾರಂಭಿಸುವರು.

ಮಾ. ಯ., ಎಸ್, ಸೋನಿ.

ಶ್ರೀ, ಗೋ, ಸಂ, ನಾ, ಮಂ.

ಎಜೆಂಟರು ಬೇಕು. ಎಜೆಂಟರು ಬೇಕು.

ಧಾರವಾಡ ಜಿಲ್ಹೆಯಲ್ಲಿ ನಾಗಪುರ ಸಾಯಿ ಶೀನಿಯರ ಇನಶ್ಯುರನ್ಸ ಕಂಪನಿ ಕೆಲಸ ಮಾಡಲಿಕ್ಕೆ ಎಜಂಟರನ್ನು ನೇಮಿಸತಕ್ಕದ್ದದೆ. ಅವರಿಗೆ ಭರಪೂರ ಕಮಿಶನ್ನ ದೊರೆಯುವದು. ಇಚ್ಛಿಸುವವರು ಕೆಳಗೆ ಬರೆದವರ ಕಡೆಗೆ ಸಮಕ್ಷಮ ಅಥವಾ ಪತ್ರದ್ವಾರ ಚೌಕಶಿ ಮಾಡಬಹುದು.

ಮೊಸರ್ಸ ಪಾಟೀಲ ಮತ್ತು ಕಂಪನಿ ಕರ್ನಾಟಕದ ಮುಖ್ಯ ಎಜಂಟರು
೧೭೬೩ ಶ್ರೀ. ಶ್ರೀ ನರಸಿಂಹ ದೇವರ ಗುಡಿಯ ಎದುರಿನ ಅಟ್ಟದ ಮೇಲೆ,
ಮಂಗಳವಾರ ಪೇಠ ಧಾರವಾಡ.

ದೇಶಭಕ್ತ ಬಾಬಾಜಿಗಿ
ಶ್ರೀನಿವಾಸರಾಯರ ಮೇಲಿನ ಖಟ್ಲೆಯಲ್ಲಿ
ಫಿರ್ಯಾದಿಯ ಜವಾಬು.

—o—

ರಾಮರಾವ ವೆಂಕಟರಾವ ಕವಠೇಕರ ವ|| ೪೩ ಜಾತಿ ಬ್ರಾಹ್ಮಣ ಪೋಲೀಸ ಇನಸ್ಪೆಕ್ಟರ ಬಿಜಾಪೂರ.

ನನಗೆ ಕನ್ನಡಲಿಗಿಯಪರ ಗುತ್ತಾರ ೩ ವರ್ಷ ಎಂದ ಇದೆ. ನಾನು ೧೮೫ ನೇ ಕಲ್ಮಿನ ಪ್ರ! ಮಾ ಪವಡಿಸ್ಯೇನೆ. ಆರೋಪಿಯು ನಾನಾ ಕೋಣ ದಪಡೆ ಇದ್ದ ಪ್ರಚಾರಕ ಕೆಲಸ ಈ ಜಿಲ್ಹೆಯಲ್ಲಿ. ಮಾಡುತ್ತಾರೆ. ವ್ಯಾಖ್ಯಾನಕೊಡುತಾರೆ. ಅವರು ರಾಜದ್ರೋಹದ ಭಾಷಣ ಮಾಡುತಾರೆ. ಅವರು ಬ್ರಿಟಿಶ ಸರಕಾರದ ವಿರುದ್ಧ ಜನರುಗಳ ಮನಸು ಕೆಡಿಸುವಂಥಾ ಭಾಷಣ ಮಾಡುತಾರೆ. ಅವರು ವಿಜಾಪೂರ, ಬಾಗಲಕೋಟಿ, ಅಮೀನಗಡ, ಕಲಾದಗಿ, ಬೀಳಗಿ, ಇಲಕಲ್, ಮುದ್ದೇಬಿಹಾಳ, ತುಳಸಿಗೇರಿ, ಮತ್ತು ಕೆಲವು ಸ್ಥಳಗಳಲ್ಲಿ ವ್ಯಾಖ್ಯಾನ ಕೊಟ್ಟಾರೆ. ಅವರು ಕನ್ನಡದಲ್ಲಿ ಮರಾಠಿಯಲ್ಲಿ ವ್ಯಾಖ್ಯಾನ ಕೊಡತಾರೆ. ತಾ|| ೩೦-೬-೩೧ ನೇ ದಿವಸ ಅಮೀನಗಡದಲ್ಲಿ ಮಾಡಿದ ಭಾಷಣದಬಗ್ಗೆ ನಾನು ರಿ|| ಮಾಡೇನಿ. ಪೋಲೀಸ ಸಾ|| ರು ಕೊಟ್ಟ ರಿ|| ನೋಡೇನಿ ಯಲ್ಲಾ ವ್ಯಾಖ್ಯಾನಗಳ ಮೇಲಿಂದಾ ಬ್ರಿಟಿಶ ಸರಕಾರದ ವಿರುದ್ಧ ಮನಸು ಕೆಡಿಸುವಂಥಾ ಮಾತುಗಳು ಇದ್ದವು. ಮೇಲೆ ಹೇಳಿದ ಯಲ್ಲಾ ಸ್ಥಳಗಳಲ್ಲಿ ಈ ಪ್ರ|| ಭಾಷಣ ಇರುತ್ತದೆ. ಮೇಲೆ ಬರೆದ ಸ್ಥಳಗಳಲ್ಲ ಆ ಆ ಗ್ರಾಮದ ಪೋಲೀಸ ಅಧಿಕಾರಿಗಳು ರಿ|| ಮಾಡಿರುತ್ತಾರೆ. ಆ ರಿ|| ನ ಮೇಲಿಂದಾ ನಾನು ಫಿರ್ಯಾದಿ ಮಾಡಿದ್ದೇನೆ.

[ಮುಂದ್ಕೆ ಸಾಕ್ಷಿಗಳನ್ನು ಬುಧವಾರ ದಿವಸ ಮುದ್ರಿಸುವೆವು]

—

ವಿಜಾಪೂರ ಜುರಂಗದೊಳಗಿನ ಹೆಸರು ಕೃತ್ಯಗಳ ಆರೋಪದ ವಿಚಾರಣೆ ಮಾಡುವದಕ್ಕಾಗಿ ಮುಂಬಯಿ ಸರಕಾರದವರು ಮಿ. ವೆಂಟರ ಸಾಹೇಬ ಅಧ್ಯಕ್ಷತೆಯಲ್ಲಿ ಒಂದು ಕಮೀಟಿ ನೇಮಿಸುವರು ಮತ್ತು ಸಾಕ್ಷಿಗ ಒದಗಿಸ್ಯಬಹುದಾ ಬೇಕ್ಕೆ ಮನ ಸಹಿಯಾಗಿ ಹೊಟ್ಟೆಯ ಪತ್ರ ಕಳುವರು.

ಇನಾಮು ಪುಸ್ತಕ ಸಹ ವಿಜಯ ಪತ್ರದ
ವರ್ಗಣೀದರ
ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೪—೦ ರೂ.
೬ ,,	೬—೮—೦ ರೂ.
೩ ,,	೩—೪—೦ ರೂ.

ವಾರಪತ್ರಕ್ಕೆ

೧ ವರ್ಷಕ್ಕೆ ೩—೧೨—೦ ರೂ.

ಒಂದು ವರ್ಷಕ್ಕಿಂತ ಕಡಿಮೆಯ ಚಂದಾದಾರರಿಗೆ ಇನಾಮಿನ ಪುಸ್ತಕವು ದೊರೆಯದು.

ವಿಶೇಷ ಮಾಹಿತಿ ಕೆಳಗಿನವರಿಗಾಗಿ
ಮ್ಯಾ- ವಿಜಯ ಧಾರವಾಡ.

ಬ್ರಾಹ್ಮಣ ಲಿಂಗಾಯತ ಪ್ರಚಂಡ ಐಕ್ಯ

ಅಥಣಿಯಲ್ಲಿ ವ್ಯಾಸನತೋಳಿನ ವ್ಯಾಜ್ಯ ತೀರಿತು.

ಪಂಚರ ತೀರ್ಪು

(ವಿಜಯದ ದೆಸೆಯಿಂದ ಬಂದ ಸ್ಪೇಶಲ ಲೇಖ)

ಅಥಣಿಯಲ್ಲಿ ಲಿಂಗಾಯತ ಮತ್ತು ಬ್ರಾಹ್ಮಣರ ನಡುವೆ ವ್ಯಾಸನ ತೋಳಿನ ಮೆರವಣಿಗೆಯ ಸಂಬಂಧವಾಗಿ ಅನೇಕ ವರ್ಷಗಳಿಂದ ವಾದ ನಡೆದದೆ. ಈ ವಾದದ ಖಟ್ಲೆಯು ಬೆಳಗಾವಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿಯೂ ನಡೆದಿದೆ. ಈ ವ್ಯಾಜ್ಯದ ದೆಸೆಯಿಂದ ಎರಡೂ ಸಮಾಜಗಳ ನಡುವೆ ವಿತುಷ್ಟ ಬೆಳೆದು, ಎರಡೂ ಸಮಾಜಗಳ ಹಾನಿಯಾಗುತ್ತಿರುವದು. ಇದರ ... ಎರಡೂ ಪಕ್ಷಗಳ ಮುಂದಾಳುಗಳ ಮೇಲಾಗಿ, ಇವರು ಈ ವಾದವನ್ನು ನಮ್ಮ ನಮ್ಮೊಳಗೆ ರಾಜಿಯಿಂದ ತೀರಿಸಬೇಕೆಂದು ನಮ್ಮ ಕಡೆಗೆಂದರೆ ಕೆಳಗೆ ಸಹಿ ಮಾಡುವ ಪಂಚರ ಕಡೆಗೆ ಬಾಯಿ ಮಾತಿನಿಂದ ಇವತ್ತ ತಾರೀಖು ೧೯-೯-೨೨ನೇ ದಿವಸ ಒಪ್ಪಿಸಿದರು. ನಾವು ಎರಡೂ ಬಣಗಳ ಮುಂದಾಳುಗಳನ್ನು ಕರಿಸಿಕೊಂಡು, ಸಂಗತಿ ಕೇಳಿಕೊಂಡೆವು. ನಾವು ಈ ವ್ಯಾಜ್ಯದ ನಿರ್ಣಯವನ್ನು ಕೆಳಗೆ ಬರೆದಂತೆ ಹೇಳುವಾಗ ಎರಡೂ ಸಮಾಜಗಳಲ್ಲಿರುವ ವೈಮನಸ್ಸು ದೂರಾಗಿ, ಪರಸ್ಪರ ಪ್ರೇಮವೃದ್ಧಿಯಾಗಬೇಕೆಂಬ ಉದ್ದೇಶವನ್ನು ಮುಂದಿಟ್ಟುಕೊಂಡಿರುತ್ತೇವೆ.

೧ ವ್ಯಾಸನತೋಳಿನ ಮೆರವಣಿಗೆಯನ್ನು ತೆಗೆಯುವಾಗ [illegible] ಅಥವಾ ಉದ್ದೇಶವು ತುಸುವಾದರೂ ಇದೆ, ಶ್ರೀ ವ್ಯಾಸರು ಯಾವ ಕಯ್ಯಿಂದ ಶೈವ ಪುರಾಣವನ್ನು ಬರೆದರೋ? ಆ ಕಯ್ಯಿಯ ಗೌರವ ಮಾಡುವದಕ್ಕಾಗಿಯೇ ವ್ಯಾಸನ ತೋಳಿನ ಮೆರವಣಿಗೆಯನ್ನು ತೆಗೆಯುತ್ತೇವೆ. ಎಂಬ ಪ್ರಕಾರದ ಜಾಹೀರನಾಮೆಯನ್ನು ಅಥಣಿಯ ಲಿಂಗಾಯತ ಪ್ರಮುಖರು ಆಶ್ವಿಜ ಶುದ್ಧ ಪೌರ್ಣಿಮೆಯೊಳಗಾಗಿ ತಮ್ಮ ಸಹಿಯಿಂದ ಪ್ರಸಿದ್ಧ ಮಾಡಬೇಕು.

೨ ಲಿಂಗಾಯತರು ತೆಗೆಯುವ ಈ ಮೆರವಣಿಗೆಯಲ್ಲಿ— ಮೆರವಣಿಗೆಯ ಉದ್ದೇಶವನ್ನು ಧ್ಯಾನಕ್ಕೆ ತಂದು. ಈ ವರೆಗಾದ ತಪ್ಪು ತಿಳುವಳಿಕೆಯನ್ನು ಬ್ರಾಹ್ಮಣರು ಬಿಟ್ಟುಕೊಟ್ಟು, ಮೆರವಣಿಗೆಗೆ ವಿರೋಧ ಮಾಡಬಾರದು.

೩ ಈ ಮೆರವಣಿಗೆಯು ಶಕ್ಯವಾದಷ್ಟು ನಿರಾತಂಕವಾಗಿ ನಡೆಯತಕ್ಕದ್ದು. ಯಾರಿಗೂ ತಕರಾರ ಮಾಡಲಿಕ್ಕೂ, ಮಾಡುವವಕ್ಕೂ ನೆವನ ಸಿಗಬಾರದೆಂಬ ಉದ್ದೇಶದಿಂದ, ಇದನ್ನು ವರ್ಷದೊಳಗೆ ಎರಡು ಸಾರೆ ಅಂದರೆ— ಮಾಘಮಾಸದಲ್ಲಿ ಮಾಘ ಶಿವರಾತ್ರಿಯ ದಿವಸ ಹೊರಡುವ ಮೆರವಣಿಗೆಯಲ್ಲಿ ಸಂಜೀ ಎತ್ತಿಗೆ ಒಮ್ಮೆ ಮತ್ತು ಚೈತ್ರವದ್ಯ ಪ್ರತಿಪದೆಯ ದಿವಸ ಹೊರಡುವ ಶ್ರೀ ಶಿವಯೋಗಿ ಮುರುಗೇಂದ್ರ ಸ್ವಾಮಿಯವರ ಮೆರವಣಿಗೆಯಲ್ಲಿರುವ ಸಂಜೀ ವಾಹನದಲ್ಲೂ ವ್ಯಾಸನತೋಳನ್ನು ಹಚ್ಚಿ ಮೆರಿಸತಕ್ಕದ್ದು. ಮತ್ತು ಚಿತ್ರಕಲದುರ್ಗದ ಜಗದ್ಗುರು ಶ್ರೀಮುರುಘಾ ರಾಜೇಂದ್ರ ಸ್ವಾಮಿಗಳು ಬಂದಾಗ ಅವರ ಮೆರವಣಿಗೆಯ ಪ್ರಸಂಗದಲ್ಲಿ ಒಮ್ಮೆ ವ್ಯಾಸನ ತೋಳನ್ನು ಮೆರಿಸತಕ್ಕದ್ದು. ಇದರ ವ್ಯತಿರಿಕ್ತ ಇನ್ನಾವಾಗಲೂ ಮೆರಿಸತಕ್ಕದ್ದಲ್ಲ. ಎರಡೂ ಸಮಾಜಗಳ ವಿತುಷ್ಟವು ಹೋಗಬೇಕೆಂದು ಈ ಸಾರೆ ಮಾತ್ರ ಆಶ್ವಿಜ ಶುದ್ಧ ಪೌರ್ಣಿಮೆಯ ದಿವಸ ಮೆರವಣಿಗೆ ತೆಗೆಯಬೇಕು.

೪ ಮೂರನೇ ಕಲಮಿನಲ್ಲಿ ಹೇಳಿದಂತೆ ತೆಗೆಯುವ ಮೆರವಣಿಗೆಯನ್ನು ಬೆಳಗಾವಿಯ ಕಲೆಕ್ಟರರಾದ ಮಿ. ಮ್ಯಾಗ್ರೆಗಾರ ಸಾಹೇಬರು ಗೊತ್ತು ಪಡಿಸಿದಂಥ ಕ್ರಮದಂತಯೇ ತೆಗೆಯತಕ್ಕದ್ದು. ಎರಡನೇ ಮಾರ್ಗವನ್ನು ಅಂಗೀಕರಿಸತಕ್ಕದ್ದಲ್ಲ.

೫ ಲಿಂಗಾಯತ ಜನರು ಸಹಜವಾಗಿ ಕಣ್ಣಿಗೆ ಕಾಣಿಸುವ ಹಾಗೆ ಮನೆ, ಅಂಗಡಿ ವ.ಸ್ತು ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಸನತೋಳನ್ನು ತೆಗೆಯಬಾರದು.

ಈ ಪ್ರಕಾರ ಎರಡೂ ಸಮಾಜದವರು ನಡೆಯಬೇಕೆಂದು ನಾವು ತೀರ್ಮಾನಿಸುತ್ತೇವೆ. ತಾ. ೧೯-೯ ೧೯೨೨ನೇ ಇಸವಿ.

ಸಹಿ ಶ್ರೀನಿವಾಸರಾವ ಕೌಜಲಗಿ
,, ಗಂಗಾಧರ ಬಾಳಕೃಷ್ಣ ದೇಶಪಾಂಡೆ
,, ನೀಲಕಂಠಪ್ಪಾ ರಂಗಪ್ಪಾ ಸುಗಂಧಿ
,, ಚನ್ನಬಸವಪ್ಪಾ ಶಿವಪ್ರಭುಪ್ಪಾ ಕುರಲಿ

ವ್ಯಾಸನ ತೋಳಿನ ಪಂಚ ಕಮೀಟಿಯ ಸಾದ್ಯಂತ ಸಂಗತಿಯು.

ತಾರೀಖು ೧೯-೯-೨೨ ನೇ ದಿವಸ ಅಥಣಿಯಲ್ಲಿ ವ್ಯಾಸನತೋಳಿನ ಜಗಳವನ್ನು ತೀರಿಸಬೇಕೆಂದು ಗೊತ್ತಾದ ಮೇರೆಗೆ ವಿಜಾಪೂರದಿಂದ ಶ್ರೀ ಶ್ರೀನಿವಾಸರಾವ ಕೌಜಲಗಿ, ಲಿಂಗಾಯತ ಸಮಾಜದ ಸದ್ಗೃಹಸ್ಥರಾದ ಶ್ರೀಯುತ ಚನ್ನಮಲ್ಲಪ್ಪಾ ಕುರ್ಬೆ ಮತ್ತು ನೀಲಕಂಠಪ್ಪಾ ಸುಗಂಧಿ ಮತ್ತು ಆಕಸ್ಮಾತ್ತಾಗಿ ಧಾರವಾಡದಿಂದ ಬಂದಿದ್ದ ಶ್ರೀ ಗೋಪಾಳರಾವ ದೇಶಪಾಂಡೆ ಈ ನಾಲ್ವರು ಮೋಟಾರದಿಂದ ಬಂದರು. ಬೆಳಗಾವಿಯಿಂದ ಶ್ರೀ. ಗಂಗಾಧರರಾವ ದೇಶಪಾಂಡೆ ಮತ್ತು ಶ್ರೀ. ಯಾಳಗಿಯವರು ಬಂದರು. ಬ್ರಾಹ್ಮಣರು ಶ್ರೀ. ನಾರಾಯಣರಾವ ಬಾತಾರ ಇವರ ಮನೆಯಲ್ಲಿಳಿದುಕೊಂಡರು. ಲಿಂಗಾಯತ ಗೃಹಸ್ಥರು ಪ್ರಮುಖ ಲಿಂಗಾಯತರನ್ನು ಕಾಣಲಿಕ್ಕೆ ಹೋದರು. ಬ್ರಾಹ್ಮಣ ಜನರ ಅಭಿಪ್ರಾಯ ತಿಳಕೊಳ್ಳುವದಕ್ಕಾಗಿ ಮುಖ್ಯ ಮುಖ್ಯ ಜನರನ್ನು ಕರಿಸಿತು. ತುಸು ಹೊತ್ತಿನಲ್ಲಿ ಹಿರಿಯರೂ, ಪ್ರಮುಖರೂ, ತರುಣಜನರೂ ಇವರಿಂದ ಮನೆಯು ತುಂಬಿತು. ಉಭಯ ಪಕ್ಷಗಳ ಭಾಷಣದಿಂದ ಕೆಲಸ್ವಾರ್ಥಪರಾಯಣ ಜನರು ತಮ್ಮ ಸ್ವಂತ ಹಿತ ಸಾಧಿಸುವದಕ್ಕಾಗಿ ಎರಡೂ ಸಮಾಜಗಳಲ್ಲಿ ಜಗಳ ಹಚ್ಚಿದ್ದರಿಂದ, ವ್ಯಕ್ತಿವಿಷಯಕ ತಂಟೆಗಳು ಸಾಮಾಜಿಕ ಸ್ವರೂಪಕ್ಕೆ ಬಂದಿವೆ ೧೮-೧೯ ಖಟ್ಲೆಗಳಾಗಿದ್ದು, ಪ್ರಮುಖ ಬ್ರಾಹ್ಮಣರೂ, ಲಿಂಗಾಯತರೂ ಒಬ್ಬರನ್ನೊಬ್ಬರು ಆರೋಪಿತರಾಗಿ ಮಾಡಿದ್ದಾರೆ. ಎಷ್ಟೋ ಜನ ವೃದ್ಧರ ಮೇಲೆ ವೃಥಾ ಆರೋಪ ಬಂದು, ಖಟ್ಲೆಯಾದಂತೆ ಕಂಡು ಬಂತು.

ಬ್ರಾಹ್ಮಣ ಸಮಾಜದ ಮುಖ್ಯರೂ, ವೃದ್ಧಗೃಹಸ್ಥರೂ ಆದಂಥ ಶ್ರೀ. ಅಣ್ಣಾರಾವ ಕೊಕಟನೂರ ಇವರು ತಮ್ಮ ತಕರಾರುಗಳನ್ನು ಮತ್ತು ತಮಗೆ ಆದಂಥ ಅಡಚಣೆಗಳನ್ನು ಹೇಳಿ, ಯಾವ, ಯಾವ ಕಾರಣಗಳಿಂದ ಇವತ್ತಿನ ಸ್ಥಿತಿಯು ಪ್ರಾಪ್ತವಾಯಿತೆಂಬದನ್ನು ವಿಸ್ತರಿಸಿ ಹೇಳಿ, ಪಂಚರ ಮುಖಾಂತರವಾಗಿ ನ್ಯಾಯ ತೀರಿಸಕೊಳ್ಳಲಿಕ್ಕೆ ಒಪ್ಪಿದರು. ಆ ಮೇಲೆ ಲಿಂಗಾಯತ ಬಂಧುಗಳೂ ಇದೇ ಪ್ರಕಾರ ತಮ್ಮ ಸಂಗತಿಗಳನ್ನು ಹೇಳಿದರು. ತರುವಾಯಾ ಅಂದು ಸಾಯಂಕಾಲದಲ್ಲಿ ಶ್ರೀ. ಅಣ್ಣಾರಾವ ಕೊಕಟನೂರ ಇವರ ಮನೆಯಲ್ಲಿ ಉಭಯ ಕುಲಗಳ ಸಭೆಯು ಕೂಡಿತು. ಪಂಚಾಯತಿಯಲ್ಲಿ ಧಾರವಾಡದಿಂದ ಬಂದ ಶ್ರೀ. ಗೋಪಾಳರಾವ ದೇಶಪಾಂಡೆಯವರೂ ಇರಬೇಕೆಂದು ಸೂಚಿಸಲ್ಪಟ್ಟಿತು. ಆದರೆ ಇವರು ಇಂಥ ಮಾನವು ತಮಗೆ ಬೇಡೆಂದು ಹೇಳಿದರು. ಎರಡೂ ಸಮಾಜದವರು ಒಬ್ಬರ ಹಿಡಿದ್ದ ಒಬ್ಬರು

ನಡೆದ ಕೃತ್ಯಗಳ ವಿಚಾರಮಾಡದೆ, ಮುಂದಿನ ಎಲ್ಲ ಸಾರ್ವಜನಿಕ ಕೆಲಸಗಳನ್ನು ಒಮ್ಮನಸಿನಿಂದ ಮಾಡಬೇಕೆಂದು ಶ್ರೀ. ಕೌಜಲಗಿಯವರು ಹೇಳಿದ್ದಕ್ಕೆ ಯಾವತ್ತರೂ ಒಪ್ಪಿದರು. ಅನಂತರ ದೇ. ಭ. ಗಂಗಾಧರರಾವ ದೇಶಪಾಂಡೆಯವರು ತಮ್ಮ ಅಧಿಕಾರಯುಕ್ತ ವಾಣಿಯಿಂದ ಎರಡೂ ಸಮಾಜದವರು ಒಂದೇ ಮನಸಿನಿಂದ ನಡೆಯುದ್ದರಿಂದ, ಸಮಾಜ ಹಾಗು ರಾಜಕೀಯ ಉನ್ನತಿಗೆ ಯಾವ ಪ್ರಕಾರದ ತೊಂದರೆಗಳು ಮೇಲಿಂದ ಮೇಲೆ ಬರುತ್ತವೆಂಬದನ್ನು ಹೇಳಿ, ಇಷ್ಟರೊಳಗೆ ಒಂದಾದರೆ ಎಷ್ಟು ಪ್ರಕಾರದ ಲಾಭಗಳಾಗುವವೆಂಬದನ್ನು ಉತ್ತಮರೀತಿಯಿಂದ ಅಂತಃಕರಣಪೂರ್ವಕವಾಗಿ ಹೇಳಿದರು. ಬಳಿಕ ಎರಡೂ ಸಮಾಜಗಳ ಮುಖಂಡರು ಜಗಳಕ್ಕೆ ಯಾರಾರು ಹೇಗೇಗೆ ಮಟ ಹಾಕಿದರೆಂಬದನ್ನು ವಿನೋದದಿಂದ ಹೇಳಿದರು.

ಪಂಚರು ರಾತ್ರಿ ೯-೩೦ಕ್ಕೆ ತಮ್ಮ ತೀರ್ಪು ಬರಿಯುವದಕ್ಕಾಗಿ ಒಂದು ಕೋಣೆಯಲ್ಲಿ ಹೋದರು. ಸಾಧಕ- ಬಾಧಕ ಪ್ರಮಾಣಗಳ ವಿಚಾರಮಾಡಿ, ೧೦-೩೦ ಕ್ಕೆ ಹೊರಗೆ ಬಂದರು. ಮರುದಿವಸ ಮುಂಜಾನೆ ಅಪ್ಪನವರ ಗದ್ದಿಗೆಯ ಮುಂದೆ ಠರಾವು ಹೇಳುತ್ತೇವೆಂದು ಶ್ರೀ. ಕೌಜಲಗಿಯವರು ನೆರೆದ ಜನರಿಗೆ ತಿಳಿಸಿದರು. ಉಪಹಾರ ವಾದನಂತರ ಠರಾವು ಪ್ರಾರಂಭವಾಯಿತು. ಬರಿಯಲಿಕ್ಕೆ ರಾತ್ರಿ ೨-೩೦ ಕ್ಕೆ ಠರಾವು ಬರಿಯುವದ ಕೆಲಸ ಮುಗಿಯಿತು.

ಮರುದಿವಸ ಮುಂಜಾನೆ ಬ್ರಾಹ್ಮಣ ಸಮುದಾಯವು ಅಪ್ಪನವರ ಗದ್ದಿಗೆಯ ಸ್ಥಳಕ್ಕೆ ಹೋಯಿತು. ಇವರು ಹೋಗುವ ಪೂರ್ವದಲ್ಲಿ ಎರಡು ಸಾವಿರ ಲಿಂಗಾಯಿತ ವ್ಯಾಪಾರಸ್ಥರೂ ರೈತರೂ ಅಲ್ಲಿ ಕೂಡಿದ್ದರು. ಸ್ವರಾಜ್ಯಾಶ್ರಮದ ಪ್ರಸ್ತಾನದ ಗಂಟು ತೆಗೆದಿಟ್ಟ ದೇ. ಭ. ಕೌಜಲಗಿಯವರು ಇಷ್ಟು ದೊಡ್ಡ ಜನ ಸಮುದಾಯ ಕೂಡಲಿಕ್ಕೆ ಉಂಟಾದ ಕಾರಣದ ವಿಷಯವಾಗಿ ಪ್ರಾಸ್ತಾವಿಕ ಭಾಷಣ ಮಾಡಿ, ತಾವು ಬರೆದ ಠರಾವನ್ನು ಓದಿ ತೋರಿಸಿದರು. ಠರಾವನ್ನು ಕೇಳಿ, ಲಿಂಗಾಯಿತರು ಅತ್ಯಾನಂದಪಟ್ಟರು. ಬ್ರಾಹ್ಮಣರ ವತಿಯಿಂದ ಶ್ರೀ. ರೇವಣಸಿದ್ದಪ್ಪಾ ಇವರು ಇವತ್ತಿನವರೆಗಾದ ತಪ್ಪುತಿಳುವಳಿಕೆಯನ್ನು ಮರೆತು, ಸ್ನೇಹಭಾವದಿಂದ ನಡೆಯಬೇಕೆಂದು ಭಾಷಣಮಾಡಿದರು. ಶ್ರೀ. ರೇವಣಸಿದ್ದಪ್ಪನವರು ತಾವು ತಮ್ಮ ಸಮಾಜದ ವತಿಯಿಂದ ಜವಾಬದಾರಿಯನ್ನು ವಹಿಸಿದ್ದು, ಇದರಂತೆ ನಡಕೊಳ್ಳಬೇಕೆಂದೂ ಅದಕ್ಕೆ ನಮ್ಮ ತಿತೋರಿಸಲಿಕ್ಕೆ ಚಪ್ಪಾಳಿ ಬಾರಿಸಬೇಕೆಂದೂ ಹೇಳಿದ್ದಕ್ಕೆ ಯಾವತ್ತರು ಚಪ್ಪಾಳಿ ಬಾರಿಸಿದರು. ಬಳಿಕ ಎರಡೂ ಸಮಾಜಗಳ ಪ್ರಮುಖರು ಅಪ್ಪನವರ ಗದ್ದಿಗೆಯ ಮುಂದೆ ನಿಂತು, ತಮ್ಮ ಮನಸಿನಲ್ಲಿದ್ದ ಭೇದಭಾವವನ್ನು ಮರೆತೆವೆಂ

ಸುಧಾವರ್ಷಿಣಿಯೆಂಬ ಸಂಸ್ಕೃತ ಮಾಸಪತ್ರಿಕೆಯು

ಈ ಪತ್ರಿಕೆಯು ಇದೇ ವಿಜಯಾ ದಶಮಿಯಲ್ಲಿ ಹೊರಡಿಸಲ್ಪಡುವದು ಇದರಲ್ಲಿ ಐತಿಹಾಸಿಕ ಗ್ರಂಥಗಳೂ, ಧಾರ್ಮಿಕ ಗ್ರಂಥಗಳೂ, ಸತ್ಪುರುಷ ಚರಿತ್ರಗಳೂ ಮನೋಹರ ಮತ್ತು ಸುಲಭ ಸಂಸ್ಕೃತ ಭಾಷೆಯಿಂದ ಬರೆಯಲ್ಪಡುವವು. ಎಷ್ಟೋ ಜನರು ಸಂಸ್ಕೃತವನ್ನು ಕಲಿತು ಅದರಲ್ಲಿ ಪ್ರಾವೀಣ್ಯವನ್ನು ಹೊಂದದೆ ಇರುವರು ಅವರಿಗೆ ಸಂಸ್ಕೃತ ವಾಚನಾಭಿರುಚಿಯು ಹೋಗಿಲ್ಲ. ಇಂಥವರಿಗಂತೂ ಇದರ ಉಪಯೋಗವು ಬಹಳ ಇರುವದು ಈ ಅನುಕೂಲ್ಯ ಸಂಧಿಯನ್ನು ಕಳಿಯದೆ ಗ್ರಾಹಕರಾಗತಕ್ಕದ್ದು ಪ್ರತಿಯೊಂದು ತಿಂಗಳಿಗೆ ೪ ಫಾರ್ಮ ವಿಷಯವನ್ನು ಕೊಡುವೆವು. ಇದರ ವಾರ್ಷಿಕ ವರ್ಗಣಿಯು ಮೂರು ರೂಪಾಯಿ ಮಾತ್ರ ಪೋಸ್ಟ ಖರ್ಚ ಬೇರೆ

ಸಂಸ್ಕೃತ ಸುಧಾವರ್ಷಿಣೀ ಗ್ರಂಥಮಾಲಾ ಆಫೀಸ

ಚಾಲಕ ಮಹಾದೇವ ಶಾಸ್ತ್ರಿ ಜಂತಲಿ

ದುರ್ಗದಬೈಲು ದತ್ತಮಂದಿರದ ಹತ್ತರ ಮು. ಹುಬ್ಬಳ್ಳಿ.

ದೂ, ಮುಂದೆ ನಿಷ್ಕಾರಣ ನ್ಯಾಯಬೆಳಿಸಲಿಕ್ಕಿಲ್ಲೆಂದೂ, ಅಭಿವಚನಕೊಟ್ಟರು. ತರುವಾಯ ಮುಸಲಮಾನ ಬಂಧುಗಳಾದ ಮು. ಅಲ್ಲೀ ಕಲೀಮಸಾಹೇಬರವರು ಅಸ್ಖಲಿತವಾಣಿಯಿಂದ ಉರ್ದುದಲ್ಲಿ ಭಾಷಣ ಮಾಡಿ, ಎರಡೂ ಸಮಾಜದವರು ಒಂದಾದ್ದರಿಂದ ತಮಗೆ ಆನೆಯ ಬಲ ಬಂತೆಂದೂ, ಯಾವತ್ತೂ ಜಾತಿಯವರು ಕೂಡಿ ಬೇಕಾದಂಥ ಕಾರ್ಯ ಮಾಡಬಹುದೆಂದೂ ಹೇಳಿದರು. ಅನಂತರ ಪರಸ್ಥಳದಿಂದ ಬಂದ ಸದ್ಗೃಹಸ್ಥರ ಸನ್ಮಾನ ಮಾಡಿದನಂತರ ಸಭೆಯು ವಿಸರ್ಜನೆಯಾಯಿತು. ದೇ. ಭ. ಗಂಗಾಧರರಾವ ದೇಶಪಾಂಡೆ, ಯಾಳಗಿ, ಕುರ್ಲಿ, ಸುಗಂಧಿ ಮೊದಲಾದವರು ಶ್ರೀ. ಕೌಜಲಗಿಯವರ ಒಟ್ಟಿಯ ನೆಸೆಯಿಂದ ವಿಜಾಪೂರಕ್ಕೆ ಪ್ರಯಾಣ ಬೆಳಿಸಿದರು.

ಕೆಮಾಲ ಪಾಶ್ಚಾನಿಗೆ ಸಹಾಯ ಮಾಡುವದಕ್ಕಾಗಿ ಬೊಲ್ಶೆವಿಕರು ಇಟಲಿ ದೇಶದಲ್ಲಿ ಮಶಿನಗನ್ನು, ಯುದ್ಧದ ರಥ, ಮೋಟಾರ, ಮೋಟಾರ ಲಾರಿ, ಮದ್ದು, ಗುಂಡು, ಬಂದೂಕು ಮುಂತಾದವುಗಳನ್ನು ಬಹುವಾಗಿ ಕೊಳ್ಳುತ್ತಿರುವರು.

ಥ್ರೇಸ ಪ್ರಾಂತದೊಳಗಿಂದ ಗ್ರೀಕರನ್ನು ಹೊರಗೆ ಹಾಕಬೇಕೆಂದು ಅಂಗೋರಾ ಸರಕಾರದವರು ಕೆಮಾಲ ಪಾಶ್ಚಾನಿಗೆ ಅಧಿಕಾರ ಕೊಟ್ಟಿರುವರು. ಯುದ್ಧವು ನೊಂದಲಾರದೆಂದು ಹೇಳುತ್ತಾರೆ.

ಸ್ಮರ್ನಾದ ಜಯದ ಮೂಲಕ ತುರುಕ ರಾಷ್ಟ್ರೀಯರು ಅಂಗೋರಾದ ಬದಲಾಗಿ ಸ್ಮರ್ನಾ ಪಟ್ಟಣವನ್ನು ತಮ್ಮ ರಾಜಧಾನಿ ಮಾಡಿಕೊಂಡರು.

ಕಟ್ಟಿಗೆಯ ಅಳತೆಯ ಜಂತ್ರಿಯು.

ಮಾರಾಟಕ್ಕೆ ಸಿದ್ಧವಾಗಿದೆ. ಕಿಂ. ೧-೮ ಆಣೆ.

ಪತ್ತೆ- ರಾಮರಾವ ಬಳ್ಳಾರಿ. ಕ್ಯಾಂಪ ಟ್ರೇಡ

ಕರ್ನಾಟಕ ಟ್ರೇಡಿಂಗ ಕಂಪನಿ

ಕಂಪೋಜಿಟರರು ಬೇಕು.

ಚಾಲುವರ್ತನೆಯ ಸ್ವಚ್ಛಕೆಲಸದ ಮಾಹಿತಿಯುಳ್ಳ ಇಂಗ್ಲಿಷ, ಮರಾಠಿ, ಕನ್ನಡ ಬಲ್ಲ ಚಾಣಾಕ್ಷ ಕಂಪೋಜಿಟರರು ಬೇಕು. ೨೫ ರೂಪಾಯಿಯಿಂದ ೪೦ ರೂಪಾಯಿಗಳವರೆಗೆ ಯೋಗ್ಯತೆಯಂತೆ ಪಗಾರ ಕೊಡುವದರಲ್ಲಿ ಬರುವದು. ವಿಶೇಷ ಮಾಹಿತಿ, ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಿದುಕೊಳ್ಳಬಹುದು.

ಎನ್. ಎಮ್. ಪಣೇಕರ

ಲಿಂಗರಾಜ ಪ್ರೆಸ. ಸ್ಟೇಶನ್ ರೋಡ

ಹುಬ್ಬಳ್ಳಿ

ನೋಟೀಸು

ಕೆಳಗೆ ಸಹಿಮಾಡಿದ ಗಣಪತರಾವ ಎನ್. ಮುದಿಮಾನ ಇವರನ್ನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದ ಬ್ರಾಂಚ ಆಫೀಸ ಹುಬ್ಬಳ್ಳಿಯ ದಲಾಲನನ್ನಾಗಿ ನೇಮಿಸಿಯದೆ. ಯಾರಿಗಾದರೂ ಬ್ಯಾಂಕಿನ ಸಂಬಂಧಿ ಕೆಲಸಗಳ ಸಲುವಾಗಿ ಮಾಹಿತಿಗಳು ಬೇಕಾದಲ್ಲಿ ಅವರನ್ನು ಕೇಳಿಕೊಂಡಲ್ಲಿ, ಅವರು ಬೇಕಾದ ಸವಲತ್ತಗಳನ್ನು ಕೊಡುವಲ್ಲಿಯೂ ಮಾಹಿತಿಯನ್ನು ತಿಳಿಸುವಲ್ಲಿಯೂ ಸಮರ್ಥರಿರುವರು.

ತಾ. ೨೨-೯-೧೯೨೨

ಪತ್ತೆ ಗಣಪತರಾವ ಎನ್, ಮುದಿಮಾನ. ಮತ್ತು ಜಿ. ಎ. ಮುದಿಮಾನ ಸನ್ಸ ಹುಬ್ಬಳ್ಳಿ

ಶ್ರೇಷ್ಟ ಪ್ರತಿಯ ಮಾಸಪತ್ರಿಕೆ

ಕರ್ನಾಟಕ ಸುಂದರಿ.

ವಾರ್ಷಿಕ ವರ್ಗಣಿ. ೨ರೂ. ೪ ಆಣೆ.

ಸಂಪದುತ್ಪಾದನೆ ಒಕ್ಕಲಿಗರೂ ಶಿಕ್ಷಣವೂ ಸರಕಾರ ಮಸಿಮೆ, ಕೂಟಪ್ರಶ್ನೆ ನೀತಿಯ ಮಾತುಗಳು ವಿಚಾರಿಲ್ಲ ಅಣ್ಣಯ್ಯನು ಅಶಿಕ್ಷಿತರಿಗೂ ಕೂಡ ತಿಳಿಯುವ ಸುಲಭ ಭಾಷೆಯಲ್ಲಿ ವಿವೇಚಿಸಿದ ಕರ್ನಾಟಕ ಸುಂದರಿಯ ಮೊದಲನೇ ಸಂಚಿಕೆಯು ಮೇ ತಿಂಗಳ ೨೦ನೇ ತಾರೀಖಿಗೆ ಹೊರಟಿರುವದು ೨ನೇ ಸಂಚಿಕೆಯಿಂದ 'ವಿಚಿತ್ರ ಸಂಶಯ'ವೆಂಬ ಮನೋವೇಧಕವಾದ ಸಾಮಾಜಿಕ ಕಾದಂಬರಿಯೊಂದಿಗೆ ವಿವಿಧ ವಿಷಯಗಳೂ ಪ್ರಕಟವಾಗುವವು ಚಂದಾದಾರರಾಗುವವರು ಕೆಳಗಿನ ಪತ್ತೆಯ ಮೇಲೆ ಚಂದಾಹಣವನ್ನು ಮನಿಯಾರ್ಡರ ಮಾಡಿರಿ.

ಪತ್ತೆ:— ಸಂಪಾದಕ ಕರ್ನಾಟಕಸುಂದರಿ

ಅಮಿನಭಾವಿ ತಾಲೂಕ ಧಾರವಾಡ

R. N. B 1448

ಸಾಪ್ತಾಹಿಕ ಬೆಲೆ ೯ ಪೈ

(ವರ್ಷ ೩) ಧಾರವಾಡ, ಮಂಗಳವಾರ ತಾಂ॥ ೨೬ ನೇ ಸಪ್ಟಂಬರ ೧೯೨೨. (ಸಂಚಿಕೆ ೨೭

ವಾಗ್ವಿಲಾಸ ಬುಕ್‌ಡಿಪ್ಪೋ

ಪ್ರಿಯರೇ, ಬೇಗನೆ ವಿ ಪಿ ಯಿಂದಾ ತರಿಸಿ ಓದಿ ಆನಂದಪಡಿರಿ ಗ್ರಿಶಿ ಅರ್ಧಾನ್ನು ಹಣಾ ಕಳಿಸಬೇಕು

ಇರಲಿ

	ರೂ ಆ ಪೈ		ರೂ ಆ ಪೈ
ಸ್ತ್ರೀ ಶಿಕ್ಷಕ ಬನ್ನಿಕೊಪ್ಪಕೃತ	೧ ೦ ೦	ಮಾನವ ದರ್ಪಣ	೦-೨೨-೦
ಮುಸಲ್ಮಾನ ಪ್ರಜಾ ಪ್ರಳಿಕೃತ	೧೨ ೦ ೦	ಬಸವೇಶ್ವರ ನಾಟಕ	೧-೦-೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್	೦ ೧೨ ೬	ಪೃಥು ವಿಜಯ ನಾಟಕ	೬-೦-೦
ರುಂಡು ಗೋಪಾಲ	೧ ೪ ೦	ತ ರಾಣಾಮ ನಾಟಕ	೧-೪-೦
ವಿಲಾಸಾರಾಣ ವೃತ್ತಕ ಸಿಂಹ	೧ ೬ ೦	ಶ್ರೀಧರ್ಮಂದಸ್ಯ ನಾಟಕ	೧-೦ ೦
ಚೋಗಳಪದ	೦ ೬ ೦	ಸಾಗ್ರಸಂಗೀತ ಮದನಮಾಲಿನಿ	೦-೧೨-೦
ಶ್ರೀ ಧರ್ಮನೀತಿ	೦ ೧೨ ೦	ಓದು ವಿನಾಶಿ ವೈದ್ಯ ಯಂತ್ರ	
ದಿವ್ಯ ಪ ಂಡರಿ ಖುದಿಯೋ ಕೃತ	೧ ೦ ೦	ಮಂತ್ರತಂತ್ರ ಸಹಿತ	೧-೮-
ಕಾತಂಬಿ ವಿಚಿತ್ರಕಾದಸ್ವಾನ	೦ ೨೦	ಸಟೀಕ ವಿ ಚಾರ ಸಾಗರವೇದಾಂತ	೪-೦ ೦
ಹಿಂದು ಲಾ ಕಾಯಿದೆ ಬನ್ನ ಮಳಗುಂದಕೃತ	೬ ೦ ೦	ಬಿನ್ನಾಗಿಂದು ವಚನವೇದಾಂತ	೪-೦-೦
ಅಶೋಕ ಕಾದಂಬರಿ	೧ ೬ ೦	ಪಂಚರತ್ನ ನಿಜಗುಣ ಶಿವಯೋಗ ವಿವರ	೨-೦-೦
ಪಾಚಿತ್ರ್ಯಮನುಶಾಸನ ಬಿಪ		ಸಿದ್ಧಾಂತಬಿಂದು ಪ್ರಕಾರ	೧-೮-೦
ವೃಕ್ಷಗಳ ಫಲವಿಚಾರ	೦-೧೨-೦	ಸಟೀಕ ನಿಜಗುಣ ಕೈವಲ್ಯ ಪದ್ಧತಿ	೧-೪-೦
ಅಡವಿ ಹುಡಗಿ	೦-೧೨-೦	ಸಟೀಕ ಸಪಣಾ ಸ್ವಾಮಿಗಳ ಕೈವಲ್ಯ	೧-೪-೦
ವೀರಶೈವಾಚಾರ	೦-೦-೦	ಶ್ರೀ ದಾನಲಿಲಿ ನೀತಿ	೧-೧-೦
ಕಲ್ಪವೃಕ್ಷ ಅರುಬೇಳನ ಕೃತ	೧-೮-೦	ಗರ್ಭಿಣಿಸು ಂಗೋಪನ	೦-೧೨-೦
ಪ್ರ ಕ್ಷಸ ಲವಂಚ ಶಿನ್ನಿ ಅನುಭವಸಿದಿ	೩-೮-೦	ರಾಮ ಕೃಷ್ಣ ಪರಮಹಂಸ ಚರಿತ್ರೆ	೧-೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೦-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣ ಸವರಲೀಲಾ	೦-೩-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳಾರತಿ ಶಿವಬಜನಿಪದಗಳು	೦-೩-೦
ಬಸವಭೂಷಣ ಪಾವಟೆ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ವಾಸ ಪರೀಕ್ಷಾ ಪಾವಟೆ ವಕೀಲ	೦-೮-೦	ಆರೋಗ್ಯ ಜೀವನ ಹರಡೇಕೃತ	೦-೮-೦
ಮಳಗುಂದಮಾತಸ್ವಾಮಿಯ ಕೈವಲ್ಯದರ್ಪಣ	೧-೪-೦	ಲಿಪಿತಲೀಲಾನಾಟಕ ಸಂಗೀತ	೧-೦-೦
ಕಾಮದೇನು	೧ ೮-೦	ಸಂಗೀತ ಸಮಯಸಾರ ಮೈಸೂರು	೧-೧೦ ೦
ಪ್ರೇಮಮಂದಿರ	೦-೮-೦		

ಪತ್ತೆ ಎಂ ಆರ್. ಶಿವನಾಗಪ್ಪಾ ಪಟ್ಟಸರ ವಾಗ್ವಿಲಾಸ ಬುಕ್‌ಡಿಪ್ಪೋ ಹುಬ್ಬಳ್ಳಿ

ಸುಧಾವರ್ಷಿಣಿಯೆಂಬ ಸಂಸ್ಕೃತ ಮಾಸಪತ್ರಿಕೆಯು

ಈ ಪತ್ರಿಕೆಯು ಇದೇ ವಿಜಯಾ ದಶಮಿಯಲ್ಲಿ ಹೊರಡಿಸಲ್ಪಡುವದು ಇದರಲ್ಲಿ ಐತಿಹಾಸಿಕ ಗ್ರಂಥಗಳೂ, ಧಾರ್ಮಿಕ ಗ್ರಂಥಗಳೂ, ಸತ್ಪುರುಷ ಚರಿತ್ರಗಳೂ ಮನೋಹರವು ಮತ್ತು ಸುಲಭ ಸಂಸ್ಕೃತ ಭಾಷೆಯಿಂದ ಬರೆಯಲ್ಪಡುವವು. ಎಷ್ಟೋ ಜನರು ಸಂಸ್ಕೃತವನ್ನು ಕಲಿತು ಅದರಲ್ಲಿ ಪ್ರಾವೀಣ್ಯವನ್ನು ಹೊಂದದೆ ಇರುವರು ಅವರಿಗೆ ಸಂಸ್ಕೃತ ವಾಚನಾಭಿರುಚಿಯು ಹೋಗಿಲ್ಲ. ಇಂಥವರಿಗಂತೂ ಇದರ ಉಪಯೋಗವು ಬಹಳೇ ಇರುವದು ಈ ಅಮೂಲ್ಯ ಸಂಧಿಯನ್ನು ಕಳೆಯದೆ ಗ್ರಾಹಕರಾಗತಕ್ಕದ್ದು ಪ್ರತಿಯೊಂದು ತಿಂಗಳಿಗೆ ೪ ಫಾರ್ಮ ವಿಷಯವನ್ನು ಕೊಡುವೆವು, ಇದರ ವಾರ್ಷಿಕ ವರ್ಗಣಿಯು ಮೂರು ರೂಪಾಯಿ ಮಾತ್ರ ಪೋಷ್ಟ ಖರ್ಚು ಬೇರೆ

ಸಂಸ್ಕೃತ ಸುಧಾವರ್ಷಿಣೀ ಗ್ರಂಥಮಾಲಾ ಆಫೀಸ
ಚಾಲಕ ಮಹಾದೇವ ಶಾಸ್ತ್ರಿ ಜಂತಲಿ
ದುರ್ಗದಬೈಲು ಮಠ ಮಂದಿರದ ಹತ್ತರ ಮು ಹುಬ್ಬಳ್ಳಿ.

ಅಧ್ಯಾಪಕರು ಬೇಕು.

ಋಗ್ವೇದವನ್ನೂ ಋಕ್‌ಶಾಖೆಯ ಯಾಜ್ಞಿಕವನ್ನೂ ಬಲ್ಲಂಥ ಮತ್ತು ಸಾಹಿತ್ಯದಲ್ಲಿ ನಿಷ್ಣಾತರಾದಂಥ ಒಬ್ಬ ಅಧ್ಯಾಪಕರು ಬೇಕು. ಅಧ್ಯಾಪನ ಕಾರ್ಯಮಾಡಲಿಚ್ಛಿಸುವವರು ತಮ್ಮ ಅಧ್ಯಯನ ಮೊದಲಾದವುಗಳನ್ನು ತಿಳಿಸಬೇಕು. ಪಗಾರದ ಇತರ ಕರಾರಗಳನ್ನು ಪತ್ರಮುಖಾಂತರ ಗೊತ್ತು ಮಾಡಿಕೊಳ್ಳಬೇಕು.

ವ್ಯವಸ್ಥಾಪಕ
ಶ್ರೀ ಶೇಷಾಚಲವೇದ-ಸಂಸ್ಕೃತ ಪಾಠಶಾಲಾ
ಪೋ ಆನಂದವನ ಜಿ. ಧಾರವಾಡ

ನೋಟೀಸಿನದರಗಳು.

ಇಂಗಲಕಾಲಮಿನ ಹತ್ತುಸಾಲಿಗೆ ಒಂದೂ ರೂಪಾಯಿ; ಮುಂದೆ ಪ್ರತಿಯೊಂದು ಸಾಲಿಗೆ ಒಂದು ಪರಿಚಣೆ, ಇಂಗ್ಲಿಷ ಪ್ರತಿಯೊಂದು ... ಐದು ಆಣೆ ಇಂಗ್ಲಿಷದಿಂದ ಮಿನಿಮಮ್ ಕನ್ನಡದಲ್ಲ ಹಾಕುವದಿದ್ದರೆ ಆರು ಆಣೆ. ಗಡಬ್ಬ ಕಾಲಮಿನ ೬ ಗಳಿಗೆಯನ್ನು ಠರಾವು ಕಾಯಂ ಕಾಹಿರಾತುಗಳನ್ನು ಕೊಡುವವರು ಕೆಳಗಿನವರೊಂದಿಗೆ ಪತ್ರವ್ಯವಹಾರ ಮಾಡಬಹುದು ವ್ಯಾ. ವಿ ಧಾರವಾಡ

ನೋಟೀಸು

ರಾಣೇಬೆನ್ನೂರ ತಾಲೂಕ ಪೈಕಿ ಬ್ಯಾಡಗಿಯಲ್ಲಿರುವ ಬ್ಯಾಡಗಿ ಕೋ ಆಪರೇಟಿವ್ಹ ಹಾಸಿಂಗ ಅಸೋಸಿಯೇಶನ್‌ದ ಲಿಕ್ವಿಡೇಟರ ಇವರ ಕಡೆಯಿಂದ ಯಾವತ್ತು ಜನರಿಗೆ ತಿಳಿಸುವದರಲ್ಲಿ ಒರುತ್ತದಲ್ಲಾ.

ಸದರ ಅಸೋಸಿಯೇಶನ್ನದ ಇಮಾರತ ಕಟಿಗೆಗಳು, ಕಲ್ಲು, ಮಣ್ಣು, ಜಾಗಾ ವಗೈರೆ ಮುನಸಿಪಾಲಿಟಿ ಎಕ್ಸ್‌ಟೆನ್‌ಶನ್‌ದ ಹತ್ತರ ಸಂಘದ ಜಾಗಾದಲ್ಲಿ ತಾರೀಖು ೯ ಅಕ್ಟೋಬರ ೧೯೨೨ ನೇ ದಿವಸ ಮುಂಜಾನೆ ಎಂಟು (೮) ಘಂಟೆಕ್ಕೆ ಲಿಲಾವು ಆಗುತ್ತದೆ. ಬೇಡಲಿಚ್ಛಿಸುವವರು ಆ ದಿವಸ ಹಾಜರ ಇರತಕ್ಕದ್ದು. ಲಿಲಾವಿನ ಶರ್ತುಗಳು ಲಿಲಾವಿನ ಕಾಲಕ್ಕೆ ಓದಿ ತೋರಿಸಲ್ಪಡುವವು ತಿಳಿಯುವದು.

ಮುಕ್ಕಾಮ ಬ್ಯಾಡಗಿ. *R B Khudanpur*
ತಾ ೧೬-೯-೨೨ ಲಿಕ್ವಿಡೇಟರ, ಬ್ಯಾಡಗಿ ಕೋ ಆಪರೇಟಿವ್ಹ ಹಾಸಿಂಗ ಅಸೋಸಿಯೇಶನ್
... . . .

ಗುಜರಾಥ ವಿದ್ಯಾಪೀಠಕ್ಕೆ
೨॥ ಲಕ್ಷದ ದಾನ!!

— ೦ —

ರಂಗೂನದಲ್ಲಿರುವ ಡಾಕ್ಟರ ಪ್ರಾಣಜೀವನದಾಸ ಮೇಹಾ ಇವರು ಆಶ್ರಮವಾಸಿಗಳಿಸ್ತರು ಮಹಾತ್ಮಾ ಗಾಂಧಿಯವರ ಗುಜರಾಥ ವಿದ್ಯಾಪೀಠಕ್ಕೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರೆಂಬ ಸಂಗತಿಯನ್ನು ಓದಿಯಲಿಕ್ಕೆ ಸಂತೋಷವಾಗುತ್ತದೆ ಇವರು ಮುತ್ತು ಮಾಣಿಕ್ಯದ ದೊಡ್ಡ ವ್ಯಾಪಾರಿಗಳೂ ಧನ್ವಂತರಿಯಂಥ ಡಾಕ್ಟರರೂ ಆಗಿದ್ದಾರೆ. ಇವರು ಪಟ್ಟ ರಾಷ್ಟ್ರೀಯ ಪಕ್ಷದವರಾಗಿದ್ದು, ಲೋಕಮಾನ್ಯರ ಕೂಡ ಸ್ವರಾಜ್ಯಯಾತ್ರೆಗಾಗಿ ವಿಲಾಯತಿಗೆ ಹೋಗಿದ್ದರು ಇವರು ಮಹಾತ್ಮರು ಕೂಡ ವಿದ್ಯಾಭ್ಯಾಸ ಮಾಡಿದವರೂ, ಅವರಲ್ಲಿ ಪೂರ್ಣ ಪೂಜ್ಯಭಾವವುಳ್ಳವರೂ ಆಗಿದ್ದಾರೆ.

ಅಸಹಕಾರಿಗಳು ಸಹಕಾರಿಗಳಿಗೆ
ಬುದ್ಧೀ ಕಲಿಸುವರು.

—೦—

ಸುರತ ಮುನಸಿಪಾಲ್ಟಿಯು ಸಂಪೂರ್ಣ ಅಸಹಕಾರಿಯಾಗಲು ಸರಕಾರದವರು ಇದನ್ನು ಸಸ್ಪೆಂಡ ಮಾಡಿ, ತಮ್ಮ ಪತಿಯ ಜನರನ್ನು ಪಂಚರಾಗಿ ನೇಮಿಸಿದರು ಇದರಿಂದ ಊರ ಸ್ವಚ್ಛತೆಯ ಕೆಲಸವು ಬಹಳ ದುರ್ಲಕ್ಷ ಮಾಡಲ್ಪಟ್ಟಿತು ಎತ್ತ ನೋಡಿದತ್ತ ಕಸದ ಕುಪ್ಪರಿಗಳು ಬಿದ್ದವು. ಬಜ್ಜಲ ಹಾಗೂ ಹೇಸಿಕೆಯ ರೊಜ್ಜು ಊರ ತುಂಬ ದುರ್ಗಂಧಕ್ಕಿಟ್ಟಿತು ಕರ್ತವ್ಯ ಶೂನ್ಯರಾದ ಸಹಕಾರಿಗಳು ಪಟ್ಟಣಕ್ಕೆ ರೋಗತರುವರೆಂದು ಅಸಹಕಾರಿಗಳು ಭಯಗ್ರಸ್ತರಾಗಿ, ಹೊಲೆಮಾರಿಗರು ಮಾಡುವಂಥ ಕೆಲಸವನ್ನು ಸ್ವತಃ ಮಾಡುವಂತೆ ಟೊಂಕಕಟ್ಟಿದರು ಮಿ. ದೀಕ್ಷಿತರೆಂಬವರು ಅಧ್ಯಕ್ಷರಿರುವರು ಮನೆಯ ಕೆಲಸಕ್ಕೆ ಮಾನ ಹುಡುಕಿದರೆ ಹಾನಿಯಿಲ್ಲವೆಂದು ಅಸಹಕಾರಿಗಳು ಸ್ವತಃ ಕೈಯಲ್ಲಿ ಕಸಬರಿಗಿ ಹಿಡಿದದ್ದನ್ನು ಇವರು ನೋಡಿ, ನಾಚಿ, ತಾವು ತಮ್ಮ ಒಸರೂಅತ್ಯಂತ ಹೀನವೆನಿಸುವಂಥ ಕೆಲಸ ಮಾಡಲಾರಂಭಿಸಿದರು ಈ ಮೇರೆಗೆ ಅಸಹಕಾರಿಗಳು ಸಹಕಾರಿಗಳಿಗೆ ಬುದ್ಧೀ ಕಲಿಸಿದರು.

ಮುಂಬಯಿಯಲ್ಲಿ ಬಟ್ಟೆಯ ಪ್ಯಾಪೇಟೆಯ
ದುಃಸ್ಥಿತಿಯು

—(೦)—

ಮುಂಬಯಿ ಪೇಟೆಯಲ್ಲಿ ಬಟ್ಟೆಗಳ ವ್ಯಾಪಾರಕ್ಕೆ ಬಹಳ ಮಂದಿ ಬಂದಿರುತ್ತದೆ ಮ್ಯಾಂಚೆಸ್ಟರದವರು ಧಾರಣಿಯನ್ನು ಕಡಿಮೆ ಮಾಡಿ, ಮೂಲೀಕಿಡಿದು ಎದ್ದ ಸಸಗನ್ನು ಕೊಡಲಿಕ್ಕೆ ಸಿದ್ಧರಿದ್ದರೂ ಗಿರಾಕಿಗಳಿಲ್ಲ ವ್ಯಾಪಾರಸ್ಥರಿಗೆ ಕಿರುಕಳದಲ್ಲಿ ತುಸು ಮಟ್ಟಿಗೆ ಊತಾಯವಾಗುತ್ತಿದ್ದರೂ ದೋಕ ಕೂಳ್ಳತಕ್ಕವರಿಗೆ ಹಾನಿಯೇ ಉಂಟು ಬಟ್ಟೆನಿಂದ ವಿಲಾಯತಿಯ ವ್ಯಾಪಾರಕ್ಕೆ ಒಹಳ ಮಂದಿ ಇರುವದು. ಇದಕ್ಕ ವಿರುದ್ಧವಾಗಿ ದೇಶೀ ವ್ಯಾಪಾರವು ತೇಜಿಯಲ್ಲಿದ್ದು, ಗಿರಾಕಿಗಳು ಬೇಡಿದ ಬೆಲೆಗೆ ಕೊಟ್ಟರೂ ಸಸಗು ಸಪ್ಲೈಲ್ಲದೆ ವಿಕ್ರಿಯಾಗುತ್ತದ

ಮಾಲೆಗಾಂವದ ಪ್ರಕರಣದಲ್ಲಿ ಕೋರ್ಟಿನ ಅಪಮಾನ ಮಾಡಿತೆಂಬ ಆರೋಪದಿಂದ ಕ್ರಾನಿಕಲ್ ಪತ್ರಕ್ಕೆ ೨೦೦ ರೂ ದಂಡವಾಯಿತು.

ಪ್ರೆ... .

ಐದುಸುತ್ತ್ಕ ಆ ತಾಯಿಯ ಜೊತೆ
ಕೇಸರರ ವಿವಾಹ!!!

—೦—

ವದಪ್ಪುವರಾದ ಬಳಿಕ ಕೇಸರರು ಒಂದೇ ಸ್ಥಳದಲ್ಲಿದ್ದು, ಇವರ ದಿನಚರ್ಯವು ವಿಶಾಂತವಾಸದಂತಿರುತ್ತದ ಹೆಂಡತಿ ಸತ್ತ ಬಳಿಕಂತೂ ವಿಶಾಂತವಾಸವು ಲೋಕಾಂತರವಾಸವಷ್ಟು ಕಷ್ಟವಾಗಿದೆ ಜೀವಕ್ಕೆ ಮಾಸವಾದರೂ ...ವಾಗಲೆಂದು ರಾಜಸ್ತ್ರೀ ಮಹಾರಾಣಿ ಎಂಬುವವರೊಡನೆ ಕೂಡ ವಿವಾಹವಾಗುವರು ಇವಳಿಗೆ ಮೊದಲಿನ ಪತಿಯಿಂದ ಐವರು ಮಕ್ಕಳಿದ್ದಾರೆ

ದೇ ಭ ಕೌಜಲಗಿಯವರ ಖಟ್ಲೆ
(ತಾರಿನಿಂದ ಬಂದದ್ದು)

ತಾ॥ ೨೧-೯-೨೨ ಸಿ ರಸ್ಟೂರ.

ಮೊದಲೇ ಗೊತ್ತಾದಂತೆ ದೇ ಭ ಶ್ರೀನಿವಾಸರಾವ ಕೌಜಲಗಿಯವರ ಖಟ್ಲೆಯು ಕಲೆಕ್ಟರರ ಮುಂದೆ ನಡೆಯಿತು ಎಂಟು ಜನರ ಸಾಕ್ಷಿಗಳಾದವು ಸಾಕ್ಷಿದಾರರಿಗೇನೂ ದೇಶಭಕ್ತರು ಪ್ರತಿ ಸವಾಲು ಹಾಕಲಿಲ್ಲ ಇದೇ ತಿಂಗಳ ೨೫ನೇ ತಾರೀಖಿನವರೆಗೆ ಖಟ್ಲೆಯು ಮುಂದೆ ಹಾಕಲ್ಪಟ್ಟಿರುತ್ತದೆ

ವಿಜಾಪೂರದ ಪತ್ರ.

—೦—

ನಿನ್ನೆ ದಿವಸ ದೇ ಭ ಕೌಜಲಗಿಯವರ ಮೇಲಿನ ಖಟ್ಲೆ ಬರೋಬರೀ ೨-೩೦ ಘಂಟೆಗೆ ಸಸಾಸುಆ ಸಾಕ್ಷಿ ಆಗಿ ಖಟ್ಲೆ ೨೫ ತಾರೀಖಿಗೆ ಬಿದ್ದಿತು. ಖಟ್ಲೆ ನಡೆದ ಕಾಲಕ್ಕೆ ಕೋರ್ಟಿನೊಳಗೆ ೨೦೦-೩೦೦ ಜನರು ಹೊರಗೆ ೭-೮ ಸಾವಿರ ಜನರು ಕೂಡಿದ್ದರು ಶಾಂತ ರೀತಿಯಿಂದ ಕೆಲಸ ತೀರಿತು. ಆ ... ಯಾವತ್ತರು ದೇಶಭಕ್ತರನ್ನು ವಂದೇ ಮಾತರಂ ಗರ್ಜನೆಯಲ್ಲಿ ಅವರ ಮನೆಯವರೆಗೆ ಮುಟ್ಟಿಸಿ, ತಮ್ಮ ತಮ್ಮ ಮನೆಗೆ ಹೋದರು

ವಿವಿಧ ವರ್ತಮಾನ

ಮೌಲಾನಾ ಮಹಮ್ಮದಲಿಯವರ ತಾಯಿ ಮತ್ತು ಪತ್ನಿಯವರು ದಿಲ್ಲಿಯಿಂದ ಸಿಮಲಾಕ್ಕೆ ಹೋದರು. ದಾರಿಯಲ್ಲಿ ಅಲ್ಲಲ್ಲಿ ಇವರ ಸನ್ಮಾನ ಮಾಡಲ್ಪಟ್ಟಿತು ಸಿಮಲಾದಲ್ಲಿ ಇವರು ಅಫಗಾಣಿಸ್ತಾನದ ವಕೀಲರ ಅತಿಥಿಗಳಾಗಿದ್ದಾರೆ ಇವರನ್ನು ತಮ್ಮ ಮನೆಗೆ ಕರಕೊಂಡು ಹೋಗಲಿಕ್ಕೆ ರಾಯಭಾರಿಯು ಸ್ಟೇಶನಕ್ಕೆ ಬಂದಿದ್ದನು.

ಪಾರಸಿ ಆಫೀಸರರ ಕಾಲೇಜವನ್ನು ಹಿಂದುಸ್ಥಾನದಲ್ಲಿಯೇ ಸ್ಥಾಪಿಸಬೇಕೆಂಬ ಠರಾವು ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಪಾಸಾದಂತೆ ಕೌನ್ಸಿಲ ಆಫ ಸ್ಟೇಟದಲ್ಲಿಯೂ ಪಾಸಾಯಿತು.

ಗುರುಕಾಬಾಗದ ಪ್ರಕರಣದಲ್ಲಿ ಪೋಲೀಸರಿಂದ ಪ್ರಸಾದ ತಿಂದು, ಪರಲೋಕಕ್ಕೆ ಪ್ರಯಾಣಮಾಡಿದಂಥ ಭಾಯಿ ತಾರಾಸಿಂಗನ ಸ್ಮಶಾನಯಾತ್ರೆಯ ಮೆರವಣಿಗೆಯು ಹೊರಟಿತು ಪಂಡಿತ ಮಾಲವಿಯಾ ಮೊದಲಾದವರು ಮೆರವಣಿಗೆಯಲ್ಲಿದ್ದರು.

ಗುರುಕಾಬಾಗದಲ್ಲಿ ಪೋಲೀಸರಿಂದ ಪ್ರತಿಬಂಧಿಸಲ್ಪಟ್ಟಂದ ಚಕ್ರತೋಟಿಯಲ್ಲಿ ಅಡಿಗೆಗೆ ಉರವಲವಿಲ್ಲದ್ದರಿಂದ ಅಕಾಲಿಗಳು ಹುರಕಡ್ಡಿಯನ್ನು ತಿಂದು ಜೀವಯಾತ್ರೆಯನ್ನು ನಡಿಸಿರುತ್ತಾರೆ. ಸತ್ಯಾಗ್ರಹಕ್ಕಾಗಿ ಯಾರು ಬೇಸರಿಕೆ ಹಿಡಿಯುವರು?

ವಿ ಜ ಯ

ಧಾರವಾಡ ೨೬-೯-೧೯೨೨ನೇ ಇಸ್ವಿ

ಅಕಾಲಿಗಳಿಗೆ ಅರ್ಧ ಜಯ ಸಿಕ್ಕಿತು.

—o—

ಗುರುಕಾಬಾಗದ ಪ್ರಕರಣದಲ್ಲಿ ಧರ್ಮದ ಬೆಸೆಯಿಂದ ದೇಹತ್ಯಾಗ ಮಾಡಲಿಕ್ಕೆ ಸಿದ್ಧರಾದಂಥ ಅಕಾಲಿ ಶೀಖರಿಗೆ ಅರ್ಧಜಯ ಸಿಕ್ಕಿತೆಂದು ಇಂದಿನ ದಿವಸ ಹೇಳಬಹುದು. ಇವರು ತಮ್ಮ ಪಕ್ಷದ ಸ್ವಾತಂತ್ರ್ಯಗಳನ್ನು ಕಾಯ್ದುಕೊಳ್ಳುವಾಗ ಮತ್ತು ಅವನ್ನು ಸ್ಥಿರಗೊಳಿಸುವಾಗ ಸರಕಾರದವರು ಮಹಂತನ ಪಕ್ಷಗಟ್ಟಿ, ನ್ಯಾಯ ಮತ್ತು ಅಡಳಿತೆಯ ನಿಮಿತ್ಯದಿಂದ ಜೀವದ ಮೇಲಿನ ಹಂಗು ತೊರೆದಂಥ ಅಕಾಲಿಗಳನ್ನು ಅಣಕು ಬಡಿಗೆಯಿಂಥ ಬಡಿಗೆಗಳಿಂದ ಹೊಡೆದು, ಅವರನ್ನು ರಕ್ತ ಬಂಬಾಳ ಮಾಡಿದ ಸಂಗತಿಯು ಪ್ರತಿಯೊಬ್ಬನ ಕಣ್ಣೊಳಗಿಂದ ನೀರು ಸುರಿಸುವಂತಿರುತ್ತದೆ. ಶೀಖರು ಗುರುಕಾಬಾಗದ ಸತ್ತರ ಬಂದರೆ- ಅವರಿಗೆ ರಕ್ತದ ಸ್ನಾನ ಮಾಡಿಸುವರು. ಮತ್ತು ಹೊಸದಾಗಿ ಯಾರಾದರು ಹೋಗುವದಾದರೆ- ಕಾಲುದಾರಿ ಮತ್ತು ರೇಲುದಾರಿಯಿಂದ ಅವರನ್ನು ತಡೆಯುವರು. ಮತ್ತು ಇವರು ನ್ಯಾಯದ ಸ್ಥಳದಲ್ಲಿ ಬರಬಾರದೆಂದು ಸುತ್ತಲು ತಂತಿಯ ಬೇಲಿಯನ್ನು ಕಟ್ಟಿದರು. ಆದರೂ ಅಕಾಲಿಗಳು ಪೋಲೀಸರ ಕಣ್ಣಿಗೆ ಇಂಗು ಹಚ್ಚಿ ಗುರುದ್ವಾರ ತೋಟಕ್ಕೆ ಹೋಗುವರು. ಶೀಖರ ಈ ವೀರ ಪ್ರತಿಜ್ಞೆ ಮತ್ತು ದೃಢನಿಶ್ಚಯವನ್ನು ಕಂಡು ಕೇಳಿ, ಮತ್ತು ಜುಲ್ಮಿ ಕಾರ ಪೋಲೀಸರ ಹಿಂಸೆಯ ಕೃತ್ಯಗಳ ವರ್ತಮಾನ ಕೇಳಿ, ಕಾಂಗ್ರೆಸದ ಅಧ್ಯಕ್ಷರಾದ ಹಕೀಮ ಅಜಮಲಖಾನ ಮೊದಲಾದವರು ಅಲ್ಲಿಗೆ ಹೋದರು. ಪಂಡಿತ ಮಾಲವಿಯಾಯಂಥವರು ಪೋಲೀಸರ ಅಗಾಧ ಲೀಲೆಯನ್ನು ನೋಡಲಿಕ್ಕೆ ಹೋದಾಗ ಕಲೆಕ್ಟರ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಂಥ ಜವಾಬದಾರ ಅಧಿಕಾರಿಯು ಇವರ ಅಪಮಾನ ಮಾಡಿದನು. ಈ ಅಪಮಾನದ ಪ್ರಕರಣವು ವೈಸರಾಯ ಬರುವಂತಾದ ಕೂಡಲೆ ಸಾಹೇಬರು ವಿವಾದ ಪ್ರಕಟಿಸಿದ್ದಾರೆ. ಸಾಹೇಬರು ಮಾಡಿದಂಥ ಮೂರ್ಖತನವನ್ನು ಪಂಡಿತರು ನುಡಿದಿದ್ದರೆ- ಅವರು ಜವಳಿಗಾರರ ವರ್ಗದಲ್ಲಿ ಸೇರಿ ಇಷ್ಟೊತ್ತಿಗೆ ಸೆರೆವಾಸವನ್ನು ಕಾಣುತ್ತಿದ್ದರು, ಪಂಡಿತ ಮಾಲವಿಯಾಯವರಂತೆ, ಏಕ್ಕ ಪ್ರಮುಖರಿಗೆ ಸರಕಾರದ ಅಧಿಕಾರಸ್ಥರ ದೃಷ್ಟಿಯಲ್ಲಿ ಎಷ್ಟು ಗೌರವವಿರುವದೋ ತಿಳಿಯಬರಲಿಲ್ಲ. ಹಿಂದೀ ಪ್ರಮುಖರು ಕೂಡಿ ಅಕಾಲಿಗಳಿಗೆ ಬಲಕೊಟ್ಟದ್ದು, ಗವ್ಹರ್ನರ ಸಾಹೇಬರಿಗೆ ಕಸಿವಿಸಿಯನ್ನುಂಟು ಮಾಡಿರಬಹುದು. ತಾವೂ ಪ್ರತ್ಯಕ್ಷವಾಗಿ ವಿದ್ಯಮಾನ ಸ್ಥಿತಿಯನ್ನು ನೋಡಬೇಕೆಂದು ಅಮೃತಸರಕ್ಕೆ ಬಂದರು. ಪದ್ಧತಿ ಪ್ರಕಾರ ಊರೊಳಗಿನ ಕೆಲ ಗೃಹಸ್ಥರನ್ನು ಕರೆಸಿ, ಅವರ ಕೂಡ ವಿಚಾರಮಾಡಿದರು. ಮಿ. ಅಂಡ್ರ್ಯೂಜ ಸಾಹೇಬರೂ ಸಾಹೇಬರ ಭೆಟ್ಟಿಗೆ ಹೋಗಿದ್ದರು. ಇವರು ತಾವು ಕಣ್ಣಾರೆ ಕಂಡಂಥ ಹೃದಯದ್ರಾವಕ ಸ್ಥಿತಿಯನ್ನು ಹೇಳಲಿಕ್ಕೆ ಹಿಂಜರಿಯಲಿಲ್ಲ. ಗವ್ಹರ್ನರರಂಥ ದೊಡ್ಡ ಅಧಿಕಾರಸ್ಥರು ಒಂದು ಪಟ್ಟಣಕ್ಕೆ ಹೋದಾಗ, ಆಸ್ಪತ್ರೆಗೆ ಹೋಗಿ, ಎರಡು ಸಮಾಧಾನದ ಮಾತುಗಳನ್ನು ಹೇಳಿ, ರೋಗಿಗಳನ್ನು ಆನಂದಪಡಿಸುವದು ವಾಡಿಕೆಯಾಗಿದೆ. ಆದರೆ ಗವ್ಹರ್ನರ ಸಾಹೇಬರು ಅಕಾಲಿಗಳನ್ನು ನೋಡಲಿಕ್ಕೆ ಹೋದರೆ ಪ್ರಸಂಗವು ತಮ್ಮ ಮೇಲೆ ಬರುವದೆಂದು ತಿಳಿದು, ಅತ್ತ ಕಡೆಗೆ ಹೋಗಲೇ ಇಲ್ಲ. ಇದು ಹಿಂದೀ ಜನರ ವಿಷಯವಾಗಿರತಕ್ಕ ವಾತ್ಸಲ್ಯ!! ಸಾಹೇಬರು ಹೋದ ಬಳಿಕ ಒಂದು ಸಂಗತಿಯು ಮಾತ್ರ ಸಂಭವಿಸಿತು. ಪೋಲೀಸರು ನಿರ್ದಯದಿಂದ ಶೀಖರನ್ನು ಹೊಡೆಯುವದು ಬಂದಾಗಿ, ಮ್ಯುನಿಸಿಪಾಲಿಟಿಯವರು ಗ್ರಹದ ಸ್ವಯಂಸೇವಕರನ್ನು ಸೆರೆ ಹಿಡಿಯುವಂತೆ, ಇವರನ್ನು ಬಿಸ್ಸಗಿರಿ ಮಾಡುವ ಉಪಕ್ರಮವಾಯಿತು. ಪಂಡಿತ ಮಾಲವಿಯಾಯವರ ಅಪಮಾನ ಮಾಡಿದ ಕಲೆಕ್ಟರ ಡಿಸ್ಟ್ರಿಕ್ಟ ಬೋರ್ಡಿನ ಪರವಾಗಿ ಸಭೆಯನ್ನು ಕರೆದು, ನೀವು ಗುರುದ್ವಾರದ ಸ್ವರಾಜ್ಯದ ಬಿಲ್ಲನ್ನು ಅಂಗೀಕರಿಸಿರಿ. ಇಲ್ಲವೆ ಬಡಿಗೆ ಆವರೆ ಶಾಂತಿ ಮತ್ತು ರಾಜ್ಯದಾತಳಿಗೆ ವಿಘ್ನಕರವೆಂದು ಹೇಳಿಕೊಂಡರು. ಈ ರೀತಿಯಾಗಿ ಅಕಾಲಿಗಳಿಗೆ ಅವತ್ತಿನ ದಿವಸ ಅರ್ಧ ಜಯ ಬಂದಿದೆ. ಮತ್ತು ಮುಂದಿನ ದಿವಸಗಳಲ್ಲಿ ಪೂರ್ಣ ಜಯ ಬರುವದು ನಿಶ್ಚಯ.

ಇಂಗ್ಲಂಡದ ಸೇನಾಸಿದ್ಧತೆ.

—o—

ಕೆಮಾಲಪಾಶ್ಯಾನಿಗೆ ಎಚ್ಚರಿಕೆಯ ಉಪದೇಶ.

—o—

ಕೆಮಾಲಪಾಶ್ಯಾನು ಒಡಂಬಡಿಕೆಯ ವಿಷಯವಾಗಿ ಹೇಳಿದ ಕಟ್ಟಳೆಗಳನ್ನು ಈ ಮೊದಲು ಬರೆದಿರುತ್ತೇವೆ. ಅನಂತರ ಈ ಕಟ್ಟಳೆಗಳಿಗೆ ಪುಷ್ಟಿಯಾಗಿ ಬಂದ ಕರಾರುಗಳ ವಿವರವು ಕೆಳಗೆ ಕೊಟ್ಟಂತಿರುತ್ತದೆ.

೧ ಗ್ರೀಕರು ಅನ್ಯಾಯವಾಗಿ ಆಕ್ರಮಿಸಿದಂಥ ತುರುಕ ರಾಜ್ಯವನ್ನು ಬಿಟ್ಟುಕೊಡತಕ್ಕದ್ದು.

೨ ಆಶಿಯಾ ಮಾಯನಾರ ಮತ್ತು ಥ್ರೇಸ ಪ್ರಾಂತಗಳಲ್ಲಿಯ ಪ್ರಭುತ್ವವನ್ನು ಗ್ರೀಕರು ಸಂಪೂರ್ಣವಾಗಿ ಬಿಟ್ಟುಕೊಡಬೇಕು ಮತ್ತು ಈ ದೇಶಗಳ ಮೇಲಿನ ತಮ್ಮ ಅಭಿಲಾಷೆಯನ್ನು ಬಿಟ್ಟುಕೊಡಬೇಕು.

೩ ಗ್ರೀಕರು ತಮ್ಮಿಂದಾದಂಥ ಎಲ್ಲ ಹಾನಿಗಳನ್ನು ತುಂಬಿಕೊಡಬೇಕು. ಹಾಳುಮಾಡಿದಂಥ ಪ್ರದೇಶವನ್ನು ದುರಸ್ತ ಮಾಡಿಕೊಡಬೇಕು.

೪ ಯುದ್ಧಕಾಲದಲ್ಲಿ ಮತ್ತು ಸ್ಮರ್ನಾ ದಾಳಿಯನ್ನು ಎಬ್ಬಿಸಿದ ವೇಳೆಯಲ್ಲಿ ಕ್ರೂರ ಕರ್ಮವನ್ನು ಮಾಡಿದಂಥ ಎಲ್ಲ ಕಾಮದಾರರನ್ನು ತುರುಕರ ವಶಮಾಡಬೇಕು.

ಕೆಮಾಲಪಾಶ್ಯಾನು ಇವಕ್ಕೆ ಕಡಿಮೆಯಾಗಿ ಯಾವ ಕರಾರಕ್ಕೂ ಒಪ್ಪುವದಿಲ್ಲೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಕಾನ್ಸಟಂಟಿನೋಪಲವು ತುರುಕರ ಅಧಿಪತ್ಯಕ್ಕೆ ಸೇರಬೇಕಾದ್ದರಿಂದ ತನ್ನ ದಂಡು ಬರುವ ತನಕ ಬಿಂದಾಯು, ದಾಳಿ, ಸುಲಿಗೆ, ರಕ್ತಪಾತ ಮುಂತಾದ ಯಾವ ಕೃತ್ಯವನ್ನೂ ಮಾಡಕೂಡದೆಂದು ಈತನು ಕಾನ್ಸಟಂಟಿನೋಪಲದ ತುರುಕರಿಗೆ ಸೂಚನೆ ಮಾಡಿರುತ್ತಾನೆ.

ಕೆಮಾಲಪಾಶ್ಯಾನು ಡಾರ್ಡನಲೀಜ ಸಾಮುದ್ರಧುನಿಯನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳುವದಕ್ಕೆ ಹಿಂಜರಿಯನೆಂದು ಊಹಿಸಿ, ಈತನನ್ನು ಪ್ರತಿರೋಧಿಸುವದಕ್ಕಾಗಿ, ಇಂಗ್ಲಿಷ ಸರಕಾರದವರು ಮುಂದೊರೆದು ಈತನ ದಾಳಿಯನ್ನು ತಡೆಯಬೇಕೆಂದಿರುತ್ತಾರೆ. ಒಂದು ಇಂಗ್ಲಂಡದಿಂದ ಮಾತ್ರ ಸೈನ್ಯವನ್ನು ಕಳಿಸದೆ, ಕಾನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕೆ ಮುಂತಾದ ವಸಾಹತುಗಳಿಗೂ ದಂಡಿನ ನೆರವು ಕಳಿಸಲಿಕ್ಕೆ ತಾರಿನಿಂದ ತಿಳಿಸಿದ್ದಾರೆ. ಹಿಂದುಸ್ಥಾನದ ದಂಡಿನ ಮೇಲೆ ಸಂಪೂರ್ಣ ಅಧಿಕಾರವಿರುವದರಿಂದ ವಸಾಹತುಗಳಂತೆ ಸೂಚನೆಯ ಸ್ವರೂಪದ ವಿನಂತಿಯನ್ನು ಇದಕ್ಕೆ ಮಾಡಿಕೊಳ್ಳುವ ಅಗತ್ಯವೇ ಇರುವದಿಲ್ಲ.

ಇದಕ್ಕಾಗಿಹೆಚ್ಚಿನ ಮಹತ್ವದ ಹಾಗು ಅರ್ಥಯೋಗದ ಸಂಗತಿಯೆಂದರೆ- ಇಂಗ್ಲಿಷ ಸರಕಾರದವರು ಯುದ್ಧದಲ್ಲಿ ಸೋತಂಥ ಗ್ರೀಸರಿಗೆ ಡಾರ್ಡನಲೀಜದ ಸಂರಕ್ಷಣೆಗಾಗಿ ದಂಡುಕಟ್ಟಲಿಕ್ಕೆ ಹೇಳಿದ್ದಾಗಿದೆ. ಜಯಶಾಲಿಗಳಾದ ತುರುಕರು ಸಂಯುಕ್ತರಿ ಪಳಿಯನ್ನು ದಾಟಿ,ಕಾನ್ಸಟಂಟಿನೋಪಲಕ್ಕೆ ಒಂದು ಥ್ರೇಸ ಪ್ರಾಂತವನ್ನು ಆಕ್ರಮಿಸಿದರೆ- ಯುದ್ಧದಲ್ಲಿ ಸೋತಂಥ ಬಲ್ಗೇರಿಯಾ, ಜರ್ಮನಿ, ಆಸ್ಟ್ರಿಯಾ ಇವೆಲ್ಲ ದೇಶಗಳಿಗೆ ಬೇವಕಳೆ ತುಂಬಿ ಇವು ಪುನಃ ರಣಗಾಳಿ ಹಿಡಿಯುವವೆಂದು ಬ್ರಿಟಿಶ ಸರಕಾರದವರು ಊಹಿಸುತ್ತಿದ್ದು, ಇದಕ್ಕೆ ಫ್ರಾನ್ಸ ಮತ್ತು ಇಟಲಿಯು ಸುತಿಹಿಡಿದಿರುತ್ತವೆ. ಒಡಂಬಡಿಕೆಯ ಸ್ಥಾಪನೆಯು ನಡೆಯುವತನಕ, ತಟಸ್ಥ ವ್ಯಕ್ತಿಯಲ್ಲಿರುವ ಪ್ರದೇಶದಲ್ಲಿ ಕಾಲಿಡಕೂಡದೆಂದು ಇವರು ಕೆಮಾಲಪಾಶ್ಯಾನಿಗೆ ತಿಳಿಸಿ, ಈತನು ಇದನ್ನು ಮೀರಿ ಬಂದದ್ದಾದರೆ- ಈತನಿಗೆ ಪ್ರತಿರೋಧ ಮಾಡಬೇಕೆಂದು ಬ್ರಿಟಿಶ ಸರಕಾರದವರು ಕಾನ್ಸಟಂಟಿನೋಪಲದಲ್ಲಿರುವ ತಮ್ಮ ಅಧಿಕಾರಿಗೆ ತಿಳಿಸಿ, ಅತ್ತಕಡೆಗೆ ಸೇನೆಯನ್ನೂ ಯುದ್ಧದ ಹಡಗಗಳನ್ನೂ ಕಳಿಸುತ್ತಿರುವರು.

ಮಹಾತ್ಮಾ ಗಾಂಧಿಯವರವರ್ಧಂತಿ ಉತ್ಸವವು ಕ್ವಾಗಿರಿಜ್ಲೆಯ ಕಾಂಗ್ರೆಸ ಆಫೀಸದಲ್ಲಿ ದೀಪೋತ್ಸವವಾಯಿತು.

ಸ್ಮರ್ನಾದಲ್ಲಿಯ ಉರಿಯಿಂದ ಗ್ರೀಕರ ಧರ್ಮಗುರುವು ಭಸ್ಮೀಭೂತನಾದನು. ೧೧ ಅಮೇರಿಕನರ ಪತ್ತೆಯೇ ಇಲ್ಲದಾಗಿದೆ.

ಸ್ಮರ್ನಾ ಪಟ್ಟಣವು ಸುಟ್ಟು ಬೂದಿಯಾಯಿತು

—o—

ತುರುಕರು ಅತ್ಯಾನಂದದಿಂದ ಈ ಪಟ್ಟಣವನ್ನು ಆಕ್ರಮಿಸಿದರು. ಎರಡು ದಿವಸ ಊರು ಶಾಂತವಾಗಿತ್ತು. ಆದರೆ ದೈವ ದುರ್ದೈವದಿಂದ ಒಮ್ಮಿಂದೊಮ್ಮೆ ಗ್ರೀಕ ಮತ್ತು ಆರ್ಮೇನಿಯರೆಂಬ ಕ್ರಿಶ್ಚನರು ವಾಸಿಸುವ ಬೀದಿಗಳಲ್ಲಿ ಉರಿಯೆದ್ದು, ಅಗ್ನಿನಾರಾಯಣನು ಸಹಸ್ರ ನಾಲಿಗೆಯಿಂದ ಒಂದರ ಹಿಂದೊಂದರಂತೆ ಓಣಿಗಳನ್ನು ನುಂಗಲಾರಂಭಿಸಿದನು. ಈ ರೀತಿಯಾಗಿ ನೆಂಕೆಯು ಹಚ್ಚಿ, ಎರಡು ಮೈಲು ಉದ್ದ ಮತ್ತು ೧ ಮೈಲು ಅಗಲವಾಗಿರುವನ್ನು ಪ್ರದೇಶವು ಸುಟ್ಟು ಬೂದಿಯಾಗಿದೆ. ಗ್ರೀಕ ಮತ್ತು ಆರ್ಮೇನಿಯನ ಶ್ರೀಮಂತರ ಮನೆಗಳು, ಬ್ಯಾಂಕುಗಳು, ಪೇಟೆಗಳು ಭಸ್ಮವಾದವು. ಮುನ್ನೂರು ವರ್ಷಗಳ ಕೆಳಗೆ ಲಂಡನ ಪಟ್ಟಣವು ಸುಟ್ಟಿತು, ಆದಕ್ಕೂ ಹೆಚ್ಚಿನ ಅನರ್ಥವು ಸ್ಮರ್ನಾದಲ್ಲಾಯಿತೆಂದು ಹೇಳುತ್ತಾರೆ. ಇಲ್ಲಿಯ ಜನಸಂಖ್ಯೆಯು ಎರಡೂವರೆ ಲಕ್ಷ ವಿದ್ದು, ಒಂದು ಲಕ್ಷ ಜನರು ನಿರಾಶ್ರಿತರಾಗಿರುತ್ತಾರೆನ್ನುವದಕ್ಕಿಂತ ಉಪವಾಸ ವನವಾಸದಿಂದ ಮೃತ್ಯು ಮುಖದಲ್ಲಿ ಬಿದ್ದಿರುತ್ತಾರೆಂದು ಹೇಳುವಂತಿದೆ. ತುರುಕರ ಜಯದ ದೆಸೆಯಿಂದ ಹೊಟ್ಟೆ ಕಿಚ್ಚು ಪಟ್ಟು, ಗ್ರೀಕರು ಬೆಂಕೆಯನ್ನು ಹಚ್ಚಿದರೆಂದು ತುರುಕರು ಅನ್ನುವರು. ಗ್ರೀಕರ ಹಾಗು ಅರ್ಮೇನಿಯರ ಪಂಶನಾಶವೇ ಆಗಿಬಿಡಬೇಕೆಂದು ತುರುಕರು ಉರಿಯೆಬ್ಬಿಸಿದರೆಂದು ಗ್ರೀಕರು ಅನ್ನುವರು. ಹೀಗೆ ಒಬ್ಬರ ಮೇಲೊಬ್ಬರು ಆ ಅನಾಹುತದ ಆರೋಪಮಾಡುತ್ತಿರುವರು. ತುರುಕರು ಜಯಶಾಲಿಗಳಾಗಿರುವಾಗ, ತಮ್ಮ ಪಟ್ಟಣವನ್ನು ತಾವೇ ಹಾಳುಮಾಡಿಕೊಳ್ಳುವಷ್ಟು ಬುದ್ಧಿಶೂನ್ಯರಿದ್ದಾರೆಂದು ಯಾರೂ ಅನ್ನರು.

ಮಹಾಯುದ್ಧವು ಮರಳಿಸುವದು-

—(o)—

ತುರುಕರ ಸಹಾಯಕ್ಕಾಗಿ ಬೊಲ್ಶೆವಿಕರ ಸೈನ್ಯಸಿದ್ಧತೆ.

—o—

ತುರುಕರ ಜಯದ ಬಗ್ಗೆ ತಮಗೆ ಆನಂದವಾಗಿದೆಂದೂ, ತುರ್ಕರಿಗೆ ತಮ್ಮ ನೆರವು ಉಂಟೆಂದೂ ರಶಿಯರು ಜಾಹೀರ ಮಾಡಿದ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ. ತುರುಕರ ಜಯವನ್ನು ದೊಡ್ಡ ಗಂಡಾಂತರವಾಗಿ ತಿಳಿದವರು ಇಂಗ್ಲಿಷ ಸರಕಾರದವರೇ! ಮತ್ತು ಇಂದು ಡಾರ್ಡನಲೀಜಕ್ಕೆ ಸೈನ್ಯದ ಹಿಂದೆ ಸೈನ್ಯದ ರವಾನಿಸಿದವರು ಇಂಗ್ಲಿಷರೇ. ಇಂಗ್ಲಿಷ ಸರಕಾರದವರು ದುರಭಿಮಾನಕ್ಕೆ ಬಿದ್ದು ಮುಸಲಮಾನರ ಮನಸ್ಸನ್ನು ಕೆಡಿಸಿಕೊಳ್ಳುವದಕ್ಕೆ ಬೇಕಾದ ಅವಿಚಾರದ ಕೃತ್ಯ ಮಾಡುತ್ತಾರೆಂಬದು ತಿಳಿಯದಾಗಿದೆ. ತುರ್ಕಸ್ಥಾನವನ್ನು ಆಡಕೊತ್ತಿನೊಳಗಿನ ಅಡಿಕೆಯಂತೆ ಹಿಡಿಯಬೇಕೆಂದು ಇಂಗ್ಲಿಷರು ದ ವರೆಗೆ ಯತ್ನಿಸಿದಿದ್ದರಿಂದಲೇ ಅಂಗೋರಾದಲ್ಲಿ ತುರುಕರ ಸ್ವತಂತ್ರ ರಾಜ್ಯಸ್ಥಾಪನೆಯಾಯಿತು. ಈ ರಾಜ್ಯಕ್ಕೆ ಬೊಲ್ಶೆವಿಕರ ಸಹಾಯ ದೊರೆಯಿತು, ಮುಸಲಮಾನರಲ್ಲಿ ಏಕೀಕರಣದ ಭಾವನೆಯು ಹುಟ್ಟಿ, ಏಶಿಯದ ಬಾಗಿಲಿನಿಂದ ಚೀನದ ವರೆಗೆ ಮುಸಲಮಾನರೆಲ್ಲರು ಒಂದಾದರು. ಕಾಬೂಲವು ಸ್ವತಂತ್ರವಾಯಿತು. ಹಿಂದುಸ್ಥಾನದ ಮುಸಲಮಾನರು ಖಿಲಾಫತದ ಚಳವಳಿಯನ್ನೆಬ್ಬಿಸಿದರು.

ಈ ಜಯಕ್ಕೆ ವಿಘ್ನರಾಗಿ ಇಂಗ್ಲಿಷರಾಗಲಿ, ಇಂಗ್ಲಿಷರ ಬಲವುಂಟೆಂದು ರೋಮಾನಿಯಾ ಗ್ರೀಸರಾಗಲಿ ತುರುಕರ ಮೇಲೆ ಶಸ್ತ್ರಹಿಡಿಯುವರಾದರೆ- ತುರುಕರಿಗೆ ಸಹಾಯವಾಗಿ ಬೊಲ್ಶೆವಿಕರು ರಣಭೇರಿ ಹೊಡೆಯುತ್ತಾ ಒದಗುವರೆಂಬದು ನಿಶ್ಚಯವಾಗಿ ತಿಳಿಯುವಂಥ ಸಮಯ ಬಂದೊದಗಿದೆ. ಇಂಗ್ಲಿಷ ಸರಕಾರದವರು ಕಾನ್ಸಟಂಟಿನೋಪಲಕ್ಕೆ ಗುಪ್ತ ರೀತಿಯಿಂದ ದಂಡು ಕಳಿಸದೆ, ಜಾಹೀರಾಗಿ ಕಳಿಸುತ್ತಿರುವ ಹೆಮ್ಮೆಯನ್ನು ನೋಡಿ, ಬೊಲ್ಶೆವಿಕರು ಬಲಕ್ಕೆ ಸಮಬಲವೆಂದು ತಾವೂ ರಣರಂಗಕ್ಕೆ ಪಡೆಯನ್ನು ಕಳಿಸುವಂತೆ ಪ್ರಕಟ ಮಾಡಿದ್ದಾರೆ. ಲಂಡನದಂಥ ರಾಜಧಾನಿಯ ಪಟ್ಟಣವನ್ನು ಬಿಟ್ಟು, ಒಂದು ಹಳ್ಳಿಯಲ್ಲಿ ಕೂತು ನಾಮದಾರ ಲಾಯಿಡ ಜಾರ್ಜ ಸಾಹೇಬರು ಇತರ ಮಂತ್ರಿಗಳೊಡನೆ ಮಸಲತು ಮಾಡುತ್ತಿರುವರು. ಇದಕ್ಕೆ ವಿರುದ್ಧವಾಗಿ ಬೊಲ್ಶೆವಿಕರು ಮುಖ್ಯ ಪಟ್ಟಣವಾದ ಮಾಸ್ಕೋದಲ್ಲಿ ಕೂತು ತುರುಕರಿಗೆ ಯಾವ ತರದ ನೆರವು ಕೊಡಬೇಕೆಂದು ಮಂಟಿಕೆ ... ಯುದ್ಧ ಮುಗಿದ ಕೂಡಲೆ ಇಂಗ್ಲಂಡ, ಫ್ರಾನ್ಸ, ಇಟಲಿ ಮುಂತಾದವುಗಳು, ದಂಡಾಳುಗಳಿಗೆ ಮನೆಗೆ ಅಪ್ಪಣೆಕೊಟ್ಟವು. ಆದರೆ ರಶಿಯರ ೨೦ ಲಕ್ಷ ಸೈನ್ಯವು ಇಂದಿನ ದಿವಸ ಸಕಲ ವಿಧದಲ್ಲಿಯೂ ಸಜ್ಜಾಗಿದೆ. ಈ ದಂಡನ್ನು ಕರಗಿಸಬೇಕೆಂದು ನಾಮದಾರ ಲಾಯಿಡ ಜಾರ್ಜ ಸಾಹೇಬರು ಯೋಚಿಸಿ, ಬೊಲ್ಶೆವಿಕರನ್ನು ರಾಷ್ಟ್ರ ಸಂಘದಲ್ಲಿ ಸೇರಿಸಿಕೊಂಡರು. ಆದರೂ ಸೈನ್ಯದ ಕಮ್ಮಿ ಆಗಲಿಲ್ಲ. ಈಗಂತೂ ಧೂಮಕೇತುವಿನಂತೆ ಭಯದ ಸೃಷ್ಟಿ ಮಾಡಿಬಿಟ್ಟಿರುವನು.

ತುರುಕರಿಗೆ ಸಹಾಯಮಾಡುವದಕ್ಕಾಗಿ ಟ್ರಾಸ್ಕಿಯು ಅಧ್ಯಕ್ಷತೆಯಲ್ಲಿ ಬೊಲ್ಶೆವಿಕ ಯುದ್ಧ ರಾಷ್ಟ್ರವಿಶಾರದರ ಒಂದು ಕೂಟಕೂಡಿ, ರಹಸ್ಯವಾಗಿ ಎರಡು ಮಾತುಗಳು ಥೇಸಿಸಲ್ಪಟ್ಟವು ಸಜ್ಜನರಿದ್ದವನು ಇಂಗಿತಾರ್ಥವನ್ನು ಹೇಳಬಾರದು. ಬಂಟನಾದವನು ಸಂಗರಕ್ಕೆ ಭಯಪಡಬಾರದು. ಎಂಬುದು ಈ ಪರವಾಗಿ ಗುಪ್ತವಾಗಿ ಸಭೆಯ ಕೆಲಸ ನಡೆದದ್ದರೂ, ಕಾಕೇಸಸ ಪರ್ವತಾವಳಿಯಲ್ಲಿದ್ದ ಸೈನ್ಯ, ಮಾಸ್ಕೋ ಸೈನ್ಯ ಹಾಗು ಕಪ್ಪು ಸಮುದ್ರದಲ್ಲಿರುವ ಹಡಗಪಡಗೆ ದಂಡಯಾತ್ರೆಗೆ ಹೊರಡಲು ಸಿದ್ಧವಾಗಿರುವ ಹಾಗೆ ಅಪ್ಪಣೆಯಾದಂತೆ ಜನರಿಗೆ ತಿಳಿದಿದೆ. ಇದಲ್ಲದೆ, ಗ್ರೀಕ ಯುದ್ಧದಲ್ಲಿ ಅಸತ್ಯಾಲವೆಂದು ಅಂಗೋರಾದಲ್ಲಿ ಈ ಮೊದಲು ಸೈನ್ಯ ಕಳಿಸಿದ್ದರು. ಕೆಮಾಲಪಾಶ್ಯಾನು ಕಾನ್ಸಟಂಟಿನೋಪಲದ ಮೇಲೆ ಸಾಗಿಹೋದರೆ— ಈ ದಂಡು ಈತನನ್ನು ಹಿಂಬಾಲಿಸುವದು. ದಂಡಿಗೆ ಒಬ್ಬ ನಾಯಕನು ಬೇಕು. ಮುಖ್ಯ ಸೇನಾಧಿಪತಿಯಾದ ಕೆಮಿನಾಫನೇ ನರಪತ್ತಿಗೆ ಪ್ರಯಾಣ ಬೆಳಿಸಿರುವನು.

ಇಂಗ್ಲಿಷ ಸರಕಾರದವರು ಡಾರ್ಡನಲೀಜದ ಬಾಗಿಲವು ಅನಿರ್ಬಂಧವಾಗಿ ತೆರೆದಿರಬೇಕೆಂದು ತುರುಕರ ಅಭಿಪ್ರಾಯ ಹಾಗು ಅಸ್ತಿತ್ವಕ್ಕೆ ಕಾರಣರಾಗಿದ್ದಾರೆ ಎನ್ನುವ ಟ್ರಾಟ್ಸಕಿಯಂಥ ವೀರನು ಮೊದಾಸೋಟೆಯಲ್ಲಿ ತುರುಕರ ನೆರವಾಗಿದ್ದವನಿದ್ದಾನೆ; ಈತನು ಈಗ ತನ್ನ ಸರಕಾರಕ್ಕೆ ಮೂರ್ಖತನವನ್ನು ಬಿಟ್ಟು ತುರುಕರ ವಿಶ್ವಾಸವನ್ನು ಗಳಿಸಿರೆಂದು ಸಾರಿ, ಸಾರಿ ಹೇಳುತ್ತಿರುವನು. ಇಂಗ್ಲಿಷ ಸರಕಾರದವರು ಮುಂಗೈ ಬಲದಿಂದ ಡಾರ್ಡನಲೀಜದಲ್ಲಿ ತಮ್ಮ ವರ್ಚಸ್ವನ್ನು ಸ್ಥಿರಪಡಿಸಲೆಳಸಿದಾಗ, ಬೊಲ್ಶೆವಿಕರೂ ಅಂಗೋರಾ ಸರಕಾರದವರೂ ತಮ್ಮೊಳಗೆ ಮಾತಾಡಿಕೊಂಡು, ಡಾರ್ಡನಲೀಜದ ಸ್ವಾತಂತ್ರ್ಯದ ಸಲುವಾಗಿ ಬೊಲ್ಶೆವಿಕರು ತುರುಕರಿಗೆ ಸಹಾಯಮಾಡತಕ್ಕದ್ದೆಂದೂ, ತುರುಕರು ಅವರಿಗೆ ಕಪ್ಪು ಸಮುದ್ರದಲ್ಲಿ ಸರ್ವ ಸ್ವಾತಂತ್ರ್ಯಕೊಡತಕ್ಕದ್ದೆಂದೂ ಕರಾರ ಕಟ್ಟಳೆ ಮಾಡಿಕೊಂಡಿದ್ದಾರೆ. ಇಂಗ್ಲಿಷ ಸರಕಾರದವರು ಡಾರ್ಡನಲೀಜದ ಪ್ರಶ್ನವನ್ನು ತುರುಕರಿಗೆ ಹಿತವಾಗುವಂತೆ ಬಿಡಿಸದಿದ್ದರೆ- ಇಂಗ್ಲಿಷರಿಗೂ, ಬೊಲ್ಶೆವಿಕರಿಗೂ ಮಾತ್ರ ಯುದ್ಧವಾಗದೆ, ಮುಸಲಮಾನ ಮಂಡಲದಲ್ಲಿಯೂ ಉರಿ ಏಳುವದೆಂದು ಜನರಲ್ ಟ್ರಾಟ್ಸಕಿಯು ಹೇಳಿ, ನೀವು ಆದಷ್ಟು ಬೇಗನೆ ತುರ್ಕಸ್ಥಾನದಿಂದ ಹೊರಬೀಳಲಿಕ್ಕೆ ಗುಡಿಕೇಪೆ ಕಟ್ಟಿರೆಂದು ನಿರ್ಭಿಡೆಯಿಂದ ಹೇಳಿದ್ದಾನೆ.

ಯುದ್ಧದ ಮಾಲೆಯು ಇಂಗ್ಲಿಷರ ಕೊರಳಿಗೆ ಮಾತ್ರ ಬಿತ್ತು.

—o—

ಇಂಗ್ಲಿಷರಲ್ಲಿಯೂ ಮತಭೇದ.

—o—

ತುರುಕರ ಜಯದಿಂದ ನಾಮದಾರ ಲಾಯಿಡ ಜಾರ್ಜ ಸಾಹೇಬರು ಗೊಂದಲಿದರು. ಇವರಂತೆ ಇಟಲಿ ಮತ್ತು ಫ್ರಾನ್ಸಗಳು ಹೆದರಲಿಲ್ಲ. ಇವೆರಡೂ ದೇಶಗಳ ಒಲವು ತುರ್ಕಸ್ಥಾನದ ಕಡೆಗಿರುವದು. ಯುದ್ಧ ಪ್ರಸಂಗ ಬಂದರೆ- ಸಂಯುಕ್ತರೆಲ್ಲರೂ ಒಂದೆಂದು ಇವರು ಹೇಳಿದರೂ. ಯುದ್ಧವಿಲ್ಲದೆ ಒಡಂಬಡ ಮಾಡಿ, ತುರ್ಕಸ್ಥಾನದಲ್ಲಿ ಸುಖಶಾಂತಿಯನ್ನು ನೆಲೆಗೊಳಿಸಬೇಕೆನ್ನುವರು. ತಮಗೆ ಯುದ್ಧ ಬೇಡೆಂದು ಸ್ಪಷ್ಟವಾಗಿ ವ್ಯಕ್ತ ಮಾಡುವದಕ್ಕೆ ಫ್ರೆಂಚರು ಚಾನಾಕ ಬಂದರದಲ್ಲಿರುವ ಸೈನ್ಯಕ್ಕೆ ಅಲ್ಲಿಂದ ತಿರುಗಿ ಸ್ವದೇಶಕ್ಕೆ ಬರುವಂತೆ ಅಪ್ಪಣೆ ಕೊಟ್ಟಿರುವರು. ಇಟಲಿಯಂತೂ ದಂಡನ್ನು ಕಳಿಸುವದಿಲ್ಲೆಂದೇ ಹೇಳಿತು. ಈ ರೀತಿಯಾಗಿ ಯುದ್ಧದ ಭಾರವು ಇಂಗ್ಲಂಡದ ಮೇಲೆ ಬಿತ್ತು. ಯುದ್ಧ ವಿಷಯವಾಗಿ ನಾಮದಾರ ಲಾಯಿಡ ಜಾರ್ಜ ಸಾಹೇಬರು ವೀರ ಗರ್ಜನೆ ಮಾಡಿದರು. ದಿವಸ ಹೋದಂತೆ ಮಾತಿನ ಮಲ್ಲ...

ನ್ನು ಕಳಿಸಿಕೊಂಡದ್ದನ್ನು ಕಂಡು, ಇಂಗ್ಲಿಷ ಸರಕಾರದವರು ಆಶ್ಚರ್ಯ ಚಕಿತರಾದರು ಹೇಗಾದರೂ ಮಾಡಿ, ಫ್ರೆಂಚರ ಅನುಮತಿಯನ್ನು ಪಡೆದು ಒಪ್ಪಂದ ಅಥವಾ ಯುದ್ಧದಿಂದ ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಬೇಕೆಂದು ಅರ್ಡ ಕರ್ಜನ ಸಾಹೇಬರು ಪ್ಯಾರೀಸಕ್ಕೆ ಹೋಗಿ ಫ್ರೆಂಚರಿಗೆ ಪರೀಕ್ಷಣ ಮಾಡುವುದನ್ನು ತಿಳಿಸುತ್ತಿರುವರು. ಆದರೆ ಅವರು ಈ ಮಾತ್ತು ಮತ್ತು ಮುಖ್ಯ ಸುದ್ದಿಗೆ ಹೋಗಬೇಕಾಗಿರಲಾರರು.

ಚಾನಾಕ ಒಂದರವು ಆಮಕಟ್ಟಿನ ಸ್ವರೂಪವು ಇದನ್ನು ಆಕ್ರಮಿಸಿದ ನಂತರ, ಸಂಧಿಯು ಸಂಭಾಷಣೆಗೆ ಪ್ರಾರಂಭಿಸುವೆನೆಂದು ಕೆಮಾಲ ಪಾಶ್ಯಾನು ಹೇಳುತ್ತಾನೆ. ಯಾವ ಪ್ರಕಾರದ ಮುಸ್ಲಿಂರ ಕೃಷ್ಟ ಮಾಡೆನೆಂದು ಈಗ ಫ್ರೆಂಚರಿಗೆ ಸಂಬಂಧಿಸಿದ್ದನ್ನು ಹೇಳುತ್ತಾನೆ. ಮತ್ತು ಏಕಾಂಗಿತನ ಮಾತು ನನ ಯುವಾಗ ನಿಮ್ಮ ಪಾಠದ ಹೊರಗೆ ಬರುವುದಿಲ್ಲೆಂದು ಬೊಟ್ಟಿ ಮಗನಿಗೆ ಸಲಿಗೆ ಹೇಳಿದ್ದಾನೆ. ಕೆಮಾಲ ಪಾಶ್ಯಾನು ಈ ಪ್ರಕಾರ ಬರೆದ ಪತ್ರಿಯಲ್ಲಿ ಇದ್ದದ್ದು, ಫ್ರೆಂಚರಿಗೆ ವಿಷಾದವೆನಿಸಿದೆ. ಆದರೂ ಫ್ರೆಂಚರು ಕೆಮಾಲ ಪಾಶ್ಯಾನ ಮೇಲೆ ಗಂಡು ಕಠಿಣ ಸುಮಂಥ ಟೀಕಾ ಮಾಡುವುದಿಲ್ಲ. ಗಂಡಿನ ಬಲದಿಂದ ತುರುಕರನ್ನು ತಡೆಯುವದರಿಂದ, ಬಯಲಾಗಿರುವ ತುರುಕರ ಮಿತ್ರ ತಲೆಗೇರುವ ಅನರ್ಥ ಪರಂಪರೆಯುಂಟಾಗುವದೆಂದು ಫ್ರೆಂಚರು ಮುಸ್ತಾ ಮರೆಯಬ್ಬರೆ ಹೇಳುತ್ತಿದ್ದಾರೆ.

ಇಂಗ್ಲಂಡದಲ್ಲಿಯೂ ಈ ಯುದ್ಧ ಬೇಡೆಂದು ಅನೇಕರು ಹೇಳುತ್ತಿರುವರು. ಡೇಲಿ ಮೇಲ ಪತ್ರಿಕೆಯು ಪ್ರಧಾನರ ಮೇಲೆ ರಾಷ್ಟ್ರ ಹಿಡಿದಿದೆ. ಸರ ಹೇಬಿಲ ಕುರಾಟಕೆಯು ಕೇವಲ ನಾಟಕವಾಗಿದ್ದೆಂದು ಇವರ ಮತವಾಗಿದೆ. ಈ ಯುದ್ಧವು ಇಂಗ್ಲಿಷ ಮತ್ತು ಕೆಮಾಲ ಪಾಶ್ಯಾನ ಮಧ್ಯೆ ನಡೆದರೆ, ಇಂಗ್ಲಿಷರಿಗೂ ಮುಸಲಮಾನರಿಗೂ ಹಕೀಕತೆ ನಡೆಯುವದೆಂದು ಇಂಗ್ಲಂಡದ ಕಾರೀಕಾರರ ಮತವಾಗಿದೆ. ನಾವು-ನಾವಿಂದಲೇ ಇದನ್ನು ಕೊನೆಗಾಣಿಸಬೇಕಲ್ಲದೆ, ದಂಡೇವಾರು ಮಾಡಬಾರದೆಂದು ಇವರು ಅನ್ನುವರು. ಪ್ರಧಾನರು ಪಟಕ್ಕೆ ಬಿದ್ದು ಯುದ್ಧವನ್ನು ಸಾಂದರೆ-ನಾವು ಜನ ಸಹಾಯ ಮಾಡುವದಿಲ್ಲ. ಪಡಗಗಳ ಮೇಲೇ ಮದ್ದು ಗುಂಡನ್ನು ಏರಿಸುವದಿಲ್ಲ. ಯುದ್ಧ [illegible] ಕಿ ಮಾಡುವೆವೆಂದು ಈ ಬಗೆಯ ಕಾರ್ಯಕರ್ತರಾದ ಮಿ. ಜಲಸರಂಬರು ನಿಶ್ಚಿಂತರಾಗಿ ಹೇಳುತ್ತಾರೆ.

ಇಂಗ್ಲಂಡದಲ್ಲಿ ಮತಭೇದ ಮತ್ತು ಗಡಿಬಿಡಿ ಹುಟ್ಟಿದ್ದರ ಪರಿಣಾಮಗಳಲ್ಲಿ ಯುದ್ಧದ ಉಬ್ಬು ಎದ್ದಿದೆ. ಆಸ್ಟ್ರೇಲಿಯಾ, ನ್ಯೂಝೀಲಂಡ, ಕಾನಡಾ ಮುಂತಾದ ಸ್ವರಾಜ್ಯ ದಂಡುಕಳಿಸಲಿಕ್ಕೆ ಒಂಟಿಗಾಲಿನ ಮೇಲೆ ಸಿದ್ಧವಾಗಿ ಉಪಕಾರದ ಮಟ್ಟಿಗೆ ಒಡಂಬಡಿಕೆಯಾಗಬೇಕೆಂದು ಅನ್ನುತ್ತಿರುವವು. ಹಿಂದುಸ್ಥಾನದ ದುಡಿನ ಮೇಲೆ ಸರಕಾರದ ಪೂರ್ಣ ಅಧಿಕಾರವಿರುತ್ತದೆಂದದನ್ನು ಈ ಮೊದಲು ಬರೆದಿದ್ದೇವೆ. ಆದರೂ ಹಿಂದುಸ್ಥಾನದಿಂದ ದಂಡು ಹೊರಡಲಿ ಮತ್ತು ದಂಡು ಸಿದ್ಧವಾಗಲೆಂದು. ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ತಂತಿಗಳು ಓಡಾಡುತ್ತಿರುವಂತೆ ಕಂಡು ಬರುವದಿಲ್ಲ. ಇದಕ್ಕೆ ಮುಖ್ಯ ಕಾರಣವು ನಾನ-ಕೋ-ಆಪರೇಶನ ಮತ್ತು ಖಿಲಾಫತನೇ ಇರಬೇಕು. ಮುಸಲಮಾನರು ಈ ಜಮದ ಬಗ್ಗೆ ಊರೂರಿಗೆ ಆನಂದೋತ್ಸವ ಮಾಡಿದರು. ಕೆಮಾಲ ಪಾಶ್ಯಾನ ಮೇಲೆ ಶಸ್ತ್ರ ಹಿಡಿಯುವದೆಂದರೆ ತಮ್ಮ ಮೇಲೆ ಪ್ರಹಾರವೆಂದು ಇವರು ತಿಳಿಯುವದು ಸ್ವಾಭಾವಿಕವದೆ. ಮಿ. ಅಬ್ದುಲ ಕಾಲೀಮರೆಂಬವರು ಬೆಂಗಾಲಿಯಲ್ಲಿ ಅಸೆಂಬ್ಲಿಯಲ್ಲಿ ಕೆಳಗಿನ ಠರಾವನ್ನು ತರತಕ್ಕವರಿದ್ದಾರೆ—

ಮಹಾಯುದ್ಧ ಕಾಲದಲ್ಲಿ ಕಾನ್ಸ್ಟಂಟೈನ ರಾಜನನ್ನು ದೇಶಭ್ರಷ್ಟ ಮಾಡಲಿಕ್ಕೆ ವ್ಹೆನಿಝೆಲಾಸನೇ ಕಾರಣನಾದನು. ಪ್ರಸ್ತುತದಲ್ಲಿಯೂ ಈ ರಾಜನು ದೇಶತ್ಯಾಗ ಮಾಡಲಿಕ್ಕೆ ಈತನೇ ಮೂಲನಾಗಿದ್ದಾನೆ. ಈತನ ಚರಿತ್ರವು ಶಕುನಿಯಂತೆಯೋ? ಶ್ರೀ ಕೃಷ್ಣನಂತೆಯೋ? ಎಂಬುದನ್ನು ಹೇಳಲಿಕ್ಕಾಗುವದಿಲ್ಲ. ಈತನು ಮಹಾ ಯುದ್ಧದ ವೇಳೆಯಲ್ಲಿ ಬ್ರಿಟಿಶ ಸರಕಾರದ ಕೃಪೆಯನ್ನು ಸಂಪಾದಿಸಿ, ಗ್ರೀಸವು ಯುದ್ಧ ವೇಳೆಯಲ್ಲಿ ಸಂಯುಕ್ತ ಮಂಡಲವನ್ನು ಸೇರುವಂತೆ ಮಾಡಿ, ಇಂದು ಅನರ್ಥಕ್ಕೆ ಕಾರಣವಾದ ಸ್ಮರ್ನಾ ಮತ್ತು ಥ್ರೇಸ ಪ್ರಾಂತಗಳನ್ನು ಗ್ರೀಸಕ್ಕಾಗಿ ಸಂಪಾದಿಸಿ, ತನ್ನ ದೇಶಕ್ಕೆ ಈ ಬಗೆಯಾಗಿ ಮಹೋಪಕಾರ ಮಾಡಿದನು. ಕೆಲ ಕಾಲದ ಮೇಲೆ ಈತನ ಮೇಲಿನ ಪ್ರಜರ ವಿಶ್ವಾಸವು ಹಾರಿ ಹೋಯಿತು. ಕೈಯೊಳಗೆ ಸೂತ್ರಗೊಂಬೆಯಂತಿದ್ದ ಪಾಲನೆಂಬ ಅರಸನು ಮಂಗ ಕಡಿದ ನಂಜಿನಿಂದ ಸಾಯಲು ಪ್ರಜರು ಕಾನ್ಸ್ಟಂಟೈನನೇ ಮರಳಿ ಸ್ವದೇಶಕ್ಕೆ ಬಂದು ದೊರೆಯಾಗಬೇಕೆಂದು ಹಾರೈಸಿದರು. ಮತಗಳನ್ನು ತೆಕ್ಕೊಳ್ಳಲು ೧೦ ಲಕ್ಷ ಮತಗಳಲ್ಲಿ ಒಂಭತ್ತು ಲಕ್ಷ ಮತಗಳು ಇವನಿಗೆ ಬಿದ್ದವು. ಇಷ್ಟು ಲೋಕಪ್ರಿಯನಾದ ಅರಸನು ಪುನಃ ಅವಿಶ್ವಾಸಕ್ಕೆ ಪಾತ್ರನಾಗಿ ಪದಚ್ಯುತನಾಗಿ ದೇಶಭ್ರಷ್ಟನಾಗಲಿಕ್ಕೆ ಯುದ್ಧದಲ್ಲಿ ಒದಗಿದ ಅಪಯಶದ ಕೂಡ ವ್ಹೆನಿಝೆಲಾಸನ ಕೃಷ್ಣ ಕಾರಸ್ಥಾನವೇ ಕಾರಣವು. ಕಾನ್ಸ್ಟಂಟೈನನು ಮರಳಿ ಓಡು ಪಟ್ಟವೇರಿದ ತರುವಾಯ ವ್ಹೆನಿಝೆಲಾಸನು ತನ್ನ ಜೀವಕ್ಕೆ ಸಂಕಟ ಬಂತೆಂದು ಭಾವಿಸಿ, ತನ್ನಷ್ಟಕ್ಕೆ ತಾನೇ ಹದ್ದುಪಾರ ಮಾಡಿಕೊಂಡನು. ಈಗ ಅರಸನು ಗಡಿಪಾರಾದ್ದರಿಂದ ಈತನು ಸ್ವದೇಶಕ್ಕೆ ಬರುವನು. ಈತನು ಅಪಜಯವಾದಂದಿನಿಂದ ಇಂಗ್ಲಂಡ ಮತ್ತು ಫ್ರಾನ್ಸವನ್ನು ಅಡಗೀ ಮನೆ ನಡುಮನೆ ಮಾಡಿಕೊಂಡು ಅಲ್ಲಲ್ಲಿಯ ಪ್ರಧಾನರನ್ನು ಕಂಡು, ಗ್ರೀಸವನ್ನು ಹೊಟ್ಟೆಯಲ್ಲಿ ಹಾಕಿಕೊಂಡು, ಅವರ ಕೀರ್ತಿಯನ್ನು ಕಾಯುತ್ತ, ಸ್ವಸ್ಥವಾಗಿ ಸಂಪಾದಿಸಿ ಕೊಟ್ಟ ರಾಜ್ಯವನ್ನು ಅವಕ್ಕೇ ಉಳಿಯುವಂತೆ ಮಾಡಿ [illegible] ಕೆಲಸವನ್ನು [illegible] ಸುತ್ತಾರೆ. ಈತನ ಕೃಷ್ಣ ಕಾರಸ್ಥಾನದಿಂದಲೇ [illegible] ಸಿಂಹಾಸನದ ಮೇಲೆ ಕುಳಿತ [illegible]ಯ ರಾಜನು ಸಿಂಹಾಸನವನ್ನು ಕಳಕೊಂಡನು. ಈತನ ಚಾಣಕ್ಯ ನೀತಿಯಿಂದಲೇ ಗ್ರೀಸದಲ್ಲಿ ರಾಜ್ಯ ಕ್ರಾಂತಿಯಾಗಿ ಪ್ರಜಾಪಕ್ಷವು ಅಧಿಕಾರ ಪದಾರೂಢವಾಯಿತು. ಮೂರು ವರ್ಷಗಳ ಕೆಳಗೆ ಪದಚ್ಯುತನಾದ ರಾಜನ ಆಗಮನ ಕಾಲಕ್ಕೆ ಪ್ರಜೆಗಾದಂಥ ಆನಂದಕ್ಕೂ ಈಗ ಈತನು ಮಧ್ಯರಾತ್ರಿಯಲ್ಲಿ ಯಾರಿಗೂ ಹೇಳದೆ, ದೇಶಾಂತರವಾಸ ಮಾಡುವದಕ್ಕೆ ಹೊರಟಂಥ ವೇಳೆಯಲ್ಲಿ ಪ್ರಜೆಗಾದಂಥ ಆನಂದಕ್ಕೂ ಪರಸ್ಪರ ವಿರೋಧ ಸಂಬಂಧವೇ ಇರುವದು. ರಶಿಯಾದ ಝಾರರಿಗೆ ಏಕಟೇರಿನಬರ್ಗದಲ್ಲಿ ಪುತ್ರೋತ್ಸವವಾದಾಗ್ಗೆ, ನಾಮಕರಣದ ವೇಳೆಯಲ್ಲಿ ಸಾವಿರಾರು ಜನರು ಸಂಭ್ರಮದಿಂದ ದೇವಾಲಯದಲ್ಲಿ ಕೂಡಿದ್ದರು. ಆದರೆ ಅದೇ ಏಕಟೇರಿನಬರ್ಗದಲ್ಲಿ ಬೊಲ್ಶೆವಿಕರು ಝಾರರನ್ನು ಹೆಂಡರು ಮಕ್ಕಳು ಸಹಿತವಾಗಿ ಅತ್ಯಂತ ಕ್ರೂರತನದಿಂದ ಪರಲೋಕಕ್ಕೆ ಕಳಿಸುವಾಗ, ಒಬ್ಬರೂ ಇವರನ್ನು ಬಿಡಿಸಿಕೊಳ್ಳಲಿಕ್ಕೆ ಬರಲಿಲ್ಲ. ಲೋಕಮತದ ಪ್ರವಾಹದ ಮುಂದೆ ನಾಯಿಯಂತೆ ಬಾಲ ಬಡಿಯುವವರ ಆಟವೇನೂ ಸಾಗುವದಿಲ್ಲ. ಜಗತ್ತಿನ ಇತಿಹಾಸವನ್ನು ನೋಡಿದರೆ ಲೋಕಮತವೇ ಕೊನೆಯಲ್ಲಿ ಜಯಹೊಂದಿದಂತೆ ಕಂಡುಬರುವದು. ಲೋಕಮತಕ್ಕೆ ಜಯವಾದ ಕೂಡಲೆ ಕಾನ್ಸ್ಟಂಟೈನ ರಾಜನು ದೇಶತ್ಯಾಗ ಮಾಡಲು ಈತನ ಪಕ್ಷದ ಪ್ರಮುಖ ಅಮೀರ ಉಮರಾವರೂ ತಾವಾಗಿ ತಮ್ಮ ಸೆರೆಗೆ ಹೆದರಿಕೊಂಡು ಪಲಾಯನ ಹೇಳಿಸಿದರು. ವ್ಹೆನಿಝೆಲಾಸನು ಇದೊಂದು ಮುಯ್ಯಕ್ಕೆ ಮುಯ್ಯವನ್ನೇ ತೀರಿಸಿಕೊಂಡನೆಂದು ಹೇಳಬಹುದು. ಕಳೆದಾರೇಳು ವರ್ಷಗಳಲ್ಲಿ ನಡಿಸಿದ ಈತನ ಲೀಲೆಯನ್ನು ನೋಡಲಾಗಿ, ಈತನು ಶಕುನಿಯೋ? ಶ್ರೀ ಕೃಷ್ಣನೋ? ಎಂದು ಹೇಳುವದಕ್ಕೆ ಮನಸ್ಸು ಸಂಶಯಗ್ರಸ್ತವಾಗುತ್ತದೆ.

ಕಾಬೂಲದಲ್ಲಿ ಸ್ತ್ರೀಯ ಲಷ್ಕರೀ ಶಿಕ್ಷಣ

—o—

ಮೊದಲು ರಾಜಕೀಯ ಸುಧಾರಣೆಯೋ? ಸಾಮಾಜಿಕ ಸುಧಾರಣೆಯೋ? ಎಂದು ವಾದ ಹೂಡತಕ್ಕವರಿಗೆ ಕಾಬೂಲ ರಾಜ್ಯದಲ್ಲಿ ತರುಣರೆಂಬವರೆಲ್ಲರು ದಂಡಿನ ಶಿಕ್ಷಣ ಹೊಂದಿ, ಕವಾಯತು ಕಲಿಯಲಿಕ್ಕೇ ಬೇಕೆಂದು ಅಮೀರಸಾಹೇಬರು ತೆಗೆದ ಜಾಹೀರನಾಮೆಯು ಒಂದು ಬುದ್ಧಿಯನ್ನು ಹೇಳುವಂಥ ಸಮಯದ ಸಂಗತಿಯಾಗಿರುತ್ತದೆ. ಕಾಬೂಲದಲ್ಲಿ ಸ್ತ್ರೀಯ ಪ್ರಾಥಮಿಕ ಶಿಕ್ಷಣವಿಲ್ಲ; ಹಾಯಸ್ಕೂಲ ಕಾಲೇಜುಗಳಿಲ್ಲ; ಸ್ತ್ರೀಶಿಕ್ಷಣವಿಲ್ಲ; ಆದರೂ ಎಲ್ಲರು ಮೊದಲು ಕವಾಯತು ಕಲಿಯಬೇಕೆಂದು ಸಕ್ತಿಯ ಹುಕುಮು ಹೊರಟಿರುವದು. ತಮ್ಮ ದೇಶವು ದಾಯಾದಿಗಳ ಹಾಗು ಪರಕೀಯರ ಬಾಯಿಯಲ್ಲಿ ಸಿಕ್ಕಿ ಅವರು ಅದನ್ನು ಗುಳುಮ್ ಎಂದು ನುಂಗಬಾರದೆಂಬದಕ್ಕೆ ಪ್ರಜೆಗಳಲ್ಲಿ ಕ್ಷಾತ್ರಧರ್ಮದ ತೇಜಸ್ಸು ದೇದೀಪ್ಯಮಾನವಾಗಿರಬೇಕಾಗುತ್ತದೆ. ಅಮೀರರು ಈ ಸಂಗತಿಯನ್ನು ಮೊದಲು ಕಂಡು ಹಿಡಿದು, ಆ ಪ್ರಕಾರ ಅಪ್ಪಣೆ ಕೊಟ್ಟಿರುತ್ತಾರೆ. ಮೂರು ನೂರು ರೂಪಾಯಿ ಫೀ ಅಥವಾ ದಂಡ ಕೊಟ್ಟರೆ ಕವಾಯಿತು ಕಲಿಯುವ ಮಾಫಿಯು ದೊರೆಯುವದು. ಆದರೆ ಕೆಲ ತರುಣ ಜನರು ಈ ಮಾಫಿಯನ್ನು ಕೋರಿದ್ದಾರೆ. ಇದರಿಂದ ಆ ದೇಶೀಯರಲ್ಲಿ ಸ್ವದೇಶ ಪ್ರೀತಿಯೂ ಸ್ವದೇಶಕ್ಕಾಗಿ ಆತ್ಮ ಯಜ್ಞ ಮಾಡುವ ಬಲವಂತಿಕೆಯೂ ಎಷ್ಟು ಜಾಜ್ವಲ್ಯವಾಗಿರುತ್ತದೆಂಬದು ವಿದಿತವಾಗುತ್ತದೆ. ಅಮೀರರ ರಾಜ್ಯದಲ್ಲಿ ಖಾದಿಯ ಪ್ರವೇಶವಾಗಿ, ಸ್ವತಃ ಅಮೀರರು ಖಾದಿಯನ್ನು ಧರಿಸಲಿಕ್ಕೂ, ಬಹಿಷ್ಕಾರ ಶಿಕ್ಷಣವನ್ನು ಒತ್ತಾಯ ಪಡಿಸಲಿಕ್ಕೂ ಅಮೀರರಿಗೆ ರಾಜ್ಯ ಕಾರಭಾರದಲ್ಲಿ ನೆರವಾಗಲಿಕ್ಕೆ ಹಿಂದುಸ್ಥಾನದಿಂದ ಹೋದಂಥ ಸುಶಿಕ್ಷಿತರಾದ ತರುಣರ ಕರ್ತೃತ್ವವೇ ಮುಖ್ಯವಾದುದೆಂದು ಹೇಳುವರಿದೆ.

ಕೆಮಾಲ ಪಾಶಾನಿಗೆ ಸಹಾಯವಾಗಿ ರಶಿಯಾದ ಸೈನ್ಯ ಸಿದ್ಧತೆ

—o—

ಪ್ರತ್ಯಕ್ಷದ ಯುದ್ಧ ವಿಷಯವಾಗಿ ಮಾಸ್ಕೋ, ಕಾರಕಾಫ ಮತ್ತು ಅಂಗೋರಾದ ನಡುವೆ ಸಂಪೂರ್ಣ ಐಕ್ಯಮತ್ಯವುಂಟಾಗಿರುತ್ತದೆ. ಕೆಮಾಲ ಪಾಶಾನಿಗೆ ಸಹಾಯವಾಗಿ ದಂಡು ಕಳಿಸುವ ಸಿದ್ಧತೆಯನ್ನು ಇವರು ಬಹು ಒತ್ತರದಿಂದ ನಡಿಸಿದ್ದಾರೆ. ಡಾನ ನದಿಯ ಪ್ರದೇಶದಲ್ಲಿರುವ ಎಂಟನೇ ಟಿಪ್ಪಿ ಜನರ ಎಲ್ಲ ದಂಡು ಟಿಫ್ಲಿಸಕ್ಕೆ ಬಂದಿದೆ. ಇದೇ ಪ್ರಕಾರ ೫ನೆಯದು ಕಿನ್ಸಕಕ್ಕೂ, ೧೭ನೆಯದು ಕುರ್ಸ್ಕಕ್ಕೂ ೩೪ನೆಯದು ನಿಜನಿಗೋವಾರ್ಡಕ್ಕೂ ಬಂದಿದೆ. ಈ ಎಲ್ಲ ದಂಡನ್ನು ಯುದ್ಧ ಮಂಡಲಕ್ಕೆ ಕಳಿಸುವ ಏರ್ಪಾಡನ್ನು ಇಬ್ಬರು ದಿವಾಣಿಗಳು ಮಾಡುತ್ತಿರುವರು. ಕೆಮಾಲ ಪಾಶಾನು ಇಂಗ್ಲಿಷರ ಮೋಹಕ್ಕೆ ಬಿದ್ದು ಒಪ್ಪಂದ ಮಾಡಿಕೊಳ್ಳಬಾರದೆಂದೂ ನಿಮಗೆ ಹತ್ತಿದಷ್ಟು ದಂಡಿನ ಹಾಗು ಮದ್ದು ಗುಂಡಿನ ಸಹಾಯ ಮಾಡುತ್ತೇವೆಂದೂ ಅಗತ್ಯಪೂರ್ವಕವಾಗಿ ತಿಳಿಸಬೇಕೆಂದು, ಮಾಸ್ಕೋ ಸರಕಾರದವರು ಅಂಗೋರಾದಲ್ಲಿರುವ ತಮ್ಮ ವಕೀಲನಿಗೆ ತಂತಿಯನ್ನು ಕಳಿಸಿದ್ದಾರೆ.

ಮಹಾತ್ಮರ ವರ್ಧಂತಿಯ ದಿವಸ ಅವರ ದರ್ಶನ ತಕ್ಕೊಳ್ಳುವದಕ್ಕಾಗಿ ಮುಸಲ್ಮಾನ ಒಂದು [illegible] ಸ್ತ್ರೀಯರು ಯರವಡೆಗೆ ಹೋಗಿದ್ದಾರೆ.

ನಾಸಿಕ ಕೋ ಆಪರೇಶನದ ಪ್ರಭಾವ

—೦—

ಮ್ಯುನಿಸಿಪಾಲಿಟಿಯ ಸಿಪಾಯಿಯೇ ಮ್ಯುನಿಸಿಪಾಲಿಟಿಯ ಮೆಂಬರನಾದನು !!!

ಗುಜರಾಥಕ್ಕೆ ಸೇರಿದ ನಡಿಯಾದ ಮ್ಯುನಿಸಿಪಾಲಿಟಿಗೂ ಸರಕಾರಕ್ಕೂ ಸ್ಕೂಲಬೋರ್ಡಿನ ಆಡಳಿತದ ಬಗ್ಗೆ ಜಗಳ ಬಂದು, ೧೭ ಜನ ಮೆಂಬರರು ರಾಜೀನಾಮೆ ಕೊಟ್ಟರು. ಬಳಿಕ ತೆರವಾದ ಈ ಸ್ಥಳಗಳ ಬಗ್ಗೆ ಚುನಾವಣೆಯಾಗಲು ಒಬ್ಬ ಮ್ಯುನಿಸಿಪಾಲಿಟಿಯ ಸಿಪಾಯಿಯೂ ಇಬ್ಬರು ಅಸ್ಪೃಶ್ಯವರ್ಗದವರೂ ಮೆಂಬರರಾಗಿ ಆರಿಸಲ್ಪಟ್ಟರು.

ಪ್ಲೇಗಿನ ವೇಳೆಯಲ್ಲಿ ಧಾರವಾಡದಲ್ಲಿಯೂ ಮಿ. ಕ್ಯಾಪೇಬರೆಂಬವರು ಕಲೆಕ್ಟರರಾಗಿದ್ದಾಗ, ಪ್ಲೇಗಿನಾಹಿಗೆ ಪ್ರತ್ಯಸ್ತವೆಂದು ಮಿ. ಪ್ರಭು ಖಂಡು ಘೋರಪಡೆ ಅಸ್ಪೃಶ್ಯವರ್ಗದವರು ಆರಿಸಲ್ಪಟ್ಟಿದ್ದು ಬಹು ಸದ್ಧಾರವಾಡಸ್ಥರ ಸ್ಮರಣದಲ್ಲಿರಬಹುದು.

—

ಒಪ್ಪಂದದ ಬೆಳಕು ಹರಿಯಿತು.

—೦—

ಗ್ರೀಸರಿಂದ ಥ್ರೇಸ ಪ್ರಾಂತವನ್ನು ಬಿಡಿಸಿಕೊಡತಕ್ಕದ್ದೆಂದೂ, ಒಪ್ಪಂದದ ಪೂರಾ ವಿಚಾರವಾಗುವ ತನಕ ಸಂಯುಕ್ತರು ಗ್ರೀಸದ ಬದಲಾಗಿ ಈ ಪ್ರಾಂತದ ಆಡಳಿತ ನೋಡುವರೆಂದೂ ಫ್ರಾನ್ಸದ ರಾಯಭಾರಿಯು ಕೆಮಾಲಪಾಷ್ಯಾನಿಗೆ ಆಶ್ವಾಸನ ಕೊಟ್ಟದ್ದರಿಂದ, ೩ನೇ ತಾರೀಖಿನಿಂದ ಮೂದಿಯಾನಾ ಎಂಬಲ್ಲಿ ಒಪ್ಪಂದದ ಪೂರ್ವ ವಿಚಾರಣೆಗೆ ಪ್ರಾರಂಭವಾಗಿ, ೧೫ನೇ ತಾರೀಖಿನಿಂದ ಎಲ್ಲ ದೇಶಗಳ ಪ್ರತಿನಿಧಿಗಳ ಕಮೀಟಿ ಕೂಡಿ, ಒಪ್ಪಂದದ ಮಾತು ಕಥೆ ನಡಿಯತಕ್ಕದ್ದೆಂದು ಉಭಯ ಪಕ್ಷಗಳ ನಡುವೆ ಗೊತ್ತಾಗಿರುತ್ತದೆ.

—

" ವಂದೇ ಮಾತರಂ "

ಧಾರವಾಡ ಜಿಲ್ಲಾ ೨ನೇ ರಾಜಕೀಯ ಪರಿಷತ್ತು

ರಾಣೇಬೆನ್ನೂರ ೧೯೨೨.

ರಾಣೇಬೆನ್ನೂರಿಗೆ ಬರಹೋಗುವ ಉಗಿಬಂಡಿಗಳ ವಿವರ

ಧಾರವಾಡದ ಕಡೆಯಿಂದ ಬರತಕ್ಕ ಗಾಡಿಗಳು.

ಸಾಯಂಕಾಲ	೪-೩೦ ಗಂಟೆಗೆ		ಲೋಕಲ್
,,	೬-೧೫	,,	ಮೇಲ್
ರಾತ್ರಿ	೭-೪೫	,,	ಎಕ್ಸಪ್ರೆಸ್
,,	೩-೩೨	,,	ಪ್ಯಾಸೆಂಜರ

ಬೆಂಗಳೂರ ಕಡೆಯಿಂದ ಬರತಕ್ಕ ಗಾಡಿಗಳು.

ಬೆಳಗ್ಗೆ	೪-೪೫	ಗಂ.	ಎಕ್ಸಪ್ರೆಸ್
ಮುಂಜಾನೆ	೮-೧೫	,,	ಮೇಲ್
ಮಧ್ಯಾನ್ಹ	೧೨	,,	ಲೋಕಲ್
ರಾತ್ರಿ	೯-೩೦	,,	ಪ್ಯಾಸೆಂಜರ

ಧಾರವಾಡ ಖಿಲಾಫತ ಕಮೀಟಿಯ ಸೆಪ್ಟೆಂಬರ ತಿಂಗಳ ಜಮಾ ಖರ್ಚು.

ಜಮಾ.		ಖರ್ಚು.	
ಹಿಂದಿನ ಶಿಲ್ಕು-	೩೩೧-೧೦-೦	ಪಗಾರ-	೩೬-[illegible]-[illegible]
ಚಂದಾ-	೮-೧೨-೦	ಶಾಯಬ್ರರಿ-	೧೨-೧೧-೦
ಲಿಲ್ಲಾ-	೨-೪-೨	ಪ್ರಿಂಟಿಂಗ-	೨-೦-೦
ದಪ್ಪ ಸಂತು-	೧೫-೩-೧೮	ರಿಲೀಫ-	೨-೦-೦
ಅಂತು-	೩೫೭-೧೩-೧೦	ನಾದಿಲವಾರ-	೪-೧೩-೬
		ಅಂತು-	೫೧-೮-೬
		ಟ್ರೆ॥ ಕಡೆಗೆ ಶಿಲ್ಕು-	೨೯೯-೦-೦
		ಸೆ॥ ಕಡೆಗೆ ಶಿಲ್ಕು-	೬-೫-೪
		ಅಂತು-	೩೫೭-೧೩-೧೦

ಮಹ್ಮದ ಉಸ್ಮಾನ ಖಾಜಿ.
ಸೆಕ್ರೆಟರಿ.

ಮಹಮ್ಮದ ಖಾಸಿಮಖಾನ
ಅಧ್ಯಕ್ಷ.

ಸ್ಟೇಶನಕ್ಕೆ ಹೊಂದಿ ಆನಂದಭುವನವು ಆಗಿರಿ ಪ್ರತಿನಿಧಿಗಳು ಇಳಕೊಳ್ಳುವ ಸ್ಥಳವು ಇರುತ್ತದೆ ಸ್ಟೇಶನದಿಂದ ಪೇಟೆಯನಗರಕ್ಕೆ ೫ ನಿಮಿಷಗಳಲ್ಲಿ ಹೋಗಬಹುದು. ಸ್ಟೇಶನದಿಂದ ಊರು ಅರ್ಧ ಮೈಲು ದೂರ ಇರುತ್ತದೆ. ಟಾಂಗಾಗಳೂ, ಕೂಲಿಯಾಳುಗಳೂ ಸ್ಟೇಶನದ ಮೇಲೆ ಇರುತ್ತವೆ. ೬ನೇ ತಾರೀಖಿನಿಂದ ೯ ತಾರೀಖಿನ ವರೆಗೂ ಪ್ರತಿನಿಧಿಗಳನ್ನು ಸ್ವೀಕಾರ ಮಾಡುವದಕ್ಕೆ ಸ್ವಯಂಸೇವಕರು ಸ್ಟೇಶನದ ಮೇಲೆ ಸಿದ್ಧರಿರುವರು. ರಾಣೇಬೆನ್ನೂರ ಸ್ಟೇಶನದಿಂದ ಒಂದು ಸ್ಟೇಶನ ಬಿಟ್ಟು ಹರಿಹರ ಕ್ಷೇತ್ರವಿರುವದು. ರಾಣೇಬೆನ್ನೂರಿಂದ ೫ ಮೈಲಿನ ಮೇಲೆ ಶ್ರೀ ಮೈಲಾರಿ ಕ್ಷೇತ್ರವಾದ ದೇವರಗುಡ್ಡವಿರುವದು.

ಜಕ್ಕೋ ರಾಮಚಂದ್ರ ಜೋಶಿ.

ಕಾರ್ಯದರ್ಶಿ ಸ್ವಾ. ಮ. ಧಾ. ಜಿ. ಪರಿಷತ್ತು

ರಾಣೇಬೆನ್ನೂರ.

—

ನೋಟೀಸು

ರಾ।ರಾ। ಮುದಕನ ಶಿವಾ ಬಿನ ನೀಲಪ್ಪನಗೌಡಾ ಬಂಡೆಪ್ಪಗೌಡನವರ ಸಾ॥ ಬೆಟಗೇರಿ ತಾಲ್ಲೂಕು ಗದಗ ಇವರಿಗೆ—

ನೀವಗೆ ನಡೆ ಮಾಡಿರುವವಳ ಕಡಿಂದ ಬರೆಕೊಡುವ ನೋಟೀಸು ಯೆನೆಂದರೆ ನಾನು ಇರವ್ವಾ ಕೋಂ ಮುದಕನಗೌಡಾ ಬಂಡೆಪ್ಪಗೌಡನವರ ಸಾ॥ ಬೆಟಗೇರಿ ತಾಲ್ಲೂಕ ಗದಗ ಹಾಲಿ ಮುಕ್ಕಾಂ ಕಡಪಟ್ಟಿಯಲ್ಲಿ ಒಸನಗೌಡಪ್ಪ ಕುಬ್ಯಾಳ ಮನೆಯಲ್ಲಿ ಅವರ ಹಳ್ಳಿಯ ಮೇಲಿನ ಕೋಣೆಯಲ್ಲಿ ಭಾಡಗಿ ತರಾವಿಂದ ಇರುತ್ತೇನೆ. ಇತ್ತೀಚೆ ನನ್ನ ತವರವ ನಿ ಎವರು ಬಡವರಿದ್ದಕಾರಣ ನನ್ನನ್ನು ಮತ್ತು ನನ್ನ ಮಗಳನ್ನು ನಾಲ ವರುಷದ ಕೆಳಗೆ ನುಸಕಾಲಿದ್ದು ಕಾರಣ ನೀವು ನನ್ನನ್ನು ಕರಕೊಂಡು ಹೋಗದೆ ಇಲ್ಲೇ ಬಿಟ್ಟು ಬ್ರಾಹ್ಮ ಹೋಗಿ ಮಾಡುತ್ತೀರಿ. ಕರಕೊಂಡು ಹೋಗುವದಕ್ಕೆ ನಾಲ್ಕುಮಂದಿ ಕಳುಹಿದನು, ನಾನು ಜೊತೆಗಾರರ ಮಾಡಿದಾಗ್ಗೆ ನನ್ನನ್ನು ಕರಕೊಂಡು ಹೋಗಿ ನನ್ನ ಕೂದಲು ಸಹಿತ ಕತ್ತರಿ ಮಾಡುವರೆ ಯಾರದನೆ ಹೆಂಗಸಿನ ಇಟ್ಟು ಕೊಂಡು ದುರಾಚಾರದಿಂದ ವರ್ತಿಸುವಿರಿ ನನ್ನ ಮೈಮೇಲಿನ ದಾಗಿನು, ಅಂದರೆ ಬಂಗಾರ ಒಳ ಸಂಧ ಜೋಡು ಅಜಮಾಸು ಐದು ತೋಲಿ ಮತ್ತು ನಂದು ಗುಂಡಿನ ಟೀಕಿ ಸರ ದು ಅಜಮಾಸು ೨ ತೋಲಿ ಸರ ದಾಳಿಸರಾ ನಂದು ಅಜಮಾಸು ೨ ತೋಲಿ, ಬಂದಿ ನಂದು ಜೋಡು— ಬೆಳ್ಳಿದು. ಮತ್ತು ಚವಕಾ ಇದು ಬೇರೆ. ಪಟ್ಟಿ ೭ ಸೇರು ಬೆಳ್ಳಿ ದಾಗಿನಿಗಳು ವ್ಯಾ ತವರ ಮನೆಯ ಇದ್ದು ನನ್ನ ಪೆಟ್ಟಿಗೆ ಬಸರಿದ್ದಾಗ್ಗೆ ಕಸ ಕೊಂಡು ಹೊರಗೆ ಹಾಕಿದನು. ನಂತರ ತವರ ಮನೆಗೆ ಹೋದೆನು. ಆವಾಗ ನಾವು ಕೊಟ್ಟ ದಾಗಿನಿಯನ್ನು ತೆಗೆದು ಕೊಂಡು ಬಾ ಅಂದರೆ ನಾವು ಕೇಳು ಕೊಳ್ಳುತ್ತೇವೆ ಮತ್ತು ಹಮೇಷಾ ಇದೇ ಪ್ರಕಾರ ನಿನ್ನ ಉಪದ್ರ ತಡೆಯಲಾರೆವು ಅಲ್ಲದೆ ನಿನ್ನ ಗಂಡನ ಮನೆಯಲ್ಲಿದ್ದ ಕೊಂಡು ಬ ಕ್ಕೆವದು ಅಂತ ಹೇಳಿದರು. ಇದ ಗಿನನ ಯಾವತಂದ ಉಪಾಯ ಶ್ರೀ ಯರಲಿ ನವರ ಕಡೆ ಕ್ಕೆ ಗ್ರಾಮದಲ್ಲಿ ಬಂದ, ಯೆರಡು ವರ್ಷವಾಯಿತು ಮತ್ತು ನನ್ನ ಜೀವಾಂತ ತನದ ಖರ್ಚು ಆ ಹೀಗಿ ದೊಡ್ಡವಗುವವರೆಗೂ ನಾನು ಬಿಟ್ಟು ಕೂಲಿ ನಾಲಿ ಅನಾನುಕೂಲ ವಿದ್ಯಕಾರಣ ಆಗುವದು ಮತ್ತು ವರ್ಷದ ಖರ್ಚು ಪಟ್ಟಿ ೩೦೦ ರೂಪಾಯಿಗಳನ್ನು [illegible] ಮಾಡಿರತ್ತೇನೆ. ಸಾಲದ ತಕ್ಕ ಅವಕಾಶ ಸದರಿ ನೋಟೀಸು ಕೊಡುವ ಭಾಗವತ್ತು ಈ ಯದಾವತು, ದಣಿ ಪಂಚರ ವಿಚಾರಣೆ ಫೇರ ಮಾಡಿ ನನ್ನನ್ನು ನೀವು ಪಂಡರ ವಿನಯ ಚಪ್ಪೋಡಿಕಿಯಿಂದ ಹಾಲ ಮಾಡುತ್ತೀವೆ ಅಂತಾ ಹೇಳಿ ಕರಕೊಂಡು ಹೋಗಬೇಕು. ಜರ ನೀವು ಕರಕೊಂಡು ಹೋಗದಿದ್ದರೆ ಆ ದೇಶಿ ಮೂಲಕವಾಗಿ ನಾನು ಯಾರದ ದಿವಸವನ್ನು ಉಜ್ಜ ಮಾಡಿಕೊಡ ಬಲ್ಪಿಸಬೇಕಾಗುತ್ತೇನೆ. ಸದರಿ ನೋಟೀಸು ಮುಟ್ಟಿ ಎಂಟು ದಿವಸದ ಒಳಗಾಗಿ ವ್ಯವಸ್ಥೆ ಮಾಡಿ ನನ್ನನ್ನು ಕರಕೊಂಡು ಹೋಗಬೇಕು. ಇಲ್ಲದಿದ್ದರೆ ನನಗ ನನಗೆ ನಡಿಯುವ ಮೂಲಕ ನನ್ನ ಮೇಲೆ ವ ನನ್ನ ೨ವನಸ ನೇಲೆ ನಿಂದು ಯ ರಕರವನ್ನು ಕಲು ನಡೆಯಬಾರದು ಇದೇ ಸಾದರಪಟಿ ಅಂತ ಕಳುಹಿಸುವೆ ಹಾಗೂ ನನ್ನ ದಾಗೀನೆಗಳಿಗಾಗಿ ನಿನ್ನ ಮೇಲೆ ದಾವಾ ನಡಿಸುವೆನು. ಅಂತ ಇನ ನನ್ನ ಅಕ್ಕ ಹುಷಾರಿಂದ ಬರೆಕೊಟ್ಟ ನೋಟೀಸು ಸಹಿ.

ತಾ ೬-೧೦-೨೨

ಕೂಡಗ್ಗೆಗುಡ್ಡ [illegible] ಮುದಕನಗೌಡಾ ಬಂಡೆಪ್ಪಗೌಡರ ಹಕಿಯಿಸ್ತಯ ಅದೆ

ಧಾರವಾಡ ವಿಜಯ

ವಾಗ್ವಿಲಾಸ

ಪ್ರೀಯರೇ ಬೇಗನೆ ವಿ.ಪಿ.ಯಿಂದಾ ತಂಸಿ ಓದಿ ಮುಕ್ತನಿವಾರಣಾ ೮ನೇ ಆವೃತ್ತಿ

ಬುಕ್‌ಡಿಪೋ

ಹೆಸರು	ರೂ. ಆ. ಪೈ		ರೂ. ಆ. ಪೈ
ಮರಾಠಿ ಶಿಕ್ಷಕ ಚನ್ನಿಕೊಪ್ಪಕೃತ	೧ ೦ ೦		೦-೧೨-೦
ಮುಸಲ್ಮಾನ ಶಿಕ್ಷಕ ಹಲಕೃತ	೧೨ ೦ ೦	ಬಸವೇಶ್ವರ ನಾಟಕ	೧-೦-೦
ಶ್ರೀ ಸಿದ್ದಾರೂಢ ಸ್ವಾಮಿಗಳ ಕೈವಲ್	೦ ೧೨ ೦	ಪ್ರಭಾವಿಜಯನಾಟಕ	೧-೦-೦
ಮಂಜು ಗೋಘಾ ಕಥೆ	೧ ೪ ೦	ಶುಕರಾಮ ನಾಟಕ	೧ ೪-೦
ವಲಾಹಾರಣ ಪ್ರತಾಪಸಿಂಹ	೧ ೬ ೦	ಪ್ರಹಸನ ಹಾಸ್ಯ ನಾಟಕ	೧-೦ ೦
ಜೋಗಳಪದ	೦ ೪ ೦	ಸಾಗ್ರಸಂಗೀತ ಪಾದಸವಾಲಿನಿ	೦-೧೨-೦
ಶ್ರೀ ಧರ್ಮನೀತಿ	೦ ೧೨ ೦	ಓಂ ಪಿನಾಕಿ ಸ್ವೈರ್ಯ ಯಂತ್ರ	
ದಿವ್ಯ ಸುಂದರಿ ಖುದಿಯೇ ಕೃತ	೧ ೦ ೦	ಮಂತ್ರತಂತ್ರ ಸಮ	೧-೮-
ಕಾದಂಬರಿ ವಿಚಿತ್ರ ಕಾರಸ್ಥಾನ	೦ ೧೨ ೦	ಸಟೀಕ ವಿಚಾರ ಸಾಗರವೇದಾಂತ	೪-೦-೦
ಹಿಂದು ಲಾ ಕಾಯಿದೆ ಚನ್ನಮುಳಗುಂದಕೃತ	೬ ೦ ೦	ಜ್ಞಾನಸಿಂಧು ವಚನವೇದಾಂತ	೪-೦-೦
ಅಶೋಕ ಕಾದಂಬರಿ	೧ ೬ ೦	ಪಂಚರತ್ನ ನಿಜಗುಣ ಶಿವಯೋಗ ವಿವರ	೨ ೦-೦
ಷಟ್‌ತ್ರಯಮನುಶಾಸನ ಪಾಠ		ಸಿದ್ಧಾಂತಬಿಂದು ಪ್ರಕಾಶ	೧-೮-೦
ಪುಣ್ಯಗಳ ಫಲವಿಚಾರ	೦-೧೨-೦	ಸಟೀಕ ಸಿಡಗಣ ಕೈವಲ ಪದ್ಧತಿ	೧-೪-೦
ಅಡವಿ ಹುಡಗಿ	೦-೧೨-೦	ಸಟೀಕ ಸರ್ಪಭೂಷಣಸ್ವಾಮಿಗಳ ಕೈವಲ್ಯ	೧-೪-೦
ವೀರಶೈವಾಚಾರ	೧-೦-೦	ಶ್ರೀ ಘನಲಿಂಗಲೀಲೆ	೧-೨-೦
ಕಲ್ಪವೃಕ್ಷ ಆರುಬೇಳಿನ ಕೃತ	೧-೮-೦	ಗರ್ಭಿಣಿ ಶಿಶುಸಂಗೋಪನ	೦-೧೨-೦
ಷಟ್‌ಸ್ಥಲ ಪಂಚಸಿದ್ಧ ಅನುಭವಸಿದ್ಧಿ	೩-೮-೦	ರಾಮಕೃಷ್ಣ ಪರಮಹಂಸ ಚರಿತ್ರೆ	೧ ೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೦-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣನವರಲೀಲಾ	೦-೩-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳಾರತಿ ಶಿವಭಜನಿಪದಗಳು	೦-೩-೦
ಬಸಪ್ಪಭಾನು ಪಾವಟೆ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ವಾದ ಪರೀಕ್ಷಾ ಪಾವಟೆ ವಕೀಲ	೦-೮-೦	ಆರೋಗ್ಯ ಜೀವನ ಹರಡೇಕೃತ	೦-೮-೦
ಮುಳಗುಂದ ವೀರಭದ್ರಸ್ವಾಮಿಯ ಕೈವಲ್ಯದರ್ಪಣ	೧-೪-೦	ಲಲಿತಲೀಲಾನಾಟಕ ಸಂಗೀತ	೧-೦-೦
ಕಾಮುದೇನು	೦ ೮-೦	ಸಂಗೀತ ಸಮಯಸಾರ ಮೈಸೂರು	೧-೧೨ ೦
ಪ್ರೇಮಮಂದಿರ	೦-೮-೦		

ಪತ್ರ ಎಂ. ಆರ್. ಶಿವನಾಗಪ್ಪಾ ಶೆಟ್ಟರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ- ೫೧೦ ಸ್ಟೇಶನ್ ರೋಡ ಹುಬ್ಬಳ್ಳಿ   **ಶಾಖಾ**-ಮೋತಿಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ... ಹುಬ್ಬಳ್ಳಿ ... ದರಬಾರ ನಾರಾಯಣ ಮುತಾಲೀಕ ... ಡಾ. ಮಾಧವರಾವ ನಾರಾಯಣರಾವ ... ಎನ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಭಂಡಿವಾಡ ಮರ್ಚಂಟ ಹುಬ್ಬಳ್ಳಿ ... ರಾಮರಾವ ಮಾಳಾಪೂರ ಬಿ. ಎ. ಎಲ್.ಎಲ್.ಬಿ. ಹಾಯಕೋರ್ಟ ವಕೀಲ ... ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ (...)

ಚಾಲೂ ಖಾತೆಗಳು- ೫೦೦ರೂ. ಗಳಿಂದ ತೆಗೆಯಲ್ಪಡುವವು. ಬಡ್ಡಿ ... ಕ್ಕೆ ವರ್ಷಕ್ಕೆ ...

ಸೇವಿಂಗ್ಸ ಬ್ಯಾಂಕ-ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತಿ ಠೇವುಗಳು- ೫೦ ರೂಪಾಯಿಗಳಿಗೆ ಕಡಿಮೆಯಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ— ೬ ತಿಂಗಳ ಮುದ್ದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೩ರಂತೆ; ೧೨ ತಿಂಗಳ ಮುದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೩॥ ಯಂತೆ

ಇತರ ಕಾರ್ಯಗಳು- ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ಖರಿದಿಸಿಕೊಡುವದು. ಸರಕಾರಿ ಸ್ವಾಮಿಸರಿನೋಟ್ಸ, ಪಾರಬಾಂಡ, ಚೆಕ್ಸ. ಹುಂಡಿ ಮುಂತಾದವುಗಳನ್ನು ಯೋಗ್ಯ ಕಮಿಶನ್ ತಕ್ಕೊಂಡು ಕೊಡಕೊಳ್ಳಲಿಕ್ಕೆ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದವರು ಸ್ವಸ್ಥಿಸ ಖರಿದಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಯು ಬೇಕಾದಲ್ಲಿ ... ಪತ್ರದ್ವಾರದಿಂದ ತಿಳಿದುಕೊಳ್ಳಬೇಕು. ಮೆನೆಜಿಂಗ ಡೈರೆಕ್ಟರ ... ಮ್ಯಾನೇಜಿಂಗ ...

... ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ

ಶಾಂತವೀರ ಅಮೃತರಸ.

ಕೌಟುಂಬಿಕರ ಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ ವಾಂತಿ, ಪಟಕಿ, ಜುಲ್ಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ... ಹಾಗೂ ... ಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯುತ್ತಮ ... ಔಷಧವು. ಊರಲ್ಲಿ ಕಾಲರಾ ಬೇನೆಯು ... ಔಷಧವನ್ನು ಅವಶ್ಯವಾಗಿ ... ಮರ್ಲಿನ ... ೨-೩ ... ಕಾಲರಾ ಬೇನೆಯು ಬರಲಾರದು. ... ಕ್ಕೆ ಬೆಲೆ ೦-೮-೦ ರೂ, ಕಾಲರಾಪಿಲ್ಸ- ೨೫ ಗುಳಿಗೆಗೆ ೦-೧೨-೦ ರೂ. ೧೦೦ ಕ್ಕೆ ೩-೮-೦ ರೂ. ಟಪಾಲು ಖರ್ಚು ಬೇರೆ.

ಕ್ಲೋರೋ ಡಾಯಿನ್- ಬಾಟ್ಲಿ ಒಂದಕ್ಕೆ ೦- -೦ ರೂ, ಟಪಾಲುಖರ್ಚು ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ- ೫೦ ಕ್ಕೆ ೧-೦-೦ ರೂ. ೧೦೦ ಕ್ಕೆ ೩-೦- ೦ರೂ ಟಪಾಲುಖರ್ಚ ಬೇರೆ.

ಪತ್ತೆ:- ಡಾ. ಎಸ್. ಆರ್. ಕಿತ್ತೂರ. V. D.

ತಾರಿಸಪಿಳಾಸ- ಶಾಂತವೀರ, ಪಶುಸಂಜೀವಿನಿಕಾರ್ಯಾಲಯ

ಧಾರವಾಡ.   ಧಾರವಾಡ.

ನೋಟಿಸಿನ ದರಗಳು.

ತಿಂಗಲಕಾಲಮಿನ ಪತ್ರ್ಯವಳಗಳಿಗೆ ಒಂದೂ ರೂಪಾಯಿ; ಮುಂದೆ ಪ್ರತಿಯೊಂದು ವಳಗೆ ಒಂದು ವರೆ ಆಣೆ; ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಇಂಗ್ಲಿಷದಿಂದ ಅನವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ದಬಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು   ಮ್ಯಾ. ವಿ. ಧಾರವಾಡ

ಅಧ್ಯಾಪಕರು ಬೇಕು.

ಋಗ್ವೇದವನ್ನೂ ಋಗ್‌ಶಾಖೆಯ ಯಾಜ್ಞಿಕವನ್ನೂ ಬಲ್ಲಂಥ ಮತ್ತು ಸಾಹಿತ್ಯದಲ್ಲಿ ನಿಷ್ಣಾತರಾದಂಥ ಒಬ್ಬ ಅಧ್ಯಾಪಕರು ಬೇಕು. ಅಧ್ಯಾಪನ ಕಾರ್ಯ ಮಾಡಬಿಚ್ಛಿಸುವವರು ತಮ್ಮ ಅಧ್ಯಯನ ಮೊದಲಾದವುಗಳನ್ನು ತಿಳಿಸಬೇಕು. ಪಗಾರದ ಇತರ ಕರಾರುಗಳನ್ನು ಪತ್ರಮುಖಾಂತರ ಗೊತ್ತು ಮಾಡಿಕೊಳ್ಳಬೇಕು.

ವ್ಯವಸ್ಥಾಪಕ

ಶ್ರೀ ಶೇಷಾಚಲವೇದ-ಸಂಸ್ಕೃತ ಪಾಠಶಾಲಾ

ಪೋ ಕಸಂದವಾ ಜಿ. ಧಾರವಾಡ

ಈ ಪತ್ರವನ್ನು ... ಅವರು ತಮ್ಮ ವಾರ್ತಾ... ಪ್ರೆಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ ಬೆಲೆ ೬ ಪೈ

ವರ್ಷ ೯) ಧಾರವಾಡ, ಶುಕ್ರವಾರ ತಾ|| ೨೭ ನೇ ಅಕ್ಟೋಬರ ೧೯೨೨ (ಸಂಚಿಕೆ ೨೦೨

— ಶ್ರೀ ಗೋಪಾಳಕೃಷ್ಣ ಪ್ರಸನ್ನ —

ಶ್ರೀ. ಗೋಪಾಳ ಸಂಗೀತ ನಾಟಕ ಮಂಡಳಿ.

ಧಾರವಾಡದಲ್ಲಿ ರಾ. ಗೋಪಾಳಗಿರಿಯವರ

ಅನ್ನಪೂರ್ಣಾ ಥಿಯೆಟರಿನಲ್ಲಿ.

ಬುಧವಾರ ತಾ||೪-೧೧ ೧೯೨೨ ರಾತ್ರಿ ೧೦ ಗಂಟೆಗೆ

ಅಂಕ (ವಿಕಟಪ್ರ್ಯಾಲಾ) ೧೦ರಿಂದ೫

ಪ್ರಯೋಗವನ್ನು ಮಾಡಿ ತೋರಿಸುವರು. ವಿಶೇಷ ಮಾಹಿತಿ ಹಸ್ತಪತ್ರಿಕೆಯಲ್ಲಿ

ನೋಡಿ, ಎಸ್, ನೋಡಿ.

ಶ್ರೀ, ಗೋ, ಸಂ, ನಾ, ಮಂ,

ಚಂದ್ರೋದಯ ಪ್ರೆಸ್ ಬುಕ್ ಡಿಪೋ

ಧಾರವಾಡ,

[ಹೊಸ್ಸಾಗಿ ಪ್ರಕಟವಾದ ಪುಸ್ತಕಗಳು)

೧ ನೀತಿ ಮಂಜರಿ (ಗದ್ಯ ಪ್ರಕ್ಷ ೪ ನೇ ಆವೃತ್ತಿ) ಬೆಲೆ ೧೦ ಆಣೆ
೨ ಬಾಲಭಾಗವತ (ಸಚಿತ್ರ ೨ ನೇ ಆವೃತ್ತಿ) " ಬೆಲೆ ೧೦ ಆಣೆ
೩ ಬಾಲರಾಮಾಯಣ (ಸಚಿತ್ರ ೨ ನೇ ಆವೃತ್ತಿ) " ಬೆಲೆ ೧೧ ಆಣೆ
೪ ಶ್ರೀರಾಮದಾಸ ಚರಿತ್ರ (೨ ನೇ ಆವೃತ್ತಿ) " ಬೆಲೆ ೧೦ ಆಣೆ

ಪ್ರತಿಗಳು ತೀರ ಸ್ವಲ್ಪ ಉಳಿದಿವೆ.

೫ ಅಸ್ಪೃಶ್ಯ ಪ್ರೇಮ [ಐತಿಹಾಸಿಕ ಕಾದಂಬರಿ] " ಬೆಲೆ ೧೦ ಆಣೆ
೬ ಶ್ರೀಬಸವ ನಾಟಕ [ಸ್ಕಾಟ್ ಪಿಯರ ನಾಟಕದ ರೂಪಾಂತರ] " ಬೆಲೆ ೩ ಆಣೆ
೭ ಗ್ರಾಮ ಪುರೋಹಿತ [ಸಟೀಕ ೩ ನೇ ಆವೃತ್ತಿಯ ಪ್ರತಿಗಳು " ಬೆಲೆ ೪ ಆಣೆ
ತೀರ ಸ್ವಲ್ಪವಿರುತ್ತವೆ
೮ ಕೋಂದವಾಡೆ ಆಕ್ಷ [ಸಟೀಕ ೩ ನೇ ಆವೃತ್ತಿ] " ಬೆಲೆ ೪ ಆಣೆ
೯ ವೀರಶೈವ ಸಂಕ್ಷಿಪ್ತ ಶ್ರೀಪೂಜಾ ವಿಧಿ " ಬೆಲೆ ೨ ಆಣೆ
೧೦ ಬಾಲ ಭಾಗವತ [ಮುದ್ರಣದಲ್ಲಿರುವದು] " ಬೆಲೆ ೮ ಆಣೆ

ಹತ್ತು ರೂಪಾಯಿಗಳಿಂತ ಹೆಚ್ಚಿಗೆ ತೆಗೆದು ಕೊಳ್ಳುವವರಿಗೆ ಕಮಿಶನ್ ಕೊಡುವೆವು.

ಮ್ಯಾನೇಜರ ಚಂದ್ರೋದಯ ಪ್ರೆಸ.
ಬುಕ್ ಡಿಪೋ ಧಾರವಾಡ

ಇನಾಮು ಪುಸ್ತಕ ಸಹ ವಿಜಯ ಪತ್ರದ
ವರ್ಗಣೀದರ
ನಿತ್ಯಪತ್ರಕ್ಕೆ
೧೨ ತಿಂಗಳಿಗೆ ೧೨—೮—೦ ರೂ.
೬ " ೭—೦—೦ ರೂ.
೪—೦—೦ ರೂ.

ವಾರಪತ್ರಕ್ಕೆ
೧ ವರ್ಷಕ್ಕೆ ೩—೧೨—೦ ರೂ.
ಒಂದು ವರ್ಷಕ್ಕಿಂತ ಕಡಿಮೆಯ ಅವಧಿಯವರಿಗೆ ಇನಾಮಿನ ಪುಸ್ತಕವು ದೊರೆಯದು.
ವಿಶೇಷ ಮಾಹಿತಿ ಕೇಳಗಿನವಿಳಾಸಕ್ಕೆ
ಮ್ಯಾ. ವಿಜಯ. ಧಾರವಾಡ

... ಸಂಗತಿ.

ಧಾರವಾಡ ೨ನೇ ಖಾದಿ ಪ್ರದರ್ಶನವು.

ಹೋದ ವಸಂತ ಪತ್ರದಲ್ಲಿ, ನಾವು ಖಾದೀ ಪ್ರದರ್ಶನ ದೆಶೆಯಿಂದ ಎಲ್ಲ ಖಾದಿಯನ್ನು ತಯಾರ ಮಾಡಿಸುವವರಿಗೂ ಖಾದಿಯ ನಮೂನೆಯನ್ನು ಕಳಿಸಬೇಕೆಂದು ಬಿನ್ನವಿಸಿದ್ದೆವು.

ಹಸ್ತ ಕೈನೂಲಿನಿಂದಲೇ ತಯಾರಾದ ಎಲ್ಲ ತರಹದ ಅರಿವೆಯು ಖಾದೀ ಎನಿಸುವದು. ಅದು ಹತ್ತಿಯ ಅರಿವೆ ಇರಲಿ, ಅಥವಾ ಬೇರೆ ಯಾವದೇ ವಿಧದ ಅರಿವೆ ಇದ್ದರೂ ಅಡ್ಡಿಯಿಲ್ಲ. ಶುದ್ಧ ಕೈಯಿಂದ ತೆಗೆದ ರೇಶ್ಮೆಯಿಂದ ತಯಾರಾದ ರೇಶ್ಮೆಯ ವಸ್ತ್ರಗಳು ಸಹ ಖಾದಿಯೆನಿಸುವವು. ಆದಕಾರಣ ಕೈಯಿಂದ ತಯಾರಾದ ರೇಶ್ಮೆ, ಉಣ್ಣೆ, ಹಾಗೂ ವಸ್ತ್ರಗಳನ್ನು ಸಹ ಕಳಿಸಿ ಕೊಡಬೇಕು.

ಉತ್ತಮ ತರಹದ ಕಂಬಳಿಗಳನ್ನೂ, ಮತ್ತು ಬೇರೆ ಉಣ್ಣೆಯಿಂದ ಸಿದ್ಧಪಡಿಸಿದ ಮಫ್ಲರಗಳನ್ನೂ, ಶಾಲುಗಳನ್ನೂ ಪ್ರದರ್ಶನಕ್ಕಾಗಿ ಎಲ್ಲರೂ ಕಳಿಸಿ ಕೊಡಬೇಕು. ಖಾದಿ ಅಂಗಡಿಯಿಂದ ಕಳುಹಿಸಿದ ಮಾಲಿನ ಖರ್ಚನ್ನು ನಾವೇ ವಹಿಸುತ್ತೇವೆ. ತಮ್ಮ ಸಾಮಾನುಗಳನ್ನು ಮಾರುವದಿದ್ದಲ್ಲಿ ಅವುಗಳನ್ನು ಕಳಿಸುವ, ಮರಳಿಕೊಳ್ಳುವ ವೆಚ್ಚವನ್ನು ತಾವೇ ಕೊಡಬೇಕಾಗುವದು. ಎಲ್ಲರೂ ಕಳುಹಿಸಿದ ಸಾಮಾನುಗಳ ಜವಾಬದಾರಿಯನ್ನು ನಾವೇ ಹೊರುತ್ತೇವೆ.

ಕಾರ್ಯದರ್ಶಿ ಸ್ವಾ. ಕಮಿಟಿ,
ರಾಣೇಬೆನ್ನೂರ.

ನಾನ್-ಕೋಆಪರೇಶನದ ಮೂಲಕ ಸುರತದಲ್ಲಿ ಮ್ಯುನಿಸಿಪಾಲಿಟಿಯ ಬಂಧಿಸ್ತು ಶಾಲೆಗಳು ಬಂದಾದವು.

ಮುಂಬಯಿಯಲ್ಲಿ ನವ್ಹೆಂಬರ ತಿಂಗಳ ಮೊದಲನೇ ವಾರದಲ್ಲಿ ಮಹಾರಾಷ್ಟ್ರ, ವರ್ತಕರ ಮೊದಲನೇ ಪರಿಷತ್ತು ಸೇರುವದು. ಈ ಪರಿಷತ್ತಿನಲ್ಲಿ ಮುಂಬಯಿ ಕರ್ನಾಟಕವನ್ನೂ ಸೇರಿಸಿಕೊಂಡಿದ್ದಾರೆ.

೬-೧೦-೧೯೨೨ನೇ ಇಸ್ವಿ.

ಮೊದಲು ಹೊಟ್ಟೆಪ್ಪಾ, ಬಳಿಕ ಪಿತೃಪ್ಪಾ!!

—o—

ಲಂಕೆಯ ಕೌನ್ಸಿಲದಲ್ಲಿ ಗವ್ಹರ್ನರರಿಗೂ ಮೆಂಬರರಿಗೂ ಮಾತಿನ ಚಕಮಕಿ!!!

—o—

ಲಂಕೆಗೆ ಹಿಂದುಸ್ಥಾನದಂತೆ ಸ್ವರಾಜ್ಯ ಸುಧಾರಣೆಯ ಹಕ್ಕುಗಳನ್ನು ಕೊಡುವಾಗ, ಮೊದಲು ಜನರು ಅಸಹಕಾರ ಮಾಡಬೇಕೆಂದಿದ್ದರು. ಆದರೆ ಎಲ್ಲಿಯೋ ನಡೀ ಸ್ನೇಹದ್ದರಿಂದ, ಇವರು ಸಹಕಾರಿಯಾದರು. ಸಹಕಾರಿಯಾದರೂ, ಕೆಲವು ಹಕ್ಕಿನ ದೆಸೆಯಿಂದ ಸಂಘಶಕ್ತಿಯಿಂದ ಸರಕಾರದ ಕೂಡ ವಾದ ಹಾಕಬೇಕೆಂಬ ಸ್ಫೂರ್ತಿಯು ನಾನ್- ಕೋ- ಆಪರೇಶನದ ಚಳವಳಿಯಿಂದ ಇವರಲ್ಲಿ ಯಾವಾಗಾದರು ತಾನಾಗಿ ಹುಟ್ಟುತ್ತದೆ. ಮವಾಳರೆಂಬವರು ಕೆಲ ವೇಳೆಯಲ್ಲಿ ಹಿಂದುಸ್ಥಾನದಲ್ಲಿಯೂ ಲಂಕೆಯಲ್ಲಿಯೂ ಈ ರೀತಿಯಾದ ಧಿಟ್ಟತನವನ್ನು ತೋರಿಸುತ್ತಿರುವರು. ಆದರೆ ಅದನ್ನು ಕೊನೆಗಾಣಿಸುವದಿಲ್ಲೆಂಬದೇ ಅವರ ದೊಡ್ಡ ದೋಷವು.

ಸಿಲೋನದ ಉತ್ಪನ್ನವು ಹತ್ತು ಕೋಟಿ ರೂಪಾಯಿ ಇರುವದು. ಇದರಲ್ಲಿ ಒಂದು ಕೋಟಿ ೩೫ ಲಕ್ಷ ರೂಪಾಯಿಗಳನ್ನು ಕಾಮದಾರರ ಸಂಬಳಕ್ಕಾಗಿಯೇ ವೆಚ್ಚ ಮಾಡಬೇಕೆಂದು ಸರಕಾರದವರು ಕೌನ್ಸಿಲದ ಮುಂದೆ ಒಂದು ಠರಾವು ತಂದರು. ಇದು ಗುಬ್ಬಿಯ ಕೊರಳೊಳಗೆ ಬೀಸುಕಲ್ಲು ಕಟ್ಟುವಂತಿರುತ್ತದೆಂದು ಪ್ರಜಾಪ್ರತಿನಿಧಿಗಳಾದ ಮೆಂಬರರು ಸಾರಿ, ಸಾರಿ, ಈ ಠರಾವನ್ನು ವಿರೋಧಿಸಿದರು. ಸಂಬಳ ಹೆಚ್ಚಾಗುವದು ದೊಡ್ಡ ದೊಡ್ಡ ಅಧಿಕಾರಸ್ಥರಿಗೇ! ಗವ್ಹರ್ನರರನ್ನು ಮೊದಲು ಮಾಡಿಕೊಂಡು, ಅಸಿಸ್ಟಂಟ ಕಲೆಕ್ಟರ ಮಾಮಲೇದಾರರ ತನಕ ಈ ಅರ್ಪಣೆಯು ಲಭಿಸುವದು. ತಮ್ಮದೇ ಕೈ, ತಮ್ಮದೇ ಬಾಯಿಯಾದ್ದರಿಂದ ಅಧಿಕಾರಸ್ಥರು ಸ್ವಾರ್ಥಪರಾಯಣರಾಗಿ, ಸಂಬಳ ಹೆಚ್ಚು ಮಾಡಿಕೊಳ್ಳುವದಕ್ಕಾಗಿ ಆತುರರಾಗುವದು ಆಶ್ಚರ್ಯದ ಸಂಗತಿಯಲ್ಲ. ಆದರೆ ಹೊಟ್ಟೆಯ ಚಿಂತೆಗೆ ಹೊರತಲ್ಲ! ಮೊದಲು ಹೊಟ್ಟೆಪ್ಪ! ಬಳಿಕ ಪಿತೃಪ್ಪ!! ಎಂಬ ಲೋಕಾರೂಢಿಯಾದ ಮಾತು ಇವರಲ್ಲಿ ಮೂರ್ತಿಮಂತವಾಗಿ ಕಂಡಿತು. ಕಾಳುಕಡಿ ಅಗ್ಗವಾಗಲಿ, ವ್ಯಾಪಾರ-ಉದ್ದಿಮೆ ಹೆಚ್ಚಾಗಲಿ; ಅಂದರೆ ನಾವಾಗಿ ಸಂಬಳ ಹೆಚ್ಚು ಮಾಡುವದಕ್ಕೆ ಸಂತೋಷದಿಂದ ಸಮ್ಮತಿ ಕೊಡುವೆವೆಂದು ಮೆಂಬರರು ಗವ್ಹರ್ನರ ಸಾಹೇಬರಿಗೆ ವಿನಂತಿ ರೂಪದಿಂದ ಬೇಡಿಕೊಂಡರು. ಆದರೆ ಗವ್ಹರ್ನರ ಸಾಹೇಬರು ಇದನ್ನು ಬಿಡಲಿಲ್ಲ. ನಾನ್- ಆಫೀಸಿಯಲರಾದಂಥ ಕೆಲ ಮೆಂಬರರನ್ನು ಒಲಿಸಿಕೊಂಡು ಗವ್ಹರ್ನರರು ಈ ಠರಾವನ್ನು ಪಾಸುಮಾಡಿಕೊಳ್ಳುವ ಭರಿಗೆ ಬಿದ್ದರು. ಪೂರ್ವಪಕ್ಷ-ಉತ್ತರಪಕ್ಷವಾಗಿ ಮತ ತಕ್ಕೊಳ್ಳಲು ೧೯ ಗವ್ಹರ್ನರರ ಪಕ್ಷಕ್ಕೂ ೧೮ ಮೆಂಬರರ ಪಕ್ಷಕ್ಕೂ ಬಿದ್ದವು. ಒಂದೇ ಒಂದಾದ ಪ್ರಚಂಡ ಬಹುಮತದಿಂದ ಠರಾವು ಪಾಸಾಯಿತು. ತಮ್ಮ ಮರ್ಯಾದೆಯುಳಿಯಿತು. ಹೊಟ್ಟೆ ತುಪ್ಪದೊಳಗೆ ಬಿತ್ತೆಂದು ಗವ್ಹರ್ನರ ಸಾಹೇಬರು ಆನಂದಭರಿತರಾದರು.

ಆದರೆ ಈ ಆನಂದಕ್ಕೆ ಕೂಡಲೆ ಅಪಶಕುನವಾಯಿತು. ಮೆಂಬರರು ತಮ್ಮ ಮಾತಿಗೆ ಬೆಲೆಯಿಲ್ಲೆಂದು ಬಗೆದು ಗವ್ಹರ್ನರ ಸಾಹೇಬರಿಗೆ ಹೇಳಿ, ಕೌನ್ಸಿಲ ಸಭೆ ಬಿಟ್ಟು, ಹೊರಬಿದ್ದರು. ಸಭೆಯ ಕೆಲಸವನ್ನು ನೋಡಲಿಕ್ಕೆ ಬಂದಂಥ ಪ್ರೇಕ್ಷಕರು, ಸಭೆಯಲ್ಲಿ ಗುಲ್ಲು ಸಹ ಮಾಡಬಾರದೆಂಬ ಕಠಿಣವಾದ ನಿಯಮವಿದ್ದರೂ, ಮೆಂಬರರ ಸ್ವಾಭಿಮಾನವನ್ನು ನೋಡಿ, ಹರ್ಷಭರಿತರಾಗಿ ಇವರ ಅಭಿನಂದನ ಮಾಡಲೋಸುಗ, ಕರತಾಡನ ಹಾಗು ಆನಂದ ಘೋಷ ಮಾಡಿದರು. ಇದು ಗವ್ಹರ್ನರ ಸಾಹೇಬರಿಗೆ ಸರಿಬೋದಲಿಲ್ಲ. ಇದೊಂದು ತಮ್ಮ ಅಪಮಾನ ಮತ್ತು ಚೇಷ್ಟೆಯೆಂದು ತಿಳಿದುಕೊಂಡು, ಪೋಲೀಸರನ್ನು ಕರಿಸಿ, ಅಧಿಕಾರದ ಬಲದಿಂದ ಇವರನ್ನು ಹೊರಗೆ ಹಾಕಲಿಕ್ಕೆ ಅಪ್ಪಣೆಕೊಟ್ಟರು. ಕೂಡಲೆ- ಜನರು ಹೊರಬೀಳಹತ್ತಿದರು; ಪೋಲೀಸರು ಚಲೋ! ನಿಕಾಲೋ!! ಎಂದು ಸಭಾಮಂದಿರದ ತುಂಬ ಧ್ವನಿಗೆ ಧ್ವನಿ ಕೂಡಿಸಿ ಪ್ರತಿಧ್ವನಿಯನ್ನುಂಟು ಮಾಡಿದರು. ಖುರ್ಚಿಗಳು ತೂರಾಡಿದವು. ಎತ್ತ ನೋಡಿದತ್ತ ಗದ್ದಲವೇ ಗದ್ದಲವಾದ್ದರಿಂದ ಒಬ್ಬರ ಮಾತು ಒಬ್ಬರಿಗೆ ಕೇಳದಂತಾಗಿ, ಸಭೆಯ ಕೆಲಸವು ನಿಂತು ಹೋಯಿತು. ಹೊರಗೆ ಹೋದಂಥ ಪ್ರೇಕ್ಷಕರು ಬಂಟತನ ತೋರಿಸಿ, ಒಬ್ಬೊಬ್ಬರಾಗಿ ಹೊರಬಿದ್ದು ಬರುವಂಥ ಮೆಂಬರರನ್ನು ಜಯ ಜಯಕಾರದಿಂದ ಶ್ಲಾಘಿಸುತ್ತಿರುವಾಗ ಸಭೆಯಲ್ಲಿ ಕೂತವರ ಕಿವಿಗಳು ಗಡಚಿಕ್ಕಿದವು. ಮಿ. ಪೈರಿಸರೆಂಬ ಮೆಂಬರರು ಮುಖಂಡರಾದ್ದರಿಂದ ಇವರ ಹೆಸರಿನ ಜಯಘೋಷವು ದಿಗಂತರವನ್ನು ವ್ಯಾಪಿಸಿತು.

ಗವ್ಹರ್ನರ ಸಾಹೇಬರ ಹೆಸರು ಸರ ಮ್ಯಾನಿಂಗ ಎಂದುಂಟು. ಇವರು ದುರಾಗ್ರಹದಿಂದ ಪಾಸುಮಾಡಿಕೊಂಡ ಠರಾವಿನಿಂದ ಉಳಿಸಿಕೊಂಡಿದ್ದಂಥ ಅಲ್ಪ ಸ್ವಲ್ಪ ಲೋಕಪ್ರೀತಿಯನ್ನು ಕಳಕೊಂಡರು. ಇವರ ಕೃತಿಯಿಂದ ಲಂಕೆಯ ಲೋಕಮತವೇ ಕ್ಷೋಭಗೊಂಡಿದೆ. ಅಲ್ಲಿ ಪ್ರಕಟವಾಗುವ ಸಿಲೋನ ಡೇಲಿ ನ್ಯೂಜವೆಂಬ ಪತ್ರವು ಈ ಠರಾವಿಗೆ ಹಗಲು ದರೋಡೆ ಎಂದು ಅಭಿಪ್ರಾಯ ಕೊಟ್ಟಿದೆ. ಸರಕಾರವು ಅನ್ಯಾಯ ಮತ್ತು ಅನೀತಿಯ ಕೃತ್ಯ ಮಾಡುವಾಗ ಇದು ಮ. ಗಾಂಧಿಯವರ ಅಸಹಕಾರದ ತತ್ವದ ಅಲ್ಪ ಅಂಗೀಕಾರವೆಂದು ಅಲ್ಲಿಯ ಮಾರ್ನಿಂಗ ಲೀಡರವೆಂಬ ಪತ್ರವು ಅಂದಿರುತ್ತದೆ. ನಾವು ವಿಷಯಾರಂಭದಲ್ಲಿ ಹೇಳಿದಂತೆ ಈ ಮೆಂಬರರು ತಮ್ಮ ಜನ್ಮಸಿದ್ಧವಾದ ಸ್ವರಾಜ್ಯದ ಹಕ್ಕನ್ನು ಕಾಯ್ದುಕೊಳ್ಳಲು ಮುಂದೇನು ಮಾಡುವರೆಂಬದನ್ನು ನೋಡಲು- ಭಾರತವಾಸಿಗಳು ನಿರೀಕ್ಷಿಸುತ್ತಿರುವರು.

ಹೆಬ್ಬಳಿಕೆಯ ಮಾತಿಗೆ ಕೂಲಿಕಾರರ ವಿರೋಧ !!

—o—

ಆಸ್ಟ್ರೇಲಿಯಾದ ಪ್ರಧಾನರು ತುರುಕರ ಕೂಡ ಯುದ್ಧ ಮಾಡುವದಕ್ಕೆ ಹುರಿಗಟ್ಟಿದ್ದಾರೆ. ತುರುಕರು ಮಹಾಯುದ್ಧದಲ್ಲಿ ರಣರಂಗದಲ್ಲಿ ನಿಲ್ಲಿಸಿದ ದಂಡಿಗಿಂತ ಹೆಚ್ಚು ದಂಡನ್ನು ತಾವು ಕಳಿಸಿದಂತೆ ಈ ಪ್ರಧಾನರು ಬಾಯುಪಚಾರ ಹೇಳಿಕೊಂಡು, ತುರುಕರನ್ನು ಬೆದರಿಸಲೆಣಿಸಿದ್ದಾರೆ. ಆದರೆ ಇದು ಪ್ರಕೃತದಲ್ಲಿ ಬರೇ ಹೆಬ್ಬಳಿಕೆಯ ಮಾತಾಗುವದು. ಯಾಕಂದರೆ ಅಲ್ಲಿಯ ಕೂಲಿಕಾರರು ಈ ದಂಡಯಾತ್ರೆಯನ್ನು ಪೂರಾ ನಿಷೇಧಿಸಿದರು. ಮಹಾಯುದ್ಧದಲ್ಲಿ ನಮ್ಮ ೬೦ ಹತ್ತು ಸಾವಿರ ಜನ ಲಯವಾಯಿತು. ಇದೇ ಕಡೆಯ ಜಗಳ; ಈನಂತರ ಪ್ರಾಣಹಾನಿ ಮಾಡಗೊಡುವದಿಲ್ಲೆಂದು ವಚನಕೊಟ್ಟಿದ್ದನ್ನು ಮರೆತಿರಾ ಎಂಬದಾಗಿ ಇವರು ಪ್ರಧಾನರಿಗೆ ಪ್ರಶ್ನಮಾಡಿ, ಯುದ್ಧದ ಘೋಷ್ಣಾಚ್ಚಾರ ಮಾಡಿದರೆ, ಆಸ್ಟ್ರೇಲಿಯಾದ ತುಂಬ ಸಂಪುಮಾಡಿ, ವಿರೋಧ ಬೆಳಿಸುವೆವೆಂದು ಭಯಹಾಕಿದ್ದಾರೆ.

ಶ್ರಾದ್ಧವಲ್ಲ! ಪುಣ್ಯತಿಥಿಯಲ್ಲ!! ಹುಟ್ಟಿದ ಹಬ್ಬ.

—o—

ಭಾಷೆಯು ಬರದೆ, ಅದರಲ್ಲಿ ಪ್ರಾವಿಣ್ಯವನ್ನು ತೋರಿಸಲಿಕ್ಕೆ ಹೋದವರ ಗತಿಯು ಚೇಳಿನ ಮಂತ್ರ ಬರದೆ, ಹಾವಿನ ಗುದ್ದಿನಲ್ಲಿ ಕೈ ಹಾಕುವಂತಿರುತ್ತದೆ. ಒಬ್ಬ ಲೇಖಕರು ನಿತ್ಯ ಕರ್ಮದ ಬದಲಾಗಿ ದಿನಕರ್ಮವೆಂಬ ಶಬ್ದವನ್ನು ಉಪಯೋಗಿಸಿದ್ದರಿಂದ, ಮಂಗಳ ಕಾರ್ಯಕ್ಕೆ ಅಮಂಗಳತ್ವವುಂಟಾಯಿತು. ಇನ್ನೊಬ್ಬರು ತಮ್ಮ ಮೊಮ್ಮಗಳನ್ನು ಮಗಳ ಮಗನಿಗೆ ಧಾರೆಯೆರದು ಕೊಡುವಾಗ ಪುತ್ರಿಕಾಪುತ್ರನೆಂಬ ಶಬ್ದವನ್ನು ಪಯೋಗಿಸಿದ್ದರು. ಪುತ್ರಿಕಾ ಪುತ್ರನೆಂದರೆ- ದತ್ತಕ ತೆಗೆದುಕೊಂಡಂಥ ಮಗಳ ಮಗನು !! ಒಬ್ಬ ಪತ್ರಕಾರರು ಮಹಾತ್ಮರ ಹುಟ್ಟಿದ ದಿವಸದ ಹಬ್ಬಕ್ಕೆ ಪುಣ್ಯತಿಥಿಯೆಂದು ಬರೆದಿದ್ದಾರೆ. ಲೌಕಿಕವು ಶಾಸ್ತ್ರೀಯ ಅವರ ದೆಸೆಯಿಂದ ಪ್ರತಿವರ್ಷ ಮಾಡುವಂಥ

ಅನ್ನ ಸಂತರ್ಪಣೆಗೆ ಶ್ರಾದ್ಧವೆನ್ನುವರು. ಯತಿಗಳ ದೆಸೆಯಿಂದ ಮಾಡುವ ಸಂತರ್ಪಣೆಗೆ ಪುಣ್ಯತಿಥಿ ಎನ್ನುವರು. ಮಹಾತ್ಮರು ಇನ್ನೂ ಜೀವಂತರಿರುವಾಗಲೇ ಅವರ ಪುಣ್ಯತಿಥಿಯನ್ನು ಮಾಡುವಂಥ ಲೇಖಕರ ಮೂರ್ಖತನವನ್ನು ಎಷ್ಟು ಬಣ್ಣಿಸಿದರೂ ತೀರದು. ಕಾರಣ, ಲೇಖನ ವ್ಯವಸಾಯದಲ್ಲಿ ನುರಿಯಬೇಕೆನ್ನತಕ್ಕವರು ಮೊದಲು ಭಾಷೆ, ಆನಂತರ ಆ ಭಾಷೆಯಲ್ಲಿ ಉಪಯೋಗ ಮಾಡಲ್ಪಡುವ ಶಬ್ದಗಳ ಅರ್ಥ ಮತ್ತು ಪ್ರಾಘಾತವನ್ನು ಕಲಿಯಬೇಕೆಂದು ಸೂಚಿಸುತ್ತೇನೆ. ಇಲ್ಲವಾದರೆ ಮೂರ್ಖತನದ ಪ್ರದರ್ಶನ ಮಾಡಿಕೊಂಡಂತಾಗುತ್ತದೆ.

....

ಕಲಕತ್ತೆಯ ತುರಂಗದಲ್ಲಿ ಪುನಃ ದಂಗೆ!!

—೦—

೨೦೦ ಕೈದಿಗಳು ತುರಂಗದಲ್ಲಿರುವ ಡಾಕ್ಟರರನ್ನು ಧಣಿಸಬೇಕೆಂದು ಕಟ್ಟು ಮಾಡಿ, ಆಸ್ಪತ್ರೆಗೆ ಹೋದರು. ಆದರೆ ಅಲ್ಲಿ ಡಾಕ್ಟರರಿರಲಿಲ್ಲ. ಅಲ್ಲಿಂದ ಇವರು ಬಂದವರೇ ದಂಗೆಯನ್ನು ಪ್ರಾರಂಭಿಸಿದರು. ಪೋಲೀಸರು ಒಂದು ಫಾಯರ ಮಾಡಲು ಇಬ್ಬರು ಕೈದಿಗಳು ಘಾಯವಾದರು. ದಂಗೆಯು ಶಾಂತವಾಯಿತು. ದಂಗೆಗಾರರನ್ನು ಹಿಡಿದು, ಬಂದುಕಟ್ಟಿನಲ್ಲಿಟ್ಟಿದ್ದಾರೆ.

—

ಅಧ್ಯಕ್ಷರ ಪ್ರಯಾಣ ಮತ್ತು ಆಗಮನ.

—೦—

ದಾರಿಗುಂಟ ಬಹುಮಾನ.

—೦—

ರಾಣೇಬೆನ್ನೂರಿನಲ್ಲಿ ಕೂಡುವ ಜಿಲ್ಹಾ ಪರಿಷತ್ತಿನ ಅಧ್ಯಕ್ಷರಾದ ಮುಜಲಿಯವರೂ, ದೇ. ಭ. ಗಂಗಾಧರರಾವ ದೇಶಪಾಂಡೆ ಮೊದಲಾದವರೂ, ಶನಿವಾರ ಏಳನೇ ತಾರೀಖಿನ ದಿವಸ ಬೆಳಗಾವಿಯಿಂದ ಮೇಲಬಂಡಿಯಿಂದ ಹೊರಟು, ಸಾಯಂಕಾಲದ ೬-೧೫ ಕ್ಕೆ ರಾಣೇಬೆನ್ನೂರು ತಲ್ಪುವರು. ದಾರಿಗುಂಟ ದೊಡ್ಡ ದೊಡ್ಡ ಸ್ಟೇಶನಗಳಲ್ಲಿ ಇವರ ಸನ್ಮಾನವಾಗುವದೆಂದು ತಿಳಿಯುತ್ತದೆ.

ದೇಶಭಕ್ತ ಮುಜಲಿಯವರ ಸನ್ಮಾನದ ದೆಸೆಯಿಂದ ಬೆಳಗಾವಿಯಲ್ಲಿ ಕೂಡಿದ ಸಭೆಯಲ್ಲಿ ನಾಗರಿಕರು ಇವರಿಗೆ ೨೫೦೦ ರೂಪಾಯಿಗಳ ಥೈಲಿಯನ್ನು ಮೆಚ್ಚಿ ಕೊಟ್ಟರೆಂದು ತಿಳಿಯುತ್ತದೆ.

———

ಮಹಾತ್ಮರ ದರ್ಶನ ತಕ್ಕೊಳ್ಳಲಿಕ್ಕೆ ಹೋದಂಥ ಮುಂಬಯಿ ಮತ್ತು ಪುಣೆಯ ೩೦೦ ಹೆಣ್ಣು ಮಕ್ಕಳಿಗೆ ಯರವಡೆಯ ಸುಪರಿಂಟೆಂಡೆಂಟರು ಅವರ ದರ್ಶನವಾಗಗೊಡಲಿಲ್ಲ. ಹೆಣ್ಣುಮಕ್ಕಳು ಜೇಲಿನ ಹೊರಗೆ ಮಹಾತ್ಮರ ಭಾವಚಿತ್ರವನ್ನು ಇಟ್ಟು ರಾಷ್ಟ್ರೀಯ ಗೀತಗಳನ್ನು ಹಾಡಿದರು.

ಸ್ವದೇಶಿ ಬಟ್ಟೆಗಳು

ಸ್ವದೇಶೀ ಹ್ಯಾಂಡ್ ಲೂಮ ಆ್ಯಂಡ್ ಡಾಯಿಂಗ ಫ್ಯಾಕ್ಟರಿ—

ನಮ್ಮಲ್ಲಿ ಕಯಾರಾಗುವ ನೂಲು ಮತ್ತು ಉಣ್ಣೆ ಮಿಶ್ರವಾದ ಅರಿವೆ, ಹಾಗೂ (ಸೂತಿ ಭಾಂಡ) ಜಂಖಾನಿ ಮತ್ತು ಉಣ್ಣೆಯ ಅರಿವೆಯ ಟೋಪಿಗಳು ಮಾರುವದಕ್ಕೆ ಸಿದ್ಧವಿರುತ್ತವೆ. ಬಣ್ಣ ಪಕ್ಕಾ ಕೆಟ್ಟರೆ ತಿರುಗಿ ತೆಗೆದುಕೊಳ್ಳುತ್ತೇನೆ. ಅರಿವೆಗಳು ಶೋಕು ಹಾಗೂ ಕಿರುಕತ್ತ ಸಿಗುವವು. ಪರಸ್ಥಳದವರ ಸೋಯಿಗಾಗಿ ಒಂದು ಕೋಟಿನ ಅರಿವೆ ಸಹ ವ್ಹಿ. ಪಿ ಯಿಂದ ಕಳುಹಿಸಿಕೊಡುವೆವು. ವಿಶೇಷ ಸಂಗತಿಯನ್ನು ಸಮಕ್ಷಮ ಅಥವಾ ಪತ್ರವ್ಯಾರದಿಂದ ತಿಳಿದುಕೊಳ್ಳಬೇಕು.

ಮಾಲಕ: ಸೋಮಪ್ಪ ವಿರಬಸಪ್ಪಾ ಹಳಕಟ್ಟಿ, ಧಾರವಾಡ.

ವಿಜಾಪೂರದ ಸೆಶನ್ಸ ಕೋರ್ಟಿನಲ್ಲಿ ದೇ. ಭ. ರಂಗರಾವ ತಿಳಗೂಳ ಇವರ ಜವಾಬು.

—೦—

ನಾನು ಬರೆದ ಲೇಖದ ಪೂರ್ಣ ಜವಾಬದಾರಿಯನ್ನು ವಹಿಸಲು ಸಿದ್ಧನಿದ್ದೇನೆ. ಆದರೆ ಆ ಲೇಖವನ್ನು ಬರೆಯುವ ಉದ್ದೇಶಗಳನ್ನು ಮಾತ್ರ ಇಲ್ಲಿ ಹೇಳದೆ ಇರಲಾರೆನು. ನನ್ನ ಉದ್ದೇಶಗಳು ಮುಖ್ಯವಾಗಿ ಎರಡು. ಧಾರವಾಡದ ಗೋಳೀಬಾರಿನ ಖಟ್ಲೆಯಲ್ಲಿ ಆರೋಪಿಗಳೆಂದೆನಿಸಿದವರು ನಿಜವಾಗಿಯೂ ನಿರಪರಾಧಿಗಳೆಂದ ಸಿದ್ಧಮಾಡಿ ತೋರಿಸುವದು ಮೊದಲನೆಯ ಉದ್ದೇಶವು. ಮತ್ತು ಆ ಖಟ್ಲೆಗೆ ಸಂಬಂಧಿಸಿದ ಅಧಿಕಾರಸ್ಥರ ಸ್ವೈರವೃತ್ತಿಯನ್ನೂ ಉನ್ಮತ್ತತನವನ್ನೂ ಜನತೆಯ ನಿದರ್ಶನಕ್ಕೆ ತಂದುಕೊಡುವದು ಎರಡನೇ ಉದ್ದೇಶವು. ಆದ್ದರಿಂದ ಆ ಲೇಖವು ಸರಕಾರಕ್ಕೂ, ಸರಕಾರದ ಧೋರಣಕ್ಕೂ, ಯಾವರೀತಿಯಿಂದಲೂ ಬಾಧೆಯನ್ನು ತಾರದು. ಮತ್ತು ಅದಕ್ಕೆ ೧೨೪ ನೇ ಅ. ಕಲಮು ಲಾಗೂ ಸಹಿತ ಆಗಲಾರದೆಂದು ನನ್ನ ಮತವಿದೆ.

ಧಾರವಾಡದಲ್ಲಿರುವ ಎರಡು ಖಟ್ಲೆಗಳಲ್ಲಿ ಸರಕಾರದವರಿಂದ ಬಹಳ ಅನ್ಯಾಯವಾಗಿದೆಯೆಂದು ನಾನು ಈಗಲೂ ನಂಬುತ್ತೇನೆ. ಕೋರ್ಟಿನ ಮುಂದೆ ಸಾದರ ಮಾಡಿದ ಆರೋಪಿಗಳ ಜಬಾನಿಯೇ ಅವರ ವಿರುದ್ಧ ಸಾಕ್ಷಿ ಹೇಳುವವರ ಜಬಾನಿಗಿಂತ ವಿಶ್ವಸನೀಯವೆಂದು ನನಗೆ ತೋರುತ್ತದೆ. ಆದ್ದರಿಂದ ವರ್ತಮಾನಪತ್ರಕಾರ, ಈ ದೃಷ್ಟಿಯಿಂದ ಯಾವದು ನನಗೆ ಅನ್ಯಾಯದ ಪರಮಾವಧಿಯೆಂದು ಅನಿಸುತ್ತದೋ ಅದನ್ನು ಜನತೆಯ ಎದುರಿಗೆ ಇಡುವದು ನನ್ನ ಪವಿತ್ರ ಕರ್ತವ್ಯವೆಂದೆನಿಸಿ ನನ್ನ ಸದಸದ್ವಿವೇಕ ಬುದ್ಧಿಗೆ ತೋರಿದ್ದನ್ನೇ ಜಾಹೀರ ರೀತಿಯಿಂದ ತಿಳಿಸಿಬಿಟ್ಟಿದ್ದೇನೆ. ಇನ್ನು ಸರಕಾರೀ ನೌಕರರು ಕೇವಲ ಅವರ ದೊಡ್ಡ ಅಧಿಕಾರಸ್ಥರೆಂದು ತಿಳಿದು ಪ್ರಾಮಾಣಿಕತನದಿಂದಲೂ ನಿರ್ಭಯದಿಂದಲೂ ಅವರ ಮೇಲೆ ಟೀಕೆ ಮಾಡುವದೇ ರಾಜದ್ರೋಹವೆಂದೆನಿಸುತ್ತಿದ್ದರೆ ನಾನು ಅಪರಾಧಿಯೆಂದು ಹೇಳುತ್ತೇನೆ. ಹೊರತು ಹೆಚ್ಚಿಗೇನೂ ಹೇಳಲಾರೆನು

ವಿವಿಧ ವರ್ತಮಾನ.

ಇದೇ ತಿಂಗಳ ನಾಲ್ಕನೇ ತಾರೀಖಿನ ದಿವಸ ದಿಲ್ಲಿಯಲ್ಲಿ ಯಾವ ಪಕ್ಷಕಕ್ಷ್ಯ ಸೇರದಂಥ ಜನರ ಸಭೆಯು ಸ್ವರಾಜ್ಯ ವಿಷಯಕ್ಕಾಗಿ ಕೂಡತಕ್ಕದ್ದಿತ್ತಷ್ಟೇ; ಇದು ೨೨ನೇ ತಾರೀಖಿನ ದಿವಸ ಕೂಡುವಂತೆ ಗೊತ್ತಾಗಿದೆ.

———

ಮಹಾತ್ಮಾ ಗಾಂಧಿಯವರ ಗುಜರಾಥದ ವಿದ್ಯಾಪೀಠಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಗೊತ್ತಾಗಿತ್ತು. ಮುಂಬಯಿಯಲ್ಲಿಯೇ ಎಂಟು ಲಕ್ಷ ರೂಪಾಯಿಗಳು ಕೂಡಿದಂತೆ ತಿಳಿಯುತ್ತದೆ.

———

ಗುರುಕಾ ಬಾಗ ಪ್ರಕರಣದಲ್ಲಿ ಪೋಲೀಸರ ಅತ್ಯಾಚಾರಗಳು ಬಂದಾದ ನಂತರ ೭೩೬ ಜನರನ್ನು ಹಿಡಿದಿದ್ದಾರೆ. ಮ್ಯಾಜಿಸ್ಟ್ರೇಟರು ದಸರೆಯ ಹಬ್ಬದ ದಿವಸ ಕೂಡ ಕೋರ್ಟ ಮಾಡಿ, ಶಿಕ್ಷೆಯನ್ನು ಕೊಟ್ಟಿರುತ್ತಾರೆ.

———

ರಾಣೇಬೆನ್ನೂರಲ್ಲಾಗುವ ಖಾದಿಯ ಪ್ರದರ್ಶನವು ಪಂಡಿತ ತಾರಾನಾಥರವರಿಂದ ತೆರೆಯಲ್ಪಡುವದೆಂದು ತಿಳಿಯುತ್ತದೆ.

———

ಮುಂಬಯಿಯ ಸುಪ್ರಸಿದ್ಧ ವೃದ್ಧ ಡಾಕ್ಟರರಾದ ಸರ ಭಾಲಚಂದ್ರ ಕೃಷ್ಣ ಭಾಟವಡೇಕರರು ಪರಲೋಕವಾಸಿಗಳಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

———

ನೋಟೀಸು

ಕೆಳಗೆ ಸಹಿಮಾಡಿದ ಗಣಪತರಾವ ಎನ್. ಮದಿಮಾನ ಇವರನ್ನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದ ಬ್ರ್ಯಾಂಚ ಆಫೀಸ ಹುಬ್ಬಳ್ಳಿಯ ದಲಾಲರನ್ನಾಗಿ ನೇಮಿಸಿಯದೆ. ಯಾರಿಗಾದರೂ ಬ್ಯಾಂಕಿನ ಸಂಬಂಧಿ ಕೆಲಸಗಳ ಸಲುವಾಗಿ ಮಾಹಿತಿಗಳು ಬೇಕಾದಲ್ಲಿ ಅವರನ್ನು ಕೇಳಿಕೊಂಡಲ್ಲಿ, ಅವರು ಬೇಕಾದ ಸವಲತ್ತುಗಳನ್ನು ಕೊಡುವಲ್ಲಿಯೂ ಮಾಹಿತಿಯನ್ನು ತಿಳುಹಿಸುವಲ್ಲಿಯೂ ಸಮರ್ಥರಿರುವರು.

ತಾ. ೨೭-೯-೧೯೨೩

ಪತ್ತೆ ಗಣಪತರಾವ ಎನ್, ಮದಿಮಾನ. ಮತ್ತು ಜಿ. ಎ. ಮದಿಮಾನ ಸನ್ಸ, ಹುಬ್ಬಳ್ಳಿ

ವಾಗ್ವಿಲಾಸ ಬುಕ್ ಡಿಪೋ

ಪ್ರೇಮಿಗಳೇ ಬೇಗನೆ ವಿ.ಪಿ.ಯಿಂದ ತರಿಸಿ ಓದಿ ಆನಂದಪಡಿರಿ ...

ಪುಸ್ತಕ	ರೂ. ಆ. ಪೈ.		ರೂ. ಆ. ಪೈ.
ಮರಾಠಿ ಶಿಕ್ಷಕ ಬಸ್ನಿಕಿತ್ಸಕ	೧-೦-೦	ಮಾನವ ಧರ್ಮ	೦-೧೩-೦
ಮುಸಲ್ಮಾನ ಶಿಕ್ಷಕ ಮುಲ್ಕಿ	೧೨-೯-೦	ಕುಸುಮೇಶ್ವರ ನಾಟಕ	೩-೦-೦
ಶ್ರೀ ಸಿದ್ಧಾರೂಢರ ಸ್ವಾಮಿಗಳ ಕೈವಲ್ಯ	೦-೧೩-೦	ಪ್ರಭ ವಿಜಯನಾಟಕ	೩-೦-೦
ಮಂಜು ಗೋಳಾಕಥೆ	೧-೪-೦	ಕುಕ್ಕಾರಾಮ ನಾಟಕ	೦-೪-೦
ವಲಾಯಾರಾಣ ಪ್ರತಾಪಸಿಂಹ	೧-೬-೦	ಸ್ತ್ರೀಧರ್ಮರಹಸ್ಯ ನಾಟಕ	೧-೧-೦
ಚೆಂಗಲ ಪದ	೦-೪-೦	ಸಾಗ್ರಸಂಗೀತ ಮದನಮಂಜರಿ	೦-೧೨-೦
ಶ್ರೀ ಧರ್ಮಸಿಂಹ	೦-೧೨-೦	ಒಂದು ಪಿನಾಕಿ ವೈದ್ಯ ಯಂತ್ರ	
ದಿವ್ಯ ಸುಂದರಿ ಮುನಿಮೋಕ್ಷಕ	೧-೦-೦	ಮಂತ್ರತಂತ್ರ ಸಹಿತ	೧-೮-
ಆನಂದ ವಿಟಕರ ಕಾರಸ್ಥಾನ	೦-೨-೦	ಸಟೀಕ ವಿಚಾರ ಸಾಗರವೇದಾಂತ	೪-೦-೦
ಹಿಂದು ಲಾ ಕಾಯದೆ ಚಿಕ್ಕ ಮೂಳಗುಂದಕ್ಕೆ	೬-೦-೦	ಜ್ಞಾನಸಿಂಧು ವಚನವೇದಾಂತ	೪-೦-೦
ಅಶೋಕ ಕಾದಂಬರಿ	೧-೬-೦	ಪಂಚತತ್ವ ನಿಜಗುಣ ಶಿವಯೋಗ ವಿವರ	೩-೦-೦
ಶಾಲಿತ್ರಯ ಮಕ್ಕಳ ನಾಟಕ		ಸಿದ್ಧಾಂತಬಿಂದು ಪ್ರಕರಣ	೧-೮-೦
ಸ್ವಪ್ನಗಳ ಫಲವಿಚಾರ	೦-೧೩-೦	ಸಟೀಕ ನಿಜಗುಣ ಕೈವಲ್ಯಪದ್ಧತಿ	೧-೪-೦
ಅಣ್ಣಿ ಹುಡಗಿ	೦-೧೨-೦	ಸಟೀಕ ಸರ್ವಜ್ಞಸ್ವಾಮಿಗಳ ಕೈವಲ್ಯ	೧-೪-೦
ವೀರಶೈವಾಚಾರ	೧-೦-೦	ಶ್ರೀ ಧರ್ಮ ನಿರಿಲಿಂಗಲೀಲೆ	೧-೭-೦
ಕಲ್ಪವೃಕ್ಷ ಅರಬೇರಿನ ಕೈತ	೦-೮-೦	ಗರ್ಭಿಣಿಶಿಸುಸಂಗೋಪನ	೦-೧೨-೦
ಕೃಷ್ಣಪ್ರಸಲಪಂಚಸಂಧಿ ಅನುಭವಸಿದ್ಧಿ	೩-೮-೦	ರಾಮಕೃಷ್ಣ ಪರಮಹಂಸ ಚರಿತ್ರ	೧-೪-೦
ಕೋಕಶಾಸ್ತ್ರ ರತಿವಿಲಾಸ	೧-೮-೦	ಲಗ್ನವಿಧಾನ	೦-೪-೦
ಸುಖಸಾಮ್ರಾಜ್ಯ	೧-೪-೦	ಬಸವಣ್ಣ ನವರಲೀಲಾ	೦-೪-೦
ಸಂಸಾರದಿಂದ ಸದ್ಗತಿ	೧-೦-೦	ಮಂಗಳವಾಡ ಶಿವಬಡವಿನದಗಳು	೦-೩-೦
ಬಸವಭಾನು ಪಾವಟಿ ವಕೀಲ	೧-೦-೦	ಶರೀರ ಮರ್ಮಶಾಸ್ತ್ರವು	೧-೦-೦
ವಾದ ಪರೀಕ್ಷಾ ಪಾವಟಿ ವಕೀಲ	೦-೮-೦	ಆರೋಗ್ಯ ಜೀವನ ಹಂಡೇಕರ	೦-೮-೦
ಮೂಳಗುಂದಮಹಾತಸ್ವಾಮಿಯ ಕೈವಲ್ಯವರ್ಣನ	೧-೪-೦	ಲಕ್ಷ್ಮೀಲೀಲಾನಾಟಕ ಸಂಗೀತ	೧-೦-೦
ಕಾಮದೇನು	೧-೮-೦	ಸಂಗೀತ ಸಮಯಸಾರ ಮೈಸೂರು	೧-೧೨-೦
ಶೀಲಸುಂದರಿ	೬-೮-೦		

ಪತ್ರ, ಎಂ. ಆರ್. ಶಿವನಾಗಪ್ಪಾ ವಣ್ಣಿಸರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ- ಸ್ಟೇಶನ್ ರೋಡ ಹುಬ್ಬಳ್ಳಿ ಶಾಖಾ—ಸುಭಾಸಚೌಕ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ಮುತಾಲಿಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್. ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಭಂಡಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮಾಳಕಪೂರ ಬಿ. ಎ. ಎಲ್‌ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ. ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ (ಪತ್ರ ಆಫೀಸಿಯೋ)

ಚಾಲೂ ಖಾತೆಗಳು— ಕಿಂತಾ ಗಳಿಂದ ತೆಗೆಯಬಹುದು ಬಡ್ಡಿ ದರ ೧೦೦ಕ್ಕೆ ವರ್ಷಕ್ಕೆ ೩ಪ್ರಮಾಣ.

ಸೇವಿಂಗ್ಸ ಬ್ಯಾಂಕ— ... ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ...

ಮುದ್ದತಿ ಠೇವುಗಳು— ... ಬಡ್ಡಿದರ ... ೧೦೦ಕ್ಕೆ ... ಶಿಂಗಳ ...

ಇತರ ಕಾರ್ಯಗಳು— ... ಸರಕಾರಿ ಪ್ರಾಮಿಸರಿ ನೋಟು, ಷೇರು ... ದಸ್ತಾಐಜು ... ಯೋಗ್ಯ ... ಬ್ಯಾಂಕಿನ ... ಬಹುದು.

...

ಶಾಂತವೀರ ಅಮೃತರಸ.

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳುವದಕ್ಕೆ ಉಪಾಯ

ಕುಟುಂಬಿಕರ ಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ ವಮಿತಾ, ಪಟಕಿ, ಜುಲಾಬು, ... ಹೊಟ್ಟೆಶೂಲೆ, ಅತಿಸಾರ, ಸಂಗ್ರಹಣಿ, ಹಾಗೂ ಅಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯುತ್ತಮ ಅತ್ಯಂತ ಖಾತ್ರಿಯಾದ ಔಷಧವು. ಊರಲ್ಲಿ ಕಾಲರಾ ಬೇನೆಯು ಸುರುವಾದಕೂಡಲೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹಿಸಬೇಕು ... ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು. ಬಾಟ್ಲಿ ೧ಕ್ಕೆ ಬೆಲೆ ೦-೮-೦ ರೂ.

ಕಾಲರಾಪಿಲ್ಸ— ... ೦-೧೨-೦ ರೂ. ೧೦ಕ್ಕೆ ... ರೂ. ಟಪಾಲು ಖರ್ಚ ಬೇರೆ.

ಕೆಮ್ಮರೋಗದ ಮಿಕ್ಸ— ಬಾಟ್ಲಿ ಒಂದಕ್ಕೆ ೦—...—೦ ರೂ, ಟಪಾಲು ಖರ್ಚ ಬೇರೆ.

ಪ್ಲೇಗ ಪ್ರತಿಬಂಧಕಗುಳಿಗೆ— ... ೦-೬-೦ ರೂ. ೧೦೦ಕ್ಕೆ ... ರೂ. ಟಪಾಲು ಖರ್ಚ ಬೇರೆ.

ಪತ್ತೆ:- ಡಾ. ಎಸ್. ಆರ್. ಕಿತ್ತೂರ. V. D.

ಶಿವಾನಿವಾಸ— ಶಾಂತವೀರ, ಪಶುಸಂಜೀವಿನಿ ಔಷಧ ... ಧಾರವಾಡ. ಧಾರವಾಡ.

ನೋಟೀಸಿನ ದರಗಳು.

ಇಂಗಲೀಷ ಅಥವಾ ಕನ್ನಡ ... ಒಂದೇ ರೂಪಾಯಿ; ಮುಂದೆ ... ಇದೇ ದರ ... ಕನ್ನಡದಲ್ಲಿ ಹಾಕುವದಿದ್ದರೆ ... ದರ ... ಕೊಡುವವರು ... ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ

ನೋಟೀಸು

ಕೆಳಗೆ ಸಹಿ ಮಾಡಿದ ಗಣಪತರಾವ ಎಸ್. ಮುದಿಮಾನ ಇವರನ್ನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದ ಬ್ರಾಂಚ ಆಫೀಸ ಹುಬ್ಬಳ್ಳಿಯ ದಲಾಲರನ್ನಾಗಿ ನೇಮಿಸಿರುವದೆ. ಆದಕಾರಣ ಬ್ಯಾಂಕಿನ ಸಂಬಂಧ ಕೆಲಸಗಳ ಸಲುವಾಗಿ ... ಬೇಕಾದಲ್ಲಿ ಅವರನ್ನು ಕೇಳಿಕೊಂಡಲ್ಲಿ, ಅವರು ಬೇಕಾದ ಸವಲತ್ತುಗಳನ್ನು ಕೊಡುವಲ್ಲಿಯೂ ಮತ್ತು ... ತಿಳಿಸುವಲ್ಲಿಯೂ ಸಮರ್ಥರಿರುವ ...

ತಾ:- ೨೭-೪-೧೯೩೩

ಪತ್ತೆ ಗಣಪತರಾವ ಎಸ್. ಮುದಿಮಾನ, ಮುಕ್ಕಾಂ ... ಮುದಿಮಾನ ಸನ್ಸ ಹುಬ್ಬಳ್ಳಿ

ಈ ಪತ್ರವನ್ನು ನಾರಾಯಣ ಬಾಳಾಜಿ ... ಇವರು ತಮ್ಮ ... ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ಸಿಕ್ಕ ಪತ್ರ

ಬೆಲೆ ೬ ಪೈ.

ವರ್ಷ ೬) ಧಾರವಾಡ, ಶನಿವಾರ ತಾರೀಖು ೭ ನೇ ಅಕ್ಟೋಬರ ೧೯೩೨. (ಸಂಚಿಕೆ ೩೦೩

— ಶ್ರೀ. ಗೋಪಾಳಕೃಷ್ಣ ಪ್ರಸನ್ನ —

ಶ್ರೀ. ಗೋಪಾಳ ಸಂಗೀತ ನಾಟಕ ಮಂಡಳಿ.

ಧಾರವಾಡದಲ್ಲಿ ರಾ. ಗೋಪಾಲಗಿರಿಯವರ

ಅನ್ನಪೂರ್ಣಾ ಥಿಯೇಟರಿನಲ್ಲಿ

ಶನಿವಾರ ತಾರೀಖು ೭-೧೦ ೩೨ನೇ ರಾತ್ರಿ ೧೦ ಘಂಟೆಗೆ ಎಗೆ

ವಿಕಟಪ್ರ್ಯಾಲಾ

ಪ್ರಯೋಗವನ್ನು ಮಾಡಿ ತೋರಿಸುವರು. ವಿಶೇಷ ಮಾಹಿತಿ ಹಸ್ತಪತ್ರಿಕೆಯಲ್ಲಿ

ವ್ಯ. ಎಸ್. ಸೋನಿ.

ಶ್ರೀ, ಗೋ, ಸಂ, ನಾ, ಮಂ,

ಚಂದ್ರೋದಯ ಪ್ರೆಸ್ ಬುಕ್ ಡಿಪೋ

ಧಾರವಾಡ,

[ಹೊನ್ನಾಪುರದ ಕೃತ ಪುಸ್ತಕಗಳು)

೧ ನೀತಿ ಮಂಜರಿ (ಗದ್ಯ ೪ ನೇ ಆವೃತ್ತಿ)		ಬೆಲೆ ೧೦ ಆಣೆ
೨ ಬಾಲಭಾರತ (ಸಚಿತ್ರ ೩ ನೇ ಆವೃತ್ತಿ)	"	ಬೆಲೆ ೧೦ ಆಣೆ
೩ ಬಾಲರಾಮಾಯಣ (ಸಚಿತ್ರ ೩ ನೇ ಆವೃತ್ತಿ)	"	ಬೆಲೆ ೧೦ ಆಣೆ
೪ ಶ್ರೀರಾಮದಾಸ ಚರಿತ್ರ (೨ ನೇ ಆವೃತ್ತಿ)	"	ಬೆಲೆ ೧೦ ಆಣೆ
ಪ್ರತಿಗಳು ಕೆಲವೇ ಸ್ವಲ್ಪ ಉಳಿದಿವೆ.		
೫ ಅಸ್ಪೃಶ್ಯ ಪ್ರೇಮ [ಐತಿಹಾಸಿಕ ಕಾದಂಬರಿ]	"	ಬೆಲೆ ೧೦ ಆಣೆ
೬ ತ್ರಿಭುವನ ನಾಟಕ [ಶೇಕ್ಸಪಿಯರನ ನಾಟಕದ ರೂಪಾಂತರ]	"	ಬೆಲೆ [illegible] ಆಣೆ
೭ [illegible] [ಸಟೀಕ ೩ ನೇ ಆವೃತ್ತಿ		ಬೆಲೆ ೪ ಆಣೆ
		ಸಿದ್ಧವಾಗುತ್ತಿದೆ
೮ ಕೆಂಡವಾಡಿ [illegible] [ಸಟೀಕ ೧ ನೇ ಆವೃತ್ತಿ]	"	ಬೆಲೆ ೪ ಆಣೆ
೯ ವೀರಶೈವ ಸತ್ಕ್ರಿಯಾ ಪೂಜಾ ವಿಧಿ	"	ಬೆಲೆ ೨ ಆಣೆ
೧೦ ಬಾಲಬೋಧ [ಮುದ್ರಣದಲ್ಲಿರುವದು]	"	ಬೆಲೆ ೮ ಆಣೆ

ಶಾಲಾ [illegible] ಕೊಳ್ಳುವವರಿಗೆ ಕಮಿಶನ್ ಕೊಡುವೆವು.

ಮ್ಯಾನೇಜರ, ಚಂದ್ರೋದಯ ಪ್ರೆಸ.
ಧಾರವಾಡ

ಇಂಗ್ಲಿಷ ಸರಕಾರ ಏನು ದೊರೆತಂತೆ ಮದ್ಯ [illegible] ಗಂಡಿನ ಸಹಾಯದಿಂದ [illegible] ಪಾಕಿಸ್ತಾನ ಮಾಡುವ [illegible] ಆಗುವದಲ್ಲಿ [illegible] ಸಂಪಾದಿಸಿದೆಂದು ಲಂಡನ ಟಾಯಿಮ್ಸ್ ಪತ್ರಿಕೆಯ [illegible] ಸಾಲು ಬಂದಿದೆ. ಇದು ಸಿಂಬಿಗೆಟ್ಟಸುದ್ದಿಯೋ ಸೈ!!

— —

ತಪ್ಪುತಿದ್ದುವಿಕೆ- ೩೦-೧೦-೩೨ ನೇ ಸಂಚಿಕೆಯ ೧೫ನೇ ಪುಟದಲ್ಲಿ ಶಾಂತಿ ಎಂಬ ಹೆಸರಿನ ಆಕಳ ಮುಂದಿನ ಶತಾಕೋಷ್ಟಕದಲ್ಲಿಯ ಸಂಗತಿಯು ರೇಣುಕಾ ಆಕಳಿಗೆ ಸಂಬಂಧಿಸಿದ್ದಾಗಿ ತಿಳಿಯಬೇಕು.

ಮ್ಯಾ. ವಿ. ಧಾ.

ಅಚ್ಚುಕೂಟದವರಿಗೆ ಅತ್ಯುತ್ತಮ ಸಂಧಿ.

——(೦)——

ಮಹಾಶಯರೆ! ಈ ಕೆಳಗೆ ಬರೆದ ವಿಳಾಸಕ್ಕೆ ಬರೆದುಕೊಂಡಲ್ಲಿ ಪ್ರಿಂಟಿಂಗ ಮಶಿನ್ ಪ್ರೆಸ್ [illegible] ಮೊದಲಾದ ಅಚ್ಚುಕೂಟದ ಎಲ್ಲ ಅವಶ್ಯಕ ಸಾಹಿತ್ಯಗಳನ್ನು ಯೋಗ್ಯಬೆಲೆಗೆ ಕಳಿಸಿ ಕೊಡುವೆವು ಹಾಗೂ ಅಚ್ಚುಹಾಕಿಸತಕ್ಕ ಪುಸ್ತಕಗಳನ್ನಲ್ಲಿ [illegible] ಯಾವಬಗೆಯ ನಮೂನೆಗಳಲ್ಲಿಯೂ ನಮ್ಮ ಕಡೆಗೆ ಕಳಿಸಿಕೊಟ್ಟಲ್ಲಿ ಸುಲಭ ದರದಲ್ಲಿ ಅತ್ಯುತ್ತಮ ಪ್ರಿಂಟನ್ನು ಮಾಡಿಕೊಡುವೆವು. ವಿಶೇಷ ಮಾಹಿತಿಯು ಸಮಕ್ಷಮ ಅಥವಾ ಪತ್ರದ್ವಾರ. ಹೊಸ-ಹಳೆ ಪ್ರೆಸುಗಳನ್ನು ಕೊಳ್ಳುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಪತ್ರ—ರಾಮಚಂದ್ರ ಸಂಭಾಜಿ ಘಾರಗೆ

ಕ ಮೋಹನ ಪಿಲಂಟೆ

ಹೊಸಯಲ್ಲಾಪೂರ ಭಾವನೆ ಧಾರವಾಡ

———

ಕಟ್ಟಿಗೆಯ ಅಕ್ಕಿಯ ಚಂತ್ರಿಯು

ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ೧-೮ ಆಣೆ.

ಪತ್ತೆ- ರಾಮರಾವ ಬಳ್ಳಾರಿ. ಆ್ಯಂಡ ಬ್ರದರ್ಸ

ಕರ್ನಾಟಕ ಪ್ರಿಂಟಿಂಗ ಕಂಪನಿ

ಇನಾಮು ಪುಸ್ತಕ ಸಹ ವಿಜಯ ಪತ್ರದ ವರ್ಗಣೀದರ

ವಿಶ್ಯಪತ್ರಕ್ಕೆ

೧ ತಿಂಗಳಿಗೆ	೧೨—೦—೦ ರೂ
	೭—೦—೦ ರೂ.
	[illegible]—೦—೦ ರೂ.

ವಾರಪತ್ರ

೧ ವರ್ಷಕ್ಕೆ	೬—೧೨—೦ ರೂ.

ಒಂದು ವರ್ಷಕ್ಕಿಂತ ಕಡಿಮೆಯು ಚಂದಾದಾರರಿಗೆ ಇನಾಮಿನ ಪುಸ್ತಕವು ದೊರೆಯದು.

ವಿಶೇಷ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ

ಮ್ಯಾ- ವಿಜಯ. ಧಾರವಾಡ.

ವಿಜಯ.

ಧಾರವಾಡ ತಾ|| ೭-೧೦-೧೯೩೦ನೇ ಇಸ್ವಿ.

ವಚನಪಾಲನ ವಚನದ ಮೇಲೆ ಗದಾಪ್ರಹಾರ !!!

ನಾನ-ಕೋ- ಆಪರೇಶನರ ಮೇಲೆ ಸರಕಾರದ ದಬ್ಬಾಳಿಕೆಯ ಗದಾಪ್ರಹಾರವು ಯಾವಾಗ, ಯಾವ ಸ್ಥಳದಲ್ಲಿ, ಯಾವ ರೀತಿಯಿಂದ ಬೀಳುವದೆಂಬುದು ಹೇಳಲಿಕ್ಕಾಗುವದಿಲ್ಲ. ಅಸಹಕಾರಿಗಳಾದವರು ಬಾಯಿ ಬಿದ್ದರೂ, ಇಲ್ಲದವರಾಗಿ, ಅಧಿಕಾರಸ್ಥರು ಹೇರುವ ಶಿಕ್ಷೆಯನ್ನು ಅನುಭವಿಸುವದಕ್ಕೆ ಸಿದ್ಧರಾಗುವದರಿಂದ, ಕಿಡಿಗೇಡಿಗಳಾದ ಅಧಿಕಾರಸ್ಥರಿಗೆ ಯಾವದೊಂದು ಹಾನಿಯನ್ನು ಮಾಡುವದು ಸಹಜವಾದ ಲೀಲೆಯಾಗುತ್ತದೆ. ಈ ಲೀಲೆಯನ್ನು ಕಣ್ಣಾರೆ ನೋಡುವ ಭಾಗ್ಯವು ಧಾರವಾಡ ಜಿಲ್ಲೆಯವರಿಗೆ ಬಂದಷ್ಟು ಬೇರೆ ಜಿಲ್ಲೆಗಳಿಗೆ ಬರಲಿಲ್ಲ. ಇಲ್ಲಿ ಗೋಳೀಬಾರು, ಲಾಠಿಯ ಹೊಡೆತದಿಂದ ತುರುಂಗಕ್ಕೆ ಹೋದಂಥ ಜನರೊಂದು ಸರವನ್ನು ಮಾಡಿದರೆ- ಈ ಸರವು ಕಾಶಿಯಲ್ಲಿರುವ ಕಾಲಭೈರವನ ರುಂಡಮಾಲೆಗಿಂತ ದೊಡ್ಡದಾದೀತು?

ಒಬ್ಬೇ ತುರುಂಗಕ್ಕೆ ಹೋದ ಜನರ ಆರ್ಥಿಕಹಾನಿಯು ಅಪರಿಮಿತವಾಗಿರುತ್ತದೆಂದರೂ ಸಲ್ಲುವದು. ಪಡಕ-ಹೊರ್ತು ಅವರು ಆ ಯಾತನೆ ಪಟ್ಟಿದ್ದು ಬೇರೆ. ಇವರಲ್ಲಿ ಬೆಳಗಾವಿಯವರಾಗಿ ಧಾರವಾಡ ಜಿಲ್ಲೆಯ ಮೊದಲನೇ ಪರಿಷತ್ತಿನ ಅಧ್ಯಕ್ಷರಾದ ದೇ. ಭ. ಗಂಗಾಧರರಾಯರು ಮಿ. ಪಂಟರ ಸಾಹೇಬರ ಮಹೋಪಕಾರಕ್ಕಾಗಿ ತುರುಂಗವಾಸವನ್ನು ಕಂಡರು. ಮತ್ತು ನಾನ- ಕೋ. ಆಪರೇಶನದ ವ್ರತದಿಂದ ಈ ಮುಂದಾಗಿ ವತನವನ್ನು ಖಾಲಸಾಮಾಡಿಕೊಂಡರು. ಇವರು ಹೇಳಿ ಕೇಳಿ ಅಸಹಕಾರಿಯಾದ್ದರಿಂದ ಸರಕಾರದವರು ಮಾಡಿದ ಶಾಸನದ ವಿರುದ್ಧ ಒಂದು ಶಬ್ದವನ್ನಾದರೂ ಆಡಲಿಲ್ಲ. ಸರಕಾರವು ಇಂದು "ಭೀತಿಯನ್ನು ಕೂಡಿಸಿದರೂ, ಸ್ವರಾಜ್ಯ ದೊರೆತ ಬಳಿಕ ತಮ್ಮ ವತನವು ಫಲದಂತೆ ಮರಳಿ ಬರುವದೆಂದು ಇವರು ಮನನಂಬಿಗೆಯುಳ್ಳವರಾದ್ದರಿಂದ, ಸದ್ಯದಲ್ಲಾಗುವ ಹಾನಿಯನ್ನು ಸಂತೋಷದಿಂದ ಸಹಿಸುತ್ತಿರುವರು.

ಇವರ ತರುವಾಯ ಸರಕಾರದವರು ಕರ್ನಾಟಕದಲ್ಲಿ ಪ್ರಹಾರ ಮಾಡಿ ತೋರಿಸಿದ್ದು ಹಾನಗಲ್ಲ ತಾಲೂಕಿಗೆ ಸೇರಿದ ಕಲ್ಲಾಪುರದ ದೇಸಾಯಿಯವರ ಶ್ರೀಮಂತ ನರಸಿಂಗರಾವ ದೇಸಾಯಿಯವರು. ನಾನ-ಕೋ-ಆಪರೇಟರರಿದ್ದೇವೆಂದು ಇವರೂ ಜಾಹೀರ ಮಾಡಿಲ್ಲ. ಅಥವಾ ಸರಕಾರದ ಅಪ್ರೀತಿ ಮತ್ತು ಅವಿಶ್ವಾಸವನ್ನು ಸಂಪಾದಿಸುವಂಥ ಯಾವ ಕೃತ್ಯವನ್ನೂ ಮಾಡಿಲ್ಲ. ಅಂಥದೇನಾದರೂ ಮಾಡಿದ್ದರೆ- ಅದನ್ನು ಪ್ರಕಾಶಕ್ಕೆ ತಾರದಿರೋರಿಸೆಂದು ಇವರು ಸರಕಾರಕ್ಕೆ ಪ್ರಶ್ನೆಮಾಡಿರುತ್ತಾರೆ. ಸರಕಾರದವರು ಇವರ ತಪ್ಪನ್ನು ಇವರ ಉಡಿಯೊಳಗೆ ಹಾಕದೆ, ಕೇವಲ ಕೈ ಕೆಳಗಿನ ಅಧಿಕಾರಸ್ಥರ ಕಲುಷಿತವಾದ ಮನಸ್ಸಿನಿಂದಾದ ರಿಪೋರ್ಟಿನ ಮೇಲಿಂದ ಇವರ ವತನವನ್ನು ರೈತವಾರಿಯಲ್ಲಿ ಸೇರಿಸಿದ್ದು ನ್ಯಾಯವಾಯಿತೆಂದು ನಾವೆಂದೂ ಹೇಳಲಾರೆವು. ಕಾರಣ ನ್ಯಾಯಾನ್ಯಾಯ ದೃಷ್ಟಿಯಿಂದ ಈ ವಿಷಯ ವಿಚಾರ ಮಾಡತೊಡಗಿದ್ದೇವೆ.

ಶ್ರೀಮಂತ ನರಸಿಂಗರಾಯರು ತಮ್ಮಿಂದಾದಷ್ಟು ಪ್ರಜೆಗಳ ಸೇವೆಯನ್ನು ಮಾಡಬೇಕೆಂದು ಕಾಂಗ್ರೆಸ ಕಮಿಟಿಯ ಮೆಂಬರರಾದರು. ಜನರು ಒಮ್ಮೆ ಇವರನ್ನು ಅಧ್ಯಕ್ಷರಾಗಿ ಆರಿಸಿದರು. ಕರಕುಡಿಯುವದರಿಂದ ಬಡ ಜನರು ಮನಸಾರೆ ಕಳಕೊಳ್ಳುವದನ್ನು ಕಂಡು, ಅಫೀಮ್ಮಿನಿಂದಾಗುವ ಹಾನಿಯನ್ನು ಕುರಿತು ತಮ್ಮ ತಾಲೂಕಿನಲ್ಲಿ ಹಲವು ಸ್ಥಳಗಳಲ್ಲಿ ಉಪದೇಶರೂಪದಿಂದ ವ್ಯಾಖ್ಯಾನಕೊಟ್ಟರು. ಇದೇ ಪ್ರಕಾರ ರೈತರು ಬಿಟ್ಟೀ ಹೋಗಿ, ತಾವು ಸುಗ್ಗಿ ದಗಳನ್ನು ಸುಗ್ಗ ಮಾಡಿಕೊಳ್ಳಬಾರದೆಂದು ವ್ಯಾಖ್ಯಾನ ಕೊಟ್ಟರು. ಇವು ಸರಕಾರದ ವಿರುದ್ಧ ಕೃತ್ಯಗಳಾದವು. ಮತ್ತು ಮಿ. ಪೆಂಟರ ಸಾಹೇಬರು ಇವರ ಹೆಸರಿಗೆ ಒಂದು ನೋಟೀಸು ತೆಗೆದು ನಿಮ್ಮ ವತನವನ್ನು ಈ ಕೆಳಗಿನ ಕಾರಣಗಳಿಂದ ಯಾಕೆ ಖಾಲಸಾ ಮಾಡಬಾರದೆಂದು ಕೇಳಿದರು.

೧ ನೀವು ತಾಲೂಕ ಕಾಂಗ್ರೆಸ ಕಮಿಟಿಯ ಮೆಂಬರಿರುತ್ತೀರಿ.

೨ ನೀವು ವಿಲಾಯತಿ ಕಮಿಟಿಯ ಮೆಂಬರರಿದ್ದು ಅದರ ಪ್ರಚಾರಕ್ಕಾಗಿ ಅಡ್ಡಾಡುತ್ತೀರಿ.

೩ ನೀವು ನಾನ-ಕೋ ಆಪರೇಶನ ಮಾಡುತ್ತಾ ಹಾನಗಲ ತಾಲೂಕಿನಲ್ಲಿ ಮತ್ತು ಬೇರೆ ಕಡೆಗೆ ತಿರುಗುತ್ತಿದ್ದು, ಅದರಿಂದ ಸರಕಾರದ ವಿರುದ್ಧ ಅಪ್ರೀತಿ ಹುಟ್ಟುವಂಥ ಭಾಷಣ ಮಾಡುತ್ತೀರಿ.

೪ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ನಿಮ್ಮ ಜವಾಬವನ್ನು ತಿಳಿಸಿರಿ. ಇಲ್ಲವಾದರೆ- ವತನ ಖಾಲಸಾ ಮಾಡಲಿಕ್ಕೆ ಬರೆಯುವೆವು.

ಈ ನೋಟೀಸು ಮುಟ್ಟಿದ ಬಳಿಕ ಶ್ರೀಮಂತ ದೇಸಾಯರು "ನೋಟೀಸಿನಲ್ಲಿ ಯಾವ ಊರಲ್ಲಿ ಯಾವ ಪ್ರಕಾರದ ಭಾಷಣ ಮಾಡಿದೆಂಬ ಉಲ್ಲೇಖವಿಲ್ಲದ್ದರಿಂದ, ಅದನ್ನು ತಿಳಿಸಬೇಕೆಂಬುದಾಗಿ ಮಿ. ಕಲೆಕ್ಟರ ಸಾಹೇಬರಿಗೆ ಸ್ವತಃ ಅರ್ಜಿಯಿಂದಲೂ, ವಕೀಲ ಮುಖಾಂತರವಾಗಿಯೂ ತಿಳಕೊಳ್ಳುವ ಪ್ರಯತ್ನ ಮಾಡಿದರು. ಆದರೆ ಇದರಿಂದೇನೂ ನಿಷ್ಪನ್ನವಾಗಲಿಲ್ಲ. ಮಿ. ಕಲೆಕ್ಟರ ಸಾಹೇಬರು ಉತ್ತರ ಕೊಡದೆ, ಮೌನ ಹಿಡಿದದ್ದನ್ನು ನೋಡಿ, ತಮ್ಮ ಪ್ರಕರಣವು ಸರಕಾರದ ಕಡೆಗೆ ಹೋಗಬೇಕೆಂದು ಭಾವಿಸಿಕೊಂಡು ಇವರು ಪರಭಾರೆ ಸರಕಾರಕ್ಕೆ ಒಂದು ಅರ್ಜಿಯನ್ನು ಮಾಡಿದರು. ಈ ಅರ್ಜಿಯಲ್ಲಿ ಇವರು ಇದ್ದ ಸಂಗತಿಗಳನ್ನು ಯಥಾಸ್ಥಿತವಾಗಿ ಹೇಳಿದ್ದಾರೆ. ಅವೇನಂದರೆ-

೧ ನಾನು ತಾಲೂಕ ಕಾಂಗ್ರೆಸ ಕಮಿಟಿಯ ಪ್ರೆಸಿಡೆಂಟನಿದ್ದದ್ದು ನಿಜ.

೨ ಕೆಲವು ಭಾಷಣಗಳನ್ನು ಮಾಡಿದ್ದು ನಿಜ. ಇವು ಖಾದಿಯನ್ನು ಉಪಯೋಗಿಸಬೇಕು, ಬಿಟ್ಟೀ ಹೋಗಬಾರದು. ಶೆರೆ ಶಿಂದಿ ಕುಡಿಯಬಾರದು. ಎಂಬದಾಗಿರುತ್ತದೆ. ಆದರೆ ರಾಜದ್ರೋಹವಾಗುವಂಥ ಒಂದೂ ಭಾಷಣಮಾಡಿಲ್ಲ.

೩ ಸರಕಾರದ ವಿಷಯಕ್ಕೆ ಅಪ್ರೀತಿಯಾಗುವಂಥ ಯಾವದೊಂದು ಭಾಷಣವ … ಆರೋಪದ ಸಂಬಂಧ ಕೊಟ್ಟರೆ ಅದಕ್ಕೆ ಉತ್ತರಕೊಡಲು ಸಿದ್ಧನಿದ್ದೇನೆ.

ಈ ಅರ್ಜಿಯು ಮುಟ್ಟಿದಬಗ್ಗೆ ಸರಕಾರದಿಂದ ಪಾವತಿ ಮಾತ್ರ ಬಂತು. ಅದರ ಹೊರ್ತು ಕಲೆಕ್ಟರರಂತೆ ಸರಕಾರವೂ ಮೌನವಹಿಡಿಯಿತು. ಮತ್ತು ಕೊನೆಯಲ್ಲಿ ಕಳೆದ ತಿಂಗಳ ೨೭ ನೆಯ ತಾರೀಖಿನ ದಿವಸ ಸರಕಾರದಿಂದ ಕೆಳಗಿನ ಅಭಿಪ್ರಾಯದ ಹುಕುಮವು ಮಿ. ಕಮೀಶನರ ಸಾಹೇಬರ ಮುಖಾಂತರವಾಗಿ ಬಂತು. ಅದರಲ್ಲಿ—

" ಹಾನಗಲ ತಾಲೂಕಿನಲ್ಲಿದ್ದ ನಿಮ್ಮ ಯಾವತ್ತು ದೇಶಗತಿಯ ವತನ ಖಾಲಸಾಮಾಡಿದ್ದು, ನಿಮ್ಮ ಗತಿಯಿಂದ ಭರ ಆಕಾರ ತಕ್ಕೊಳ್ಳತಕ್ಕದ್ದೆಂದು ಸರಕಾರದವರು ಪುಷ್ಕಳ ಕಾಳಜೀಪೂರ್ವಕ ವಿಚಾರಮಾಡಿ ನಿಕಾಲ ಮಾಡಿರುತ್ತಾರೆಂದು "

ಬರೆದಿರುತ್ತದೆ. ಸರಕಾರದವರು ಈ ಹುಕುಮವನ್ನು ಏಕ ಪಕ್ಷೀಯ ವಿಚಾರದಿಂದ ಕೊಟ್ಟಿರುತ್ತಾರೆಂದು ನಾವು ಅನ್ನದೆ ಇರಲಾರೆವು. ಶ್ರೀ. ದೇಸಾಯರು ಯಾವ ಮಾತನ್ನೂ ಬಚ್ಚಿಟ್ಟಿಲ್ಲ. ಇದ್ದ ಸಂಗತಿಯನ್ನು ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ. ಸರಕಾರದ ವಿಷಯಕವಾಗಿ ಅಪ್ರೀತಿಯನ್ನು ಹುಟ್ಟಿಸುವದಾಗಿದ್ದರೆ— ಅವರ ಮೇಲೆ ಆರೋಪ ಹೊರಿಸಿ, ಇತರೋ ನೋಡುವ ಕಾರ್ಯ ಮತ್ತು ಜಯಪ್ರದಾನ ತೋರಿಸಬೇಕಾಗಿತ್ತು. ಸರಕಾರದವರು ದಬ್ಬಾಳಿಕೆಯ ಅನೇಕ ಕಾಯದೆಗಳನ್ನು ರದ್ದು ಮಾಡಿದರು. ಆದರೂ ನಿಶಸ್ತ್ರರ ಜುಲ್ಮವನ್ನು ಮಾಡುತ್ತಿಲ್ಲವೆಂದು ಇದರಿಂದ ಧ್ವನಿತವಾಗುತ್ತದೆ.-

ಶ್ರೀ ದೇಸಾಯರು ರಾಜನಿಷ್ಠರಿರುವದಿಲ್ಲೆಂದು ಸರಕಾರಕ್ಕೆ ಎಂದೂ ಹೇಳಲಿಕ್ಕೆ ಬರಲಾರದು. ಇವರು ಕಾಂಗ್ರೆಸದ ಸಭಾಸದರಿದ್ದಾರೆಂದು ಅಸಹಕಾರಿಗಳೆಂದು ಹೇಳಲಿಕ್ಕಾಗುವದಿಲ್ಲ. ಕಾಂಗ್ರೆಸದ ಅನೇಕ ಜನ ಸಭಾಸದರು ಅಸಹಕಾರಿಯಾಗಿರುವದಿಲ್ಲ. ರಾಜ್ಯಾಂಗಶಾಹಿಯಲ್ಲಿ ನಾತಕ ಬಂಧುಗಳನ್ನು ಸ್ವರಾಜ್ಯದ ಅಭಾವದಲ್ಲಿ ಹದ್ದುಪಾರ ಮಾಡಿದಂತೆ. ಪ್ರತ್ಯೇಕದಲ್ಲಿ ಮನ ಖಾಲಸಾದ ಪ್ರಕರಣವಾಗುತ್ತದೆಂದು ಹೇಳಬಹುದು. ಸರಕಾರದ ಗುನ್ನೆಯನ್ನು ಮಾಡಿದ್ದರೆ ಸರಕಾರವು ತಮ್ಮ ರೀತಿ ಖಟ್ಲೆಯನ್ನು ಹಾಕಿ, ಕೋರ್ಟಿನ ಮುಖಾಂತರ ಆರೋಪ ಹೊರಿಸಬೇಕೆಂದು ಇವರು ಇಂದಿಗೂ ಬೇಡುತ್ತಾರೆ. ಈ ಪ್ರಕಾರ ಸರಕಾರಕ್ಕೆ ತಿಳಿಸುವದೇ ನಾ. ಕಾ. ಉಪದೇಶವಾಗುವದಿಲ್ಲ. ಅಂದಮೇಲೆ ಇವರ ಮೇಲೆ ನಾ. ಕಾ. ಉಪದೇಶನದ ಆರೋಪ ಯಾಕೆ?

ಧಾರವಾಡ- ಬೆಳಗಾವಿ ಮತ್ತು ವಿಜಾಪೂರ ಜಿಲ್ಲೆಯಲ್ಲಿ ವತನದಾರರ ಇನಾಮು ಭೂಮಿಯ ಕ್ಷೇತ್ರವು ಎಂಟರಲ್ಲಿ ಒಂದು ಭಾಗದಷ್ಟು ಇರುತ್ತದೆ. ಈ ವತನವನ್ನು ಇವರು ವಿಜಾಪೂರದ ಆದಿಲಶಾಹಿಯಿಂದ ದೊರಕಿಸಿದ್ದಿರುತ್ತದೆ. ಬ್ರಿಟಿಶ ಸರಕಾರದವರು ಇನಾಮು ಕಮೀಶನದ ಮೂಲಕ ಈ ವತನಗಳನ್ನು ಕಾಯಮ ಮಾಡಿರುವರೆಂಬುದೊಂದೇ ಉಪಕಾರ! ಆದಿಲಶಾಹಿ ಮತ್ತು ಪೇಶ್ವಾಯಿಯಲ್ಲಿ ಇವರಿಗಿದ್ದಂಥ ಯಾವ ಅಧಿಕಾರವೂ ಸದ್ಯದಲ್ಲಿರುವದಿಲ್ಲ. ಏಕ್ರಾಂತಿಯ ವೇಳೆಯಲ್ಲಿ ತಮಗೆ ಯೋಗ್ಯವೆಂದು ಕಂಡ ಕರ್ತವ್ಯಕರ್ಮ ಮಾಡಿದರೆ ಅವರ ಮೇಲೆ ಗದಾಪ್ರಹಾರವಾಗುವದು ಅತ್ಯಂತ ದುಃಖದ ಮಾತೇ ಸರಿ. ಶ್ರೀ. ದೇಸಾಯರೊಬ್ಬರಿಗೆ ಶಾಸನ ಮಾಡುವದರಿಂದ, ಉಳಿದವರು ಮುಗದಯ್ಯರಾಗುವರೆಂದು ಸರಕಾರದ ಗ್ರಹಿಕೆಯಾಗಿದ್ದರೆ ಅದು ಪೂರಾ ತಪ್ಪು. ಪ್ರತಿಯೊಬ್ಬನಲ್ಲಿ ದೇಶಾಭಿಮಾನವು ಜಾಗೃತವಾಗಿದ್ದು, ಆತನು ತನಗೆ ತೋರಿದ ರೀತಿಯಲ್ಲಿ ದೇಶಸೇವೆಯನ್ನು ಮಾಡೇ ಮಾಡುವನು.

ಶ್ರೀಮಂತ ದೇಸಾಯರು ತಮ್ಮ ವತನ ಹೋದಬಗ್ಗೆ ಎಷ್ಟೂ ನಿರಾಶೆಗೊಳ್ಳಲಾರರೆಂದು ನಾವು ತಿಳಿಯುತ್ತೇವೆ. ಕೆಲವುಟ್ಟಿಗಾದರೂ ದೇಶಸೇವೆಯನ್ನು ಮಾಡಬೇಕೆಂದು ಇವರು ಹಂಬಲಿಸುತ್ತಿದ್ದು, ವತನದಾರರೆಂಬ ಆಗಾಗ್ಗೆ ಕಷ್ಟದ ಸುಳ್ಳನ್ನು ಸರಕಾರದವರು ತಾವಾಗಿ ಕಿತ್ತುಹಾಕಿದ್ದರಿಂದ, ಇವರಿಗೆ ಈಗ ಸಂಪೂರ್ಣ ಸ್ವಾತಂತ್ರ್ಯ ದೊರೆತಂತಾಯಿತು. ಮತ್ತು ಈ ಸ್ವಾತಂತ್ರ್ಯದ ಸದುಪಯೋಗ ಮಾಡುವಂಥ ಪರಿಸ್ಥಿತಿಯು ತಾನಾಗಿ ಬಂದು, ಇವರೊಬ್ಬರು ಹೊಸದ ಸೈನ್ಯದ ಬಗ್ಗೆ ನಾವು ಮನಃಪೂರ್ವಕವಾಗಿ, ಇವರ ಅಭಿನಂದನಮಾಡುತ್ತೇವೆ.

ಸ್ವದೇಶಿ ಬಟ್ಟೆಗಳು

ಸ್ವದೇಶಿ ಕ್ಲಾಥ್ ಅಂಡ್ ಹೋಸಿಯರಿ ಫ್ಯಾಕ್ಟರಿ

ನಮ್ಮಲ್ಲಿ [illegible] ನೂಲು ಮತ್ತು ಉಣ್ಣೆ ಮಿಶ್ರಿತವಾದ ಅಂಗಿ, ಹಾಗೂ (ಸೂತಿ ಭಾರಿ) ಬನಿಯನ ಶರ್ಟ ಮತ್ತು ಉಣ್ಣೆಯ [illegible] ಕೆಟ್ಟದಕೆ [illegible] ಪರಸ್ಥಳದವರ ಸೇವೆಯಿಗಾಗಿ ಒಂದು [illegible] ವಿಶಿಷ್ಟ ಸಂಗತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು.

ಮಾಲಕರು: ಸೋಮಪ್ಪ ವಿರುಪಣ್ಣ ರೇಶಟ್ಟಿ, ಧಾರವಾಡ.

ಒಪ್ಪಂದದ ಮಾತು ಎಲ್ಲಿಗೆ ಬಂತು?

ಮುದಿಯಾನಾದಲ್ಲಿ ಇಂಗ್ಲಂಡ, ಇಟಲಿ ಮತ್ತು ಫ್ರಾನ್ಸದ ವಕೀಲರು ಸೇರಿದ್ದಾರೆ. ಅಂಗೋರಾ ಸರಕಾರದ ವಕೀಲನೂ ಹೋಗಿರುವನು. ಗ್ರೀಸದ ವಕೀಲನೇ ಈ ಸ್ಥಳವನ್ನು ಗೊತ್ತುಮಾಡಲಿಕ್ಕೆ ಕಾರಣನಾಗಿರುವನು. ಅದರಿಂದ, ಮಾತುಕತೆಯು ಇನ್ನೂ ತಾರೀಖಿನ ದಿವಸ ಪ್ರಾರಂಭವಾಗಿರುವದು.

ಮಹಾಯುದ್ಧದ ಪೂರ್ವದಲ್ಲಿ ಯುರೋಪದಲ್ಲಿದ್ದನ್ನು ತುರುಕ ರಾಜ್ಯವು ತುರುಕರಿಗೆ ಸೇರಿ ಸಿಗುವದು. ತುರುಕ ಗ್ರೀಕ ಒಪ್ಪಂದದಲ್ಲಿಯೂ ತಮ್ಮ ವಕೀಲನಿರಬೇಕೆಂದು ರಶಿಯವು ಹೇಳಿದರು. ಇದರಲ್ಲಿ ನಿಮ್ಮ ದೇನೂ ಸಂಬಂಧವಿಲ್ಲ. ನಾವು ಮುಂದೆ ಬಗ್ಗೆ ವಿಚಾರ ನಡೆಯುವಾಗ ನಿಮ್ಮನ್ನು ಕರೆಯುವೆವೆಂದು ರಶಿಯರಿಗೆ ಬ್ರಿಟಿಶ ಸರಕಾರದವರು ಉತ್ತರ ಕೊಟ್ಟಿರುತ್ತಾರೆ.

ಕಲಘಟಗಿಯಲ್ಲಿ ದಸರೆಯ ದಿವಸ ಸ್ವರಾಜ್ಯ ಕಮೀಟಿಯವರು ಮೆರವಣಿಗೆ ಹೊರಡಿಸಿದ್ದರು. ಸಾಯಂಕಾಲದಲ್ಲಿ ಉತ್ಸವದಿಂದ ಬನ್ನಿಮುಡಿಯಲಿಕ್ಕೆ ಹೋಗಿದರು. ಅಜ್ಞಜನರು ಈ ವೃಕ್ಷದಲ್ಲಿ ಬಂದಿಗನ್ನು ಒಡೆಯುವರು. ಅವರೆ ಇವುಗಳನ್ನು ವ್ಯವಸ್ಥೆಯಿಂದ ಒಡೆಯತಕ್ಕಂಥ ಅಧಿಕಾರಿಗಳ್ಯಾರೂ ಇರಲಿಲ್ಲ. ಒಬ್ಬ ಹುಡುಗನು ಒಂದು ಬಂಡಿಯ ಗಾಲಿಯಲ್ಲಿ ಬಿದ್ದು ಸತ್ತನು. ಕಾಂಗ್ರೆಸ ಕಮೀಟಿಯವರು ಮುಂದೆ ಹೀಗೆ ಅನಾಹುತವಾಗಬಾರದೆಂದು ವ್ಯವಸ್ಥೆಗೊಳಿಸಬೇಕೆಂದು ಅಲ್ಲಿಂದ ಬಂದ ಪತ್ರದ ಸಾರಾಂಶವಾಗಿರುತ್ತದೆ

ಮುಸಲಮಾನರ ವಿಚಾರಗಳು

ಕಾಂಗ್ರೆಸದ ವೇಳೆಯಲ್ಲಿ ಗಯಾ ಪಟ್ಟಣದಲ್ಲಿ ಕೂಡುವ ಖಿಲಾಫತ ಪರಿಷತ್ತಿಗೆ ಅಂಗೋರಾ, ಕಾನ್ಸ್ಟಾಂಟಿನೋಪಲ್, ಮಿಶ್ರ, ಪ್ಯಾಲೇಸ್ಟೈನ, ಇಜಿಪ್ತ, ಇರಾಣ, ಅಫಗಾಣಿಸ್ಥಾನ ಮುಂತಾದ ಮುಸಲಮಾನ ದೇಶಗಳ ಪ್ರತಿನಿಧಿಗಳನ್ನು ಕರೆಸಬೇಕೆಂತ ಆಮಂತ್ರಣ ಪತ್ರಿಕೆಯನ್ನು ಕಳಿಸಬೇಕೆಂದು ವರ್ಕಿಂಗ ಕಮೀಟಿಯವರು ಆಲೋಚಿಸಿದ್ದಾರೆ.

ತುರ್ಕಸ್ಥಾನದ ವಕೀಲರು ಇಂಗ್ಲಂಡ ಫ್ರಾನ್ಸ ಇಟಲಿ ಮುಂತಾದ ದೇಶಗಳಲ್ಲಿರುತ್ತಾರಷ್ಟೇ; ಇವರು ಅಂಗೋರಾ ಸರಕಾರದ ರಾಯಭಾರಿಗಳಿಗೆ ಖಿಲಾಫತಿಯ ಎಲ್ಲ ಕಾಗದ ಪತ್ರಗಳನ್ನೊಪ್ಪಿಸಿ, ಕಾನ್ಸ್ಟಂಟಿನೋಪಲಕ್ಕೆ ಮರಳಿ ಬರಬೇಕೆಂದು ತುರುಕ ಸರಕಾರದವರು ಅಪ್ಪಣೆ ಮಾಡಿದ್ದಾರೆ.

ಇಂಗ್ಲಂಡದಿಂದ ಹೋದಂಥ ಹಡಗನಡೆಯುವರು ಕಾನ್ಸ್ಟಂಟಿನೋಪಲಿನಲ್ಲಿ ಮೆರವಣಿಗೆ ತೆಗೆದಿದ್ದರು. ಅಲ್ಲಿ ವಾಸವಾಗಿರುವ ಕ್ರಿಶ್ಚನ್ನರು ಮಾತ್ರ ಇವರ ಹರ್ಷದಿಂದ ಆನಂದಘೋಷ ಮಾಡಿದರು.

ಮೇಲಿಂದ ಮೇಲೆ ಕಾನ್ಸ್ಟಂಟಿನೋಪಲವು ಪರಕೀಯರ ಗಂಡಾಂತರಕ್ಕೆ ಸಿಗಬಾರದೆಂದು ರಾಜಧಾನಿಯನ್ನು ಅತಿಯಾನಾಯನಾರದಲ್ಲಿರುವ ಇಸ್ಕಿ ಶಹರಕ್ಕೆ ಸ್ಥಳಾಂತರ ಮಾಡಬೇಕೆಂಬ ವಿಚಾರ ನಡೆದದೆ.

ಕಲಕತ್ತೆಯ ಮುಸಲಮಾನರು ಅಂಗೋರಾ ಸರಕಾರಕ್ಕೆ ಒಂದು ವಿಮಾನವನ್ನು ಕಾಣಿಕೆಯಾಗಿ ಕೊಡಬೇಕೆಂದು ಗೊತ್ತುಮಾಡಿರುತ್ತಾರೆ.

ಬ್ರಿಟಿಶ ಸರಕಾರದ ವಿಷಯವಾಗಿ ಮುಸಲಮಾನರ ರಾಜನಿಷ್ಠೆಯು ಅತ್ಯಂತ ಸೂಕ್ಷ್ಮವಾಗಿದೆ. ಇದನ್ನು ಬಗ್ಗೆ ಪರೀಕ್ಷೆ ಮಾಡಿ, ನೋಡಬೇಕಿದ್ದರೆಂದು ಮಿ. ಮಹಮ್ಮದ ಅಬ್ಬಾಸ ಅಲ್ಲಿ ಬೇಗರವರು ವಿಲಾಯತಿ ಸರಕಾರಕ್ಕೆ ಸೂಚನೆ ಮಾಡಿರುತ್ತಾರೆ.

ರಾಣೇಬೆನ್ನೂರಿನ ಜಿಲ್ಲಾ ಪರಿಷತ್ತಿಗೆ ಅನೇಕ ಜನ ಹರಿಗೇಬರೂ ಮಹಿಳಾ ಸಮಾಜದವರೂ ಪ್ರೇಕ್ಷಕರೂ ಪ್ರಯಾಣಮಾಡಿದ್ದಾರೆ. ಮುಖ್ಯ ಜನರು ಇಪ್ಪತ್ತನ ದಿವಸ ಪ್ರಯಾಣಮಾಡುವರು.

ಧಾರವಾಡ

ನಿನ್ನೆ ಸಾಯಂಕಾಲದಲ್ಲಿ ಒಂದು ದೊಡ್ಡ ಮಳೆ ಬಿತ್ತು.

ವಾಗ್ವಿಲಾಸ ಬುಕ್ ಡಿಪೋ

ಪ್ರಿಯವರೇ ಬೇಗನೆ ವಿ.ಪಿ.ಯಿಂದಾಗ ತರಿಸಿ ಓದಿ ಆನಂದಪಡಿರಿ. ಸರ್ವ ಪುಸ್ತಕಗಳೂ ಸಿಗುವವು.

ಇಗೋ,

	ರೂ ಆ ಪೈ		ರೂ ಆ ಪೈ
ಮುರಾರಿ ಶಿಕ್ಷಕ ಬಸ್ಸಿಕೊಪ್ಪಕೃತ	೧ ೮ ೦	ಮಾನವ ಧರ್ಮ	೦—೧೨—೦
ಮುಸಲಮಾನ ಶಿಕ್ಷಕ ಹುಲಿಕೃತ	೧೨ ೦ ೦	ಬಸವೇಶ್ವರ ನಾಟಕ	೧—೦—೦
ಶ್ರೀ ಸಿದ್ಧರೂಢರ ಸ್ವಾಮಿಗಳ ಕೈವಲ್	೦ ೧೨ ೦	ಕೃಷ್ಣ ಜನನ ನಾಟಕ	೧—೦—೦
ಮಂಜು ಗೋಘೋಷಕಥೆ	೧ ೪ ೦	ತುಕಾರಾಮ ನಾಟಕ	೦—೪—೦
ಪಲಾಹಾರಾಣ ಪ್ರತಾಪಸಿಂಹ	೧ ೬ ೦	ಶ್ರೀ ಧರ್ಮರಹಸ್ಯ ನಾಟಕ	೦—೦ ೦
ಜೋಗಳಪದ	೦ ೯ ೦	ಸಾಗ್ರಸಂಗೀತ ಮದನಮಾಲಿನಿ	೦—೧೨—೦
ಸ್ತ್ರೀ ಗರ್ಭಸ್ಥಿತಿ	೦ ೧೨ ೦		
ದಿವ್ಯ ಸುಂದರಿ ಖುದಿರಾಯ ಕೃತ	೧ ೦ ೦	ಹಿಂದು ವಿನಾಪಿ ವೈದ್ಯ ಯಂತ್ರ ಮಂತ್ರತಂತ್ರ ಸಹಿತ	೦—೮—
ಕಾರಂಟಿ ವಿಚಿತ್ರ ಕಾರಸ್ಥಾನ	೦ ೬ ೦		
ಹಿಂದು ಬಾಳಕಾರಿಯಿದ ಚೆನ್ನ ಮಾನಂದಕೃತ	೬ ೦ ೦	ಸಟೀಕ ವಿಚಾರ ಸಾಗರವೇದಾಂತ	೪—೦ ೦
ಅಶೋಕ ಕಾದಂಬರಿ	೧ ೬ ೦	ಜ್ಞಾನಸಿಂಧು ವಚನವೇದಾಂತ	೪—೦—೦
ಸಚಿತ್ರ್ಯಯನುಶಾಸನ ಪಾವ		ಪಂಚರತ್ನ ನಿಜಗುಣ ಶಿವಯೋಗ ವಿವರ	೨ ೦—೦
ಸ್ವಪ್ನಗಳ ಫಲವಿಚಾರ	೦—೧೨—೦	ಸಿದ್ಧಾಂತಬಿಂದು ಪ್ರಕಾಶ	೦—೮—೦
ಅಡವಿ ಹುಡುಗಿ	೦—೧೨—೦	ಸಟೀಕ ನಿಜಗುಣ ಕೈವಲ್ಯಪದ್ಧತಿ	೦—೪—೦
ವೀರಶೈವಾಚಾರ	೦—೦—೦	ಸಟೀಕ ಸರ್ವಜ್ಞಸ್ವಾಮಿಗಳ ಕೈವಲ್ಯ	೦—೪—೦
ಕಲ್ಪವೃಕ್ಷ ಆದುಬೇಳಿನ ಕೃತ	೦—೮—೦	ಶ್ರೀ ಘನಲಿಂಗಲೀಲೆ	೦—೨—೦
ಪ್ರತ್ಯಕ್ಷಫಲಪಂಚಸಿದ್ಧಿ ಅನುಭವಸಿದಿ	೨—೮—೦	ಗರ್ಭಿಣಿಸುಸಂಗೋಪನ	೦—೧೨ ೦
ಕೋಕಶಾಸ್ತ್ರ ರತಿವಿಲಾಸ	೦—೮—೦	ರಾಮಕೃಷ್ಣ ಪರಮಹಂಸ ಚರಿತ್ರ	೦ ೪—೦
ಸುಖಸಾಮ್ರಾಜ್ಯ	೦—೪—೦	ಲಗ್ನವಿಧಾನ	೦—೪—೦
ಸಂಸಾರದಿಂದ ಸದ್ಗತಿ	೦—೮—೦	ಬಸವಣ್ಣನವರಲೀಲಾ	೦—೩—೦
ಬಸವಭಾನು ಪಾವಟೆ ವಕೀಲ	೦—೦—೦	ಮಂಗಳಾರತಿ ಶಿವಭಜನಿಪದಗಳು	೦—೩—೦
ವಾದ ಪರೀಕ್ಷಾ ಪಾವಟೆ ವಕೀಲ	೦—೮—೦	ಶರೀರ ಮರ್ಮಶಾಸ್ತ್ರವು	೦—೦—೦
ಮುಳಗುಂದಮಹಾಸ್ವಾಮಿಯ ಕೈವಲ್ಯವರ್ಣನ	೦—೪—೦	ಆರೋಗ್ಯ ಜೀವನ ಪರಡೀಕೃತ	೦—೮—೦
ಕಾಮಸೇನು	೦ ೮—೦	ಲಲಿತಲೀಲಾನಾಟಕ ಸಂಗೀತ	೦—೦—೦
ಪ್ರೇಮಸುಂದರ	೦—೮—೦	ಸಂಗೀತ ಸಮಯಸಾರ ಮೈಸೂರು	೦—೧೨ ೦

— ಪತ್ತೆ, ಎ. ಟಿ. ಶಿವನಾಗಪ್ಪ ಪಟ್ಟಸರ ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ.

ಬ್ಯಾಂಕಿಂಗ ಧಂದೆಯ ಸರ್ವಾಂಗಗಳಲ್ಲಿಯೂ ಸಂಪೂರ್ಣವಾದ ಸೇವೆಯು

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

ಹೆಡ್ ಆಫೀಸ—ಸ್ಟೇಶನ್ ರೋಡ ಹುಬ್ಬಳ್ಳಿ. ಶಾಖಾ—ಸೋಮವಾರಪೇಟ ಧಾರವಾಡ

ಡಾಯರೆಕ್ಟರರು.

೧ ಶ್ರೀ. ಬಾಬಾಜಿ ಭೀಮರಾವ ಟಿಕಾರೆ ಮರ್ಚಂಟ ಚೇರಮನ್ ೨ ಶ್ರೀ. ಬಿಂದೂರಾವ ನಾರಾಯಣ ದುಮಾಲೀಕ ದೇಸಾಯಿ ೩ ಡಾ. ಮಾಧವರಾವ ನಾರಾಯಣರಾವ ಕುರಂದವಾಡಕರ ಎಲ್ ಎಮ್. ಎಸ್. ೪ ಶ್ರೀ. ಕೃಷ್ಣರಾವ ವೆಂಕಟರಾವ ಧಂಡಿವಾಡ ಮರ್ಚಂಟ ಹುಬ್ಬಳ್ಳಿ ೫ ಶ್ರೀ. ಶ್ರೀನಿವಾಸರಾವ ರಾಮರಾವ ಮುತಾಲಿಕದೇಸಾಯಿ ಬಿ. ಎ. ಎಲ್. ಎಲ್. ಬಿ. ಹಾಯಕೋರ್ಟ ವಕೀಲ ೬ ಶ್ರೀ. ಶ್ರೀನಿವಾಸ ಭೀಮರಾವ ಕುಲಕರ್ಣಿ ಲ್ಯಾಂಡಲಾರ್ಡ ೭ ಶ್ರೀ. ಮಾಧವ ವ್ಯಾಸರಾವ ದೇಶಪಾಂಡೆ (ಎಲ್ಲ ಆಫೀಶಿಯಲ್)

ಚಾಲೂ ಖಾತೆಗಳು— ೫೦೦ ರೂ. ಗಳಿಂದ ತೆಗೆಯಲ್ಪಡುವವು. ಬಡ್ಡೀ ದರ ೧೦೦ಕ್ಕೆ ವರ್ಷಕ್ಕೆ ೩ರಂತೆ.

ಸೇವಿಂಗ್ಸ ಬ್ಯಾಂಕ—ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. ಬಡ್ಡೀದರ ೧೦೦ಕ್ಕೆ ವರ್ಷಕ್ಕೆ ೪॥ ಯಂತೆ

ಮುದ್ದತಿ ಠೇವುಗಳು— ೫೦ ರೂಪಾಯಿಗಳಿಗೆ ಕಡಿಮೆಯಲ್ಲದ ರಕಮುಗಳು ಸ್ವೀಕರಿಸಲ್ಪಡುವವು. ಬಡ್ಡೀದರ— ೬ ತಿಂಗಳ ಮುದ್ದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೫ರಂತೆ; ೧೨ ತಿಂಗಳ ಮುದತಿ ರಕಮಿಗೆ ೧೦೦ಕ್ಕೆ ವರ್ಷಕ್ಕೆ ೬॥ ಯಂತೆ

ಇತರ ಕಾರ್ಯಗಳು— ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ಖರಿಸಿಕೊಡುವದು- ಸರಕಾರೀ ಪ್ರಾಮಿಸರಿನೋಟ, ವಾರಂಟ, ಚೆಕ್ಕು, ಹುಂಡಿ ಮುಂತಾದವುಗಳನ್ನು ಯೋಗ್ಯ ಕಮೀಶನ್ ತಕ್ಕೊಂಡು ಕೊಡಕೊಳ್ಳುವದರಲ್ಲಿ ಬರುವದು. ಸದರೀ ಬ್ಯಾಂಕಿನ ಶೇರುಗಳು ಬೇಕಾದಲ್ಲಿ ಪ್ರಾಸ್ಪೆಕ್ಟಸ ತರಿಸಿಕೊಳ್ಳಬಹುದು.

ಮುಖ್ಯೋಪಿಸಲ್ಲಿ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು,

ಮೆಸರ್ಸ ದೇಶಪಾಂಡೆ ಆ್ಯಂಡ ಕೋ ಮ್ಯಾನೇಜಿಂಗ ಏಜಂಟ್ಸ

ಕಾಲರಾ ಬೇನೆಯಿಂದ ತಪ್ಪಿಸಿಕೊಳ್ಳತಕ್ಕ ಉಪಾಯ.

ಶಾಂತವೀರ ಅಮೃತರಸ.

ಕೌಟುಂಬಿಕರ ಸಂಗ್ರಹಕ್ಕೆ ಅವಶ್ಯವಾದದ್ದು.

—೦—

ಕಾಲರಾ ಮೋರಿಶಾ, ಪಟಕಿ, ಜುಲಾಬ, ಅಜೀರ್ಣ, ಹೊಟ್ಟೆಶೂಲಿ, ಅತಿಸಾರ, ಸಂಗ್ರಹಣಿ, ಹಾಗೂ ಆಮ್ಲಪಿತ್ತ ಇತ್ಯಾದಿ ವಿಕಾರಗಳ ಮೇಲೆ ಅತ್ಯಂತ ಉಪಯುಕ್ತ ಅತ್ಯಂತ ಖಾತ್ರಿಯಾದ ಔಷಧವು- ಊರಲ್ಲಿ ಕಾಲರಾ ಬೇನೆಯು ಸುರುವಿದ್ದಾಗ್ಗೆ ಈ ಔಷಧವನ್ನು ಅವಶ್ಯವಾಗಿ ಸಂಗ್ರಹವಲ್ಲಟ್ಟು ರಾತ್ರಿಯಲ್ಲಿ ಮಲಗುವಾಗ್ಗೆ ೨-೩ ಹನಿಗಳನ್ನು ಸಕ್ಕರೆಯಲ್ಲಿ ಸೇವಿಸಿದರೆ ಕಾಲರಾ ಬೇನೆಯು ಎಂದೂ ಬರಲಾರದು. ಬಾಟ್ಲಿ ೧ಕ್ಕೆ ಬೆಲೆ ೦—೮—೦ ರೂ,

ಕಾಲರಾಪಿಲ್ಸ— ೨೫ ಗುಳಿಗೆಗೆ ೦—೧೨—೦ ರೂ. ೧೨೦ ಕ್ಕೆ ೩—೮—೦ ರೂ, ಟಪಾಲ ಖರ್ಚು ಬೇರೆ.

ಕ್ಲೋರೋಡೈನ ಮಿಕ್ಶ್ಚರ- ಬಾಟ್ಲಿ ಒಂದಕ್ಕೆ ೦—೦ ರೂ. ಟಪಾಲ ಖರ್ಚು ಬೇರೆ.

ಸ್ಪೆಶಲ್ ಪ್ರಿಸ್ಕ್ರಿಪ್ಷನಗಳಿಗೆ— ೨೫ ಕ್ಕೆ ೨—೦—೦ ರೂ.

...

... V. D.

...

ಧಾರವಾಡ. ...

——

ಸೂಚನೆ.

...

——

ನೋಟೀಸು

ಕೆಳಗೆ ಸಹಿಮಾಡಿದ ಗಣಪತರಾವ ಎಸ್- ಮದಿಮಾನ ಇವರನ್ನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದ ಬ್ರ್ಯಾಂಚ ಆಫೀಸ ಹುಬ್ಬಳ್ಳಿಯ ದಲಾಲನ್ನಾಗಿ ನೇಮಿಸಿದೆ. ಕೃಷಿಕರಿಗೂ ಬ್ಯಾಂಕಿನ ಸಂಬಂಧಿ ಕೆಲಸಗಳ ಸಲುವಾಗಿ ಮಾಹಿತಿಗಳು ಬೇಕಾದಲ್ಲಿ ಅವರನ್ನು ಕೇಳಿಕೊಂಡಲ್ಲಿ ಅವರ ಬೇಕಾದ ಸವಲತ್ತುಗಳನ್ನು ಕೊಡುವಲ್ಲಿಯೂ ಮಾಹಿತಿಯನ್ನು ತಿಳಿಸುವಲ್ಲಿಯೂ ಸಮರ್ಥರಿರುವರು.

ತಾರೀ— ೨೭—೪—೧೯೩೨

ಪತ್ತೆ ಗಣಪತರಾವ ಎಸ್, ಮದಿಮಾನ. ಮತ್ತು ಜಿ. ಎ. ಮದಿಮಾನ ಸನ್ಸ ಹುಬ್ಬಳ್ಳಿ

ಈ ಪತ್ರವನ್ನು ನಾರಾಯಣ ಬಾಳಾಜಿ ಕಂಚಿ ಇವರು ತಮ್ಮ ವಾರ್ತಾಹರ ಪ್ರೇಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ — ವಿಜಯ — ಬೆಲೆ ೭ ಪೈ

ವರ್ಷ ೩) ಧಾರವಾಡ, ರವಿವಾರ ತಾರೀಖು ೪ ನೇ ಅಕ್ಟೋಬರ ೧೯೩೨. ([illegible] ೨೧೪

ಸ್ವದೇಶಿ ಬಟ್ಟೆಗಳು

ಸ್ವದೇಶಿ ಹ್ಯಾಂಡ್ ಲೂಮ ಆ್ಯಂಡ್ ಡಾಯಿಂಗ ಫ್ಯಾಕ್ಟರಿ

ನಮ್ಮಲ್ಲಿ ತಯಾರಾಗುವ [illegible] ಉಣ್ಣೆ [illegible] ([illegible]) [illegible] ಶಿರ ಮತ್ತು ಉಣ್ಣೆಯ [illegible] ದಗಿ ತೆಗೆದುಕೊಳ್ಳುತ್ತೇವೆ. [illegible] ಒಂದು [illegible] ಅಥವಾ ಪತ್ರದ್ವಾರದಿಂದ [illegible]

[illegible] ಧಾರವಾಡ

ಎಜೆಂಟರು ಬೇಕು. ಎಜೆಂಟರು ಬೇಕು.

ಧಾರವಾಡ ಜಿಲ್ಲೆಯಲ್ಲಿ [illegible] ಕಂಪನಿಕೆ [illegible] ಜಲಿಕ್ಕೆ [illegible] ಳಗೆ [illegible]

[illegible] ಎಜೆಂಟರು

[illegible] ಅಡ್ರೆಸ ಹೇಳಿ,

[illegible] ಧಾರವಾಡ.

[illegible] ಬುಕ್ ಡಿಪೋ

[illegible]

[[illegible] ಪುಸ್ತಕಗಳು]

೧ [illegible] ([illegible])		ಬೆಲೆ ೧೦ ಆಣೆ
೨ [illegible] ([illegible] ನೇ [illegible])	,,	ಬೆಲೆ ೧೦ ಆಣೆ
೩ [illegible] ([illegible] ನೇ ಆವೃತ್ತಿ)	,,	ಬೆಲೆ ೧೦ ಆಣೆ
೪ [illegible] ಚರಿತ್ರ ([illegible] ಆವೃತ್ತಿ)	,,	ಬೆಲೆ ೧೦ ಆಣೆ

ಪ್ರತಿಗಳು ತೀರ ಸ್ವಲ್ಪ ಉಳಿದಿವೆ.

೫ [illegible] ಪ್ರೇಮ [ಸಚಿತ್ರ [illegible]]	,,	ಬೆಲೆ ೧೦ ಆಣೆ
೬ [illegible] ನಾಟಕ [ಸೆಕ್ಸ್‌ಪಿಯರನ ನಾಟಕದ ರೂಪಾಂತರ]	,,	ಬೆಲೆ ೧೦ ಆಣೆ
೭ ಗ್ರಾಮ ಫೋ. ಅಕ್ಷ [ಸಟೀಕ ೩ ನೇ ಆವೃತ್ತಿಯ		ಬೆಲೆ ೪ ಆಣೆ
ತೀರುತ್ತ ಬಂದಿರುತ್ತ.		
೮ ಕೋಂಡವಾಡೆ ಅಕ್ಷ [ಸಟೀಕ ೧ ನೇ ಆವೃತ್ತಿ]	,,	ಬೆಲೆ ೪ ಆಣೆ
೯ ವೀರಶೈವ ಸಂಕ್ಷಿಪ್ತ ಶಿವಪೂಜಾ ವಿಧಿ	,,	ಬೆಲೆ ೨ ಆಣೆ
೧೦ ಬಾಲ ಭಾಗವತ [ಮುದ್ರಣದಲ್ಲಿರುವದು]		ಬೆಲೆ ೮ ಆಣೆ

ಹತ್ತು ರೂಪಾಯಿಗಳಿಗಿಂತ ಹೆಚ್ಚಿಗೆ ತೆಗೆದುಕೊಳ್ಳುವವರಿಗೆ ಕಮೀಶನ್ ಕೊಡುವೆವು.

ಮ್ಯಾನೇಜರ ಚಂದ್ರೋದಯ ಪ್ರೆಸ್.

ಬುಕ್ ಡಿಪೋ ಧಾರವಾಡ

ಇನಾಮ ಪುಸ್ತಕ ಸಹ ವಿಜಯ ಪತ್ರದ ವರ್ಗಣೀದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ [illegible]	೭—೦—೦ ರೂ.
[illegible]	೪—೦—೦ ರೂ.

ವಾರಪತ್ರಕ್ಕೆ

೧ ವರ್ಷಕ್ಕೆ	೩—೧೨—೦ ರೂ.

ಒಂದು ವರ್ಷಕ್ಕಿಂತ ಕಡಿಮೆಯ ಚಂದಾ [illegible]

ಅವರಿಗೆ ಇನಾಮಿನ ಪುಸ್ತಕ ದೊರೆಯದು.

ವಿಶೇಷ ಮಾಹಿತಿ ಕೇಳಿಗೆನಿವಿಳಾಸಕ್ಕೆ

ಮ್ಯಾ. ವಿಜಯ. ಧಾರವಾಡ.

ನೋಟೀಸು

ಶ್ರೀ [illegible] ಅಣ್ಣಾ [illegible] ಗಂಗಪ್ಪ [illegible] ಸಾಕಿನ [illegible] ತಾಲೂಕ ಧಾರವಾಡ ಇವರಿಗೆ—

ಈ ನೋಟೀಸಿನ ಮೂಲಕ ನಿಮಗೆ ತಿಳಿಸುವ [illegible] — ನಮ್ಮ ತಂದಿ [illegible] ಅವರ [illegible], ನೀವು ನಾವು, ಉಭಯತರೇ [illegible] ಕಾರಣ, ಅವರು ಸಾಯುವ ಮೊದಲು [illegible] ಮಾಡಿಕೊಳ್ಳಬೇಕೆಂಬ ಇ [illegible] ಧಾರವಾಡ [illegible] [illegible] ಬೇಕೆಂದು, [illegible] ನಮ್ಮ ನಮ್ಮ [illegible], ಉಪಭೋ [illegible] ಸಾಯುವ [illegible] ವಿವರ [illegible] ೧ [illegible] ನವರ [illegible] ಕೊಟ್ಟು ಇಟ್ಟ [illegible] ಪಂಚರ [illegible], ಹೇಳಿ, [illegible] ಉಚಿತ [illegible] [illegible] ನಾನು [illegible] ಅಸ್ತಿ [illegible] ಒಂದು [illegible] [illegible] ಆಸ್ತಿ [illegible] ಇದರ ಮೇಲಿನ [illegible] ಯಾವ [illegible] [illegible] ನಾನು ಬಿಟ್ಟು [illegible] ಮಾಡುವದೂ [illegible] ಈ ಪ್ರಕಾರ ನೀವು ನನ್ನ [illegible] ಹಾಗೂ ಆಸ್ತಿ ನನಗೆ [illegible] ನಿಮ್ಮ ವರ್ತಿಸಿದ ಪಡಾವರ್ತನೆ [illegible] ಈ ನೋಟೀಸ ಮುಟ್ಟಿದ ೮ ದಿವಸದಲ್ಲಿ [illegible] ಕೊಟ್ಟು [illegible] ತೋರಿಸಬೇಕು. [illegible] ಮೇಲಿನ ಪ್ರಕಾರ [illegible] ಬೇಕು [illegible] [illegible] ಸನ ೧೯೩೨ ನೇ [illegible] ಇಸ್ವಿ.

ಈ ಎಲ್ಲ [illegible] ಗುರ್ತು [illegible] ಕೊಡದು [illegible] ಕೊಡಲು [illegible] ಅವೆ.

ವಿಜಯ.

ಧಾರವಾಡ ತಾ|| ೫-೧೦-೧೯೨೪ನೇ ಇಸ್ವಿ.

ಮಹಾತ್ಮರ ವರ್ಧಂತಿ ಮತ್ತು ಅದರ ಉದ್ದೇಶ

ಕಳೆದ ೨ನೇ ತಾರೀಖಿನ ದಿವಸ ಮಹಾತ್ಮರ ವರ್ಧಂತ್ಯುತ್ಸವವು ಹಿಂದುಸ್ಥಾನದ ತುಂಬ ಜರುಗಿತು. ಮುಂಬಯಿ, ಕಲಕತ್ತೆ, ಧಿಲ್ಲಿಯಂಥ ದೊಡ್ಡ ಪಟ್ಟಣಗಳನ್ನೊಳಗೊಂಡು, ಸಾಧಾರಣ ಪ್ರತಿಯೊಂದು ಹಳ್ಳಿಗಳಲ್ಲಿಯೂ ಉತ್ಸವಮಾಡಲ್ಪಟ್ಟಿತು. ಅನೇಕ ಊರುಗಳಲ್ಲಿ ಸ್ತ್ರೀಯರು ಖಾದಿಯನ್ನು ಉಟ್ಟು ಖಾದಿಯನ್ನು ತೊಟ್ಟು, ಖಾದಿಯನ್ನು ಬೀದಿ ಬೀದಿಗಳಲ್ಲಿ ಮಾರಿದರು, ತಮ್ಮದೇ ಸಭೆ ಮಾಡಿ ಮಹಾತ್ಮರಿಗೆ ದೇವರು ದೀರ್ಘಾಯುಷ್ಯವನ್ನು ಕೊಡಲೆಂದು ಪ್ರಾರ್ಥಿಸಿದರು. ಉತ್ಸವದಲ್ಲಿ ವಿಶೇಷ ಪ್ರಕಾರವಾಗಿರುತ್ತದೆ. ಮುಂಬಯಿ, ಪುಣೆಯ ಸ್ತ್ರೀಯರು ದೊಡ್ಡ ಮೆರವಣಿಗೆಯಿಂದ ಮಹಾತ್ಮರ ದರ್ಶನಕ್ಕಾಗಿ ಯರವಡೆಯ ಪವಿತ್ರಾಶ್ರಮಕ್ಕೆ ಹೋದರು ಆದರೆ ತುರಂಗದ ಅಧಿಕಾರಿಗಳು ಇವರಿಗೆ ಮಹಾತ್ಮರ ದರ್ಶನ ಮಾಡಗೊಡಲಿಲ್ಲ. ಆಗ ಇವರು ಜೇಲಿನ ಹೊರಗೆ ಮಹಾತ್ಮರ ಭಾವಚಿತ್ರವಿಟ್ಟು, ಅದನ್ನು ಪೂಜಿಸಿ ರಾಷ್ಟ್ರಗೀತವನ್ನು ಹಾಡಿದರು. ಸ್ತ್ರೀಯರು ಇಷ್ಟರಿಂದ ಸಮಾಧಾನ ಹೊಂದದೆ, ಸತ್ಯಾಗ್ರಹ ಮಾಡಬೇಕಾಗಿತ್ತೆಂದು ಬಹು ಜನರ ಅಭಿಪ್ರಾಯವಾಗಿರುತ್ತದೆ.

ತುರಂಗವಾಸಿಯಾದರೂ ಈ ಉತ್ಸವಗಳಿಂದ ಮಹಾತ್ಮರಲ್ಲಿ ಹಿಂದವಾಸಿಗಳ ಶ್ರದ್ಧೆಯು ಎಷ್ಟಿರುತ್ತದೆಂಬದು ವ್ಯಕ್ತವಾಗುತ್ತದೆ. ಇದನ್ನು ಸರಕಾರದವರು ಅರಿಯದೆಂಬಂತಿಲ್ಲ. ದೇಶದಲ್ಲಿ ಶಾಂತತೆಯುಂಟಾದರೆ ಸರಕಾರವು ಇವರನ್ನು ಶಿಕ್ಷೆ ಮುಗಿಯುವದರೊಳಗಾಗಿ ಬೇಕಾದಾಗ ಬಿಡಬಹುದೆಂದು ಶಿಕ್ಷೆ ಹೇಳಿದ ಜಡ್ಜ ಸಾಹೇಬರು ಭರತವಾಕ್ಯ ಹೇಳಿದ್ದಾರೆ. ಪ್ರಕೃತದಲ್ಲಿ ನಡೆದ ಚಳವಳಿಯಿಂದ ಈ ಬಿಡುಗಡೆಯು ಶಕ್ಯವಾದುದಲ್ಲ. ಮಹಾತ್ಮರು ತುರಂಗಕ್ಕೆ ಹೋದನಂತರ ಅಸಹಾಯಯೋಗವು ಶಾಂತವಾಗಿದೆ, ಸಾವಿರಾರು ಜನರು ಇವರನ್ನು ಹಿಂಬಾಲಿಸಿದರು. ತುರಂಗದ ದಾರಿಯು ಇನ್ನೂ ಕಟ್ಟಾಗಿರುವದಿಲ್ಲ. ಈ ಕಾರಣವಾಗಿ ಮಹಾತ್ಮರು ಹಿಂದುಸ್ಥಾನದ ಭೂಮಿಯಲ್ಲಿ ಬಿತ್ತಿದ ಬೀಜವು [illegible] ಹೊಂದ ಮರವಾಗುವ ತನಕ ಹೊರ್ಗು, ಕವಡುಪಟ್ಟಿ ಅಥವಾ ಪೋಟಮುರವಾಗುವ ಚಿಹ್ನೆಯನ್ನು ಹಡಿಸುವಂತಿರುವದಿಲ್ಲ.

ಮಹಾತ್ಮರು ಬಾರಡೋಲಿಯಲ್ಲಿ ಹಿಂದಕ್ಕೆ ಸರಿಯದಿದ್ದರೆ ಅವರಿಗೆ ತುರಂಗವಾಸವು ಲಭಿಸುತ್ತಿದ್ದಿಲ್ಲ. ಇವರ ಅಪ್ಪಣೆಯಂತೆ ಸಾವಿರಾರು ಜನರು ಅಥವಾ ಲಕ್ಷಾವಧಿ ಜನರು ತುರಂಗ ತುಂಬುತ್ತಿದ್ದರು ಇಷ್ಟು ಜನರನ್ನು ತುರಂಗದಲ್ಲಿ ಹಿಡಿಯುವದು ಬಿಳೇಆನೆಯನ್ನು ಕಟ್ಟಿದಂತಾಗುತ್ತಿತ್ತು. ಆದರೆ ಆ ಸಮಯವು ಹೊರಟು ಹೋದ್ದಕ್ಕೆ ಲಕ್ಷಾವಧಿ ಜನರು ದಣಿಸುತ್ತಿರುವರು. ಸ್ವರಾಜ್ಯದ ದೆಸೆಯಿಂದ ತುರಂಗಕ್ಕೆ ಹೋದವರು. ಹೋಗಿಬಿಟ್ಟರು. ಆದರ ಮಾರ್ಗ ನಿರ್ದಿಷ್ಟ ಸಸಿದ್ಧವರಿಗೆ ಗಳಿಗೆ ತಪ್ಪಿದರೆ ೧೨ ವರ್ಷವೆಂದಂತಾಯಿತೆಂಬ [illegible] ವನ್ನು ಮಾಡಿದಷ್ಟು ನಿರಾಶೆಯನ್ನು ಇನ್ನಾವ ರಣವೂ ಮಾಡಲಿಲ್ಲ.

ಸ್ವರಾಜ್ಯದ ಓಬಿಡಿಯನ್ಸ ಕಮೀಟಿಯು ತಾನು ತೆಗೆದುಕೊಂಡ ಸಾಕ್ಷಿಯ ವಿಚಾರವನ್ನು ನವ್ಹಂಬರ ತಿಂಗಳ ೨ನೇ ತಾರೀಖಿನ ದಿವಸ ಪ್ರಕಟಿಸುವದೆಂದು ಗೊತ್ತಾಗಿದೆ. ಈ ಪೂರ್ವದಲ್ಲಿ ಎರಡು ಸ್ಥಳಗಳಲ್ಲಿ ಪ್ರಾಂತಿಕ ಸಭೆಗಳಾದವು. ಪಂಜಾಬಕ್ಕೆ ಸೇರಿದ ಸಿಯಾಲಕೋಟದಲ್ಲಿ ಕೂಡಿದ ಸಭೆಯಲ್ಲಿ ಕಾಯದೆಭಂಗ ಮಾಡಬೇಕೆಂಬ ಠರಾವು ಪ್ರಚಂಡ ಬಹುಮತದಿಂದ ಪಾಸಾಯಿತು. ಹಕೀಮ ಅಜಮಲಖಾನ ಮತ್ತು ಪಂಡಿತ ಮಾಲವೀಯರವರು ಅಲ್ಲಿಂದ ಅಮೃತಸರಕ್ಕೆ ಹೋದ ಬಳಿಕ ಈ ಠರಾವು ಪಾಸಾಯಿತೆಂದು ಒಂದು ಸುದ್ದಿ ಇಟ್ಟಿರುತ್ತಾರೆ. ಈ ಸಭೆಯ ಮುಂಚೆಯೇ ಚಿತ್ತೂರಲ್ಲಿ ತೈಲಂಗಣದ ಪರಿಷತ್ತು ಕೂಡಿತ್ತು. ಇಲ್ಲಿ ಕೌನ್ಸಿಲದಲ್ಲಿ ಹೋಗಬಾರದೆಂಬ ಅಸಹಕಾರದ ಠರಾವು ಪಾಸಾಗಿ, ಕಾಯದೇಭಂಗವನ್ನು ಸದ್ಯದಲ್ಲಿ ವ್ಯವಸ್ಥಾನದಲ್ಲಿಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಕಾಯದೇಭಂಗ ಕೆಲಸದಲ್ಲಿ ಬಹಳೇ ಮುಂದೋಡಿದಂಥ ಆಂಧ್ರವು ಹೀಗಾಲ ತೆಗೆದದ್ದು ವಿಚಾರ ಮಾಡುವಂಥ ಪ್ರಶ್ನವಾಗಿರುವದು.

ಜನರು ಆನಂದಭರಿತರಾಗಿ ಮಹಾತ್ಮರು ಹುಟ್ಟಿದ ದಿವಸವನ್ನು ರಾಮಕೃಷ್ಣರ ಜಯಂತಿಯಂತೆ ಉತ್ಸವದಿಂದ ಮಾಡಿದರು. ಪಲ್ಲಕ್ಕಿಯಲ್ಲಿ ಅವರ ಭಾವಚಿತ್ರವಿಟ್ಟು, ಗಂಧ ಪುಷ್ಪ ಮಾಲೆಗಳಿಂದ ಅದನ್ನು ಸಿಂಗರಿಸಿ, ಊರ ತುಂಬ ಮೆರಿಸಿದರು. ಆದರೆ ಇದರಿಂದ ಯರವಡೆಯ ತುರಂಗದಲ್ಲಿ ಬಗದಾಲಭ್ಯ ಋಷಿಯಂತೆ ತಪಸ್ಸು ಮಾಡುತ್ತಿರುವ ಮಹಾತ್ಮರಿಗೇನು ಪ್ರಯೋಜನ! ಸ್ವಪ್ನದೊಳಗಿನ ಹಾಲೋಗರವೇ ಸರಿ. ಯಾವ ಧ್ಯೇಯದ ದೆಸೆಯಿಂದ ಇವರು ಅಜ್ಞಾತವಾಸವನ್ನು ಅಂಗೀಕರಿಸುತ್ತಾರೋ? ಅದೇ ಧ್ಯೇಯ ಸಾಧನೆಗಾಗಿ ಮಹಾತ್ಮರ ವರ್ಧಂತ್ಯುತ್ಸವ ಜರುಗಿದೆ. ಒರ್ಣ ಉತ್ಸವದಿಂದ ಧ್ಯೇಯಸಾಧನವಾಗಲಾರದು, ಆದ್ದರಿಂದ ನವ್ಹಂಬರ ತಿಂಗಳಲ್ಲಿ ಕೂಡುವ ಆಲ ಇಂಡಿಯಾ ಕಾಂಗ್ರೆಸ ಕಮೀಟಿಯು ಹಾಗು ಬೆಳಗಾವಿಯಲ್ಲಿ, ಡಿಸೆಂಬರದಲ್ಲಿ ಕೂಡುವ ಕಾಂಗ್ರೆಸ ಸಭೆಯವರಾಗಲಿ, ಮಹಾತ್ಮರ ಹಾಗು ಅವರಂತೆ ಬಹು ಸಂಖ್ಯೆಯಿಂದ ತುರಂಗವಾಸಿಯಾಗಿರುವಂಥವರ ಬಂಧವಿಮೋಚನೆಯಾಗುವಂಥ ಉಪಾಯವನ್ನೇ ಮಾಡುವರೆಂದು ತಿಳಿಯುತ್ತೇವೆ.

ಮಗ್ಗಗಳ ಸುದೈವ! ಮ್ಯಾಂಚೆಸ್ಟರದ ದುರ್ದೈವ!!

— ೦ —

ಲಾರ್ಡ ಕರ್ಜನ ಸಾಹೇಬರು ಬಂಗಾಲವನ್ನು ಒಡೆದು, ಪಾಳು ಹಂಚಿ ಮಾಡಿದಾಗ ಬಂಗಾಲಿಗಳು ವಿಲಾಯತಿಯ ಬಹಿಷ್ಕಾರ ಮಾಡಿದರು. ಬಂಗಾಲಿಗಳು [illegible] ಕುಲದೇವತೆಯಾದ ಕಾಳಿಕಾ ಮತ್ತು ಶಕ್ತಿಯ ಪ್ರತಿಮೆ [illegible] ಮಾಡುವಾಗ [illegible] ಒಟ್ಟು ಸಾವಿರಾರು ಗುಡಿಗಳಿಗೆ [illegible] ಮಾಡುತ್ತಿದ್ದರು. ಬಹಿಷ್ಕಾರದ ಆಬ್ದದಲ್ಲಿ ಶಕ್ತೀ ಪೂಜೆಯ, ಕೂಡ [illegible] ಪೂರ್ವಮಾಡಿ [illegible] ಈ ಪ್ರಕಾರ ಈ ರೀತಿಯಾಗಿದ್ದರೂ, ಇಷ್ಟೇ ಹೇಳುವಂಥ ಅವಸ್ಥೆಯು [illegible] ಒಂದೊದಗಿತು. ಕಳೆದ ದಸರೆಯ ದಿವಸ ಬಂಗಾಲಿ ಮತ್ತು ಮಾರವಾಡಿ ವರ್ತಕರು [illegible] ಸಾಲ್ಕ್ಯದು ಸ [illegible] ಗಂಟುಗಳನ್ನು [illegible] ಪ್ರತಿವರ್ಷ ಸಾಧಾರಣವಾಗಿ ೧೫ ೨೦ ಸಾವಿರ [illegible] ಕೊಡುತ್ತಿತ್ತು. [illegible] ಬಾಗಿಲ ಕಡಿಮೆಯಾದದ್ದು ಸ್ವದೇಶಿ ಚಳವಳಿಯೇ ಕಾರಣವಲ್ಲವೇ?

ಸುರತ ಮ್ಯುನಿಸಿಪಾಲಿಟಿಯ ಸೋತಿತು!!

ಸುರತದಲ್ಲಿ ಬಣಿ ಬಣಿಗೆ ಪ್ರಾಥಮಿಕ ಶಾಲೆಗಳು ಬೀಗ ಬಿದ್ದವು. ಸರಕಾರದಿಂದ ನೇಮಿಸಲ್ಪಟ್ಟ ಪಂಚರು ಸ್ಕೂಲ ಬೋರ್ಡಿನ ವೆಚ್ಚವನ್ನು ಜಾಯಿಗೂಡಿಸುವದಕ್ಕಾಗಿ ಒಂದು ಕರ ಕೂಡ್ರಿಸಿದರು. ನಾಗರೀಕರು ಕರಕೊಡದಾಗಲು — ನೀರಿನ ನಳಗಳನ್ನು ಬಂದು ಮಾಡಿದರು. ಪಂಜಾಬದಲ್ಲಿ ಡಾಯರ ಶಾಹಿಯ ವೇಳೆಯಲ್ಲಿ ಜನರನ್ನು ಹಣ್ಣಿಗೆ ತರಬೇಕೆಂದು ನೀರನ್ನು ಬಂದುಮಾಡುವ ಹೆದರಿಕೆ ಹಾಕಿದ್ದರು. ಇದೇ ಕಾಯಕವನ್ನು ಸುರತ ಮುನಸಿಪಾಲಿಟಿಯವರು ಸರಕಾರ ವತಿಯ ಪಂಚರು ಮನೋಚ್ಛಿತವಾದ ಅದೇ ಕಾಯದೆಯನ್ನು ಅರ್ಧಮರ್ಧ ಅಮಲಿನಲ್ಲಿ ತಂದರು. ನಾಗರಿಕರು ಇದಕ್ಕೆ ಸೊಪ್ಪು ಹಾಕದಾಗಲು ಪಂಚರು ಇದರೊಂದು ಅವಿವೇ

ಕವಳಗ್ಯಿತೆಂದು ತಿಳಕೊಂಡು, ಜಂಗಮ ಜಿಂವಿಗೆಯು ವಾರಂಟಿನಿಂದ ಕರವಸೂಲ ಮಾಡಬೇಕೆಂದಿರುತ್ತಾರೆ. ಈ ಬಗೆಯಾಗಿ ತನ್ನಷ್ಟಕ್ಕೆತಾನೇ ಸೋಕ್ಷಂತೆ ಮುನಸಿಪಾಲಿಟಿಯು ತೋರಿಸಿಕೊಂಡಿರುತ್ತದೆ. ಕೈ ತೋರಿಸಿ ಅವಲಕ್ಷಣ!!

ಗುಲಾಮವಿದ್ಯೆ! ಸ್ವಾತಂತ್ರ್ಯವಿದ್ಯೆ!!

—೦—

ಮಹಾತ್ಮಾ ಗಾಂಧಿಯವರ ವರ್ಧಂತಿಯ ದಿವಸ ಪಂಡಿತ ಮಾಲವೀಯಾಯವರ ಮಹತ್ವದ ಭಾಷಣವಾಯಿತು. ಪಂಡಿತರು ಎಲ್ಲ ಶಿಕ್ಷಣವು ದೇಶಭಾಷೆಯಲ್ಲಾಗಬೇಕು ಶಿಕ್ಷಣವು ದಾಸ್ಯ ಪಂಕದಲ್ಲಿ ಬೀಳುವಂತಹದಾಗದೆ, ಸ್ವಾತಂತ್ರ್ಯವಿಚಾರವು ಅಂತಃಕರಣದಲ್ಲಿ ಪೊಳೆಯುವಂತಹ. ದಾಗಬೇ[illegible] ಅಂದಿರುತ್ತಾರೆ ಇಂಥ ಶಿಕ್ಷಣವು [illegible] [illegible] ನಿಜ ಪಂಡಿತರ [illegible] ವಿಶ್ವವಿದ್ಯಾಲಯದಲ್ಲಿ [illegible] ಪ್ರಾರಂಭವಾಗಬಾರದೆಂದು ಪ್ರಶ್ನೆ [illegible]ತ್ತದೆ.

ಒಡಂಬಡಿಕೆಗೆ ಪ್ರಾರಂಭ.

ಒಡಬಂಡಿಕೆಯ ವಿಚಾರವು ಸಮಾಧಾನದಿಂದ ನಡೆದಿದೆ. ಇಲ್ಲಿಯ ಸಂಗತಿಗಳನ್ನು ತಿಳಕೊಳ್ಳಲಿಕ್ಕೆ ವರ್ತಮಾನ ಪತ್ರಕಾರರ ರಿಪೋರ್ಟರರನ್ನು ಬಿಟ್ಟಿರುವದಿಲ್ಲ.

ರಶಿಯಾದಲ್ಲಿ ಸಕ್ತಿಯ ಲಷ್ಕರೀ ಶಿಕ್ಷಣ.

—೦—

[illegible] ಒಂದೂವರೀ ವರ್ಷ, [illegible] [illegible] ವರ್ಷ ಮತ್ತು [illegible] ಮೂರುವರ್ಷಗಳವರೆಗೆ ಲಷ್ಕರೀ ಶಿಕ್ಷಣ ಹೊಂದಬೇಕೆಂದು ಸಕ್ತಿಯ ಕಾಯದೆಯನ್ನು ಪಾಸಮಾಡಿದ್ದಾರೆ.

ಎರಡು ಕೋಟಿ ಕೂಲಿಕಾರರ ಸಭೆ.

—೦—

